ಹತ್ತು ಗಂಟೆ ಹೊಡೆದರೂ ಯಾರಿಗೂ ಎಚ್ಚರವಿಲ್ಲ. ಗಡಿಯಾರ ತನ್ನ ಕೆಲಸವನ್ನು ತಾನು ಮಾಡಿಕೊಂಡು ಹೋಗುತ್ತಿತ್ತು. ಗಂಟೆಗೆ, ಅರ್ಧಗಂಟೆಗೆ ಕಾಲವನ್ನು ಸೂಚಿಸಿ ಅದು ಮುಂದುವರಿಯುತ್ತಿತ್ತು. ರಾಯರಾಗಲೀ ಶಾಮಣ್ಣನವರಾಗಲೀ ಆ ಕಡೆಗೇ ಲಕ್ಷ್ಯಕೊಟ್ಟಿರಲಿಲ್ಲ. ಒಳತೊಟ್ಟಿಯಲ್ಲಿ, ಹೊಸಲಿನ ಒಂದು ಬದಿಯಲ್ಲಿ ಕುಳಿತಿದ್ದ ಗೌರಮ್ಮನವರು ಸೊಸೆಯ ಮುಖವನ್ನೊಮ್ಮೆ ನೋಡಿ ತೆಪ್ಪಗಾಗಿದ್ದರು. ಮಾಡಿದ ಅಡಿಗೆ ಆರಿ ತಂಗಳಾಗುತ್ತದಲ್ಲಾ ಎನ್ನುವ ಚಿಂತೆ ಅವರಿಗೆ. ಅತ್ತೆಗೆ ಕಾಣದಂತೆ ಕಣ್ಣೀರು ಒರೆಸುತ್ತಾ ಕುಳಿತಿದ್ದ ಮೀನಾಕ್ಷಮ್ಮನವರಿಗೆ ಅತ್ತೆಯ ಚಿಂತೆಯ ಅರಿವೇ ಆಗಲಿಲ್ಲ.

ರಾಯರ ಮನಸ್ಸು ಕುಮಾರವ್ಯಾಸ ಕವಿಯ ಭಾರತದಲ್ಲಿ ತೇಲಿಹೋಗಿತ್ತು. ಅದೂ ಉದ್ಯೋಗಪರ್ವದ ಕರ್ಣವೃತ್ತಾಂತ. ರಾಯರ ಅತ್ಯಂತ ಪ್ರಿಯವಾದ ಭಾರತ ಕಥಾಭಾಗ. ಕರ್ಣವೃತ್ತಾಂತವನ್ನು ನೂರಾರು ಸಲ ಕೇಳಿದ್ದರು. ಒಂದೆಡೆಯಲ್ಲಿ ಕಾಣದ ಕರ್ಮದ ಕೈ; ಒಂದೆಡೆಯಲ್ಲಿ ಕಾಣುವ ಕರ್ಮದ ಕೈ—ಎರಡರ ಸಂಚಿಗೆ ಸಿಕ್ಕಿ ಕರ್ಣ ನುಚ್ಚುನೂರಾಗುತ್ತಿದ್ದುದನ್ನು ಗಮನಿಸಿದ್ದರು. 'ಅಯ್ಯೋ ಕರ್ಣಾ!' ಎನ್ನುವ ಉದ್ಗಾರದ ನುಡಿ ಅವರ ಬಾಯಿಂದ ಎಷ್ಟೋ ಸಾರಿ ಉರುಳಿತ್ತು. ಕರ್ಣನ ಉಜ್ವಲ ಚರಿತ್ರೆ ಎಷ್ಟು ವಿಷಾದಕರ ರೀತಿಯಲ್ಲಿ ಕೊನೆಗಂಡಿತೋ ಅಷ್ಟು ಅಷ್ಟು ಮರುಗಿದ್ದರು. ಕುಂತಿ ತಾಯಿ. ಪಾಂಡವರ ತಾಯಿಯೂ ಹೌದು; ಕರ್ಣನ ತಾಯಿಯೂ ಹೌದು. ಕರ್ಣನಿಂದ ಶಪಥವನ್ನೂ ಮಾಡಿಸುತ್ತಾಳೆ:

ಅದೊಡೈವರು ಮಕ್ಕಳನು ತಲೆ
ಗಾಡು ತೋರ್ಕೈ ಕಂದ ನಿನಗೇ
ನೀ ದುರಾಗ್ರಹವೊಪ್ಪುವುದೇ ಕೌರವರ ಸೇವೆಯೊಳು
ಹೋದ ಬಾಣವ ಮರಳಿ ತೊಡದಿರು
ಮಾದು ಕಳೆ ವೈರವ....

ಮಾತೃಪ್ರೇಮದ ಝಂಝಾವಾತಕ್ಕೆ ಸಿಕ್ಕಿದ ಕರ್ಣ 'ಹಸಾದವೆಂದನು, ಬೀಳುಕೊಂಡನು, ಬಂದನರಮನೆಗೆ....'

'ಕರ್ಣಾ, ನೀನು ಕೆಟ್ಟೆಯಪ್ಪಾ' ಎಂದು ರಾಯರು ಚೀರಿದರು. ಶಾಮಣ್ಣನವರು 'ಶ್ರೀವನಿತೆಯರಸನೇ' ಪದ್ಯವನ್ನು ಆರಂಭಿಸಿಬಿಟ್ಟರು. ನಾಂದೀ ಪದ್ಯಗಳು ಮುಗಿದವು. ಶಾಮಣ್ಣನವರು ಕಾವ್ಯವನ್ನು ಮುಚ್ಚಿ ಕಣ್ಣಿಗೊತ್ತಿ

ಕೊಂಡರು. ರಾಯರು ಕಣ್ಣ ನೀರನ್ನು ನಿವಾರಿಸಿಕೊಳ್ಳುತ್ತಾ ನಶ್ಯದ ಡಬ್ಬಿ
ಕೈಹಾಕಿದರು. ಮಾತನ್ನಾರಂಭಿಸಲು ಯಾರಿಗೂ ಧೈರ್ಯವಿಲ್ಲ. ಅಲ್ಲಿ ಇನ್ನೂ
ಕುಂತಿ, ಕರ್ಣ, ಕೃಷ್ಣರು ಇದ್ದಂತೆ ಭಾಸವಾಗಿತ್ತು.

ಗೌರಮ್ಮನವರು ಮೆಲ್ಲನೆ "ಮಗೂ, ಹತ್ತು ಹೊಡೆಯಿತಲ್ಲಪ್ಪಾ, ಮಂಗ
ಳಾರತಿ ಮಾಡುತ್ತೀಯಾ?" ಎಂದರು.

ರಾಯರಿಗೆ ಆಗ ಎಚ್ಚರ. "ಆಗಲಮ್ಮಾ" ಎಂದು ಎದ್ದರು. ಕೈಕಾಲ
ಮುಖ ತೊಳೆದುಕೊಂಡು, ಆಚಮನ ಮುಗಿಸಿ ಬರುವ ಹೊತ್ತಿಗೆ ಪೂಜಾ
ದ್ರವ್ಯಗಳು ಸಿದ್ಧಪಡಿಸಲ್ಪಟ್ಟಿದ್ದವು. ತಮ್ಮ ಇಷ್ಟದೇವರು ಮತ್ತು ಕುಲ
ದೇವರುಗಳನ್ನು ಇರಿಸಿದ್ದ ಮಂದಾಸನದ ಮುಂದೆ ನಿಂತು ಕರ್ಪೂರಾರತಿ
ಹಚ್ಚಿದ್ದ ಹರಿವಾಣವನ್ನು ಹಿಡಿದು ಗಂಭೀರವಾದ ಧ್ವನಿಯಲ್ಲಿ ತದೇಕಚಿತ್ತ
ರಾಗಿ ಹಾಡಿದರು :

ಜ್ಯೋತಿ ಬೆಳಗುತಿದೆ ನಿತ್ಯಾನಂದ ಜ್ಯೋತಿ ಬೆಳಗುತಿದೆ ||
ತರಣಿ ಚಂದ್ರಾನಲ ತಾರೆ ಮಿಂಚುಗಳೆಂಬ
ಪರಿಪರಿ ಬೆಳಕಿನ ಬಳಗವಾನೊಳಗೊಂಡು ||
ರಂಗುಗೆಡದೆ ಮಲಸಂಗವಿಲ್ಲದೆ ವಿವಿ
ಧಾಂಗದೊಳಾಡುವ ಮಂಗಳಾತ್ಮಕ ಪೂರ್ಣ ||
ಅಂಕೆಗೆ ಸಿಲುಕದ ಸಂಕರವೆನಿಸದ
ಶಂಕರ ಗುರುವೆಂಬಾತಂಕವಿಲ್ಲದ ಪರಂಜ್ಯೋತಿ ||

ಅಲ್ಲಿ ನಿಂತಿದ್ದ ಮನೆಯವರೆಲ್ಲರ ಮೈಯಲ್ಲಿಯೂ ವಿದ್ಯುತ್ಪ್ರಭೆ ಮೂಡಿ
ದಂತಾಯಿತು. ರಾಯರದು ಮೊದಲೇ ಗಂಭೀರವಾದ ಆಕಾರ. ಆರೂವರೆ
ಅಡಿಯ ನೀಳವಾದ ಎತ್ತರ. ಸುಪುಷ್ಟವಾಗಿ ಬೆಳೆದ ಅಂಗಾಂಗಗಳು
ದೊಡ್ಡಸ್ತಿಕೆಯನ್ನು ಎತ್ತಿತೋರುವ ನಡತೆ. ಸಹಜವಾದ ಉದಾತ್ತಗಾಂಭೀರ್ಯ
ವನ್ನು ಮನಸ್ಸಿನ ಮೇಲೆ ಮುದ್ರೆಯೊತ್ತುವಂತಹ ಮಾತುಕತೆ. ರಾಯರು
ಉಟ್ಟಿದ್ದ ಕೇಸರಿ ಪೀತಾಂಬರವೂ, ಹಣೆಯಲ್ಲಿ ಧರಿಸಿದ್ದ ತ್ರಿಪುಂಡ್ರವೂ
ಅವರ ವ್ಯಕ್ತಿತ್ವವನ್ನು ಬಿಡಿಸಿ ತೋರಿಸುತ್ತಿದ್ದವು.

ಗಂಟೆ ಹತ್ತಾಗಲೀ ಹನ್ನೊಂದಾಗಲೀ ತಾವೇ ಮಂಗಳಾರತಿ ಮಾಡಿದ
ಲ್ಲದೆ ರಾಯರು ಊಟಕ್ಕೆ ಏಳುತ್ತಿರಲಿಲ್ಲ. ಸಂಜೆ ಸಂಗೀತವೋ ಭಾರತವೋ
ಶ್ರವಣವಾಗಲೇಬೇಕು. ಅನಂತರ ಮಂಗಳಾರತಿ ಮಾಡಿ ಮೃಷ್ಟಾನ್ನ
ಭೋಜನ ಮಾಡಿ ರಾಯರು ವಿಶ್ರಾಂತಿಗೆ ತೆರಳುತ್ತಿದ್ದರು.

ರಾಯರ ಹೆಸರು ಶ್ರೀನಿವಾಸರಾಯರು. ಶ್ರೀನಿವಾಸನ ಜತೆಗೆ ರಾಯರು

ಸೇರಿದ್ದರಿಂದ ಅವರು ಶ್ರೀನಿವಾಸರಾಯರಾಗಿರಲಿಲ್ಲ. ಹೊಸಹಳ್ಳಿಯ ಜನಕ್ಕೇ ಅವರು ರಾಯರಾಗಿದ್ದರು. ಅವರ ಹೆಸರು ಶ್ರೀನಿವಾಸಮೂರ್ತಿ, ಶ್ರೀನಿವಾಸಯ್ಯ ಎಂದಿದ್ದರೂ ಜನರು **ರಾಯರು** ಎಂಬ ಗೌರವಾರ್ಥಕ ಹೆಸರಿನಿಂದಲೇ ಅವರನ್ನು ಕರೆಯುತ್ತಿದ್ದರು. ರಾಯರಿಗೆ ಹಿರಿಯರು ಮಾಡಿದ ಆಸ್ತಿ ಬಹಳ ವಾಗಿತ್ತು. ಜತೆಗೆ ತಾವೂ ಅಷ್ಟು ಸೇರಿಸಿದ್ದರು. ರಾಯರ ಹಿರಿಯರು ಅಷ್ಟು ಆಸ್ತಿಯನ್ನು ಹೇಗೆ ಸಂಪಾದಿಸಿದರೋ ಹಾಗೇ ರಾಯರೂ ಸಂಪಾದಿಸ ಬಹುದಾಗಿತ್ತು. ಆದರೆ ನ್ಯಾಯಮಾರ್ಗದ ಒಂದು ಮೇರೆಯನ್ನು ಹಾಕಿ ಕೊಂಡು ತಮ್ಮ ಸಂಪಾದನೆ ಕುಗ್ಗಿಸಿಕೊಂಡಿದ್ದರು. ಕಾಗದಪತ್ರಗಳಿಲ್ಲದೆ, ಬಾಯಿಮಾತಿನ ಮೇಲೆ ಸಾವಿರಾರು ರೂಪಾಯಿಗಳ ಸಾಲವನ್ನಿತ್ತು ಕಳೆದು ಕೊಂಡಿದ್ದರು. ಸಣ್ಣಪುಟ್ಟ ಮಾತು ಆಡಿದನೆಂಬ ಕೋಪದಿಂದ ಕೆಂಪೇಗೌಡನ ಎರಡು ಸಾವಿರ ರೂಪಾಯಿನ ಪತ್ರವನ್ನು ಚಿಂದಿಚಿಂದಿಯಾಗಿ ಹರಿದು ಅವನ ತಲೆಯ ಮೇಲೆ ಹಾಕಿ ಕಳುಹಿಸಿದ್ದರು. ಸಣ್ಣ ನಡತೆ, ಸಣ್ಣ ಮಾತು, ಸಣ್ಣ ಮನಸ್ಸು ಕಂಡರೆ ಉರಿದುರಿದುಬೀಳುವ ಸ್ವಭಾವ.

ಹಿಂದೆ ದೇಶಕ್ಕೆಲ್ಲಾ ಬಂದ ದೊಡ್ಡ ಬರ ಹೊಸಹಳ್ಳಿಗೂ ಕಾಲಿಕ್ಕಿತು. ಜನ ಕಂಗಾಲಾದರು. ಕುಡಿಯುವುದಕ್ಕೆ ನೀರಿಲ್ಲ; ತಿನ್ನುವುದಕ್ಕೆ ಒಂದು ಹಿಡಿ ರಾಗಿ ಇಲ್ಲ. ಸಮಯ ನೋಡಿ ಪಟೇಲ, ಗೌಡರು ಒಂದಾಗಿ ಇದ್ದ ಬಿದ್ದುದನ್ನೆಲ್ಲಾ ಅಡ್ಡಾದಿಡ್ಡಿ ಬೆಲೆಗೆ ಮಾರುತ್ತಬಂದರು. ಈ ಅನ್ಯಾಯ ನೋಡೀ ನೋಡೀ ರಾಯರಿಗೂ ಸಾಕಾಯಿತು. ಪಟೇಲನ್ನ ಗೌಡರನ್ನ ಕರೆ ಬುದ್ಧಿ ಹೇಳಿದರು: "ಊರಿನ ಮರ್ಯಾದೆ ಕಡೆ ಲಕ್ಷ್ಯ ಇಡಿ. ಈ ರಕ್ತಕಾಣಿಕೆ ಯಿಂದ ನಿಮ್ಮ ಮನೆ ಊರ್ಜಿತವಾಗಲ್ಲಾ, ಜನ ಬಹಳ ಕೆಟ್ಟುಹೋಗ್ತಾರೆ, ಊರು ಹಾಳಾಗಿ ಹೋಗುತ್ತೆ" ಎಂದು ವಿವೇಕ ಹೇಳಿದರು. ಧನಪಿಶಾಚಿ ಹಿಡಿದಿದ್ದ ಪಟೇಲ, ಗೌಡರಿಗೆ ಕಿವುಡು ಮುಚ್ಚಿಕೊಂಡಿತ್ತು. ರಾಯರು ಯೋಚನೆ ಮಾಡಿದರು. ತಮ್ಮ ಹತ್ತಿರ ೨೦–೨೫ ಖಂಡುಗ ದವಸ ಇತ್ತು. ಊರಿನವರನ್ನೆಲ್ಲಾ ಮಾರನೆಯ ದಿವಸ ಚಾವಡಿ ಮುಂದೆ ಕರೆಸಿ, ಮನೆಗೆ ಇಷ್ಟೊಂತ ಭತ್ಯ ಅಳೆದುಬಿಟ್ಟರು. ಅಂದಿನಿಂದ ರಾಯರೂ ಅಂದರೆ ಊರಿನ ದೇವರು. ಅವರ ಮಾತು ಅಂದರೆ ವೇದವಾಕ್ಯ. ಸಾಮಾನ್ಯವಾಗಿ ಯಾರು ಏನನ್ನೇ ಕೇಳಲಿ ರಾಯರು ಇಲ್ಲಾ ಎಂದು ಅನ್ನುತ್ತಿರಲಿಲ್ಲ. ಕರ್ಣನ ಮೇಲೆ ತಮಗಿದ್ದ ಭಕ್ತಿಪ್ರೀತಿಗಳಿಂದಲೋ–ಏನೋ?

ಒಂದು ಸಲ ದೇವಸ್ಥಾನದ ಬೀದಿ ಲಕ್ಷ್ಮಣಾಚಾರ್ರ ಮನೇಲಿ ಲಗ್ನ ವಾಯಿತು. ಬೀಗರ ಕಡೆಯವರು ಊರನ್ನು ಬಳಸಿ ಬಂದು ರಾಯರ ತೋಟದ

ತೆಂಗಿನ ಗಿಡಗಳ ಮೇಲೆ ಕಣ್ಣುಹಾಕಿದರು. ಲಕ್ಷ್ಮಣಾಚಾರ್ರು ಸೂಕ್ಷ್ಮವಾಗಿ ವಿಚಾರವನ್ನು ರಾಯರ ಕಿವಿಗೆ ಮುಟ್ಟಿಸಿದರು. ಅದೇ ಸಂಜೆ ರಾಯರೇ ಸ್ವತಃ ಬೀಗರ ಕಡೆಯವರನ್ನೆಲ್ಲಾ ಕಟ್ಟಿಕೊಂಡು ತೋಟಕ್ಕೆ ಹೋಗಿ ೨೦೦-೩೫೦ ಎಳನೀರು ಕಾಯಿಗಳನ್ನು ಕೀಳಿಸಿ, ಸ್ವಂತ ಖರ್ಚಿನಿಂದ ನಿಂಬೆಯ ಹಣ್ಣು, ಕಲ್ಲುಸಕ್ಕರೆಗಳ ಸರಬರಾಯಿ ಮಾಡಿ ಲಕ್ಷ್ಮಣಾಚಾರ್ರ ಬೀಗರನ್ನು ತೃಪ್ತಿಪಡಿಸಿದರು. ರಾಯರ ಮನಸ್ಸು, ಅವರ ಮನೆ, ಅವರ ಹಳ್ಳಿಗಳಿಗೆ ಮಾತ್ರ ಅಡಕವಾಗದೆ ವಿಶ್ವವ್ಯಾಪಿಯಾಗಿದ್ದುದೇ ಅವರ ಔದಾರ್ಯದ ರಹಸ್ಯವಾಗಿತ್ತು. ದೇವರ ಹತ್ತಿರ ಯಾಚನೆಗೆ ಹೋದರೆ ಅವನಾದರೂ ಒಂದೊಂದು ಸಲ ಏನೂ ಕೊಡದೆ ಹಿಂದಕ್ಕೆ ಅಟ್ಟಬಹುದು, ರಾಯರ ಹತ್ತಿರ ಹೋದರೆ ಯಾರೂ ಬರಿಗೈಯಲ್ಲಿ ಬರುವಹಾಗಿಲ್ಲ ಎಂದು ಜನ ಧಾರಾಳವಾಗಿ ಅಂದುಕೊಳ್ಳುತ್ತಿದ್ದರು.

ರಾಯರಿಗೆ ಮಕ್ಕಳನ್ನು ಕಂಡರೆ ಬಹಳ ಪ್ರೇಮ. ಕಬ್ಬಿನ ಕಾಲ ಬಂತು ಅಂದರೆ ಊರಿನ ಮಕ್ಕಳಿಗೆ ಹಬ್ಬ. ಜಗಲಿಯ ಮೇಲೆ ೨-೩ ಕಟ್ಟು ಕಬ್ಬನ್ನು ಇಟ್ಟುಕೊಂಡು ರಾಯರೇ ಹಂಚುವುದಕ್ಕೆ ಕೂಡುತ್ತಿದ್ದರು. ಊರಿನ ಮಕ್ಕಳನ್ನು ಕರೆಕರೆದು ಅವರು ಮನದಣಿಯ ತಿನ್ನುವಷ್ಟು ಕಬ್ಬು ಕೊಟ್ಟು ಅವರ ಆನಂದವನ್ನು ನೋಡಿ ಹಿಗ್ಗುತ್ತಿದ್ದರು. ಹಿಗ್ಗು ಹೆಚ್ಚಾಯಿತೆಂದರೆ ತಾವೂ ಒಂದು ಜಲ್ಲೆಯನ್ನು ಹಿರಿದು ಸಿಗಿಯುವುದಕ್ಕಾರಂಭಿಸಿಬಿಡುತ್ತಿದ್ದರು. ಈ ನೋಟವನ್ನು ನೋಡಲಾರದೆ ಮೀನಾಕ್ಷಮ್ಮನವರು ಒಂದೊಂದು ಸಲ "ಇದೇನೂಂದ್ರೆ, ಮಕ್ಕಳ ಹಾಗೆ ಬೀದೀ ಬಾಗಲಲ್ಲಿ ಕಬ್ಬು ಸಿಗಿಯೋದು ?" ಎಂದು ಮೂದಲಿಸಿದರೆ ರಾಯರು ನಕ್ಕು ಇನ್ನೊಂದು ಜಲ್ಲೆ ಎಳೆದುಕೊಳ್ಳುತ್ತಿದ್ದರು.

ರಾಯರ ಮನೆಯೇ ಅವರ ಮನಸ್ಸಿನ ಸಾಕ್ಷಿ. ಹಿಂದಿನ ಕಾಲದ ತೊಟ್ಟಿ ಮನೆ. ಒಮ್ಮೆಲೇ ೨೦೦ ಜನಕ್ಕೆ ಸುಖವಾಗಿ ಎಲೆ ಹಾಕಬಹುದಾಗಿತ್ತು. ದೊಡ್ಡ ಜಗಲಿ. ಜಗಲಿಯ ಆ ಕಡೆ ಈ ಕಡೆ ಎರಡು ಕೋಣೆಗಳು. ರಾಯರು ಅವುಗಳಲ್ಲಿ ಒಂದನ್ನು ತಮ್ಮ ದಿವಾನಖಾನೆಯನ್ನಾಗಿ ಉಪಯೋಗಿಸುತ್ತಿದ್ದರು. ಮಧ್ಯೆ ದೊಡ್ಡ ತೊಟ್ಟಿ. ಭಾರಿಯಾದ ಎಂಟು ಕಂಬಗಳು ತೊಟ್ಟಿಯನ್ನು ಹೊತ್ತಿದ್ದವು. ತೊಟ್ಟಿಯ ಸುತ್ತಲೂ ಕೋಣೆಗಳು. ಹಿಂದೆ ಅಡಿಗೆ, ಊಟದ ಮನೆಗಳು. ರಾಯರ ಮನೆಯವರಾಗಿ ಇದ್ದವರು ಅವರ ತಾಯಿ, ಹೆಂಡತಿ ಇಬ್ಬರೇ. ಆದರೂ ಅವರ ಮನೆಯಲ್ಲಿ ಇದ್ದವರಿಗೆ ಅದು ಸಾಲದು. ಊರೆಲ್ಲಾ ರಾಯರ ಬಳಗ, ಇಲ್ಲ ಆಶ್ರಿತರು. ಒಮ್ಮೆ ರಾಯರ ಮನೆಗೆ ಬಂದರೆಂದರೆ

ಅದನ್ನು ಬಿಡುವ ಯೋಚನೆ ಯಾರಿಗೂ ಹೊಳೆಯುತ್ತಲೇ ಇರಲಿಲ್ಲ.

ಶಾಮಣ್ಣನವರೂ ಹಾಗೆಯೇ ಬಂದು ಸೇರಿದ್ದು. ಅವರು ಹೊಸಹಳ್ಳಿಯವರಲ್ಲ. ಕೃಷ್ಣರಾಜಪೇಟೆ ಅವರ ಸ್ಥಳ. ಊರಿನಲ್ಲಿ ಪ್ಲೇಗು ಬಂದಾಗ ಶಾಮಣ್ಣನವರ ಮನೆ ತೊಳೆದುಹೋಯಿತು. ಅವರ ಹೆಂಡತಿ ಮಗ ಇಬ್ಬರೂ ಪ್ಲೇಗ್ ಮಾರಿಯ ಬಾಯಿಗೆ ಬಲಿಯಾದರು. ಅಂದಿನಿಂದ ಒಂದು ಬಗೆಯ ವಿರಕ್ತಿ ಹುಟ್ಟಿ ಶಾಮಣ್ಣನವರು ಊರು ಬಿಟ್ಟು ಅಲೆಯಲಾರಂಭಿಸಿದರು. ಅವರಿಗೆ ಭಾರತ ಓದುವ ಹವ್ಯಾಸ ಮೊದಲಿನಿಂದಲೂ ಇತ್ತು. ಈಗ ಒದಗಿದ ವಿಪತ್ತನ್ನು ಮರೆಯಲು ಭಾರತ ಪಠನವನ್ನೇ ಹೆಚ್ಚು ಊರ್ಜಿತಪಡಿಸುವುದಕ್ಕಾರಂಭಿಸಿದರು. 'ಓದಿ ಓದಿ' ಎಂದು ಜನ ಕೇಳುವುದೂ ಹೆಚ್ಚಾಯಿತು. ಶಾಮಣ್ಣನವರು ಭಾರತ ಓದುವುದೂ ಹೆಚ್ಚಾಯಿತು. ಕೆಲವು ವರ್ಷಗಳಲ್ಲಿ ಶಾಮಣ್ಣನವರ ಕೀರ್ತಿ ಎಲ್ಲಾ ಕಡೆಗೂ ಪಸರಿಸಿತು. ತಮ್ಮ ಸಂಚಾರದಲ್ಲಿ ಒಂದು ಸಲ ಶಾಮಣ್ಣನವರು ಹೊಸಹಳ್ಳಿಗೆ ಬಂದಾಗ ರಾಯರು ಅವರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ಭಾರತ ಓದಿಸಿ ಬೇಕಾದಷ್ಟು ಮರ್ಯಾದೆ ಮಾಡಿದರು. ಮರ್ಯಾದೆಗಿಂತಲೂ ಹೆಚ್ಚಾಗಿ ರಾಯರ ಅಂತಃಕರಣ ಶಾಮಣ್ಣನವರ ಮನಸ್ಸಿಗೆ ಬಹಳ ಬಂತು. ಶಾಮಣ್ಣನವರು ಹೊರಡುವ ಏರ್ಪಾಡು ಮಾಡಿದಾಗ ರಾಯರು "ಏಕೆ ಅಲ್ಲಿ ಇಲ್ಲಿ ಹೋಗಬೇಕು? ತೆಪ್ಪಗೆ ಇಲ್ಲೇ ಇದ್ದುಬಿಡು, ಶಾಮಣ್ಣ. ನನಗೂ ನಿತ್ಯಾ ಭಾರತ ಪಾರಾಯಣ ಮಾಡಬೇಕೆನ್ನುವ ಆಸೆಯಿದೆ" ಎಂದು ಉಪಚಾರವಾಗಿ ಆಹ್ವಾನ ನೀಡಿದರು. ರಾಯರ ತಾಯಿ ಗೌರಮ್ಮನವರೂ ಶಾಮಣ್ಣನವರನ್ನು ಪ್ರಾರ್ಥಿಸಿದರು. ಈ ಜನದ ಸರಳತೆ, ಹೃದಯವೈಶಾಲ್ಯ ಕಂಡಿದ್ದ ಶಾಮಣ್ಣನವರು ಕಟ್ಟಿದ ಗಂಟುಮೂಟೆ ಬಿಚ್ಚಿ ಅಲ್ಲೇ ನಿಂತುಬಿಟ್ಟರು. ಅಂದಿನಿಂದ ರಾಯರ ಮನೆಯೇ ಅವರ ಮನೆಯಾಯಿತು. ಸುಮ್ಮನೆ ಉಂಡಾಡಿಗ ಭಟ್ಟನಾಗಿರಬಾರದೆಂದು ಶಾಮಣ್ಣನವರು ರಾಯರ ಜಮೀನಿನ ಉಸ್ತುವಾರಿ, ಲೆಕ್ಕಪತ್ರಗಳನ್ನು ನೋಡುವುದು, ಮನೆಯ ವ್ಯವಸ್ಥೆಯನ್ನು ನೋಡಿಕೊಳ್ಳುವುದು ಮುಂತಾದ ಕೆಲಸಗಳನ್ನು ತಾವಾಗಿ ಹಚ್ಚಿಕೊಂಡು ತಮ್ಮ ಉಪಯುಕ್ತತೆಯನ್ನು ಹೆಚ್ಚಿಸಿಕೊಂಡರು.

ಎಲ್ಲ ಸಂಪತ್ತು, ಸೌಭಾಗ್ಯ, ಅನುಕೂಲಳಾದ ಮಡದಿ, ದೇವರೆಂದು ಪೂಜಿಸುವ ಜನರಿದ್ದರೂ ರಾಯರಿಗೂ ಅವರ ಹೆಂಡತಿಗೂ ತಾಯಿಗೂ ಒಂದೇ ಚಿಂತೆ, ಮಕ್ಕಳಿಲ್ಲದ ಚಿಂತೆ. ಈ ನಂದನವನದಲ್ಲಿ ಬೆಳದಿಂಗಳು ಮೂಡಲಿಲ್ಲವಲ್ಲಾ ಎಂಬ ಕೊರತೆ. ತಮ್ಮ ಕೆಲಸಕಾರ್ಯಗಳಲ್ಲಿ ಆ ದುಃಖವನ್ನು ರಾಯರು

ಅಲ್ಪಸ್ವಲ್ಪ ಮರೆಯಲು ಸಾಧ್ಯವಾಗಿತ್ತು. ಆದರೆ ಅತ್ತೆಸೊಸೆಯರಿಬ್ಬರಿಗೂ ಈ ಚಿಂತೆ ಎಡಬಿಡದೆ ಕಾಡುತ್ತಿತ್ತು. ಪೂಜೆ, ವ್ರತ, ಯಾತ್ರೆ ಸೇವೆಗಳಂತೂ ಒಂದೇ ಸಮನೆ ನಡದೇ ಇದ್ದುವು. ಯಾರು ಏನು ಹೇಳಿದರೂ ತಪ್ಪದೆ ಅನನ್ಯಭಕ್ತಿಯಿಂದ ಮಾಡುತ್ತಿದ್ದರು. ವಿದುರಾಶ್ವತ್ಥದ ಯಾತ್ರೆಯಂತೂ ಮೇಲಿಂದಮೇಲೆ ಆಗುತ್ತಲೇ ಇತ್ತು. ಘಾಟಿ ಸುಬ್ರಹ್ಮಣ್ಯನಿಗೆ ಚಿನ್ನದ ನಾಗಪ್ಪನನ್ನು ಕಾಣಿಕೆಯಾಗಿ ಅರ್ಪಿಸಿದ್ದರು. ತಿರುಪತಿ ವೆಂಕಟಾಚಲಪತಿಗೆ ಮುಡುಪು ಕಟ್ಟಿಟ್ಟದ್ದಾಯಿತು. ಬಾಲಸುಬ್ರಹ್ಮಣ್ಯನ ಸೇವೆಯೆಂದು ಊರಿನ ಹುಡುಗರಿಗೆ ಕಡುಬು ಕಜ್ಜಾಯಗಳನ್ನು ಅವರು ಸಾಕುಸಾಕೆನ್ನುವಷ್ಟು ಹಂಚಿದ್ದಾಯಿತು. ಈ ಎಲ್ಲ ವ್ರತ, ಪೂಜೆ, ಉಪವಾಸಗಳು ಮೀನಾಕ್ಷಮ್ಮನವರನ್ನು ದಿನದಿನಕ್ಕೆ ಕೃಶಮಾಡುತ್ತ ಅವರ ನಿರಾಶೆಯನ್ನು ಹೆಚ್ಚಿಸುತ್ತ ಬಂದವು.

"ಇಲ್ಲ ಅತ್ತೆ, ನಾನು ನಿರ್ಭಾಗ್ಯೆ. ನನಗೆ ಮಕ್ಕಳೆಲ್ಲಿಂದ ಆಗಬೇಕು, ಹೇಳಿ" ಎಂದನ್ನುವರು.

"ಹಾಗನ್ನಬಾರದು ಕಣಮ್ಮಾ. ನೀನು ಈ ಮನೆ ಮಂಗಳಗೌರಿ. ನಿನ್ನ ನಡತೆ, ನಿನ್ನ ಪಾತಿವ್ರತ್ಯವೇ ನಿನ್ನ ಕಾಪಾಡುತ್ತವೆ. ಏಳು ಏಳು ಜನ್ಮದ ಪುಣ್ಯಮಾಡಿ ನಮ್ಮ ಸೀನೂ ನಿನ್ನ ಕೈಹಿಡಿದ ಕಣೇ ತಾಯಿ, ನೊಂದು ಕೊಳ್ಳಬೇಡಮ್ಮಾ" ಎಂದು ಗೌರತ್ತೆ ಸಮಾಧಾನ ಹೇಳುವರು. ಗೌರತ್ತೆ ಸೊಸೆಯ ಮೇಲೆ ಅನುಪಮ ಪ್ರೇಮಗೌರವ ಇಟ್ಟಿದ್ದರು. ಅವರನ್ನು ನೋಡಿದವರು ತಾಯಿ ಮಗಳೆಂದು ಭಾವಿಸುತ್ತಿದ್ದರಲ್ಲದೆ ಅತ್ತೆಸೊಸೆಯರೆಂದು ಭಾವಿಸಲಾಗುತ್ತಿರಲಿಲ್ಲ. ಈ ಗೌರವಕ್ಕೆ ಮೀನಾಕ್ಷಮ್ಮ ಎಲ್ಲಾ ರೀತಿಯಲ್ಲಿಯೂ ಅರ್ಹತೆಪಡೆದಿದ್ದರು. ಅತ್ತೆಯ ಮೇಲೆ 'ಕೋಗಿಲ್ ಭರ್ತಿ' ಮಾಡುವುದೇ ತಮ್ಮ ಕೆಲಸವೆಂದು ಅವರು ತಿಳಿದಿರಲಿಲ್ಲ. ಅತ್ತೆಯನ್ನು ಅವರ ಪೂಜೆ, ವ್ರತ, ನಮಸ್ಕಾರಾದಿಗಳಿಗೆ ಬಿಟ್ಟು ಮನೆಯ ವಿಶಿಷ್ಟ ಕೆಲಸಕಾರ್ಯಗಳನ್ನು ತಾವೇ ನಿರ್ವಹಿಸಿಕೊಂಡು ಹೋಗುತ್ತಿದ್ದರು. ದಣಿವನ್ನು ತೋರಗೊಡುತ್ತಿರಲಿಲ್ಲ. ಬೇಸರವನ್ನು ಕಾಣಿಸುತ್ತಿರಲಿಲ್ಲ. ಊರಿನ ಜನಕ್ಕೆ ರಾಯರು ಹೇಗೆ ಸಾಕ್ಷಾತ್ ನಾರಾಯಣನಾಗಿದ್ದರೋ ಹಾಗೆ ಮೀನಾಕ್ಷಮ್ಮನವರು ಲಕ್ಷ್ಮಿಯಾಗಿದ್ದರು. ಊರಿನಲ್ಲಿ ಯಾರಿಗೆ ಯಾವ ದುಃಖ ಬಂದರೂ ಮೀನಾಕ್ಷಮ್ಮನವರಲ್ಲಿ ಬಂದು ತೋಡಿಕೊಳ್ಳಬೇಕು. ಗಂಡ-ಹೆಂಡಿರು, ಅತ್ತೆ-ಸೊಸೆಯರು, ಅಣ್ಣ-ತಮ್ಮಂದಿರು ವ್ಯಾಜ್ಯ ಕಾದರೆ ಅದನ್ನು ಪರಿಹರಿಸುವ ನ್ಯಾಯಸ್ಥಾನವೆಂದರೆ ಮೀನಾಕ್ಷಮ್ಮನವರ ಸನ್ನಿಧಿ. ಅವರ ಒಂದು ಮಾತು ಎಷ್ಟೋ

ಪ್ರಬಲ ಸಮಸ್ಯೆಗಳನ್ನು ಪರಿಹರಿಸುತ್ತಿತ್ತು. ಊರಿಗೆ ಊರೇ ಗೌರವದಿಂದ ಅವರನ್ನು 'ಅಮ್ಮ' ಎಂದು ಕರೆಯುತ್ತಿದ್ದಿತು. ಯಾರ ಮನೆಯಲ್ಲಿ ಕಾಹಿಲೆಯಾಗಲೀ, ಬೇರೆ ತೊಂದರೆಯಾಗಲೀ ಮೀನಾಕ್ಷಮ್ಮ ಸೇವೆಗೆ ನಿಲ್ಲುತ್ತಿದ್ದರು. ಮನೆಯವರು ನಾಚಿ ಹೇಸುತ್ತಿದ್ದ ಶೌಚಶುದ್ಧಿ ಕೆಲಸವನ್ನು ಕೂಡ ಹಿಂದು ಮುಂದು ನೋಡದೆ ಮಾಡಿಬಿಡುತ್ತಿದ್ದರು. ಊರಿನ ಹೆಣ್ಣುಮಕ್ಕಳು ಒಂದು ಒಡವೆ ಮಾಡಿಸಬೇಕಾದರೆ, ಒಂದು ವಸ್ತ್ರ ಕೊಳ್ಳಬೇಕಾದರೆ ಮೀನಾಕ್ಷಮ್ಮನವರು ಬರಬೇಕು. ಊರಿನ ಜನ, ಜೀವನ ಮೀನಾಕ್ಷಮ್ಮನವರ ಬಾಳಿನ ಹಾಸುಹೊಕ್ಕಾಗಿ ಹೊಂದಿಕೊಂಡಿದ್ದವು.

ಗುಣದಲ್ಲಿ ಮೀನಾಕ್ಷಮ್ಮ ಹೇಗೆ ಗಂಡನಿಗೆ ತಕ್ಕ ಹೆಂಡತಿಯಾಗಿದ್ದರೋ ರೂಪದಲ್ಲಿಯೂ ಹಾಗೆಯೇ ಇದ್ದರು. ಸುಂದರವಾದ ಬಟ್ಟೆಮುಖ. ನಸು ನೀಳವಾದ ಮೂಗು. ವಿಶಾಲವಾದ ಹಣೆ. ಆ ಹಣೆಗೆ ಒಪ್ಪುವಂತೆ ದೊಡ್ಡದಾದ ಅಡ್ಡಕುಂಕುಮ. ಕಿವಿಯಲ್ಲಿ ವಜ್ರದ ಓಲೆ, ಮೂಗಿನಲ್ಲಿ ವಜ್ರದ ಮೂಗುಬಟ್ಟುಗಳನ್ನುಳಿದು ಮತ್ತೆ ಯಾವ ಹೆಚ್ಚು ಬೆಲೆಯ ಆಭರಣಗಳನ್ನೂ ಅವರು ಧರಿಸುತ್ತಿರಲಿಲ್ಲ. ಸೌಮ್ಯವಾದ ಸಾಧಾರಣ ಸೀರೆಕುಪ್ಪಸಗಳಲ್ಲಿಯೇ ತೃಪ್ತರಾಗಿರುತ್ತಿದ್ದರು. ಯಾರಾದರೂ "ಏನು ತಾಯಿ, ದೇವರು ಯಾವದಕ್ಕೆ ಕಡಿಮೆ ಮಾಡಿದ್ದಾನೆ? ಒಂದು ದಿವಸ ಒಂದು ಭಾರಿ ಸೀರೆ ಉಡುವುದಿಲ್ಲವಲ್ಲಾ !" ಎಂದು ಪ್ರಶ್ನಿಸಿದರೆ ಹಣೆಯ ಕುಂಕುಮ ತೋರಿ, "ನನ್ನ ಭಾರಿ ಸೀರೆ ಕುಪ್ಪಸವೆಲ್ಲಾ ಇಲ್ಲಿದೆ ನೋಡಿ" ಎಂದು ಹೇಳುತ್ತಿದ್ದರು.

ಮಕ್ಕಳಿಲ್ಲದ ಕೊರಗು ಮೀನಾಕ್ಷಮ್ಮನವರನ್ನು ಎಡಬಿಡದೆ ಕಾಡುತ್ತಿತ್ತು. ತಮ್ಮಿಂದ ರಾಯರ ಮನೆಗೆ ಉತ್ತರಾಧಿಕಾರಿಯಿಲ್ಲದಂತಾಯಿತಲ್ಲಾ ಎಂಬ ಕೊರಗು ಹೆಚ್ಚಾಯಿತು. ಒಂದು ದಿನ ಸಂಜೆ ಅತ್ತೆಸೊಸೆಯರಿಬ್ಬರೂ ತೊಟ್ಟಿಯಲ್ಲಿ ಹೂಬತ್ತಿ ಹೊಸೆಯುತ್ತಾ ಹರಟೆ ಕೊಚ್ಚುತ್ತ ಕುಳಿತಿದ್ದರು. ಮಾತು ಅದೂ ಇದೂ ಆಗಿ ಕೊನೆಗೆ ಮಾರ್ಕಂಡೇಯನ ಕಥೆಗೆ ಬಂತು. ಅತ್ತೆಯವರು ಮಕ್ಕಳಿಲ್ಲದ ದುಃಖ ಮೃಕಂಡು–ಮರುದ್ವತಿಯರನ್ನು ಹೇಗೆ ಗೋಳಾಡಿಸಿತೆಂಬುದನ್ನು ಪ್ರಸ್ತಾಪಿಸಿದರು. ಮಕ್ಕಳಿಲ್ಲದವರಿಗೆ ಮುಂದಿನ ಲೋಕದಲ್ಲಿ ಗತಿಯೇ ಇರುವುದಿಲ್ಲ ಎಂದು ಬಾಯಿ ತಪ್ಪಿ ನುಡಿದುಬಿಟ್ಟರು. ಆ ಮಾತು ಮೀನಾಕ್ಷಮ್ಮನವರ ಹೃದಯದಲ್ಲಿ ಶಲ್ಯದಂತೆ ನೆಟ್ಟಿತು. ಈ ಮೊದಲೇ, ಕೆಲವು ದಿವಸಗಳಿಂದ ತಾವು ಮಾಡುತ್ತಿದ್ದ ಯೋಚನೆಯನ್ನು ಸೂಚಿಸಲು ತಕ್ಕ ಸಮಯ ದೊರೆಯಿತೆಂದುಕೊಂಡರು.

"ಒಂದು ಮಾತು ಅತ್ತೆಮ್ಮನವರೇ, ನೀವು ಹೇಳು ಅಂದರೆ ಹೇಳುತ್ತೇನೆ."

"ಹೇಳೇ ತಾಯಿ, ಅದಕ್ಕೆ ಯಾಕಿಷ್ಟು ಸಂಕೋಚ ?"

"ಅದನ್ನು ಮಾತು ಅನ್ನುವದಕ್ಕಿಂತ ಕೋರಿಕೆ ಅನ್ನಬಹುದು. ನಿಮ್ಮಲ್ಲಿ ಒಂದು ಕೋರಿಕೆ ಇದೆ. ನಡಸಿಕೊಡುತ್ತೇನೆಂದರೆ ಹೇಳುತ್ತೇನೆ."

"ನಿನಗೆ ನಡಸಿಕೊಡುವಂತಹ ಶಕ್ತಿ ನನ್ನಲ್ಲಿ ಏನಿದೆಯೋ ತಾಯಿ, ಊರಿನ ಎಲ್ಲಾರ ಕೋರಿಕೇನೂ ನಡೆಸೋಳು ನೀನು ಇರುವಾಗ. ಆಗಲಿ, ಹೇಳು."

"ಖಂಡಿತ ತಾನೆ. ಮಾತು ತೆಗೆದುಹಾಕಬಾರದು."

"ಇಲ್ಲಾ—ಹೇಳು."

"ನೋಡಿ. ನನಗೆ ವಯಸ್ಸೂ ಆಗುತ್ತಾ ಬಂತು. ಇನ್ನೇನು ಮಕ್ಕಳು ಆಗುವ ಸಂಭವ ಕಡಿಮೆ. ನನಗೆ ಆ ಪುಣ್ಯ ಇಲ್ಲ."

"ಯಾರು ಹೇಳೋದಿಕ್ಕಾಗತ್ತಮ್ಮಾ. ನಿನಗೇನು ಮಹಾ ವಯಸ್ಸಾಗಿ ರೋದು. ವೈಶಾಖಕ್ಕೆ ೩೫ ತುಂಬತ್ತೆ. ಅದೊಂದು ಮಹಾ ವಯಸ್ಸೇ ?"

"ನನ್ನಿಂದ ವಂಶ ನಿಲ್ಲಬಾರದು. ಈ ಚಿಂತೆ ಅವರನ್ನೂ ಹೇಗೆ ಕಾಡ್ತಾ ಇದೆ ಅನ್ನೋದು ನಿಮಗೆ ಗೊತ್ತು."

"ಹೌದು, ಅದಕ್ಕೇನು ಮಾಡೋದಿಕ್ಕಾಗತ್ತೆ. ನಮಗೆ ಇಷ್ಟೇ ಲಭ್ಯ. ಕರ್ಮಕ್ಕೆ ಯಾರು ಹೊಣೆ ಹೇಳು. ಮುಖ್ಯ, ದೇವರು ಕಣ್ಣುಬಿಟ್ಟು ನೋಡಬೇಕು. ನೀನು ಈ ಚಿಂತೆ ಬಿಡು, ಮೀನಾ."

"ನನ್ನ ಕೋರಿಕೆ ಇಷ್ಟೇ, ಅತ್ತೆಮ್ಮನವರೇ—ನೀವು ಹೇಗಾದರೂ ಮಾಡಿ ಅವರನ್ನು ಒಪ್ಪಿಸಿ, ಬೇರೆ ಮದುವೆ ಮಾಡಬೇಕು. ಇಷ್ಟು ನನಗೋಸ್ಕರ ನಡಸಿಕೊಡಬೇಕು."

"ಹಾ ! ಬೇರೆ ಮದುವೆಯೇ ? ಚೆನ್ನಾಯ್ತು !" ಎಂದರು.

ಮೀನಾಕ್ಷಮ್ಮ ಈ ಕೋರಿಕೆಯನ್ನು ಮಾಡುವರೆಂದು ಗೌರಮ್ಮನವರು ಕನಸಿನಲ್ಲಿಯೂ ಎಣಿಸಿರಲಿಲ್ಲ. ಕೋರಿಕೆ ಕೇಳಿ ಮುದುಕಿಯ ಕಣ್ಣಲ್ಲಿ ನೀರೂರಿತು.

"ಮೀನಾ, ನೀನು ಹೆಣ್ಣಲ್ಲ ಕಣೇ, ತಾಯಿ. ಸಾಕ್ಷಾತ್ ದೇವತೆ. ನಮ್ಮ ಪುಣ್ಯ ದೊಡ್ಡದು. ನಮ್ಮ ಮನೆ ಸೇರಿದೆ. ಏನು ಮನಸ್ಸು ನಿನ್ನದು. ಗಂಡನ ಶ್ರೇಯಸ್ಸಿಗೋಸ್ಕರ ನಿನ್ನ ಶ್ರೇಯಸ್ಸನ್ನು ಮರೆತುಬಿಡುತ್ತೀಯಲ್ಲೇ, ತಾಯಿ."

"ಅಮ್ಮಾ, ಅವರ ಶ್ರೇಯಸ್ಸನ್ನು ಬಿಟ್ಟು ಬೇರೆ ಶ್ರೇಯಸ್ಸು ನನಗೆ ಯಾವ ದಿದೆ ? ಇಷ್ಟು ನೀವು ನಡಸಿಕೊಡಬೇಕು."

"ಉಂಟೇ ಮೀನಾ. ಈ ಮನೆಗೆ ಯಜಮಾನತಿ ನೀನು. ನನಗೆ ಇರೋದು ಎರಡು ಕಣ್ಣು—ಒಂದು ಸೀನು, ಇನ್ನೊಂದು ನೀನು; ಮೂರನೆಯದನ್ನು ಎಲ್ಲಿಂದ ತರಲಿ ? ಸೀನುವಾದರೂ ಇದಕ್ಕೆ ಒಪ್ಪುತ್ತಾನೆಯೇ ?"

"ಅವರನ್ನು ಒಪ್ಪಿಸುವ ಭಾರ ನಿಮ್ಮದು."

"ಯೋಚನೆ ಮಾಡು, ಮೀನಾ. ದುಡುಕಬಾರದು."

"ಇನ್ನೇನು ಯೋಚನೆಗೆ ಕಾರಣವಿಲ್ಲ, ಅತ್ತೆಮ್ಮನವರೇ. ನೀವು ಮದುವೆಯೊಂದು ಮಾಡಿಸಿ. ಮಿಕ್ಕದ್ದನ್ನು ನಾನು ನೋಡಿಕೊಳ್ಳುತ್ತೇನೆ. ಬರುವವಳು ನನ್ನ ತಂಗಿಯಾಗುತ್ತಾಳೆಯೇ ವಿನಾ ಸವತಿಯಾಗಲ್ಲ. ಆ ಪುಣ್ಯಾತ್ಗಿತ್ತಿಯ ಧರ್ಮದಿಂದಲಾದರೂ ಮನೆಗೊಬ್ಬ ಮಗನಾದರೆ ಸಾಕು."

ಗೌರತ್ತೆಗೆ ಮಾತು ತೋರದಾಯಿತು. ಹೂಬತ್ತಿಯ ಬುಟ್ಟಿಯನ್ನು ತೆಗೆದುಕೊಂಡು ಅಡಿಗೆಯ ಮನೆಗೆ ಹೊರಟುಹೋದರು. ಮೀನಾಕ್ಷಮ್ಮ ನಿಶ್ಚಿಂತೆಯ ಶಾಂತಿಯನ್ನು ತಾಳಿದರು.

೨

ಎಂಟು ದಿವಸಕ್ಕೆ ರಾಯರು ತುಂಬ ಬಡವಾದರು. ಊಟತಿಂಡಿಗಳಲ್ಲಿ ಅಭಿರುಚಿ ಕಡಿಮೆಯಾಯಿತು. ಮನಸ್ಸಿನಲ್ಲಿ ಏನೋ ಯೋಚನೆಯನ್ನಿಟ್ಟು ಕೊಂಡು ಕೊರಗಲಾರಂಭಿಸಿದರು. ಪಡಸಾಲೆಯಲ್ಲಿ ಶತಪಥ ತಿರುಗುವರು. ನಿಂತಲ್ಲಿಯೇ ನಿಂತು ಯೋಚನೆಯಲ್ಲಿ ಮೈಮರೆಯುವರು. ಶಾಮಣ್ಣ ಇದನ್ನು ನೋಡುತ್ತಿದ್ದವರು ತಾವೇ ಮಾತು ತೆಗೆಯಲು ಹೆದರಿದರು. ರಾಯರದು ಮುಚ್ಚಿಡುವ ಸ್ವಭಾವವಲ್ಲ. ಅವರೇ ಹೇಳದೆ ಎಂಟು ದಿವಸದಿಂದ ಸುಮ್ಮ ನಿರುವಾಗ ತಾವು ಕೆದಕಿ ಕೇಳುವುದು ಅಧಿಕಪ್ರಸಂಗವಾದೀತೆಂದು ಭಯ ಪಟ್ಟರು. ಆದರೆ ರಾಯರ ಸ್ಥಿತಿ ಕರುಣಾಜನಕವಾಗಿತ್ತು. ಅವರ ಕಣ್ಣು ಗಳಲ್ಲಿ ಹೊರಸೂಸುತ್ತಿದ್ದ ದುಃಖ ಯಾರನ್ನಾದರೂ ಅನುಕಂಪ ತೋರುವಂತೆ ಮಾಡುತ್ತಿದ್ದಿತು. ಕೊನೆಗೆ ಶಾಮಣ್ಣ ಧೈರ್ಯ ಮಾಡಿದರು. 'ರಾಯರು ದುಃಖದ ಕಾರಣವನ್ನು ಹೇಳಿದರಂತೂ ಸರಿಯೇ ಹೋಯಿತು. ಹೇಳದೆ ನಾಲ್ಕು ಮಾತು ಬಯ್ದರೆ, ಅದದ್ದೇನು ನಿರ್ವಾಹವಿಲ್ಲದ ಅವಮಾನ ?' ಎಂದು ನಿಶ್ಚಯಿಸಿ ಪಡಸಾಲೆಗೆ ಬಂದು ನಿಂತರು. ಶಾಮಣ್ಣ ನಿಂತಿದ್ದುದನ್ನು ಎರಡುಮೂರು ಸಲ ನೋಡಿಯೂ ರಾಯರು ಸುಮ್ಮನೇ ಇದ್ದರು. ಶಾಮಣ್ಣ ಆ ಸ್ಥಳ ಬಿಡುವ ಚಿಹ್ನೆ ಕಾಣಬರಲಿಲ್ಲ. ರಾಯರೇ ಮಾತು ತೆಗೆದರು.

"ಏನು ಶಾಮಣ್ಣ, ಬಂದೆ ? ಏನು ಸಮಾಚಾರ ?"

ಅದನ್ನು ಕೇಳುವುದಕ್ಕೆಂದೇ ಬಂದೆ. ಎಂಟು ದಿವಸದಿಂದ ನೋಡಿದೆ. ಇನ್ನು ತಡೆಯಲಿಲ್ಲ. ಏನು ಕೇಳೋಣಾಂತ ಬಂದೆ."

ರಾಯರು ನಿಟ್ಟುಸಿರ್ಗರೆದರು.

"ಹೇಳಬಹುದಾದರೆ ಹೇಳಿದರೆ ಒಳ್ಳೆಯದು. ಮನಸ್ಸು ಹಗುರವಾಗ ಬಹುದು."

"ಏನು ಹಗುರವೋ—ಕೇಳು ಶಾಮಿ. ಮೀನಾ, ಅಮ್ಮನಿಗೆ ಒಂದು ಮಾತು ಹೇಳಿದಳು. ಅದನ್ನು ಅಮ್ಮ ನನ್ನ ಹತ್ತಿರ ಹೇಳಿದ್ದಾಳೆ. ನೀನು ಆಗಿದ್ದರೆ ಏನು ಮಾಡುತ್ತಿದ್ದೆ ?"

"ವಿಷಯ ಗೊತ್ತಾಗಲಿಲ್ಲ."

"ಮನೆ ವಿಷಯ. ತನಗೆ ಮಕ್ಕಳಾಗಲಿಲ್ಲಾಂತ ಮೀನಾ ನನಗೆ ಬೇರೆ ಮದುವೆ ಮಾಡಿಸೀಂತ ಅಮ್ಮನಿಗೆ ಹೇಳಿದಳಂತೆ. ಎಲ್ಲಾದರೂ ಉಂಟೇನೋ, ಶಾಮಿ."

"ನನಗೂ ಅಮ್ಮನವರು ಹೇಳಿದರು. ಸಮಯ ನೋಡಿ ಅರಿಕೆ ಮಾಡಿ ಕೊಳ್ಳೋಣಾಂತಿದ್ದೆ. ರಾಯರು ಏನು ಹೇಳೋಣವಾಗುತ್ತೆ."

"ಹೇಳೋದೇನು, ಕಂಡಹಾಗೇ ಇದೆ. ಮೀನಾ ನನ್ನ ಮನೆ ಭಾಗ್ಯಲಕ್ಷ್ಮಿ. ಮಕ್ಕಳಿಲ್ಲದಿದ್ದರೂ ಚಿಂತೆಯಿಲ್ಲ. ಅವಳಿಗೊಬ್ಬಳು ಸವತೀನ ತರೋಕೆ ನನಗೆ ಇಷ್ಟವಿಲ್ಲ."

"ಅವರು ಸವತಿಯಂತಾ ಭಾವಿಸಿದರಲ್ಲವೇ ಕಷ್ಟ. ತಂಗಿ ಎಂದು ಭಾವಿಸು ತ್ತಾರಂತೆ. ಆ ವಿಚಾರದಲ್ಲಿ ನೀವು ಯೋಚನೆ ಇಟ್ಟುಕೊಳ್ಳಬಾರದು ಎಂದು ಹೇಳಿದರು."

"ಅವಳು ಭಾವಿಸಬಹುದು. ಮೀನಾನ ದೊಡ್ಡ ಗುಣ ನಾನು ಕಾಣೆನೇ. ಆದರೆ ಬರೋ ಹೆಣ್ಣು ಕಾಣಬೇಕಲ್ಲಪ್ಪಾ. ಅದೂ ಅಲ್ಲದೆ ನನಗೆ ಈ ವಯಸ್ಸಿ ನಲ್ಲಿ ಮದುವೆ ಅಂದರೇನೋ ಶಾಮಿ, ಶುದ್ಧ ನಾಚಿಕೆಗೇಡು."

"ತಮಗೇನು ಅಂತಹ ವಯಸ್ಸಾಗಿಲ್ಲ, ಸ್ವಾಮಿ. ದೇವರು ಇದ್ದಹಾಗೆ ಇದ್ದೀರಿ. ಅಮ್ಮನವರ ಕಡೇದೆ ಒಂದು ಹೆಣ್ಣಿದೆಯಂತೆ, ಅದನ್ನೇ ತರುತ್ತಾ ರಂತೆ. ಆಗ ನಿಮ್ಮ ಅನುಮಾನವೂ ದೂರವಾದಹಾಗೆ ಆಗತ್ತಲ್ಲಾ."

"ಶಾಮಿ, ಚರ್ಚೇಲಿ ಒಪ್ಪಿಸೋ ವಿಚಾರ ಅಲ್ಲಾಪ್ಪ ಇದು. ಮೀನಾ ನನಗೆ ಬರೀ ಹೆಂಡತಿಯಲ್ಲ. ನನ್ನ ಬಾಳಿನಲ್ಲಿ ಅವಳ ಸ್ಥಾನವೇ ಬೇರೆ. ಅದನ್ನು ಹೇಗೆ ಅಲುಗಾಡಿಸಲಿ ಹೇಳು. ಮೀನಾ ಬರುವುದಕ್ಕೆ ಮುಂಚೆ ನಾನೊಂದು ಪಶು. ಅಪ್ಪ ರಟ್ಟೆ ಮುರಿದು ಸಂಪಾದಿಸಿ ಹಾಕಿದ್ದರು. ಅದನ್ನು

ತಿಂದುಕೊಂಡು ತೊಂಡುಗೂಳಿ ಬೆಳೆದಹಾಗೆ ಬೆಳೆದಿದ್ದೆ. ಅವಳು ನನ್ನ ಒಬ್ಬ ಮನುಷ್ಯನನ್ನಾಗಿ ಮಾಡಿದಳು. ನನ್ನ ನಾನೇ ಗೌರವಿಸುವ ಹಾಗೆ ಮಾಡಿದಳು. ನಾನು ಇಹದಲ್ಲಿಯಾಗಲೀ ಪರದಲ್ಲಿಯಾಗಲೀ ಕತ್ತೆತ್ತಿ ತಿರುಗುವಂತೆ ಮಾಡಿದಳು. ಈಗ ಅವಳ ಜೀವನ ಒಡೆಯಲೇ? ಅವಳು ಯಾವದನ್ನು ತನ್ನ ಪ್ರಾಣಕ್ಕಿಂತ ಹೆಚ್ಚು ಅಂದುಕೊಂಡಿದ್ದಾಳೋ ಅಂತಹ ನನ್ನ ಪ್ರೇಮ ಹರಿದು ಹಂಚಿಹೋಗುವಂತೆ ಮಾಡಲೇ?"

"ಅವರೇ ಒಪ್ಪಿ ಸೂಚಿಸ್ತಿದ್ದಾರಲ್ಲಾ!"

"ಅದು ಅವಳ ದೊಡ್ಡತನ. ಅವಳು ಯಾವಾಗಲೂ ಹಾಗೇ, ಶಾಮಿ. ಎಲ್ಲಾರ ಹಿತ ಸುಖಕ್ಕೆ ದಾರಿಮಾಡಿ ತಾನು ಹಿಂದುಹಿಂದಕ್ಕೆ ಸರಿಯುತ್ತಾಳೆ."

"ಯೋಚನೆ ಮಾಡೀ, ಸ್ವಾಮಿ. ತಾವು ಒಪ್ಪಿದ ಹೊರತೂ ಅಮ್ಮನವರು ಕಣ್ಣುತುಂಬ ನಿದ್ದೆ ಮಾಡೋಹಾಗೆ ಕಾಣೆ"

ಎಂದು ಹೇಳಿ ಮಾತು ಮುಗಿಸಿದರು. ರಾಯರು ಮತ್ತೆ ಶತಪಥ ತಿರುಗಲಾರಂಭಿಸಿದರು. ತಾಯಿ ಬಂದು ಮಾತನಾಡಿಸಿದಾಗಲೇ ಎಚ್ಚರ. ತಾಯಿಗೂ ಮಗನಿಗೂ ಸಾಕಷ್ಟು ವಾದವಾಯಿತು.

"ನನ್ನ ಮೊಮ್ಮಗನ್ನ ನಾನು ಕಣ್ತುಂಬ ನೋಡಬೇಡವೇನೋ, ಮಗೂ?" ಎಂದರು ಗೌರತ್ತೆ.

"ಹೌದಮ್ಮ. ಆದರೆ...."

"ಆದರೆ ಪಾದರೆ ಬಿಟ್ಟುಬಿಡಪ್ಪ. ಅವಳೂ ಒಪ್ಪಿದ್ದಾಳೆ. ಎಂದಿದ್ದರೂ ಅವಳೇ ಯಜಮಾನತಿ. ಅಕ್ಕತಂಗೀರು ಅವರು ಅನ್ಯೋನ್ಯವಾಗಿದ್ದರೆ ನಿನಗೇನು ಯೋಚನೆ, ನಮ್ಮ ಮೀನಾನ ನಾನು ಬಲ್ಲೆ. ಯಾರು ಬಂದರೂ ಅವಳನ್ನು ಪೂಜಿಸಿಯೇ ಹೋಗುತ್ತಾರೆ—ನಿನಗೇನು ಭಯ. ಇದೊಂದು ನಡಸಿಕೊಡಪ್ಪಾ, ಸೀನಣ್ಣಾ. ಎಲ್ಲಾರಿಗೂ ತೃಪ್ತಿ, ಎಲ್ಲಾರಿಗೂ ಸಮಾಧಾನವಾಗತ್ತೆ" ಎಂದು ದೈನ್ಯದಿಂದ ಬೇಡಿದರು.

ರಾಯರ ಜೀವ ತಲ್ಲಣಿಸಿಹೋಯಿತು. ತಾಯಿಯ ಮಾತು ಕೇಳಿ ಕರ್ಣ ದುರ್ಯೋಧನನನ್ನು ಬಲಿಗೊಟ್ಟಂತೆ ತಾವು ಮೀನಾಕ್ಷಿಯನ್ನು ಬಲಿಗೊಡುತ್ತಿರುವಂತೆ ಭಾವಿಸಿದರು. ಕಣ್ಣುಗಳಲ್ಲಿ ಫಳಫಳನೆ ಹನಿಗಳುದುರಿದವು.

"ಇದೊಂದು ಮರೆತುಬಿಡಮ್ಮ. ಬೇಕಾದ ಹುಡುಗನ್ನ ದತ್ತು ತೆಗೆದುಕೊಳ್ಳೋಣ."

"ಎಲ್ಲಾದರೂ ಉಂಟೇನೋ? ಮಗೂ. ಯಾರದೋ ಮಗು ತಂದು ಸಾಕಿದರೆ ನಮ್ಮದಾಗುತ್ತ್ಯೇ. ಇದಕ್ಕೆ ಒಪ್ಪಿಬಿಡಪ್ಪಾ. ನಾನೂ ಮುದುಕಿ,

ಸಾಯೋ ಕಡೆಗಾಲದಲ್ಲಿ ನನ್ನ ಮಗ ನನ್ನ ಮಾತು ಮೀರಿದ ಎನ್ನೋ ದುಃಖ ಕೊಡಬೇಡ."

ತಾಯಿಯ ಮಾತುಗಳು ಈಟಿಯಂತೆ ಇರಿಯಲಾರಂಭಿಸಿದವು.

ರಾಯರು ಚಿಂತಿಸಿ ಚಿಂತಿಸಿ ಸಾಕಾಗಿ, "ನಿನ್ನ ಇಷ್ಟಾನಿಷ್ಟ. ಬೇಕಾದ್ದು ಮಾಡಿಬಿಡು" ಎಂದರು. ಗೌರತ್ತೆ ಮಗನನ್ನು ಬಾಯಿತುಂಬ ಹರಸಿ ಗೆಲುವಿನ ನಗೆಯಿಂದ ಮೀನಮ್ಮನ ಬಳಿಗೆ ತೆರಳಿದರು.

೩

ರಾಯರ ಮನೆಯ ಮದುವೆಯೆಂದರೇ ಸಾಕಾಗಿತ್ತು. ಜತೆಗೆ ರಾಯರ ಮದುವೆ. ವಿಜೃಂಭಣೆಯಿಂದಲೇ ನಡೆಯಿತು. ಅಂತಹ ಊರ ಸಂತರ್ಪಣೆ ಹೊಸಹಳ್ಳಿಯಲ್ಲಿ ಆಗೇ ಇರಲಿಲ್ಲವೆಂದು ಎಲ್ಲರೂ ಹಾಡಿ ಹೊಗಳಿದರು. ವೈದೀಕರಿಗೆ ಕೂಡ ತೃಪ್ತಿಯನ್ನುಂಟುಮಾಡುವ ರೀತಿಯಲ್ಲಿ ಮದುವೆ ಮುಗಿಯಿತು.

ಹೆಣ್ಣು ದೂರದ್ದಲ್ಲ; ಮನೆಯದಂತಲೇ ಹೇಳಬೇಕು. ಮೀನಾಕ್ಷಮ್ಮ ತಮ್ಮ ಸೋದರತ್ತೆಯ ತಮ್ಮನ ಮಗಳನ್ನೇ ಗೊತ್ತುಮಾಡಿದ್ದರು. ಮೀನಾಕ್ಷಮ್ಮನವರ ಸೋದರಮಾವ ಕಳಲೆ ಕೃಷ್ಣಪ್ಪನೇ ಸಾವಿತ್ರಿಯನ್ನು ಸಾಕಿ ಸಲಹಿದ್ದ. ಸಾವಿತ್ರಿಗೆ ಚಿಕ್ಕವಯಸ್ಸಿನಲ್ಲಿಯೇ ತಂದೆ-ತಾಯಿ ತೀರಿ ಹೋದುದರಿಂದ ಕೃಷ್ಣಪ್ಪ ಭಾವಮೈದುನನ ಮಗಳನ್ನು ತನ್ನ ಮಗಳೆಂದೇ ಭಾವಿಸಿ ಸಾಕಿ ಸಲಹಿ ವಿದ್ಯಾಬುದ್ಧಿ ಕಲಿಸಿದ್ದ. ಕೃಷ್ಣಪ್ಪ ಹೆಚ್ಚು ಸ್ಥಿತಿವಂತನಲ್ಲ ದಿದ್ದರೂ ಅನುಕೂಲವಾಗಿದ್ದ. ಇದ್ದ ಸ್ವಲ್ಪ ಭೂಮಿಯ ಜತೆಗೆ, ನಾಲ್ಕು ಗ್ರಾಮಗಳ ಶಾನುಭೋಗಿಕೆಯೂ ಇತ್ತು. ವರ್ಷಾಕಾಲಕ್ಕೆ ಸಾಕಾಗುವಷ್ಟು ದವಸ, ಪೋಟಿಗೆ ಹಣ ಬರುತ್ತಿದ್ದವು. ತನಗೂ ಮಕ್ಕಳಿರಲಿಲ್ಲ, ಸಾವಿತ್ರಿ ಯನ್ನೇ ಸ್ವಂತ ಮಗಳಿಗಿಂತಲೂ ಹೆಚ್ಚಾಗಿ ಭಾವಿಸಿ ಪ್ರೀತಿಸುತ್ತಿದ್ದ. ಸಾವಿತ್ರಿಗೆ ಹದಿನಾರು ವಯಸ್ಸು—ತುಂಬಿದ್ದರೂ ಯೋಗ್ಯ ವರ ಸಿಕ್ಕಲಿಲ್ಲ. ಕನ್ಯೆ ಬೆಳೆದುನಿಂತಮೇಲಂತೂ ಹಳ್ಳಿಗಾಡಿನಲ್ಲಿ ಮದುವೆ ಮಾಡುವುದು ತೀರ ಅಸಾಧ್ಯವಾಗಿತ್ತು. ಹಳ್ಳಿಯ ಹುಡುಗಿಯೆಂದು ಪೇಟೆಯ ಹುಡುಗರು ಮಾಡಿ ಕೊಳ್ಳಲೊಪ್ಪುತ್ತಿರಲಿಲ್ಲ. ಗಂಡಿಗೆ ಅಲೆದೂ ಅಲೆದೂ ಸಾಕಾಗಿತ್ತು. ಹೆಣ್ಣು ನೋಡಲು ಬರುವವರಿಗೆ ರೈಲು ಚಾರ್ಜು, ಬಸ್ಸು ಚಾರ್ಜುಗಳನ್ನಿತ್ತು ಕೃಷ್ಣಪ್ಪನ ಭಂಡಾರ ಬರಿದಾಗಿತ್ತು. ಇವುಗಳಿಗೆ ಕಳಶವಿಟ್ಟಂತೆ ಹೆಣ್ಣು ನೋಡಬಂದ ಭಾವೀ ಬೀಗರ ಮತ್ತು ಅಳಿಯನ ಆತಿಥ್ಯ ಮಾಡಿ ಮಾಡಿ

ಕೃಷ್ಣಪ್ಪ ಬೇಸತ್ತಿದ್ದ. ಹೆಣ್ಣು ಹೆತ್ತ ತಾಯ್ತಂದೆಗಳನ್ನು ಸುಲಿದು ಬಾಳುವ ಯಾವದಾಯುಷ್ಯದ ಅಳಿಯಂದಿರ ಕೈಗೂ ಸಿಕ್ಕಿ ಕೃಷ್ಣಪ್ಪ ನೊಂದಿದ್ದ. ತನ್ನೆಲ್ಲ ಆತಿಥ್ಯವನ್ನೂ ಅನುಭವಿಸಿ ಕೊನೆಗೆ ಇಲ್ಲದ ಸಲ್ಲದ ಆಕ್ಷೇಪಣೆಯನ್ನು ತೆಗೆದು ಸಣ್ಣ ಮಾತುಗಳನ್ನಾಡುತ್ತಿದ್ದ ಜನರ ಪರಿಚಯ ಕೃಷ್ಣಪ್ಪನಿಗೆ ಸಾಕಷ್ಟು ಆಗಿತ್ತು. ಕೊನೆಗೊಂದು ದಿವಸ ರೇಗಿ "ಮದುವೆಯಾಗದೇ ಇದ್ದರೆ ಅಷ್ಟೇ ಹೋಯಿತು. ಇರೋ ಒಬ್ಬ ಮಗಳನ್ನ ಗಂಡು ಮಗಾಂತ ಭಾವಿಸಿ ಸಾಕ್ತೇನೆ" ಎಂದು ನಿರ್ಧರಿಸಿಬಿಟ್ಟಿದ್ದ.

ಸಾವಿತ್ರಿಯನ್ನೇ ಮೀನಾಕ್ಷಮ್ಮನವರು ಆರಿಸುವುದಕ್ಕೆ ಅವಳ ವಯಸ್ಸೂ ಒಂದು ಕಾರಣ. ರಾಯರಿಗೆ ೧೦–೧೨ ವಯಸ್ಸಿನ ಪಾಪಚ್ಚಿ ತಂದು ಕಟ್ಟು ವುದರಲ್ಲಿ ಅರ್ಥವಿಲ್ಲವೆಂದು ಅವರು ಮನಗಂಡಿದ್ದರು. ಜತೆಗೆ ಸಾವಿತ್ರಿಯ ಭವಿಷ್ಯತ್ತಿನ ಯೋಚನೆ. ತಮ್ಮ ತೌರುಮನೆಯ ಕಡೆ ಹೆಣ್ಣು, ಅನ್ಯಾಯ ವಾಗುವುದಲ್ಲಾ ಎಂಬ ಚಿಂತೆ. ಸಾವಿತ್ರಿ ಜಾಣೆಯಾಗಿಯೂ ಇದ್ದಳು; ಲಕ್ಷಣ ವಾಗಿಯೂ ಇದ್ದಳು. ಹೇಳಿಕೊಳ್ಳುವ ರೂಪವಲ್ಲದಿದ್ದರೂ ಗರತಿಯ ಲಕ್ಷಣ ಗಳಿಂದ ಕೂಡಿ ಚಂದೊಳ್ಳೆ ಹೆಣ್ಣು ಎನಿಸಿಕೊಂಡಿದ್ದಳು.

ಮದುವೆಯಾದ ಒಂದು ತಿಂಗಳೊಳಗಾಗಿ ನಿಷೇಕಪ್ರಸ್ತದ ಶಾಸ್ತ್ರವನ್ನೂ ಮುಗಿಸಿಬಿಟ್ಟರು. ಸಾವಿತ್ರಿ ಗಂಡನ ಮನೆಗೆ ಬಂದು ಸೇರಿದಳು. ಮೊದ ಮೊದಲು ಅವಳಿಗೆ ಎಲ್ಲವೂ ಹೊಸದು ಹೊಸದಾಗಿ ಕಾಣುತ್ತಿದ್ದಿತು. ರಾಯರ ದೇಗುಲದಂತಹ ಮನೆ, ಅದರ ವೈಭವ, ರಾಶಿರಾಶಿ ಅಡಕಿದ್ದ ದನಸಧಾನ್ಯ ಕಂಡು ದಿಗ್ಭ್ರಮೆ ಹಿಡಿದಂತಾಗಿತ್ತು. ಮೀನಾಕ್ಷಮ್ಮನವರು ತಂಗಿಗೆ ಎಲ್ಲಾ ವಿಷಯಗಳನ್ನು ತಿಳಿಸಿ, ಕಲಿಯಬೇಕಾದುದನ್ನು ಕಲಿಸಲು ಆರಂಭಿಸಿದರು. ಮುಖ್ಯವಾಗಿ ರಾಯರ ಸ್ವಭಾವ, ಅವರ ಅಭಿರುಚಿ, ಅವರ ಆಕಾಂಕ್ಷೆ, ಅವರ ದೇಹಗುಣಗಳ ಪರಿಚಯ ಮಾಡಿಕೊಟ್ಟು ಗಂಡನ ಸೇವೆ ಯನ್ನು ಹೇಗೆ ಸಲ್ಲಿಸಬೇಕೆಂದು ಕೂಲಂಕಷವಾಗಿ ತಿಳಿಸುತ್ತಿದ್ದರು.

ಒಂದು ದಿವಸ ಮೀನಾಕ್ಷಮ್ಮನವರು ಸಾವಿತ್ರಮ್ಮನಿಗೆ ಜಡೆ ಹೆಣೆಯುತ್ತ ಕುಳಿತಿದ್ದರು. ಹೆಣಿಗೆಯೂ ಮುಗಿಯುತ್ತ ಬಂದಿತ್ತು. ಆಗ ಮೀನಾಕ್ಷಮ್ಮ,

"ಸಾವಿತ್ರಮ್ಮ, ತೌರು ದೂರಾಯಿತೂಂತ ಯಾವುದಕ್ಕೂ ಸಂಕೋಚ ಪಟ್ಟುಕೊಳ್ಳಬೇಡಮ್ಮಾ, ಬೇಕಾದ್ದು ಕೇಳು. ಆಸೆಯಾದ ತಿಂಡಿ ಹೇಳು, ಮಾಡಿಕೊಡುತ್ತೇನೆ. ಯಾವದಕ್ಕೂ ಇಲ್ಲಾಂತ ಕೊರಗಬೇಡಪ್ಪಾ."

"ನೀವಿರುವಾಗ ನನಗೆ ಯಾತರ ಕೊರತೆ ಅಕ್ಕಾ, ನೀವೇ ನನ್ನ ತಂದೆ ತಾಯಿ ಬಂಧು ಬಳಗ ಎಲ್ಲಾ ಆಗಿದ್ದೀರಿ. ಎಲ್ಲೋ ಕಸವಾಗಿ ಬಿದ್ದಿದ್ದವ

ಳನ್ನು ತಂದು ಪಕ್ಕದಲ್ಲಿ ಕೂಡಿಸಿಕೊಂಡಿರಿ. ತಂಗಿ ಎಂದು ಕರೆದಿರಿ, ಮಗಳು ಎಂದು ಭಾವಿಸಿದಿರಿ. ಆದರೆ ಒಂದು ಮಾತು ಅಕ್ಕಾ, ನೀವು ನನ್ನ ಸಾವಿತ್ರಮ್ಮ ಎಂತಾ ಏಕೆ ಕರೆಯುತ್ತೀರಿ?"

"ಇನ್ನೇನೆಂದು ಕರೆಯಲಮ್ಮಾ?"

"ಸಾತೂನ್ನಿ—ಸಾತಿ ಅನ್ನಿ—ಬೇಕಾದ್ದನ್ನಿ."

"ಹಾಗೇ ಆಗಲಿ ಸಾತೂ, ಈಗ ಸಮಾಧಾನವಾಯಿತೋ?"

ಎಂದು ಅರೆಕ್ಷಣ ದಿಟ್ಟಿಸಿ ನೋಡಿ ಅವಳ ಕಿವಿಯಲ್ಲಿದ್ದ ಕೆಂಪಿನೋಲೆ ತೆಗೆದು ಅದರ ಬದಲು ತಮ್ಮ ಕಿವಿಯಲ್ಲಿದ್ದ ವಜ್ರದೋಲೆ ಹಾಕಿ, ಅವಳ ಮುಖ ದಿಟ್ಟಿಸಿ ನೋಡಿ "ಈಗ ಸಾವಿತ್ರೀನೂ ಸಾವಿತ್ರಿ ಹಾಗೇ ಕಾಣ್ತೀ ಕಣೇ ತಾಯಿ. ಕಿವಿ ಏನೋ ಬಿಕೋ ಅಂತಿತ್ತು. ಈಗ ಒಳ್ಳೆ ಚಂದಾಯಿತು" ಎಂದು ಹರಸಿದರು.

ಸಾವಿತ್ರಿಯ ಕಣ್ಣುಗಳಲ್ಲಿ ನೀರೂರಿತು. ಎದ್ದು ಅಕ್ಕನಿಗೆ ನಮಸ್ಕಾರ ಮಾಡಿದಳು.

"ಇದೇನು ಮಾಡಿದಿರಿ ಅಕ್ಕಾ, ನಿಮ್ಮ ಕಿವೀದು...."

"ಏನು ಚಿಂತೆಯಿಲ್ಲ, ಸಾತೂ. ನಾನು ಹಾಕಿಕೊಂಡರೇನು, ನೀನು ಹಾಕಿಕೊಂಡರೇನು?"

ಎಂದು ಸಮಾಧಾನ ಹೇಳಿ ಆ ಮಾತನ್ನು ಬೇರೆಯ ಮಾತಿಗೆ ತಿರುಗಿಸಿ ಬಿಟ್ಟರು. ರಾಯರೂ ಆ ಹೊತ್ತಿಗೆ ಮನೆಗೆ ಬರಲು ಅವರಿಗೆ ಫಲಾಹಾರ ಅಣಿಮಾಡಲು ಇಬ್ಬರೂ ಅಡಿಗೆಯ ಮನೆಗೆ ತೆರಳಿದರು.

ರಾಯರು ಕೈಕಾಲು ತೊಳೆದುಕೊಂಡು ತೊಟ್ಟಿಯಲ್ಲಿ ಕುಳಿತರು. ಸಾವಿತ್ರಿಯೇ ತಿಂಡಿ-ತಟ್ಟೆಯನ್ನು ತಂದಿಟ್ಟು ಹೊರಟು ಹೋದಳು. ಎರಡನೆಯ ಸಲ ಅವಳೇ ಕಾಫಿಯನ್ನೂ ತಂದಿಟ್ಟಳು. "ಮೀನನ್ನ ಕರೆ" ಎಂದು ರಾಯರು ಹೇಳಿದರು.

ರಾಯರು ಕಾಫಿ ಪಾತ್ರೆಯನ್ನು ಕೈಯಲ್ಲಿ ಹಿಡಿದು ಮೀನಾಕ್ಷಮ್ಮನವರನ್ನು ದಿಟ್ಟಿಸಿ ನೋಡಿದರು. ಮೀನಾಕ್ಷಮ್ಮ ಸ್ವಲ್ಪ ಗಾಬರಿಯಾದರು.

"ಯಾಕೇಂದ್ರೆ—ಹೀಗೆ ನೋಡುತ್ತೀರಿ?"

"ಯಾಕೂ ಇಲ್ಲ. ನಿನ್ನ ಕಿವಿ ನೋಡಿದೆ, ಅವಳ ಕಿವಿಯೂ ನೋಡಿದೆ. ಅಷ್ಟೇ!"

"ನಂದೇನು? ಹುಡುಗಿ ಅವಳು, ಇಟ್ಟುಕೊಳ್ಳಲಿ ಎಂದು ತೆಗೆದಿಟ್ಟೆ. ನಂಗೆ ಆ ವಜ್ರದ ಓಲೆಗಿಂತ ಇವೇ ಹೆಚ್ಚು ಒಪ್ಪುತ್ತೆ ನೋಡಿ."

ರಾಯರು ಮೀನಾಕ್ಷಮ್ಮನವರ ಕೈಹಿಡಿದು ಹತ್ತಿರ ಕುಳ್ಳಿರಿಸಿಕೊಂಡರು. ಗದ್ಗದಗೊಂಡಿದ್ದ ದನಿಯಿಂದ,

"ಮೀನಾ, ಹೀಗೆ ಮಾಡಬೇಡ. ಅವಳಿಗೆ ಬೇಕಾದರೆ ಒಂದು ಜತೆ ವಜ್ರದ ಓಲೆ ತರೋಣ. ನಿನ್ನದು ಯಾವದೂ ಹೆಚ್ಚುಕಡಿಮೆ ಮಾಡಬೇಡ. ಅದು ನನ್ನ ಪ್ರಾರ್ಥನೆ. ಇಷ್ಟು ನಡೆಸಿಕೊಡುತ್ತೀಯೋ ಇಲ್ಲವೋ ?"

ಮೀನಾಕ್ಷಮ್ಮನವರು ತಲೆ ತಗ್ಗಿಸಿದರು. ಕಣ್ಣಿಗೆ ಆಶ್ರಯ ಕೊಟ್ಟಿದ್ದ ಮೊಣಕಾಲು ನೆನೆಯಿತು. ಗಂಡನ ಮುಖವನ್ನೊಮ್ಮೆ ನೋಡಿ "ಕ್ಷಮಿಸಿ" ಎಂದರು. ಮಾತು ಮೂಕವಾಯಿತು. ಆದರೆ ಹೃದಯದ ಸಂದೇಶ ಹೃದಯಕ್ಕೆ ಮುಟ್ಟಿತು.

೪

ಹುಟ್ಟು ಅಕ್ಕ-ತಂಗಿಯರು ಕೂಡ ಮೀನಾಕ್ಷಮ್ಮ-ಸಾವಿತ್ರಮ್ಮನ ಹಾಗೆ ಇರಲು ಸಾಧ್ಯವಿರಲಿಲ್ಲ. ಸಾವಿತ್ರಮ್ಮನಂತೂ ಅಕ್ಕನ ಮಾತನ್ನು ವೇದವಾಕ್ಯದಂತೆ ಭಾವಿಸುತ್ತಿದ್ದಳು. ತನ್ನ ಕೈಯಲ್ಲಿ ಎಷ್ಟು ಸ್ವಾತಂತ್ರ್ಯವಿದ್ದರೂ ಅಕ್ಕನನ್ನು ಕೇಳದೆ ಒಂದು ಕೆಲಸಕ್ಕೂ ಹೋಗುತ್ತಿರಲಿಲ್ಲ. ತಮ್ಮ ಸೊಸೆಯರಿಬ್ಬರೂ ಹೀಗೆ ಹೊಂದಿಕೊಂಡು ಒಂದೇ ರೆಂಬೆಯ ಎರಡು ಹೂಗಳಂತೆ ಅನ್ಯೋನ್ಯವಾಗಿದ್ದುದನ್ನು ಕಂಡು ಗೌರಮ್ಮನವರಂತೂ ಒಂದೇ ಸಮನೆ ಹಿಗ್ಗುತ್ತಿದ್ದರು.

ರಾಯರಿಗೆ ಮೊದಲು ಹೊಸ ಹೆಂಡತಿಯೊಡನೆ ವರ್ತಿಸುವುದು ಕಷ್ಟವಾಗುತ್ತಿತ್ತು. ಮೀನಾಕ್ಷಮ್ಮ ಅವರ ಜೀವನದೊಂದಿಗೆ ಬೆಳೆದುಬಿಟ್ಟಿದ್ದರು. ಏನು ಬೇಕಾದರೂ ಅವರಲ್ಲಿ ನಿರ್ವಂಚನೆಯಿಂದ ಹೇಳಬಹುದಾಗಿತ್ತು. ಸಾವಿತ್ರಿ ಎಲ್ಲಾ ವಿಷಯದಲ್ಲಿಯೂ ಚಿಕ್ಕವಳು, ಅನುಭವವೂ ಇಲ್ಲದವಳು. ಇವಳೊಂದಿಗೆ ಕೂಡಿದ ತಮ್ಮ ಬಾಳು ನಿಜವಾಗಿಯೂ ಸುಖಕರವಾಗುತ್ತದೆಯೇ ಎಂದು ರಾಯರು ಯೋಚಿಸುವರು. ಮರುಕ್ಷಣವೇ ಸಾವಿತ್ರಿಯ ಮುಗ್ಧಮನೋಹರ ರೂಪ ಅವರ ಸಂಶಯವನ್ನು ನಿವಾರಿಸುತ್ತಿತ್ತು.

ರಾಯರೂ ಅವರ ತಾಯಿಯೂ ಬಯಸುತ್ತಿದ್ದ ಸುದ್ದಿ ಬರಲು ಬಹಳ ತಡವಾಗಲಿಲ್ಲ. ಮೀನಾಕ್ಷಮ್ಮನವರೇ ಆ ಸುದ್ದಿಯನ್ನು ರಾಯರಿಗೆ ಮುಟ್ಟಿಸಿದರು. ರಾಯರು ಆನಂದದಿಂದ ಆಕಾಶಕ್ಕೆ ಹಾರಿದರು. ಗೌರಮ್ಮನವರಿಗಂತೂ ಹೊಸ ಪ್ರಾಯ ಬಂದಂತಾಯಿತು.

ರಾಯರು ಇಷ್ಟು ಬೇಗನೆ ಇನ್ನೊಂದು ಶುಭಸಮಾಚಾರಕ್ಕೆ ಸಿದ್ಧರಾಗಿರ

ಲಿಲ್ಲ. ಸಾವಿತ್ರಮ್ಮನ ಸುದ್ದಿ ಮುಟ್ಟಿ ಆರೇ ತಿಂಗಳಾಗಿರಲಿಲ್ಲ, ಮೀನಾಕ್ಷಮ್ಮನವರ ಬಯಕೆಯ ಸುದ್ದಿಯೂ ಮುಟ್ಟಿತು. 'ನಾನು ಎಷ್ಟು ಅವಸರಪಟ್ಟೆ ಮದುವೆಗೆ' ಎಂದು ರಾಯರು ಅಂದುಕೊಳ್ಳುವರು. ಮರುಕ್ಷಣವೇ 'ಅದರ ಉತ್ತರಾರ್ಧವೇ ಇದಲ್ಲವೇ?' ಎಂದು ಸಮಾಧಾನ ತಂದುಕೊಂಡರು.

ರಾಯರ ಮನೆಗೆ ಹೊಸ ಕಳೆ ಬಂದುಬಿಟ್ಟಿತು. ಸೀಮಂತಗಳ ಮೇಲೆ ಸೀಮಂತ—ನಾಮಕರಣದ ಮೇಲೆ ನಾಮಕರಣ. ಮೊದಲೇ ಜನನಿಬಿಡವಾಗಿದ್ದ ಮನೆ ಈಗ ತುಂಬಿ ತುಳುಕಲಾರಂಭಿಸಿತು. ಸಾವಿತ್ರಿಯ ಬಾಣಂತನಕ್ಕೆ ಅವರ ಸೋದರತ್ತೆಯೇ ಬಂದು ನಿಂತರು ಮೀನಾಕ್ಷಮ್ಮನವರ ಸೇವೆಗೆ ಊರಿನ ಮಹಿಳಾಮಂಡಳಿಯೇ ಬಂದು ನಿಂತಿತು. ರಾಜೋಪಚಾರಕ್ಕೆ ಮೀರಿದ ಸೇವೆ ನಡೆಯಲಾರಂಭವಾಯಿತು. ಕೈಗೊಬ್ಬರು ಕಾಲಿಗೊಬ್ಬರು ಮೀನಾಕ್ಷಮ್ಮನವರ ಸೇವೆಗೆ ಮುಂದುವರಿದರು.

ರಾಮಚಂದ್ರ ತನ್ನ ತಮ್ಮ ಲಕ್ಷ್ಮಣನಿಗಿಂತ ಮೂರು ತಿಂಗಳಿಗೆ ದೊಡ್ಡವನಾಗಿದ್ದ. ಈ ನಾಮಕರಣದ ಪ್ರಮೇಯದಲ್ಲಿ ಗೌರಮ್ಮನವರು ಯಾರ ಮಾತನ್ನೂ ನಡೆಯಗೊಡಲಿಲ್ಲ. 'ಅಣ್ಣತಮ್ಮಂದಿರು ರಾಮ ಲಕ್ಷ್ಮಣರ ಹಾಗಿರಬೇಕು. ಅದಕ್ಕೋಸ್ಕರ ಮೀನಾನ ಮಗೂಗೂ ಸಾತೂ ಮಗೂಗೂ ರಾಮ-ಲಕ್ಷ್ಮಣ ಎಂತಾಲೇ ಹೆಸರಿಡೋಣ' ಎಂದು ಹಟ ಹಿಡಿದರು. ರಾಮ ಲಕ್ಷ್ಮಣರು ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟದಿದ್ದರೂ ಹೇಗೆ ಅನ್ಯೋನ್ಯವಾಗಿ ಕಷ್ಟಸುಖಗಳಲ್ಲಿ ಒಂದಾಗಿ ಬಾಳಿ ಸೋದರಪ್ರೇಮದ ಆದರ್ಶಮೂರ್ತಿಗಳಾದರೋ ಹಾಗೇ ತಮ್ಮ ಸೀನುವಿನ ಮಕ್ಕಳೂ ಆಗಬೇಕೆಂದು ಗೌರಮ್ಮನವರ ಆಸೆ.

ಮೊದಲು ಮನೆಯನ್ನೇ ಸೇರದಿದ್ದ ರಾಯರು ಈಗ ಮನೆ ಬಿಡುವುದೇ ಕಷ್ಟವಾಗುತ್ತಿತ್ತು. ಅಮಲ್ದಾರರು ಜಮಾಬಂದಿಗೆ ಬಂದರೂ ಸರಿ, ಸಬ್ ಡಿವಿಜನ್ ಸಾಹೇಬರು ಇನ್‌ಸ್ಪೆಕ್ಷನ್‌ಗೆ ಬಂದರೂ ಸರಿ. ರಾಯರಂತೂ ಮನೆ ಬಿಟ್ಟು ಕದಲುವ ಹಾಗಿರಲಿಲ್ಲ. ಅಮಲ್ದಾರರನ್ನ, ಸಬ್‌ಡಿವಿಜನ್ ಸಾಹೇಬರನ್ನ ಮನೆಗೇ ಕರೆಸಿಕೊಂಡು ಭರ್ಜರಿ ಔತಣದ ಊಟ ಹಾಕಿ ಅವರ ಇನ್‌ಸ್ಪೆಕ್ಷನ್ ಜಮಾಬಂದೀನೆಲ್ಲಾ ತಮ್ಮ ಜಗುಲಿಯ ಮೇಲೆ ಜರುಗಿಸಿ ಬಿಡುತ್ತಿದ್ದರು.

ರಾಯರಿಗೆ ಪದೇ ಪದೇ ಇಸ್ಪೀಟಿಗೆ ಕೂಡುವ ಚಟವಿತ್ತು. ಎರಡು ದಿವಸಕ್ಕೊಮ್ಮೆಯಾದರೂ ಸ್ಟೈಲಾ ಗುಲಾಮನನ್ನು ಕೈಯಾಡದಿದ್ದರೆ ಅವರಿಗೆ ತಿಂದ ಅನ್ನ ಮೈಗೆ ಹತ್ತುತ್ತಿರಲಿಲ್ಲ. ಅದನ್ನೇ ವಿನೋದವಾಗಿ 'ಗೀತಾ

ಪಾರಾಯಣ' ಎಂದು ಕರೆಯುತ್ತಿದ್ದರು. ರಾಮಲಕ್ಷ್ಮಣರ ಲಾಲನೆಪಾಲನೆಯಲ್ಲಿ ರಾಯರು 'ಗೀತಾಪಾರಾಯಣ'ವನ್ನು ಮರೆಯುತ್ತ ಬಂದರು. ಒಂದು ದಿನ ಶಾಮಣ್ಣ ಪರಿಹಾಸ್ಯಕ್ಕೆ

"ರಾಯರು ಗೀತಾಪಾರಾಯಣಾನ ಅಲಕ್ಷ್ಯವೇ ಮಾಡಿಬಿಟ್ಟರಲ್ಲಾ!" ಎಂದು ಕೇಳಿದಾಗ ರಾಯರು ನಗುನಗುತ್ತಲೇ

"ರಾಮಾಯಣ ಆರಂಭವಾಯಿತು, ಇನ್ನು ಗೀತೆ ಏಕಪ್ಪಾ?" ಎಂದು ಮಾರುತ್ತರ ಹೇಳಿಬಿಡುತ್ತಿದ್ದರು.

ರಾಯರು ನೈಲಾ ಗುಲಾಪುರ ಗೀತೆಯನ್ನು ಮರೆತರೂ ಕುಮಾರ ವ್ಯಾಸನ ಗೀತೆಯನ್ನು ಮರೆಯಲಿಲ್ಲ. ರಾಯರಿಗೆ ಭಾರತ ಪಾರಾಯಣದ ಕಡೆಗೆ ಒಲವು ಹೆಚ್ಚುತ್ತ ಬಂದಿತು. ಆಡುವ ಮಕ್ಕಳನ್ನು ಎದುರಿಗೆ ಮಲಗಿಸಿಕೊಂಡು ಆನಂದವಾಗಿ ಕರ್ಣವೃತ್ತಾಂತ, ಅಕ್ಷಯಪಾತ್ರೆ, ದ್ರೌಪದೀ ವಸ್ತ್ರಾಪಹರಣ, ರಾಜಸೂಯಯಾಗ ಸಂಧಿಗಳನ್ನು ಓದಿಸಿ ಕೇಳಿ ಆನಂದ ಪಡುತ್ತಿದ್ದರು. ತಮ್ಮ ಮಕ್ಕಳು ಈ ವಾತಾವರಣದಲ್ಲಿಯೇ ಬೆಳೆದು ಕರ್ಣ ಕೃಷ್ಣ ಅರ್ಜುನ ಅಭಿಮನ್ಯುಗಳಂತೆ ಮಹಾವ್ಯಕ್ತಿಗಳಾಗಬೇಕೆಂದು ರಾಯರ ಹಂಬಲ. ಈ ಸಂದರ್ಭಗಳಲ್ಲಿ ತಮ್ಮ ಬಾಲ್ಯವನ್ನು ಜ್ಞಾಪಿಸಿಕೊಳ್ಳುವರು. ತಮ್ಮ ತೀರ್ಥರೂಪರು ಮುಸುಕಿನ ಒಳಗೆ ಕೂಡಿಸಿಕೊಂಡು ಅಮರವನ್ನೂ, ಸುಭಾಷಿತ ಶತಕಗಳನ್ನೂ, ಭಾರತ ಭಾಗವತ ರಾಮಾಯಣಗಳಿಂದ ಸ್ವಾರಸ್ಯವಾದ ಪದ್ಯಗಳನ್ನೂ ಕಂಠಪಾಠ ಮಾಡಿಸುತ್ತಿದ್ದ ರೀತಿಯನ್ನು ವರ್ಣಿಸುತ್ತಿದ್ದರು.

ಒಂದು ದಿನ ರಾಯರು ಮಕ್ಕಳನ್ನಾಡಿಸುತ್ತಾ ಕುಳಿತಿದ್ದಾಗ ವಿನೋದಕ್ಕೆ

"ಸಾತೂ, ನಿನ್ನ ಮಗ ಬೆಳೆದು ದೊಡ್ಡವನಾದಮೇಲೆ ಏನಾದರೆ ನಿನಗೆ ಸಂತೋಷವೇ?" ಎಂದು ಕೇಳಿದರು. ಸಾವಿತ್ರಮ್ಮ ಮೊದಲು ನಾಚಿದಳು. ಅಕ್ಕನ ಕಡೆ ನೋಡಿದಳು. ಅವರು ಕಣ್ಸನ್ನೆಯಲ್ಲೇ ಧೈರ್ಯ ಕೊಡಲು, ಸಣ್ಣ ದನಿಯಲ್ಲಿ

"ದೊಡ್ಡ ಆಫೀಸರಾಗಬೇಕೆಂದು ನನ್ನ ಆಸೆ" ಎಂದು ಹೇಳಿದಳು.

ರಾಯರು 'ಶಹಭಾಸ್' ಎಂದಂದು ಮೀನಾಕ್ಷಮ್ಮನವರ ಕಡೆ ತಿರುಗಿ

"ನಿನಗೇ ಮೀನಾ?"

ಮೀನಾಕ್ಷಮ್ಮ ತುಸು ಯೋಚಿಸಿದರು. ಅವರ ಮುಖದ ಭಾವ ಗಾಂಭೀರ್ಯ ತಾಳಿತು.

"ನನ್ನ ಮಗ ಏನಾದರೂ ಸರಿ, ಬಡವರಾಧಾರಿಯಾದರೆ ನನಗೆ ಸಂತೋಷ"

ಎಂದರು.

ರಾಯರ ಬಾಯಲ್ಲಿ ಮಾತೇ ಹೊರಡಲಿಲ್ಲ. ಗೌರಮ್ಮನವರು ಮಾತ್ರ "ಚಿನ್ನದಂಥಾ ಮಾತು ಆಡಿದೆ ಕಣೇ ತಾಯಿ" ಎಂದರು.

೫

ಎರಡು ವರ್ಷಗಳು ಕಳೆದವು. ಮೀನಾಕ್ಷಮ್ಮ ಶಾಂತಮುದ್ರೆಯ ಹೆಣ್ಣನ್ನು ಹೆತ್ತು ಪತಿಗೆ ಅರ್ಪಿಸಿದರು. ರಾಯರು ಮಗಳಿಗೆ ಶಾಂತಾ ಎಂದು ಹೆಸರಿಟ್ಟರು. ಸಾವಿತ್ರಮ್ಮ ತಾನು ಹಿಂದುಳಿಯಬಾರದೆಂದು ಮತ್ತೆ ಎರಡು ವರ್ಷ ಕಳೆಯಲು ಒಂದು ಗಂಡನ್ನು ಹೆತ್ತು ಪತಿಗೆ ಅರ್ಪಿಸಿದಳು. ಸಾವಿತ್ರಮ್ಮನ ಮಗನಿಗೆ ಗೋಪಾಲ ಎಂದು ಹೆಸರಿಟ್ಟರು. ರಾಯರ ಕರ್ತವ್ಯ ಭಾರವೂ ಹೆಚ್ಚುತ್ತ ಬಂತು. ಮಕ್ಕಳಿರುವ ಮನೆಯ ಸಣ್ಣಪುಟ್ಟ ಕಾಹಿಲೆ ಕಸಾಲೆಗಳು ರಾಯರ ಮನೆಯನ್ನೂ ಬಿಡಲಿಲ್ಲ. ಇವತ್ತು ರಾಮೂಗೆ ಜ್ವರ ಬಂತು; ಇವತ್ತು ಶಾಂತಾ ಕೆಮ್ಮುತ್ತಿದ್ದಾಳೆ; ಇವತ್ತು ಲಕ್ಷ್ಮಣ ಚಂಡಿ ಹಿಡಿದಿದ್ದಾನೆ ಎಂದು ಯಾವದಾದರೊಂದು ಇರುತ್ತಲೇ ಇದ್ದಿತು.

ಒಂದು ದಿವಸ ಇದ್ದಕ್ಕಿದ್ದಹಾಗೆಯೇ ಗೋಪಾಲೀಗೆ ಎಳೆತ ಆರಂಭವಾಗಿ ಬಿಟ್ಟಿತು. ಮಗು ಕಣ್ಣುಗುಡ್ಡೆ ಆಕಾಶಕ್ಕೆ ಸಿಕ್ಕಿಸಿ ಉಸಿರುಗಟ್ಟುತ್ತ ಬಂತು. ಡಾಕ್ಟರೂ ಗಾಬರಿಯಾಗಿಯೇ ಬಂದರು. ರಬ್ಬರ್ ಕೊಳವಿಯನ್ನು ಎದೆಯ ಮೇಲಿಟ್ಟು ನೋಡಿ ತಾವೂ ಕಣ್ಣುಗುಡ್ಡೆ ಸಿಕ್ಕಿಸಿಬಿಟ್ಟರು. ಎಲ್ಲಿಗೋ ಹೋಗಿದ್ದ ಶಾಮಣ್ಣನವರು ಈ ಹುಯಿಲು ಕೇಳಿ ಓಡಿಬಂದು ಮಗುವನ್ನು ನೋಡಿದರು. ಆ ಕ್ಷಣವೇ ಅಲ್ಲಿಂದ ಮಾಯವಾಗಿ ಒಂದು ಎಲೆಯ ಮೇಲೆ ಜೇನುತುಪ್ಪ ಕಲಸಿದ ಕಪ್ಪನೆಯ ಔಷಧವನ್ನು ಹಾಕಿ ತಂದು ಮಗುವಿಗೆ ನೆಕ್ಕಿಸಿದರು. ತಾಯಿತಂದೆ ನೋಡುತ್ತಿರುವಂತೆಯೇ ಹತ್ತು ಹದಿನೈದು ನಿಮಿಷಗಳಲ್ಲಿ ಎಳೆತ ಕಡಿಮೆಯಾಗುತ್ತ ಬಂತು; ಮಗು ಅಬಾಧಿತವಾಗಿ ಉಸಿರು ಹುಯ್ಯಲಾರಂಭಿಸಿತು. ಅರ್ಧಗಂಟೆ ಬಿಟ್ಟು ಮತ್ತೆ ಅದೇ ಔಷಧ ತಿನ್ನಿಸಲು ಮಗು ಸುಖವಾಗಿ ನಿದ್ರೆಹೋಯಿತು.

"ಇನ್ನೇನೂ ಯೋಚನೆಯಿಲ್ಲ ಬಿಡಿ ಸ್ವಾಮಿ, ಮಗು ಜೀವ ಗಟ್ಟಿಯಾ ಯಿತು" ಎಂದರು.

ತಮ್ಮ ಕಣ್ಣುಮುಂದೆಯೇ ಆದ ಈ ಪವಾಡವನ್ನು ನೋಡಿ ರಾಯರು ಬೆರಗಾಗುವದು ಹಾಗಿರಲಿ; ಎಂ.ಬಿ., ಬಿ.ಎಸ್. ಮಾಡಿದ ಡಾಕ್ಟರು ಕೂಡ ಬೆರಗಾದರು.

"ಯಾವದರಿ ಔಷಧ, ಶಾಮಣ್ಣ?" ಎಂದು ಡಾಕ್ಟರು ತಮ್ಮ ವೃತ್ತಿ ಗಾಂಭೀರ್ಯವನ್ನು ಮರೆತು ಕೇಳಿದರು.

"ನೀವೆಲ್ಲಾ 'ಕೆಲಸಕ್ಕೆ ಬಾರದು' ಎಂದು ಹೇಳುತ್ತೀರಲ್ಲಾ ಸಾರ್, ಆ ಆಯುರ್ವೇದದ್ದು—ಚಿಲ್ರೆ ಔಷಧ" ಎಂದು ಮೂದಲಿಸಿಯೇ ಬಿಟ್ಟರು.

ರಾಯರು ಮಧ್ಯೆ ಬಾಯಿಹಾಕಿ ಡಾಕ್ಟರಿಗೂ ಒಂದು ಸಿಹಿಮಾತು ಆಡಿ ಕಳುಹಿಸದಿದ್ದರೆ ಶಾಮಣ್ಣನಿಗೂ ಅವರಿಗೂ ಹಣಾಹಣಿ ವ್ಯಾಜ್ಯವೇ ಆರಂಭ ವಾಗಿಬಿಡುತ್ತಿತ್ತು.

ಒಂದು ಕಡೆ ಅನುಕೂಲಸ್ಥರ ಮನೆಯ ಆರೈಕೆ, ಇನ್ನೊಂದು ಕಡೆ ಪ್ರೀತಿಯ ತಂದೆತಾಯಿಗಳ ಪೋಷಣೆ ಎರಡೂ ಲಭಿಸಿದಮೇಲೆ ಮಕ್ಕಳು ಚೆನ್ನಾಗಿ ಬೆಳೆಯದೆ ಏನು ಆದಾವು?

ರಾಮಲಕ್ಷ್ಮಣರು ಸ್ಕೂಲಿಗೆ ಸೇರುವ ವಯಸ್ಸೂ ಬಂತು. ಮನೆಯಲ್ಲಿ ಪಾಯಸದ ಅಡಿಗೆಮಾಡಿ, ದೇವರಿಗೆ ತುಪ್ಪದ ದೀಪ ಹಚ್ಚಿಟ್ಟು ಅವರಿಬ್ಬ ರನ್ನೂ ಸ್ಕೂಲಿಗೆ ಕಳುಹಿಸಲಾರಂಭಿಸಿದರು.

ಸಾವಿತ್ರಮ್ಮನ ಬಯಕೆ, ಹಾರೈಕೆ ಸಫಲವಾಗುವ ಚಿಹ್ನೆಗಳು ಮೊದಲಿ ನಿಂದಲೇ ಕಂಡುಬರಲಾರಂಭವಾದವು. ರಾಮಚಂದ್ರ ವರ್ಷವಾಗುತ್ತ ಆಗುತ್ತ ಮುಂದಿನ ತರಗತಿಗೆ ಸುಖವಾಗಿ ತಲಪುತ್ತಿದ್ದ. ಲಕ್ಷ್ಮಣನ ನಡಿಗೆ ಅಷ್ಟು ನೇರವಾಗಿರಲಿಲ್ಲ. ಮೊದಲಿನಿಂದಲೂ ಅವನಿಗೆ ಲೆಕ್ಕವೆಂದರೆ ದುಃಖವೇ ಬರುತ್ತಿತ್ತು. ಪಠ್ಯಪುಸ್ತಕಗಳಲ್ಲಿನ ಕನ್ನಡ ಪದ್ಯಗಳನ್ನು ರಾಗವಾಗಿ ಹೇಳು ವುದರಲ್ಲಿ ಲಕ್ಷ್ಮಣ ಎಲ್ಲರಿಗಿಂತಲೂ ಮುಂದಾಳು; ಆದರೆ ಮಿಕ್ಕ ಪಾಠಗಳಲ್ಲಿ ಅವನ ಸ್ಥಾನ ತರಗತಿಯ ತುಟ್ಟತುದಿಯಲ್ಲಿ. ಕಥೆಗಳನ್ನು ಹೇಳುವುದು ಕೇಳುವುದು; ಹಾಡುಗಳನ್ನು ಕೇಳುವುದು ಹೇಳುವುದು—ಈ ಕಡೆಗೇ ಅವನ ಲಕ್ಷ್ಯ. ರಾಯರ ಮಗ, ದೊಡ್ಡವರ ಮನೆಯ ಹುಡುಗನೆಂದು ಶಾಲೆಯ ಅಧಿಕಾರಿಗಳು ಅವನನ್ನೂ ಮೇಲಿನ ತರಗತಿಗಳಿಗೆ ಕಳುಹಿಸುತ್ತಿದ್ದರು.

ರಾಮಚಂದ್ರನಲ್ಲಿ ಒಂದು ಶಿಸ್ತಿತ್ತು. ಅವನ ಕೆಲಸಕಾರ್ಯಗಳಲ್ಲಿ ಒಂದು ತೆರನ ವ್ಯವಸ್ಥಿತ ರೂಪವಿತ್ತು. ಪುಸ್ತಕಗಳಿಗೆ ಅಚ್ಚುಕಟ್ಟಾಗಿ ರಟ್ಟು ಹಾಕಿ ಅವನು ಇಟ್ಟುಕೊಳ್ಳುತ್ತಿದ್ದ ರೀತಿ, ಮನೆಯ ಪಾಠಗಳನ್ನು ಮಿಗಿಸದೆ ಮಾಡಿ ಮುಗಿಸುತ್ತಿದ್ದ ಬಗೆ, ಪಾಠಗಳನ್ನು ಪೂರ್ವಭಾವಿಯಾಗಿ ಸಿದ್ಧ ಮಾಡಿಕೊಂಡು ಕ್ಲಿಷ್ಟಪದಗಳಿಗೆ ನಿಘಂಟು ನೋಡಿ ಅರ್ಥಗಳನ್ನು ತಿಳಿದು ಕೊಂಡು ಹೋಗುತ್ತಿದ್ದುದು—ಎಲ್ಲದರಲ್ಲಿಯೂ ಒಂದು ಕ್ರಮ, ಒಂದು ನಿಯಮವಿತ್ತು. ಇದರ ಜತೆಗೆ ರಾಮಚಂದ್ರನಲ್ಲಿ ಸಾಕಷ್ಟು ನುಗ್ಗುವ ಶಕ್ತಿ

ಮೊದಲಿನಿಂದಲೂ ಬೆಳೆದುಬಂದಿತ್ತು. ಇದನ್ನು ಅವನು ತನ್ನ ತಂದೆಯಿಂದ ಬಳುವಳಿಯಾಗಿ ಪಡೆದನೆಂದರೂ ತಪ್ಪಾಗದು. ಫುಟ್‌ಬಾಲ್ ಮೈದಾನದಲ್ಲಿ ರಾಮಚಂದ್ರನೇ ಮುಂದಾಳು. ಅವನೇ ಟೀಮಿನ ಕ್ಯಾಪ್ಟನ್; ಅದಿಲ್ಲದಿದ್ದರೆ ಸೆಂಟರ್-ಫಾರ್‌ವರ್ಡ್ (Centre-forward). ಸ್ಕೌಟುದಳದಲ್ಲಿ ಅವನೇ ಪೆಟ್ರೋಲ್ ಲೀಡರ್. ಡಿಬೇಟಿಂಗ್ ಸೊಸೈಟಿಯಲ್ಲಿ ಅವನೇ ಪಕ್ಷನಾಯಕ. ಕ್ಲಾಸಿನಲ್ಲಿ ಅವನೇ ಮಾನಿಟರ್ (Monitor). ಇತರರ ಮೇಲೆ ಅಧಿಕಾರ ಮಾಡುವ ಚಪಲ, ಅನುಕೂಲಗಳು ರಾಮಚಂದ್ರನಿಗೆ ಮೊದಲಿನಿಂದಲೇ ಬಂದವು. ಸ್ಕೂಲಿನ ಸೀಮೇಸುಣ್ಣವೆಲ್ಲಾ (Chalk pieces) ತರಗತಿಯ ಮಾನಿಟರ್‌ಗಳ ಹತ್ತಿರವಿರುವುದರಿಂದ ರಾಮಚಂದ್ರನ ತರಗತಿಯ ಹುಡುಗರು ಅವನನ್ನು 'ಪಡಿ'ಗಾಗಿ ಆಶ್ರಯಿಸಬೇಕಾಗಿತ್ತು. ಸ್ಕೌಟು ಟ್ರೂಪಿನ ಹುಡುಗರು ಶಾಲೆಯ ನಿತ್ಯದ ಡ್ರಿಲ್ ತರಗತಿಯಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಈ ಅನುಕೂಲಕ್ಕಾಗಿ ಅನೇಕ ಸೋಮಾರಿ ಹುಡುಗರು ಸ್ಕೌಟುಗಳಾಗಿಬಿಡುತ್ತಿದ್ದರು. ಆದರೆ ಡ್ರಿಲ್ ತಪ್ಪಿದರೆ ಸ್ಕೌಟು ಕ್ಲಾಸುಗಳಿರುತ್ತಿದ್ದವು. ಅವುಗಳಿಗೆ ಚಕ್ಕರ್ ಹೊಡೆಯಬೇಕಾದರೆ ದಳ-ನಾಯಕನ (Patrol-Leader) ವಿಶ್ವಾಸ ಬೇಕು. ಈ ಕಾರಣದಿಂದಲೂ ಹುಡುಗರು ರಾಮಚಂದ್ರನನ್ನು ಆಶ್ರಯಿಸುತ್ತಿದ್ದರು.

ಲಕ್ಷ್ಮಣನಲ್ಲಿ ಅಣ್ಣನ ಈ ಎರಡು ಗುಣಗಳೂ ಸಂಪೂರ್ಣವಾಗಿ ಲೋಪವಾಗಿದ್ದವು. ಬುದ್ಧಿಗೆ ತೋರಿದರೆ ಎಂಟು ದಿವಸದ ಪಾಠವನ್ನು ಒಂದೇ ದಿವಸ ಸಿದ್ಧಮಾಡಿಬಿಡುವನು. ಮನಸ್ಸಿಗೆ ಬಾರದಿದ್ದರೆ ತಿಂಗಳಾದರೂ ಪುಸ್ತಕ ಮುಟ್ಟುತ್ತಿರಲಿಲ್ಲ. ಪುಸ್ತಕಗಳನ್ನು ಕಳೆದುಕೊಳ್ಳುವುದೂ, ಇದ್ದ ಪುಸ್ತಕಗಳ ಹಾಳೆಗಳನ್ನು ಕಳೆದುಕೊಳ್ಳುವುದೂ ಅವನಿಗೆ ಸಾಮಾನ್ಯವಾಗಿ ಬಿಟ್ಟಿತ್ತು. ಊಟ ಮಾಡಿ ಶಾಲೆಗೆ ಹೊರಟ ಲಕ್ಷ್ಮಣ ನೇರವಾಗಿ ಶಾಲೆಗೆ ಬರುತ್ತಿದ್ದುದೇ ಅಪರೂಪ. ದಾರಿಯಲ್ಲಿ ಹಾವಾಡಿಗನನ್ನು ಕಂಡರಾಯಿತು; ಮೋಡಿ ಮಾಡುವವರೂ, ಮಾರಿಯನ್ನು ಹೊತ್ತು ಛಾಟಿಯಿಂದ ತಮ್ಮನ್ನೇ ಹೊಡೆದುಕೊಳ್ಳುವವರೂ, ಯಕ್ಷಿಣಿ, ಡೊಂಬರಾಟ ಆಡಿಸುವವರೂ, ತಂಬೂರಿಯನ್ನೋ ಏಕನಾದವನ್ನೋ ಶ್ರುತಿಮಾಡಿಕೊಂಡು ಭಿಕ್ಷೆಗಾಗಿ ಹಾಡುವವರೂ ಯಾರಾದರೂ ಸಿಕ್ಕಿದರಾಯಿತು; ಅಂದಿನ ಶಾಲೆಪಾಠ, ಮನೆಪಾಠ ಎಲ್ಲವೂ ಲಕ್ಷ್ಮಣನಿಗೆ ಮರೆತೇ ಹೋಗುತ್ತಿದ್ದವು.

ರಾಮಚಂದ್ರನೆಷ್ಟು ಸಂಗಪ್ರಿಯನೋ, ಲಕ್ಷ್ಮಣನಷ್ಟು ಏಕಾಂತಪ್ರಿಯನಾಗಿದ್ದ. ರಾಮಚಂದ್ರನ ಸುತ್ತಮುತ್ತಲೂ ಜನ ತುಂಬಿದ್ದರೇ, ಅವನನ್ನು

'ಭಲೆಭಲೆ'ಯೆನ್ನುತ್ತಿದ್ದರೇ ಅವನು ಒಬ್ಬ ಮನುಷ್ಯ. ಲಕ್ಷ್ಮಣನನ್ನು ಯಾರಾದರೂ ಮಾತನಾಡಿಸಿದರೆ ಸಾಕು 'ಮುಟ್ಟಿದರೆ ಮುನಿ'ಯಂತಾಗುತ್ತಿದ್ದ. ಮನಸ್ಸಿನ ಭಾವನೆ, ಚಿಂತನೆಗಳನ್ನು ಪ್ರಕಟಿಸಲು ಮಾತು ಒಂದು ಸಾಧನವೆಂಬುದು ಅವನ ಮನಸ್ಸಿಗೇ ಬಾರದು. ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುವನು. ಊರ ಹೊರಗಿನ ಬಂಡೆಯ ಮೇಲೆ ಕುಳಿತು ಸಂಜೆಯಾಗಸದ ಬಣ್ಣ ಬಣ್ಣಗಳನ್ನು ನೋಡುತ್ತಾ ಮೈಮರೆಯುವನು. ಹೊಳೆಯ ತಿಳಿನೀರಿನಲ್ಲಿ ಕಾಲು ಬಿಟ್ಟುಕೊಂಡು ಕುಳಿತು, ಅಲ್ಲಿನ ಮೀನುಗಳು ಸ್ನೇಹಸಲಿಗೆಗಳಿಂದ ಪರಸ್ಪರ ಸನ್ನಿವಾಟವಾಡುವುದನ್ನೂ, ತನ್ನ ಕಾಲನ್ನು ಕಚ್ಚುವುದನ್ನೂ ನೋಡುತ್ತ ದೇಹದ ಪರಿವೆಯನ್ನೇ ಮರೆಯುವನು.

ಶಾಲೆಯಲ್ಲಂತೂ ಲಕ್ಷ್ಮಣನಿಗೆ ಸ್ನೇಹಿತರು ದೊರೆಯಲೇ ಇಲ್ಲ. ಅವನ ಸ್ನೇಹಿತರು ಅನ್ನಿಸಿಕೊಳ್ಳುತ್ತಿದ್ದವರೆಂದರೆ ಶಾಮಣ್ಣನವರೊಬ್ಬರೇ. ಶಾಮಣ್ಣನವರ ಭಾರತವಾಚನವೆಂದರೆ ಲಕ್ಷ್ಮಣನಿಗೆ ಅಚ್ಚುಮೆಚ್ಚು. ತನ್ನ ಆನಂದವನ್ನು ಬಿಚ್ಚಿ ಹೇಳುವುದಕ್ಕೂ ಅವನಿಗೆ ಸಂಕೋಚ. ಎಂದಾದರೊಂದು ದಿವಸ ಶಾಮಣ್ಣನವರ ಹಾಗೆ ಭಾರತ ಓದುವುದನ್ನು ಕಲಿಯಬೇಕೆಂದು ಆಶಿಸುತ್ತಿದ್ದ. ಶಾಮಣ್ಣನವರ ವಾಚನರೀತಿಯನ್ನು ಅನುಕರಿಸಿ ಅದೇ ಬಗೆಯಲ್ಲಿ ತನ್ನ ಪತ್ರಪದ್ಯಗಳನ್ನು ಓದುವುದರ ಮೂಲಕ ತನ್ನ ಭಕ್ತಿವಿಶ್ವಾಸವನ್ನು ಪ್ರದರ್ಶಿಸುತ್ತಿದ್ದ.

ಶಾಮಣ್ಣನವರ ಹತ್ತಿರ ದೊಡ್ಡ ಆಸ್ತಿಯೊಂದಿತ್ತು : ಒಂದು ಸುಂದರವಾದ ತಂಬೂರಿ. ಅವರ ಭಾರತವಾಚನವನ್ನು ಕೇಳಿದ್ದ ಒಬ್ಬ ಮೈಸೂರು ವಿದ್ವಾಂಸರು ತಾವು ಉಪಯೋಗಿಸುತ್ತಿದ್ದ ಮಾಗಡಿ ತಂಬೂರಿಯನ್ನು ಸಂತೋಷದಿಂದ ದಾನಮಾಡಿದ್ದರು. ಸಂಗೀತಗಾರರ ಮನೆಯಲ್ಲಿ ಅದು ನಾಲ್ಕು ತಲೆಮಾರಿನಿಂದಲೂ ಇತ್ತು. ಅಂತಹ ವಂಶಪಾರಂಪರ್ಯವಾದ ಆಸ್ತಿಯನ್ನು ಸಂಗೀತವಿದ್ವಾಂಸರು ಸಂದೇಶಸಹಿತವಾಗಿಯೇ ಒಪ್ಪಿಸಿದ್ದರು.

"ನಿಮ್ಮ ವಿದ್ಯೆಗೂ, ನಿಮ್ಮ ಭಾರತದ ಕವಿಗೂ ಇದು ನನ್ನ ಕಾಣಿಕೆ, ಶಾಮಣ್ಣನವರೇ. ಏನೇ ಕಷ್ಟ ಬಂದರೂ ಇದನ್ನು ನೀವು ಮಾರಬಾರದು. ಕಾಲವೊದಗಿದಾಗ ಯೋಗ್ಯನಾದ ಶಿಷ್ಯನಿಗೆ ದಾನ ಮಾಡಿ, ಇದೇ ಮಾತನ್ನು ಅವನಿಗೂ ಹೇಳಬೇಕು" ಎಂದು ಹೇಳಿ 'ಮಾರುವುದಿಲ್ಲ' ಎಂಬ ಶಾಮಣ್ಣನವರಿಂದ ಮಾತು ತೆಗೆದುಕೊಂಡಿದ್ದರು.

ಆ ತಂಬೂರಿಯನ್ನು ನೋಡಿದರೆ ಸಾಕು ಲಕ್ಷ್ಮಣನ ಮೈ ಝುಂ ಎನ್ನುತ್ತಿತ್ತು. ಅದನ್ನು ಶ್ರುತಿಮಾಡಿ ಶಾಮಣ್ಣನವರು ಮಿಡಿದರೆಂದರೆ ಲಕ್ಷ್ಮಣನ

ನರಗಳನ್ನು ಮಿಡಿದಂತಾಗುತ್ತಿತ್ತು. ಉದ್ವೇಗದಿಂದ ನಾಡಿ ಹೊಡೆದುಕೊಳ್ಳಲಾರಂಭಿಸುತ್ತಿತ್ತು.

ಶಾಮಣ್ಣನವರನ್ನೂ ಅವರ ತಂಬೂರಿಯನ್ನೂ ಒಂದು ಸಲ ರಾಮಚಂದ್ರ ಅಪಹಾಸ್ಯಮಾಡಿದ್ದು ರಾದ್ಧಾಂತಕ್ಕೇ ಇಟ್ಟುಕೊಂಡಿತು. ಶಾಮಣ್ಣನವರನ್ನು 'ತಂಬೂರಿ ದಾಸಯ್ಯ' ಎಂದಂದದ್ದು ತಪ್ಪಾಯಿತು ಎಂದು ರಾಮಚಂದ್ರ ಹೇಳುವ ತನಕ ಲಕ್ಷ್ಮಣ ಬಿಡಲಿಲ್ಲ. ಇಂತಹ ಸಣ್ಣಪುಟ್ಟ ಘಟನೆಗಳು ರಾಮಚಂದ್ರ-ಲಕ್ಷ್ಮಣರನ್ನು ಸ್ವಲ್ಪ ದೂರ ದೂರ ಮಾಡುತ್ತಿದ್ದವು. ತಾನು ಪ್ರತಿಯೊಂದು-ಪರೀಕ್ಷೆಯಲ್ಲಿಯೂ ತಪ್ಪದೇ ತೇರ್ಗಡೆಯಾಗುತ್ತಿದ್ದೇನೆಂದು ರಾಮಚಂದ್ರನಿಗೆ ಹೆಮ್ಮೆ. ಲಕ್ಷ್ಮಣನಿಗೆ ಅದನ್ನು ಕಂಡರೆ ಅಸೂಯೆಯಿಲ್ಲ. ಆದರೆ ತನ್ನನ್ನು ಅವಹೇಳನ ಮಾಡದಿದ್ದರೆ ಸಾಕಲ್ಲಾ ಎಂದು ಬಯಸುವನು.

ಇಬ್ಬರೂ ಲೋವರ್ ಸೆಕೆಂಡರಿ ತರಗತಿಗೆ ಬಂದರು. ಶಾಲೆಯ ಅಧಿಕಾರಿಗಳು ರಾಮಚಂದ್ರನನ್ನು ಪರೀಕ್ಷೆಗೆ ಕಟ್ಟಿಸಿದರು. ಆ ಸೌಭಾಗ್ಯ ಲಕ್ಷ್ಮಣನಿಗೆ ದೊರೆಯಲಿಲ್ಲ. "ನೋಡಿದೆಯೋ !" ಎಂದು ರಾಮು ಮೂದಲಿಸಿದಾಗ ಲಕ್ಷ್ಮಣ ತನ್ನ ಸಹಜಸರಳತೆಯಿಂದ "ಹೌದಪ್ಪಾ, ನೀನು ಜಾಣ, ನಿನ್ನನ್ನು ಕಟ್ಟಿಸಿದರು. ನಾನು ತಿಳಿದೇ ಇದೆ. ದಡ್ಡ—ಮಡ್ಡಿ ಸಾಂಬ್ರಾಣಿ" ಎಂದು ಉತ್ತರ ಕೊಟ್ಟಿದ್ದ.

ತಮ್ಮ ಮಗ ಮುಂದಕ್ಕೆ ಬರುತ್ತಿಲ್ಲವಲ್ಲಾ, ಎಲ್ಲದರಲ್ಲಿಯೂ ಹಿಂದುಳಿಯುತ್ತಿದ್ದಾನಲ್ಲಾ ಎಂದು ಮೀನಾಕ್ಷಮ್ಮನವರು ಮರುಗಿದರು. ಸಮಯವರಿತು ರಾಯರಿಗೆ ತಿಳಿಸಿಯೂ ತಿಳಿಸಿದರು. "ಹುಡುಗಾ ನಾಲ್ಕು ದಿವಸ ಆಡಿಕೊಂಡು ಇರಲಿ ಬಿಡು. ಈ ವರ್ಷವಲ್ಲದಿದ್ದರೆ ಮುಂದಿನ ವರ್ಷ ಕಟ್ಟುತ್ತಾನಂತೆ. ಏನೀಗ ಕೊಳ್ಳೆ ಹೋಗಿರುವುದು ಅವನಿಗೆ ವಯಸ್ಸು ?" ಎಂದು ರಾಯರು ಸಮಾಧಾನ ಹೇಳಿದ್ದರು.

ಊರ ಮುಂದಿನ ಹನುಮಂತರಾಯನ ಗುಡಿಯ ಕೈಸಾಲೆ ಊರಿನ ಭಜನೆ ಮಂದಿರವೂ ಆಗಿತ್ತು. ಸಾಧಾರಣವಾಗಿ ಊರಿನ ಕಿರಿಯರೂ, ಕೆಲವು ಹಿರಿಯರೂ ಪ್ರತಿದಿವಸವೂ ಅಲ್ಲಿ ಸೇರಿ ಭಜನೆ ಮಾಡಿ ಹೊತ್ತು ಕಳೆಯುತ್ತಿದ್ದರು. ಬೆಳಗ್ಗೆ ಹೊತ್ತು ಕೆಲಸವಿಲ್ಲದ ಕೆಲವು ಧಾಂಡಿಗರು ಸೇರಿ ಹುಲಿಮನೆಯನ್ನೋ ಚೌಕಾಭಾರವನ್ನೋ ಆಡಿಕೊಳ್ಳುತ್ತಿದ್ದರು. ಶನಿವಾರದ ಸಂಜೆಯ ಭಜನೆಯೇ ನಿಜವಾದ-ಸಾರವತ್ತಾದ ಭಜನೆ. ಅಂದೇ ಚರುಪು ಸಿಕ್ಕುತ್ತಿದ್ದುದು. ಜನಸಂದಣಿಯೂ ಶನಿವಾರ ಹೆಚ್ಚಾಗಿಯೇ ಇರುತ್ತಿದ್ದಿತು. ಎಲ್ಲರಿಗೂ ಒಂದೊಂದು ವಾರದ ಸರದಿ ಬರುತ್ತಿದ್ದುದರಿಂದ ಬಗೆಬಗೆಯ

ಚರುಪುಗಳೂ ಆಗುತ್ತಿದ್ದವು. ಭಜನೆಯೂ ಸ್ವಾರಸ್ಯವಾಗುತ್ತಿತ್ತು. ರಾಮ ಸ್ವಾಮಿ ಅಯ್ಯಂಗಾರಿ ಮನೆ ಪುಳಿಯೋಗರೆ, ಕೃಷ್ಣಮೂರ್ತಿ ಮನೆ ಬಾಳೇ ಹಣ್ಣಿನ ರಸಾಯನ, ಶಾನುಭೋಗರ ಮನೆ ಕೋಸಂಬರಿ, ವೆಂಕಟೇಶನ ಮನೆ ಹುಳಿಯುವಲಕ್ಕಿ ಹನುಮಪ್ಪನಿಗೆ ಸರಬರಾಯಾಗುತ್ತಿದ್ದವು. ಆದರೆ ಲಕ್ಷ್ಮಣನ ಚರುಪು ಎಲ್ಲಕ್ಕಿಂತಲೂ ಭರ್ಜರಿಯಾಗಿರುತ್ತಿತ್ತು. ಮಿಕ್ಕವರು ರುಚಿ ನೋಡು ವಷ್ಟು ಕೊಡುತ್ತಿದ್ದರೆ ಲಕ್ಷ್ಮಣನ ಸರದಿಯ ದಿವಸ ಹೊಟ್ಟೆ ತುಂಬುವಷ್ಟು ಸಿಕ್ಕುತ್ತಿತ್ತು. ಪ್ರತಿವಾರವೂ ಲಕ್ಷ್ಮಣನ ಚರುಪೇ ಸಿಕ್ಕಬಾರದೇ ಎಂದು ಎಲ್ಲರೂ ಬಯಸುವರು. ಆದರೆ ಭಜನೆಮನೆಯ ನಿಯಮ ನಿಬಂಧನೆಗಳು ಅದಕ್ಕೆ ಅವಕಾಶ ಕೊಡುತ್ತಿರಲಿಲ್ಲ.

ದೇವಸ್ಥಾನದ ಸಾಮಾನುಗಳಲ್ಲದೆ ಭಜನೆ ಮನೆಯ ಸಾಮಾನಾಗಿ ಒಂದು ತಂಬೂರಿ, ಒಂದು ಹಾರ್ಮೋನಿಯಂ, ಒಂದು ಪಿಟೀಲು, ಒಂದು ಶ್ರುತಿಪೆಟ್ಟಿಗೆ, ಒಂದು ಮೃದಂಗ, ಒಂದು ಮೂರು ಮೂಲೆ ಗಂಟೆ, ಒಂದು ಜತೆ ತಾಳಗಳೂ ಇದ್ದವು. ಹೆಣ್ಣುಮಕ್ಕಳ ಶಾಲೆಯ ಹಾಡಿನ ಮೇಷ್ಟ್ರೇ ಆ ಊರಿಗೆ ಸಂಗೀತವಿದ್ವಾಂಸರು. ಅವರೇ ಹಾರ್ಮೋನಿಯಂ ನುಡಿಸುತ್ತಿದ್ದರು. ಊರಿನ ತಾಫೇಗೆ ಮೃದಂಗ ನುಡಿಸುತ್ತಿದ್ದ ವೆಂಕಟಶಾಮಿ ಯದೇ ಮೃದಂಗವಾದನ. ರಾಮಸ್ವಾಮಿ ಅಯ್ಯಂಗಾರಿ ನಾಲ್ಕು ದಿವಸ ಮೈಸೂರಿಗೆ ಹೋಗಿ ಸಂಗೀತ ಕಲಿಯುತ್ತೇನೆಂದು 'ಚೊಟ್ಟೆ' ಹಾಕಿ ಬಂದಿದ್ದ. ಅವನದೇ ಪಿಟೀಲು. ಇವುಗಳ ಜತೆಗೆ ಮುಖ್ಯವಾಗಿ ರಂಗದಾಸರೋ ಶಾಮಣ್ಣನವರೋ ಹಾಡುತ್ತಿದ್ದರು. ಮಿಕ್ಕವರು ಒಂದೊಂದು ಶ್ಲೋಕ ವನ್ನೋ ದೇವರ ನಾಮವನ್ನೋ ಹೇಳುತ್ತಿದ್ದರು

ಒಂದು ಶನಿವಾರ ಸಂಜೆ. ಯಥಾಪ್ರಕಾರ ಭಜನೆಕೂಟ ಸೇರಿತ್ತು. ಅಂದು ಲಕ್ಷ್ಮಣನ ಚರುಪಿನ ಸರದಿ. ಲಕ್ಷ್ಮಣ ಕಡಲೆಯ ಉಸಲಿ, ಮೊಸರನ್ನ ಮಾಡಿಸಿಕೊಂಡು ಬಂದಿದ್ದುದು ಊರಿಗೆಲ್ಲಾ ಸಮಾಚಾರ ಹರಡಿಹೋಗಿತ್ತು. ಅರ್ಧ ಊರೇ ನೆರೆದುಬಿಟ್ಟಿತ್ತು. ಜನದ ಮಧ್ಯೆ ಒಂದು ಹೊಸ ಮುಖವೂ ಇತ್ತು. 'ಈತ ಯಾರು?' ಎಂದು ಒಬ್ಬರನ್ನೊಬ್ಬರು ಪ್ರಶ್ನಿಸಿದರು. ಹೊಸಬನ ವಿಚಾರ ಯಾರಿಗೂ ಗೊತ್ತಿರಲಿಲ್ಲ. ಗುಂಪಿನಲ್ಲಿದ್ದ ಬಸ್ ಕಂಡಕ್ಟರ್ ಮಾತ್ರ "ತುಮಕೂರಿಗೆಂದು ಹೊರಟಿದ್ದ ಈ ಮನುಷ್ಯ ಭಾರತದ ಶಾಮಣ್ಣನವರು ಇರೋ ಹಳ್ಳಿ ಇದೇ ಏನಯ್ಯ?" ಎಂದು ಕೇಳಿ, ಇಳಿದುದಾಗಿ ತಿಳಿಸಿದ. ಶಾಮಣ್ಣನವರು ನಾಲ್ಕು ದೇವರ ನಾಮಗಳನ್ನು ಹಾಡಿದರು. ಹೊಸಬ ಸ್ವಲ್ಪ ಜಾಗಮಾಡಿಕೊಂಡು ಮುಂದೆ ಬಂದು "ಕೊಂಚ

ಭಾರತ ಅಪ್ಪಣೆಯಾಗಬೇಕು" ಎಂದು ಕೇಳಿದ. ಎಲ್ಲರೂ ಹೊಸಬನನ್ನೇ ಎವೆಯಿಕ್ಕದೆ ನೋಡಿದರು. ಚಿಂದಿಬಟ್ಟೆ ಧರಿಸಿ, ಕ್ಷೌರ ಸ್ನಾನ ಕಾಣದ ಮುಖ ಮೈ ಹೊತ್ತು ಬಂದು 'ಭಾರತ ಓದು' ಎಂದು ಕೇಳುವವನ ದಿಟ್ಟತನವನ್ನು ಜನ ದಿಟ್ಟಿಸಿ ನೋಡಿತು.

ಶಾಮಣ್ಣನವರು ಸಂತೋಷದಿಂದ ಹತ್ತು ಪದ್ಯಗಳನ್ನು ಓದಿದರು. ಹೊಸಬ ಮಧ್ಯೆ ಮಧ್ಯೆ 'ಭಲೆ-ಹೌದೋ' ಎನ್ನುತ್ತಿದ್ದವನು ಶಾಮಣ್ಣನವರ ಓದು ಮುಗಿದಮೇಲೆ "ಭೇಷ್ ಓದ್ದೆ ನಮ್ಮಪ್ಪ. ಮೈಸೂರಿನಲ್ಲಿ ಆ ಬಸಪ್ಪ ಒಬ್ಬ ಓದ್ತಿದ್ದ ನೋಡು ಇಂಗೆ" ಎಂದ.

"ಯಾವ ಬಸಪ್ಪ ?" ಎಂದು ಶಾಮಣ್ಣನವರು ಕೇಳಿದರು.

"ಅಸಿ-ಬಸಪ್ಪನ್ನ ಕಾಣ್ಯಾ, ನಾಟಕಾ-ಗೀಟಕಾ ಬರ್ದವ್ನೆ ನೋಡು ಕವಿ ಬಸಪ್ಪಶಾಸ್ತ್ರಿ—ಅವ್ನಯ್ಯಾ !"

ಶಾಮಣ್ಣನವರು ಕಣ್ಣು ಮುಚ್ಚಿ ಕೈಮುಗಿದರು.

"ಆ ಮಹಾನುಭಾವ ಎಲ್ಲಿ, ನಾನೆಲ್ಲಿ; ಅವರ ಹೆಸರು ಹೇಳಿ ಓದ್ತೀನಪ್ಪಾ. ಭಾರತದ ತಿರುಳು ಕಂಡವರು ಬಸಪ್ಪಶಾಸ್ತ್ರಿಗಳು !" ಎಂದರು

ಹಾಡು, ಶ್ಲೋಕಗಳು ಮೊದಲಾದವು. ಕನ್ನಡ, ತೆಲುಗು, ತಮಿಳು ಭಾಷೆಗಳೆಲ್ಲಾ ಮೆರೆದುಹೋದವು. ಲಕ್ಷ್ಮಣನ ಸರದಿ ಬಂತು. ಕಾಂಭೋಜಿ ರಾಗದಲ್ಲಿ ಪುರಂದರದಾಸರ 'ಈ ಪರಿಯ ಸೊಬಗಾವ' ಕೀರ್ತನೆ ಆರಂಭಿಸಿದ. ಗ್ರಾಮಫೋನ್ ರಿಕಾರ್ಡಿನಲ್ಲಿ ಕೇಳಿ ಪಾಠಮಾಡಿದ ಕೀರ್ತನೆ. ಅದರ ಪ್ರಯೋಗಕ್ಕೆ ಇದೇ ಉತ್ತಮ ಸ್ಥಳವೆಂದು ಲಕ್ಷ್ಮಣ ಹಾಡಲು ಮೊದಲಿಟ್ಟ. ಲಕ್ಷ್ಮಣ ಪಲ್ಲವಿ ಹಾಡಿ ಮುಗಿಸುವುದೇ ತಡ, ಹೊಸಬ

"ಸ್ವಲ್ಪ ತಡೀ, ಮಗಾ. ಎಲ್ಲಿ, ಆ ತಂಬೂರಿ ಇಂಗೆ ಕೊಡಿ" ಎಂದು ತಂಬೂರಿಯನ್ನು ತೆಗೆದುಕೊಂಡು ಶ್ರುತಿಮಾಡಿ, "ಊ-ಆಡು" ಎಂದ. ಲಕ್ಷ್ಮಣ ಹಾಡು ಮುಗಿಸುವ ಹೊತ್ತಿಗೆ ಹೊಸಬನ ಕೈ ನಿಂತುಹೋಗಿತ್ತು. ತಂಬೂರಿಗೆ ಆತುಕೊಂಡು ಒಂದೇ ಸಮನೆ ಕಂಬನಿ ಸುರಿಸುತ್ತ ಕುಳಿತುಬಿಟ್ಟ. ಹಾಡು ಮುಗಿಯಲು ಎಲ್ಲರೂ ಚಕಿತರಾಗಿ ಹೊಸಬನನ್ನು ನೋಡಿದರು. ಕಣ್ಣುಗಳನ್ನು ಒರಸಿಕೊಳ್ಳುತ್ತಾ ಹೊಸಬ ತಂಬೂರಿಯನ್ನು ಮತ್ತೆ ಶ್ರುತಿ ಮಾಡಿ ತಾನು ಹಾಡಲು ಮೊದಲಿಟ್ಟ. ಆಲಾಪನೆಯ ಮೊದಲನೆಯ ಆವರ್ತ ಅವನು ಹಾಡುವುದೇ ತಡ ಎಲ್ಲರಿಗೂ ಹೊಸಬನ ವಿದ್ಯೆಯ ಪರಿಚಯವಾಯಿತು. ವಾದ್ಯಗಾರರು ವಾದ್ಯಗಳನ್ನು ಕೆಳಗಿಟ್ಟು ಚಿತ್ರದ ಗೊಂಬೆಗಳಂತೆ ಕೇಳುತ್ತ ಕುಳಿತರು. ಪೂರ್ವಿಕಲ್ಯಾಣಿಯಲ್ಲಿ ತ್ಯಾಗರಾಜರ 'ಪರಾ

ಮುಖಮೋಲರಾ' ಹಾಡಿದ್ದಾಯಿತು. ಖರಹರಪ್ರಿಯದಲ್ಲಿ 'ರಾಮಾನೀಯೆಡ, ಹಾಡಿದ್ದಾಯಿತು. ರಾಗಮಾಲಿಕೆಯಲ್ಲಿ ಪುರಂದರದಾಸರ 'ಹೇಗೆ ಮೆಚ್ಚಿಸಲಿ' ಹೇಗೆ ಅರ್ಚಿಸಲಿ' ಹಾಡಿ ನಿಲ್ಲಿಸಿದ. ಎಲ್ಲರ ಕಣ್ಣುಗಳಲ್ಲಿಯೂ ಆನಂದ ಜಲ ಬಿಂದುವಾಗಿ ಮೂಡಿತ್ತು. ಲಕ್ಷ್ಮಣ ಹೊಸಬನ ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿದ ಹೊಸಬ ಪ್ರೀತಿಯಿಂದ ಲಕ್ಷ್ಮಣನನ್ನು ಅಪ್ಪಿ

"ಮಗಾ, ಚೆಂದಾಕಿ ಶಾರದಾಮ್ನೋರ ಸೇವೆ ಮಾಡು. ನಿನ್ನ ವಾಣೀಲಿ ತಾಯಿ ಬೀಜಾಕ್ಷರ ಬರದವ್ಳೆ. ನಾನೂ ಸಂಗೀತಾ ಕಲಿಯೋಕೆ ಒಂದು ಜೀವಾನ ತೇದಿದ್ದೀನಿ. ಅದರ ಓನಾಮ ಕೂಡ ನಂಗೆ ಗೊತ್ತಾಗಿಲ್ಲ. ನೀನು ಕಲಿಯೋಕೆ ಉಟ್ಟಿಲ್ಲ, ಅಪ್ಪಯ್ಯಾ—ಕಲ್ಸೋಕೆ— ನನ್ನಂತಾ ಮಂಗಗಳ ಮನುಸರ್ನ ಮಾಡೋಕೆ ಉಟ್ಟಿರೋ ಗುರು. ನೀನು ಎಂದಾದರೂ ದೊಡ್ಡೋ ನಾದಾಗ ಮುಳುಬಾಗಿಲ ಚೆನ್ನಪ್ಪ ಏಳಿದ ಮಾತು ಇದೂಂತ ಜ್ಞಾಪಿಸ್ಕೊ" ಎಂದು ಹೇಳಿ ಧಡಧಡನೆ ಹೊರಟುಹೋದ. ಮತ್ತೆ ಯಾರಿಗೂ ಅವನ ದರ್ಶನವಾಗಲೀ, ಪತ್ತೆಯಾಗಲೀ ಸಿಕ್ಕಲಿಲ್ಲ. ಚರುಪಿನ ತನಕ ಲಕ್ಷ್ಮಣ ಅಲ್ಲಿ ನಿಲ್ಲಲಿಲ್ಲ. ಮನೆ ತಲುಪಿ ಯಾರಿಗೂ ಕಾಣಿಸಿಕೊಳ್ಳದಂತೆ ಹಾಸಿಗೆಯ ಮೇಲೆ ಮಲಗಿದ.

ನಿದ್ದೆ ಹತ್ತದು. ಹೊಟ್ಟೆಯಲ್ಲಿ ಏನೋ ತಳಮಳ. ಚೆನ್ನಪ್ಪನ ರೂಪ—ಧ್ವನಿ—ಹಾಡು—ಹೆಸರು ಅವನ ಕಿವಿಯಲ್ಲಿ ನರನರಗಳಲ್ಲಿ ಚಿತ್ತದಲ್ಲಿ ಝೇಂಕರಿಸುತ್ತಿದ್ದವು. 'ತಾಯಿ ಬೀಜಾಕ್ಷರ ಬರದವ್ಳೆ—ನೀನು ಕಲಿಯೋಕೆ ಉಟ್ಟಿಲ್ಲ—ಕಲ್ಸೋಕೆ'—ಪ್ರತಿಯೊಂದು ಮಾತು ಚುಚ್ಚಿ ಚುಚ್ಚಿ ಲಕ್ಷ್ಮಣನ ಮನಸ್ಸಿನಲ್ಲಿ ಅಚ್ಚೊತ್ತುತ್ತಿದ್ದವು. ಚೆನ್ನಪ್ಪನ ಪೂರ್ವಿಕಲ್ಯಾಣಿಯಂತೂ ಹುಚ್ಚೇ ಹಿಡಿಸಿಬಿಟ್ಟಿತು. 'ನಾನು ಅವರ ಹಾಗೆ ಪೂರ್ವಿಕಲ್ಯಾಣಿ ಹಾಡ ಬಲ್ಲೆನಾದರೆ' ಎಂದು ಅಂದುಕೊಳ್ಳುವನು. ಚೆನ್ನಪ್ಪ ಹಾಡಿದ ಮೂರು ರಾಗ ಗಳಲ್ಲಿ ಪೂರ್ವಿ ತನ್ನ ಮೇಲೇತಕ್ಕೆ ಹೆಚ್ಚು ಪರಿಣಾಮವನ್ನುಂಟುಮಾಡಿತೆಂದು ಯೋಚಿಸುವನು. ಅಲ್ಲಿ ಅವನಿಗೆ ತಿಳಿಯಹೇಳುವವರಿಲ್ಲ. ದಾರಿ ತೋರಿಸುವವ ರಿಲ್ಲ. ಶಾಮಣ್ಣನವರು ಶಾಸ್ತ್ರೋಕ್ತವಾಗಿ ಸಂಗೀತ ಕಲಿತವರಲ್ಲ. ಅವರಿಗಿದ್ದ ಜ್ಞಾನವಾದರೂ ಅಭಿರುಚಿಯು ಬಲದಲ್ಲಿ ಕೇಳಿಕೆಯಿಂದ ಬಂದದ್ದು.

ಪೂರ್ವಿ ಒಂದೇ ಸಮನೆ ಲಕ್ಷ್ಮಣನ ಕಿವಿಯಲ್ಲಿ ಗುಂಯ್‌ಗುಟ್ಟಲಾರಂಭಿ ಸಿತು. ಅದರ ಒಂದೊಂದು ಗತಿ, ಗಮಕ ಅವನ ಬಾಯಲ್ಲಿ ಹೊರಡುತ್ತಿ ದ್ದವು. ಸಂಗೀತ ಮೇಷ್ಟ್ರ ಬಾಯಲ್ಲಿ ಒಂದೆರಡು ಸಲ ಅದೇ ರಾಗ, ಅದೇ ಕೀರ್ತನೆಯನ್ನು ಹಾಡಿಸಿ ಕೇಳಿದ. ಅವರ ಬಳಿಯಲ್ಲಿದ್ದ ಗ್ರಾಮಫೋನ್

ರಿಕಾರ್ಡುಗಳ ಕಂತೆಯಿಂದ ಪೂರ್ವಿಕಲ್ಯಾಣಿ ರಾಗದ ರಿಕಾರ್ಡುಗಳನ್ನೆಲ್ಲಾ ಮತ್ತೆ ಮತ್ತೆ ಕೇಳಿದ. ಎಲ್ಲವೂ ಅವನ ಅಶಾಂತಿಯನ್ನೂ ಅತೃಪ್ತಿಯನ್ನೂ ಹೆಚ್ಚಿಸಿದವು. ಎಲ್ಲವೂ 'ಬೇಕು ಬೇಕು' ಎನಿಸುತ್ತಲೇ ಇದ್ದವು. ಚೆನ್ನಪ್ಪನ ಬಾಯಲ್ಲಿ ಕೇಳಿದ ರಾಗ ಇದೇಯೋ ಎಂದು ಅನುಮಾನಪಡುವಷ್ಟು ಅಂತರ ಕಂಡುಬರುತ್ತಿತ್ತು. 'ಚೆನ್ನಪ್ಪನವರನ್ನು ಮತ್ತೊಮ್ಮೆ ಕಾಣಬಲ್ಲೆನಾದರೆ....' ಎಂದುಕೊಳ್ಳುವನು. ದಿನಗಳು ತಳ್ಳಿದವು. ತಿಂಗಳುಗಳು ಕಳೆದವು. ಮಿಂಚಿನಂತೆ ಸುಳಿದು ಲಕ್ಷ್ಮಣನ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಿ ಹೋದ ಹೊಸಬ ಕಾಣಬರಲಿಲ್ಲ.

೬

ರಾಮಚಂದ್ರ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ನಿರೀಕ್ಷಿಸಿದ್ದಂತೆ ತೇರ್ಗಡೆಯಾದ. ಜತೆಗೆ ರ್‍ಯಾಂಕೂ ಬಂದಿತ್ತು. ಅವನ ವಿದ್ಯಾಭ್ಯಾಸ ಮುಂದೆ ಹೊಸಹಳ್ಳಿಯಲ್ಲಿ ಸಾಗುವಂತೆ ಇರಲಿಲ್ಲ. ತುಮಕೂರಿಗೋ ಬೆಂಗಳೂರಿಗೋ ಹೋಗಬೇಕಾಗಿತ್ತು. ಅರಿಯದ ಹುಡುಗ ಒಬ್ಬನನ್ನೇ ಬೆಂಗಳೂರಿನಂತಹ ಮಹಾಪಟ್ಟಣಕ್ಕೆ ಕಳುಹಿಸುವುದು ಹೇಗೆ ಎಂಬ ಯೋಚನೆ ಹುಟ್ಟಿತು. ಅವನಿಗೋಸ್ಕರವೇ ಬೆಂಗಳೂರಿನಲ್ಲಿ ಒಂದು ಮನೆ ಮಾಡಿ ಸಂಸಾರವನ್ನು ಹೂಡುವುದೆಂದು ಯೋಚಿಸಿದರು. ಸಾವಿತ್ರಮ್ಮ ಮಗನನ್ನು ಬಿಟ್ಟಿರಲು ಒಪ್ಪಲಿಲ್ಲ. ರಾಯರು ಸಾವಿತ್ರಮ್ಮನನ್ನು ಬಿಟ್ಟಿರಲು ಸಾಧ್ಯವೇ ಆಗುತ್ತಿರಲಿಲ್ಲ. ಶಾಂತಾ ಮದುವೆಯಾಗುವ ಹುಡುಗಿ. ಅವಳಿಗಷ್ಟು ಸಂಗೀತ ಸಾಹಿತ್ಯ ಕಲಿಸಬೇಕಾಗಿತ್ತು. ಸದ್ಯಕ್ಕೆ ಗೋಪಾಲಿ ಯೋಚನೆ ಇರಲಿಲ್ಲ.

ಈ ಯೋಚನೆಗಳನ್ನು ಮೀರಿಸುವಂತಹ ಯೋಚನೆ ಹುಟ್ಟಿಕೊಂಡಿತು. ಗೌರಮ್ಮನವರು ಹಾಸಿಗೆ ಹಿಡಿದು ಮಲಗಿಬಿಟ್ಟರು. ಬಚ್ಚಲುಮನೆಯಿಂದ ಬರುವಾಗ ಕಾಲು ಜಾರಿ ಬಿದ್ದುದೇ ನೆಪವಾಗಿ ನಿತ್ಯ ಜ್ವರ ಬರುವುದಕ್ಕಾರಂಭಿಸಿತು. ಡಾಕ್ಟರು ಬಂದದ್ದೇ ಮಲೇರಿಯಾ ಎಂದು ನಿರ್ಣಯಿಸಿ ಎರಡು ಇಂಜಕ್ಷನ್ ಚುಚ್ಚಿದರು. ಮುದುಕಿಯಲ್ಲಿದ್ದ ಅಲ್ಪಸ್ವಲ್ಪ ತ್ರಾಣ ಶೀರ ಕಡಿಮೆಯಾಯಿತು. ಪುಟ್ಟಪ್ಪ ಪಂಡಿತರು ನಾಡಿ ನೋಡಿ ಮುಖ ಸಿಂಡರಿಸಿ ತಲೆದೂಗಿದರು. "ವಯಸ್ಸಾಯಿತು. ನಂಗೇನೋ ಅನುಮಾನ, ಬೇಕಾದರೆ ಪ್ರಯತ್ನ ಮಾಡುತ್ತೇನೆ" ಎಂದು ಧೈರ್ಯ ಹೇಳಿ ಕುಪ್ಪಿ ಮಾತ್ರೆಯನ್ನು ತೇದು ಕುಡಿಸುವುದಕ್ಕಾರಂಭಿಸಿದರು. ಜೀವ ಹಾಗೂ ಹೀಗೂ ಎಂಟು-ಹತ್ತು ದಿವಸ ತುಯ್ಯಿತು. ಒಂದು ಮಂಗಳವಾರ. ದನಿ ಕೃಶವಾಯಿತು. ಎಲ್ಲರನ್ನೂ

ನೋಡಬಯಸಿದರು. ಮಕ್ಕಳು ಸೊಸೆಯಂದಿರು ಮೊಮ್ಮಕ್ಕಳು ಎಲ್ಲರನ್ನೂ ಕಣ್ತುಂಬ ನೋಡಿ 'ಗಂಗೆ' ಎಂದರು. ಮಡಿಯಲ್ಲಿದ್ದ ಮೀನಾಕ್ಷಮ್ಮ ಗಂಗೆಯ ತಾಲಿಯನ್ನು ಒಡೆದು ಒಂದು ಉದ್ಧರಣೆ ಗಂಗೋದಕ ಕುಡಿಸಿದರು. ಅರ್ಧ ಬಾಯಿಂದ ಹೊರಗೆ ಬಂದುಬಿಟ್ಟಿತು. ಕುತ್ತಿಗೆ ಬಲವಾಗಿ ಹಾಗೆ ವಾಲಿತು. ರಾಯರು ಹೊದಿಕೆಯಿಂದ ತಾಯಿಯ ಮುಖ ಮುಚ್ಚಿದರು.

ಮುಂದಿನ ಕೆಲಸಕಾರ್ಯಗಳನ್ನು ತಡಮಾಡುವ ಹಾಗಿರಲಿಲ್ಲ. ಸುಬ್ಬಾ ಭಟ್ಟರು ಪಂಚಾಂಗ ತೆಗೆದು ನೋಡಿ ರಾಯರ ಹತ್ತಿರ ಮೆಲ್ಲನೆ

"ಒಂದು ಮಾತು, ರಾಯರೇ."

"ಏನು ಉಪಾಧ್ರೇ?"

"ದೊಡ್ಡ ಅಮ್ಮನವರು ತೀರಿಕೊಂಡ ವಾರ ನಕ್ಷತ್ರ ಚೆನ್ನಾಗಿಲ್ಲ. ಧನಿಷ್ಠಾ ಪಂಚಕ, ಶಾಂತಿಯಾಗಬೇಕು. ಐದು ತಿಂಗಳು ಮನೆ ಬಿಟ್ಟಿರಬೇಕು."

"ಆಗಲಿ—ಇನ್ನೇನು ಮಾಡುವುದು" ಎಂದು ರಾಯರು ತಲೆಯ ಮೇಲೆ ಕೈಹೊತ್ತು ಕುಳಿತರು.

ತತ್ಕಾಲಕ್ಕೆ ನಾಗಣ್ಣಶೆಟ್ಟಿ ಛತ್ರದಲ್ಲಿ ವಾಸಕ್ಕೆ ಏರ್ಪಾಟುಮಾಡಿ ಮನೆ ವ್ಯವಸ್ಥೆ ಮಾಡಿ ಬರುವಂತೆ ಶಾಮಣ್ಣನವರನ್ನು ಬೆಂಗಳೂರಿಗೆ ಕಳುಹಿಸಿದರು.

ಕರ್ಮಾಂತರದ ಕೆಲಸವೆಲ್ಲಾ ಮುಗಿಯಿತು. ವೈಕುಂಠಸಮಾರಾಧನೆಯೂ ಆಯಿತು. ರಾಯರು ಮಾರನೆಯ ದಿವಸ ರೈತರನ್ನೆಲ್ಲಾ ಕರೆಸಿ ಜಮೀನಿನ ಸಾಗುವಳಿ ವಿಚಾರ ಮಾತುಕತೆ ನಡೆಸಿ, ಒಳ್ಳೆಯ ದಿವಸ ನೋಡಿ ಬೆಂಗಳೂರಿಗೆ ಪ್ರಯಾಣ ಬೆಳಸಿದರು. ಊರಿಗೆ ಊರೇ ಗೋಳಿಟ್ಟಿತು. ಹೊಸಹಳ್ಳಿ ವೈಧವ್ಯದ ಕಳೆ ಹೊತ್ತು ನಿಂತಿತು. ರಾಯರ ಆಶ್ರಿತರ ದುಃಖಕ್ಕಂತೂ ಮಿತಿಯೇ ಇಲ್ಲ. ಮೀನಾಕ್ಷಮ್ಮನವರಂತೂ ಯಾರಿಗೆ ಎಷ್ಟು ಹೇಳಿದರೂ ತೀರದು. ಊರಿನ ಹೆಣ್ಣುಮಕ್ಕಳು ಇಂದು ತಮ್ಮ ಲಕ್ಷ್ಮಿ ಹೊರಟು ಹೋಗುತ್ತಾಳೆಂದು ಭಾವಿಸಿದರು. ಎಲ್ಲರ ಹಣೆಗೂ ತಮ್ಮ ಕೈಯಿಂದ ಕುಂಕುಮವಿಟ್ಟು ಮೀನಾಕ್ಷಮ್ಮನವರು ಸೋತರು.

ರಾಯರ ಜಮೀನನ್ನು ಸಾಗುವಳಿ ಮಾಡುತ್ತಿದ್ದವರಲ್ಲಿ ೩೦–೪೦ ಆಳು-ಮನೆಯವರು ಹೊಲೆಯರಾಗಿದ್ದರು. ರಾಯರು ಅವರನ್ನು ಒಂದೇ ರೀತಿಯಾದ ವಿಶ್ವಾಸದಿಂದ ಕಾಪಾಡಿಕೊಂಡು ಬಂದಿದ್ದರು. ಅವರ ತಂಡವೂ ಬಂದು ಒಂದು ಕಡೆ ಗುಂಪುಕಟ್ಟಿ ನಿಂತಿತು. ಮೀನಾಕ್ಷಮ್ಮನವರು ಹೇಳಿ ಬರಲು ಅತ್ತ ಹೋದರು. ಹೊಲೆಯ ರೈತರು ಮಕ್ಕಳುಮರಿ ಅಡ್ಡ ನಮಸ್ಕಾರ ಹಾಕಿ

"ಬಾಯಿ ತುಂಬ ಹರಸು ನಮ್ಮವ್ವಾ!" ಎಂದರು. ಮುದುಕ ಮರಿಗುಡ್ಡ ನಡುಗುತ್ತಲೇ ಸ್ವಲ್ಪ ಮುಂದೆ ಬಂದು ಕೈಜೋಡಿಸಿ

"ಬೇಗ ನಮ್ಮೂರಿಗೆ ಬಂದುಬುಡು, ಮೀನವ್ವಾ. ನಿನ್ನ ಬಡ ಮಕ್ಕಳ್ನ ತಬ್ಲಿ ಮಾಡಿ ಓಗ್ಬಿಡ್ಬೇಡ"

ಎಂದು ನಡುಗುತ್ತಾ ನುಡಿದ. ಮೀನಾಕ್ಷಮ್ಮನವರ ಬಾಯಲ್ಲಿ ಮಾತೇ ನಿಂತುಹೋಯಿತು. ಕಂಬನಿ ತೆರೆತೆರೆಯಾಗಿ ಕಣ್ಣುಮುಂದೆ ನಿಂತು ಕಣ್ಣು ಕಾಣದಂತೆ ಮಾಡಿತು. ಕರುಣಾರ್ದ್ರದೃಷ್ಟಿಯಿಂದ ಎಲ್ಲರನ್ನೂ ನೋಡಿ ಬಸ್ಸು ಹತ್ತಿ ಕುಳಿತರು. ರಾಯರು ಎಲ್ಲರಿಗೂ ಕೈಮುಗಿದು ಹೊರಟರು. ಬಸ್ಸು ಕಣ್ಣ ನೋಟದಿಂದ ಮರೆಯಾಗುವವರೆಗೂ ಒಬ್ಬರೂ ಆ ಸ್ಥಳದಿಂದ ಕದಲಲಿಲ್ಲ.

ಬಸ್ಸು ಬೆಂಗಳೂರಿಗೆ ಸಮೀಪವಾಗುತ್ತಿದ್ದಂತೆ ರಾಯರ ಮನಸ್ಸು ಭಾರವಾಗುತ್ತಿತ್ತು. ತಮ್ಮ ಸುತ್ತಲಿನ ನೋಟವನ್ನು ಕಣ್ತುಂಬ ನೋಡುತ್ತ ಬಂದರು. ಆ ಭೂಮಿಯ ಪ್ರತಿಯೊಂದು ಭಾಗವೂ ರಾಯರಿಗೆ ಗೊತ್ತಿತ್ತು, ಪ್ರಿಯವಾಗಿತ್ತು. ಅವರ ಜೀವನದ ಬಹುಭಾಗವನ್ನು ತಾಯಿ ವಸುಂಧರೆಯ ಸೇವೆಯಲ್ಲಿ ಕಳೆದಿದ್ದರು. ತಾವು ಹುಡುಗರಾಗಿದ್ದಾಗ ಹಾಕಿದ ತೆಂಗಿನ ಮರಗಳು ಆಕಾಶದೆತ್ತರಕ್ಕೆ ಬೆಳೆದು ಸಮೃದ್ಧಿಯಾಗಿ ಫಲಗಳನ್ನು ನೀಡುತ್ತಿದ್ದವು. ಹೊಸಹಳ್ಳಿಯಿಂದ ದೂರವಾಗುವುದೆಂದರೆ ರಾಯರಿಗೆ ತಮ್ಮ ನಿಜವಾದ ಬಾಳಿನಿಂದ ದೂರವಾದಂತೆಯೆ. 'ಬೆಂಗಳೂರಿನ ಕೃತಕ ಜೀವನವೆಲ್ಲಿ, ನನ್ನ ಹೊಸಹಳ್ಳಿಯ ಆರಾಮಧಾಮವೆಲ್ಲಿ' ಎಂದುಕೊಳ್ಳುವರು.

ತಮಗೆ ಅತ್ಯಂತ ಪ್ರಿಯವಾದ ಮತ್ತೊಂದು ವಸ್ತುವನ್ನೂ ರಾಯರು ಹೊಸಹಳ್ಳಿಯಲ್ಲಿ ಬಿಟ್ಟು ಹೋಗುತ್ತಿದ್ದರು. ತಮ್ಮ ತಾಯಿ; ಆದರೆ ವಿಧಿಯಿಲ್ಲ. ತಾಯಿ ಬದುಕಿದ್ದರೆ ಅವರೂ 'ಹೋಗಿ ಬಾಪ್ಪ. ಹುಡುಗ ಮುಂದಕ್ಕೆ ಬಂದರೆ ಅದೇ ದೊಡ್ಡ ಶ್ರೇಯಸ್ಸು' ಎಂದು ಹೇಳಿಯೇ ಹೇಳುತ್ತಿದ್ದರು ಎಂಬ ಧೈರ್ಯ ರಾಯರಿಗಿತ್ತು.

ಲಕ್ಷ್ಮಣನ ಮನಸ್ಸೂ ಅಷ್ಟೇ ಭಾರವಾಗಿತ್ತು. ಬಸ್ಸು ಹನುಮಂತರಾಯನ ದೇವಸ್ಥಾನಕ್ಕೆ ಬರುವುದೇ ತಡ, ಗೊಳೋ ಎಂದು ಅಳಲು ಮೊದಲಿಟ್ಟ. ಅಲ್ಲಿ ತನಗೆ ಹಿಂದೆ ಆದ ಅನುಭವದ ನೆನಪು ಸ್ಪಷ್ಟವಾಗಿ ಮೂಡಿತು. ಆದರೆ ಅವನ ದುಃಖದೊಂದಿಗೆ ಒಂದು ಸಮಾಧಾನವೂ ಸೇರಿತ್ತು. ಬೆಂಗಳೂರು ದೊಡ್ಡ ಪಟ್ಟಣ. ದೊಡ್ಡ ದೊಡ್ಡ ವಿದ್ವಾಂಸರು ಇರುವ ಊರು. ತಾನು ಸಂಗೀತ ಕಲಿಯಲು ಅವಕಾಶ ಸಿಕ್ಕುತ್ತದೆಂಬ ಆಸೆ. ಇದರ ಮರೆಯಲ್ಲಿ ತನ್ನ ಪ್ರಿಯ ಹೊಸಹಳ್ಳಿಯನ್ನು ಮರೆಯಲು ಸಿದ್ಧನಾದ.

ಹೊಸಹಳ್ಳಿಯನ್ನು ಬಿಡುವುದಕ್ಕೆ ಸ್ವಲ್ಪವೂ ಚಿಂತಿಸದಿದ್ದವನು ರಾಮು ಒಬ್ಬನೇ. ಅವನಿಗೆ ಹಳ್ಳಿಯ ಜೀವನ ಬೇಸರಾಗಿತ್ತು. ಶಾಲೆಯ ಹುಡುಗರು, ಇತರ ಗೆಳೆಯರು, ಎಲ್ಲಾ ರೀತಿಯಲ್ಲಿಯೂ ತನಗಿಂತ ಕೀಳು ಎಂಬ ಭಾವನೆ ಅವನ ಮನಸ್ಸಿನಲ್ಲಿ ಬೆಳೆದಿತ್ತು. ತಾನು ರಾಯರ ಮಗ—ಈ ಹಳ್ಳಿಮಕ್ಕಳ ಕೂಡೆ ಸಲಿಗೆಯಿಂದ ವರ್ತಿಸುವುದೇ; ಬೆಂಗಳೂರಿನಲ್ಲಿ ದೊಡ್ಡ ಮನುಷ್ಯರ ಮಕ್ಕಳ ಸ್ನೇಹ ಕಾದಿರುವಾಗ ಎಂದುಕೊಂಡು ಸ್ವಲ್ಪ ಬಿಗಿಯಿಂದಲೇ ಇರ ಲಾರಂಭಿಸಿದ್ದ. ಲೋವರ್ ಸೆಕೆಂಡರಿ ಪರೀಕ್ಷೆಯ ಫಲಿತಾಂಶ ಬಂದುದೇ ತಡ, ಅವನನ್ನು ಇತರರು ಮಾತನಾಡಿಸುವುದೇ ಕಷ್ಟವಾಗಿತ್ತು. ಇಷ್ಟ ಬಂದರೆ ಉತ್ತರ ಕೊಡುತ್ತಿದ್ದ, ಇಲ್ಲದಿದ್ದರೆ ಸುಮ್ಮನಾಗುತ್ತಿದ್ದ. ಹೊರಗಿನವರಿಗೆ ಮಾತ್ರವೇ ಅಲ್ಲ, ಲಕ್ಷ್ಮಣನಿಗೂ ಈ ಅನುಭವ ಅನೇಕ ಸಲ ಆಗಿತ್ತು.

೭

ರಾಯರ ಘನತೆಗೂ, ಸಂಸಾರಕ್ಕೂ ತಕ್ಕ ಮನೆಯನ್ನೇ ಶಾಮಣ್ಣನವರು ಬಸವನಗುಡಿಯಲ್ಲಿ ಗೊತ್ತುಮಾಡಿದ್ದರು. ಡಾಂಬರು ಬಳಿದ ರಸ್ತೆ, ಅಕ್ಕ ಪಕ್ಕದಲ್ಲಿ 'ಗುಳೋಪು' ದೀಪಗಳು. ಅಲ್ಲಿ ವಾಸಿಸುತ್ತಿದ್ದವರು ದೊಡ್ಡ ಸಂಬಳದ ಸರ್ಕಾರಿ ಅಧಿಕಾರಿಗಳು ಮತ್ತು ಶ್ರೀಮಂತರು. ಲಾಲ್‌ಬಾಗ್ ವನಕ್ಕೆ ಆ ರಸ್ತೆ ಸಮೀಪವಾಗಿದ್ದುದೂ ಒಂದು ವೈಶಿಷ್ಟ್ಯವಾಗಿತ್ತು.

ಮನೆಯೂ ಸಾಕಷ್ಟು ದೊಡ್ಡದಾಗಿಯೇ ಇತ್ತು. ಕೆಳಗಡೆ ತೊಟ್ಟಿ, ನಾಲ್ಕೈದು ಕೋಣೆಗಳು, ಅಡಿಗೆಮನೆ, ಬಚ್ಚಲುಮನೆ, ದೇವರ ಮನೆ ಅಲ್ಲದೆ ಮಹಡಿಯ ಮೇಲೆ ಒಂದು ತೊಟ್ಟಿ, ಎರಡು ಕೋಣೆಗಳೂ ಇದ್ದವು.

ಮನೆಯನ್ನು ನೋಡಿದವನೇ ರಾಮು ಮಹಡಿಯ ಮೇಲಣ ಒಂದು ಕೋಣೆಯನ್ನು ಆಯ್ದುಕೊಂಡ. ಲಕ್ಷ್ಮಣ ಕೆಳಗಿದ್ದ ಕೋಣೆಯಲ್ಲಿಯೇ ತೃಪ್ತಿಪಟ್ಟುಕೊಂಡ.

ಮನೆಯ ಕಾಂಪೌಂಡು ಸ್ವಲ್ಪ ವಿಶಾಲವಾಗಿಯೇ ಇತ್ತು. ಮಾಲೀಕರು ಗಿಡ, ಹೂಗಳ ಪ್ರೇಮಿಗಳು. ಕಾಂಪೌಂಡಿನ ತುಂಬಾ ಹೂಗಿಡಗಳನ್ನೂ ಮಲ್ಲಿಗೆ ಜಾಜಿ ಬಳ್ಳಿಗಳನ್ನೂ ಹಬ್ಬಿಸಿದ್ದರು. ಬೆಳಗಾದರೆ ಬುಟ್ಟಿ ತುಂಬ ಬಗೆಬಗೆಯ ಹೂಗಳು ರಾಯರ ಪೂಜೆಗೆ ಅಣಿಯಾಗುತ್ತಿದ್ದವು. ತೋಟದ ಉಸ್ತುವಾರಿಯನ್ನು ರಾಯರು ಸ್ವಂತಕ್ಕೆ ಇಟ್ಟುಕೊಂಡರು. ತಾವೇ ಸ್ವಯಂ ಅಗೆದು, ಪಾತಿಮಾಡಿ, ನೀರೆರೆಯುತ್ತಿದ್ದರು. ತಂದೆಯೊಬ್ಬರೇ ಕೆಲಸ ಮಾಡುವುದನ್ನು ಕಂಡರೆ ಲಕ್ಷ್ಮಣ ನೀರು ಸೇದಿ ಹುಯ್ಯುವುದಕ್ಕೆ ನಿಲ್ಲುತ್ತಿದ್ದ.

ಕೊನೆಗೆ ಶಾಮಣ್ಣನವರೂ ಬಿಡುವಾದಾಗಲೆಲ್ಲಾ ಗಿಡಗಳನ್ನು ತೊಳೆಯುವುದು, ದೀಪ ಹಿಡಿದು ಗುಲಾಬಿಗೆ ಅಂಟಿದ್ದ ಹುಳುಗಳನ್ನು ಆಯ್ದು ಬಿಸುಡುವುದು, ಹೊಸ ಹೊಸ ಹೂಗಳ ಬೀಜವನ್ನು ತಂದು ನೆಡುವುದು ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು. ಮೊದಮೊದಲು ತಂದೆಗೋಸುಗ ತೋಟದ ಕೆಲಸಕ್ಕೆ ನಿಂತ ಲಕ್ಷ್ಮಣನಿಗೆ ತೋಟದ ಸೇವೆ ಬಹು ಇಷ್ಟವಾಗುತ್ತ ಬಂತು. ರಾಯರಿಗೆ ಪೂರ್ಣ ವ್ಯವಧಾನ ಕೊಟ್ಟು ತಾನೇ ತೋಟದ ಎಲ್ಲಾ ಕೆಲಸಗಳನ್ನೂ ನಿರ್ವಹಿಸಿಕೊಂಡು ಹೋಗುತ್ತಿದ್ದ. ಹೊಸಹಳ್ಳಿಯ ಬನಸಿರಿ ತನ್ನ ಕೈದೋಟದಲ್ಲಿ ಬರದಿದ್ದರೂ ಅಲ್ಪಸ್ವಲ್ಪವಾದರೂ ಅದರ ನೆನಪನ್ನು ತರುತ್ತಿದ್ದ ತೋಟದಲ್ಲಿ ಲಕ್ಷ್ಮಣ ತನ್ನ ಮನಸ್ಸನ್ನು ಮರೆಯುತ್ತಿದ್ದ.

ತಾನು ಹಾಕಿದ ಗಿಡ ಬೆಳೆದು ದೊಡ್ಡದಾಗಿ, ಮೊಗ್ಗೆ ಬಿಟ್ಟು, ಹೂವಾಗಿ, ಅರಳಿ ಪರಿಮಳಿಸುವುದನ್ನು ಕಂಡು ಲಕ್ಷ್ಮಣನ ಹೃದಯ ಹಿಗ್ಗಿನಿಂದ ಬಿರಿದು ಹೋಗುತ್ತಿತ್ತು. ಹೂಗಳ ಮೇಲೆ ಮೂಡುತ್ತಿದ್ದ ಬಗೆಬಗೆಯ ಬಣ್ಣಗಳು, ಬೀಸುಗಾಳಿಗೆ ಅವು ಬಳುಕುತ್ತಿದ್ದ ಬಗೆ, ಪರಸ್ಪರ ಒಂದನ್ನೊಂದು ನೋಡುತ್ತಿದ್ದ—ಮಾತನಾಡುತ್ತಿದ್ದ—ಒಲವನ್ನು ಸೂಚಿಸುತ್ತಿದ್ದ ರೀತಿ ಲಕ್ಷ್ಮಣನ ಮನಸ್ಸಿನಲ್ಲಿ ಹಲವು ಭಾವಗಳನ್ನು ಉದ್ರೇಕಗೊಳಿಸುತ್ತಿದ್ದವು.

ಗಿಡದಿಂದ ಯಾರಾದರೂ ಹೂವು ಕಿತ್ತರೆ ತನ್ನನ್ನು ಚಿವುಟಿದಷ್ಟು ನೋವಾಗುತ್ತಿದ್ದಿತು ಲಕ್ಷ್ಮಣನಿಗೆ. ಒಮ್ಮೆ ಶಾಂತಾ ಗುಲಾಬಿ ಹೂಗಳನ್ನೆಲ್ಲಾ ಕಿತ್ತು ಉಡಿಯಲ್ಲಿ ತುಂಬಿಕೊಂಡು ತನ್ನ ಅಭಿರುಚಿಗೆ ಬಹುಮತಿಯನ್ನು ದೊರಕಿಸಲು ಅಣ್ಣನ ಬಳಿಗೆ ಬಂದು

"ನೋಡಿದೆಯಾ ಲಚ್ಚಣ್ಣಾ!" ಎಂದಳು.

ಲಕ್ಷ್ಮಣನ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಹರಿಯಿತು. ಅಂದಿನಿಂದ ಅಣ್ಣನನ್ನು ಕೇಳದೆ ಒಂದು ಹೂವನ್ನೂ ಶಾಂತಾ ಮುಟ್ಟುತ್ತಿರಲಿಲ್ಲ. ರಾಮಚಂದ್ರ ಮನೆಗೆ ಬರುವ ರಭಸದಲ್ಲಿ ಎಷ್ಟೋ ಸಾರಿ ಕಾಂಪೌಂಡ್ ಬಾಗಿಲನ್ನು ಹಾಕುವುದನ್ನು ಮರೆಯುತ್ತಿದ್ದನು. ಲಕ್ಷ್ಮಣನ ತಿಂಗಳುಗಟ್ಟಲೆಯ ಪ್ರಯಾಸ ಒಂದೇ ಕ್ಷಣದಲ್ಲಿ ದನ ಮೇಕೆಗಳ ಬಾಯಿ ತುತ್ತಾಗಿ ಬಿಡುತ್ತಿತ್ತು. 'ಹೋಗುತ್ತಾ ಬರುತ್ತಾ ಬಾಗಿಲು ಹಾಕಿಕೊಂಡು ಹೋಗು, ರಾಮು' ಎಂದು ಸೂಚಿಸಿದುದಕ್ಕೆ 'ನಾನು ನಿನ್ನ ಆಳಲ್ಲ. ಬೇಕಿದ್ದರೆ ನೀನೇ ಹಾಕಿಕೋ' ಎಂದು ಅವನು ಉತ್ತರವಿತ್ತಿದ್ದ. ಲಕ್ಷ್ಮಣ ಸ್ವಲ್ಪವೂ ಬೇಸರವಿಲ್ಲದೆ ಬಾಗಿಲು ಕಾಯುವುದನ್ನು ಅಭ್ಯಾಸ ಮಾಡಿಕೊಂಡ.

ರಾಮಚಂದ್ರ, ಶಾಂತಾ, ಗೋಪಾಲಿ ಇವರ ವಿಚಾರದಲ್ಲಿ ರಾಯರಿಗೆ

ಆತಂಕವಿರಲಿಲ್ಲ. ಲಕ್ಷ್ಮಣನ ವಿಚಾರ ದಿನದಿನಕ್ಕೆ ಆತಂಕ ಹೆಚ್ಚುತ್ತ ಬಂತು. ಅವನು ಏತಕ್ಕೋ ಕೊರಗುತ್ತಿದ್ದಾನೆಂದು ರಾಯರಿಗೆ ಭಾಸವಾಯಿತು. ತಾವೇ ನೇರವಾಗಿ ಕೇಳುವುದಕ್ಕಿಂತ ಅವನ ತಾಯಿ ಕೇಳಿದರೆ ವಾಸಿಯೆಂದು ಮೀನಾಕ್ಷಮ್ಮನವರಿಂದ ಕೇಳಿಸಿದರು. ಶಾಲೆಗೆ ಹೋಗುವುದು ತನಗೆ ಇಷ್ಟ ವಿಲ್ಲವೆಂದೂ ಸಂಗೀತ ಕಲಿಯಲು ಆಸೆಯಿದೆಯೆಂದೂ ಲಕ್ಷ್ಮಣ ಸ್ಪಷ್ಟವಾಗಿ ಹೇಳಿಬಿಟ್ಟ. ರಾಯರಿಗೆ ಆತಂಕ ಹೆಚ್ಚಾಯಿತು. 'ನಮ್ಮ ವಂಶದಲ್ಲಿ ಯಾರೂ ಸಂಗೀತಗಾರರಾಗಲಿಲ್ಲವಲ್ಲಾ. ಇವನು ಹೀಗೆ ಬಯಸುತ್ತಾನೆ. ಏನು ಮಾಡು ವುದು?' ಎಂದು ಯೋಚಿಸಲಾರಂಭಿಸಿದರು. ಬಗೆಹರಿಯಲಿಲ್ಲ. ಶಾಮಣ್ಣನವ ರಲ್ಲಿ ಈ ಪ್ರಸ್ತಾಪವನ್ನೆತ್ತಿದರು.

"ನೀನು ಏನು ಹೇಳುತ್ತೀಯೋ, ಶಾಮಾ?"

"ಲಕ್ಷ್ಮಣ ಬುದ್ಧಿವಂತ. ಆದರೆ ಓದೋದಿಕ್ಕೆ ಇಷ್ಟವಿಲ್ಲಾ ಅನ್ನುತ್ತಾನೆ. ನಾವು ಬಲವಂತಮಾಡಿ ಸ್ಕೂಲಿಗೆ ಕಳುಹಿಸಿದರೆ ನಮಗೋಸ್ಕರ ಹೋಗಿ ಬರುತ್ತಾನಲ್ಲದೆ ಅವನಿಗೆ ಪಾಠವೇನೂ ಬರುವ ಹಾಗಿಲ್ಲ."

"ಹೌದು. ಈ ಹುಚ್ಚು ಅವನಿಗೆ ಹೇಗೆ ಹಿಡಿಯಿತೋ ತಿಳೀಲಿಲ್ಲ. ಆ ಮುಳುಬಾಗಿಲ ಚೆನ್ನಪ್ಪಂದೂಂತ ಕಾಣತ್ತೆ ಈ ಕೆಲಸ. ನಮ್ಮ ಮನೇಲಿ ಯಾರೂ ತಾಳ ತಂಬೂರಿ ಹಿಡೀಲಿಲ್ಲಪ್ಪಾ. ಇವನು ದಾಸಯ್ಯನಾಗ ಬೇಕೂಂದರೆ ಯಾರು ಏನು ಮಾಡುವುದಕ್ಕಾಗತ್ತೆ. ಅವನ ಪೂರ್ವಾರ್ಜಿತ ಕರ್ಮ. ನೀನು ಒಂದು ಮಾತು ಹೇಳಿ ನೋಡು."

"ನನಗೂ ಅವನಿಗೂ ದಿನಾ ಇದೇ ಚರ್ಚೆ. ಅವನೇನೂ ಅಳ್ಳಾಡುವ ಹಾಗಿಲ್ಲ. ತಾನು ಹೊಟ್ಟೆತುಂಬಿಸಿಕೊಳ್ಳೋದಿಕ್ಕೆ ಸಂಗೀತ ಕಲಿಯಲ್ಲಾ ಎಂದು ಹೇಳಿಬಿಟ್ಟ. ಅವನ ಪ್ರವೃತ್ತಿ ಹೇಗಿದೆಯೋ ಹಾಗೇ ಮಾಡೋದು ಒಳ್ಳೆ ಯದು. ದಣಿ ಚಿತ್ತ."

ರಾಯರು ನಿರ್ವಾಹವಿಲ್ಲದೆ ಒಪ್ಪಿದರು. ಅವರಿಗೆ ಇದು ಸ್ವಲ್ಪವೂ ಇಷ್ಟವಿಲ್ಲ. ಮಾರನೆಯ ದಿವಸದಿಂದ ಮಗನನ್ನು ಸಂಗೀತ ವಿದ್ವಾನ್ ಅನಂತಾಚಾರ್ಯರ 'ಕರ್ನಾಟಕ ಗಾಯನಶಾಲೆ'ಗೆ ಕಳುಹಿಸಲಾರಂಭಿಸಿದರು. ಅನಂತಾಚಾರ್ಯರು ಸಂಗೀತವಿದ್ವತ್ತಿಗೆ ಪ್ರಸಿದ್ಧವಾದ ಮನೆತನಕ್ಕೆ ಸೇರಿ ದವರು. ಅವರ ತಂದೆ ವೆಂಕಟೇಶಾಚಾರ್ಯರು ಪ್ರಸಿದ್ಧ ದಕ್ಷಿಣಾದಿ ವಿದ್ವಾಂಸ ರಾದ ಪೂಚಿ ಶ್ರೀನಿವಾಸಯ್ಯಂಗಾರ್ಯರ ಸಹಪಾಠಿಗಳು. ಅನಂತಾ ಚಾರ್ಯರು ಕಛೇರಿ ಮಾಡಲು ದೇಹಬಾಧೆಯಿಂದ ಹೋಗುತ್ತಿರಲಿಲ್ಲ. ಅವರ ಶಾರೀರ ಬಾಯಿಹಾಡುಗಾರಿಕೆಗೆ ಅಷ್ಟು ಹಿತವೂ ಆಗಿರಲಿಲ್ಲ. ಆದರೆ ಶಾಸ್ತ್ರ

ವಿಚಾರಗಳಲ್ಲಿಯೂ ಶಿಷ್ಯರಿಗೆ ಅಧ್ಯಯನ ಮಾಡಿಸುವುದರಲ್ಲಿಯೂ ಅವರ ಕೈ ಮೇಲುಗೈಯಾಗಿತ್ತು. ಅವರಲ್ಲಿ ವರ್ಷ ಎರಡು ವರ್ಷ ಕಲಿತವರೆಷ್ಟೋ ಮಂದಿ ಪ್ರಸಿದ್ಧ ಗಾಯಕರಾಗಿ ಗ್ರಾಮಫೋನುಗಳಲ್ಲಿ ಮೆರೆದಿದ್ದರು.

ಆಚಾರ್ಯರೂ ಶಿಷ್ಯನನ್ನು ಪರೀಕ್ಷಿಸಿದರು. ಅವನ ಶಾರೀರದಲ್ಲಿದ್ದ ಅಪಾರವಾದ ನಾದಸಂಪತ್ತು ಅವರನ್ನು ಆಶ್ಚರ್ಯಚಕಿತರನ್ನಾಗಿಸಿತು.

"ನೀನು ಎಷ್ಟು ವರ್ಷ ಕಲೀತಿ, ಮಗೂ ?" ಎಂದು ಕೇಳಿದರು.

"ನೀವು ಕೃಪೆಯಿಟ್ಟು ಹೇಳಿಕೊಟ್ಟಷ್ಟು ದಿವಸ, ಗುರುಗಳೇ, ಚೆನ್ನಾಗಿ ಕಲಿಯಬೇಕೆಂದು ಆಸೆಯಿದೆ. ನಿಮ್ಮ ಆಶೀರ್ವಾದ ದೊರೆಯಬೇಕು."

"ನೀನು ಹಾಡಿದ ಖರಹರಪ್ರಿಯದ ಸಂಚಾರ ಎಲ್ಲಿಂದ ಕಲಿತೆ ?"

ಲಕ್ಷ್ಮಣ ಮುಳುಬಾಗಿಲು ಚೆನ್ನಪ್ಪನ ವೃತ್ತಾಂತವನ್ನು ಅರುಹಿದ. ಆಚಾರ್ಯರು ಚೆನ್ನಪ್ಪನ ಹೆಸರು ಕೇಳುತ್ತಲೂ ಭಕ್ತಿಯಿಂದ ಕಣ್ಣುಮುಚ್ಚಿ ನಮಸ್ಕರಿಸಿದರು.

"ಅವರು ಯಾರು ಗುರುಗಳೇ—ಚೆನ್ನಪ್ಪನವರು ?"

"ಅಯ್ಯೋ! ಅವರ ವಿಷಯ ಏನು ಕೇಳುತ್ತೀಯಪ್ಪಾ. ಅವರೊಬ್ಬರು ಅವತಾರಪುರುಷರು. ಸಾಕ್ಷಾತ್ ನಾರದಮುನಿಯ ಅವತಾರ. ಸಂಗೀತವನ್ನೇ ಒಂದು ಯೋಗವನ್ನಾಗಿ ಅಭ್ಯಾಸಮಾಡಿದ್ದಾರೆ. ಯಾರಲ್ಲಿ ಕಲಿತಿರಿ ಎಂದರೆ ಹೇಳಲ್ಲ. 'ಗರತಿ ಯಾವಾಗಲೂ ತನ್ನ ಗಂಡನ ಹೆಸರು ಹೇಳಲ್ಲ' ಎಂದು ನಕ್ಕುಬಿಡುತ್ತಾರೆ. ದೊಡ್ಡ ಸಮುದ್ರ ಇದ್ದ ಹಾಗಿದ್ದಾರೆ. ಚೆನ್ನಾಗಿ ಯಾರು ಹಾಡಲಿ, ಯಾರು ಚೆನ್ನಾಗಿ ವಾದ್ಯ ನುಡಿಸಲಿ, ಹೇಗೋ ಅಲ್ಲಿ ಬಂದಿರುತ್ತಾರೆ. ಲಹರಿ ತಿರುಗಿದರೆ ಹಾಡುತ್ತಾರೆ. ಆಗ ಕೇಳಬೇಕು—ನೀನೇ ಕೇಳಿದ್ದೀಯಲ್ಲಾ. ಮಹಾನುಭಾವ ನಿಂತ ಕಡೆ ನಿಲ್ಲುವುದಿಲ್ಲ. ಒಂದು ಕಛೇರಿಯೇ – ಪಾಠವೇ—ಆ ಪ್ರಮೇಯಗಳನ್ನೇ ಇಟ್ಟುಕೊಂಡಿಲ್ಲ. ಹಕ್ಕಿಯಂತಹ ಸ್ವಭಾವ. ನನ್ನ ಗುರುಗಳು—ಪೂಚಿ ಶ್ರೀನಿವಾಸ ಅಯ್ಯಂಗಾರ್ಯರು ಒಂದು ಸಲ ಚೆನ್ನಪ್ಪನವರ ಹಾಡುಗಾರಿಕೆ ಕೇಳಿ 'ವಿದ್ಯೆಯೆಂದರೆ ನಿಮ್ಮದು ವಿದ್ಯೆ. ನಮ್ಮದು ನಮ್ಮದೆಲ್ಲಾ ಏನು—ಒಣ ಆಡಂಬರ' ಎಂದು ಹೇಳಿದ್ದರು. ನಿನಗೆ ಅವರದೇ ಅನುಗ್ರಹವಾಗಿದೆ, ಮಗೂ. ಅವರೇ ನಿನ್ನ ಗುರುಗಳು. ನಾನು ನೆಪಮಾತ್ರಕ್ಕೆ ನಿನ್ನ ಗುರುವಾಗುತ್ತೇನೆ, ಅಷ್ಟೇ. ನಿನ್ನಂತಹ ಹುಟ್ಟುಗಾಯಕನಿಗೆ ಹೇಳಿಕೊಡುವುದೇ ನನಗೊಂದು ಹೆಮ್ಮೆ."

"ತಾವು ಇಂತಹ ದೊಡ್ಡ ಮಾತು ಆಡಬಾರದು, ಗುರುಗಳೇ."

"ದೊಡ್ಡ ಮಾತಲ್ಲ, ಲಕ್ಷ್ಮಣಾ. ನಾನು ಹೇಳಿದ್ದು ಉತ್ಪ್ರೇಕ್ಷೆ ಅಲ್ಲ.

ನಿನ್ನಲ್ಲಿ ಕಲೆಯ ಭಂಡಾರವೇ ಇದೆ. ನಾನು ಅದಕ್ಕೆ ಒಂದು ಕ್ರಮ ತೋರಿಸಿ ಶಾಸ್ತ್ರದ ಪರಿಚಯ ಮಾಡಿಕೊಡಬೇಕಾಗಿದೆ ಅಷ್ಟೆ. ಕಲಿಯುವವರೆಲ್ಲರಿಗೂ ಶಾಸ್ತ್ರ ಬರತ್ತೆ; ಅದು ಬುದ್ಧಿಗೋಚರ. ಆದರೆ ಕಲೆ ಬರುವುದಿಲ್ಲ; ಅದು ಚಿತ್ತವೇದ್ಯ."

"ತಮ್ಮ ಮಾತಿಗೆ ಪ್ರತಿ ಹೇಳುವ ಶಕ್ತಿ ನನಗಿಲ್ಲ. ಹಾಗೆಯೇ ಆಗಲಿ" ಎಂದು ಲಕ್ಷ್ಮಣ ಗುರುವಿನ ಮಾತನ್ನೊಪ್ಪಿದ.

೮

ರಾಯರಿಗೆ ಮೊದಲಿನ ಬೇಸರ ನೀಗುತ್ತ ಬಂದಿತು. ಅವರಿಗೆ ಇಬ್ಬರು ಗೆಳೆಯರು ದೊರೆತಿದ್ದರು. ಒಬ್ಬರು ಬಹಳ ದಿವಸ ಜಯಪುರದ ಅರಣ್ಯ ಖಾತೆಯಲ್ಲಿ ಕೆಲಸಮಾಡಿ ನಿವೃತ್ತಿಯಾದಮೇಲೆ ಸ್ವಂತ ಊರಿಗೆ ಬಂದು ನೆಲೆಸಿದ್ದ ಭೀಮರಾಯರು. ಅವರು ಹುಟ್ಟು ಮೈಸೂರಿನವರೇ ಆಗಿದ್ದರೂ ಜಯಪುರದ ಭೀಮರಾಯರು ಎನ್ನುವ ಹೆಸರು ನೆಲಸಿತ್ತು. ಕಾಲ, ದೇಶ ನೋಡಿದ್ದರಿಂದ ಭೀಮರಾಯರಿಗೆ ಸ್ವಲ್ಪ ವಿಶಾಲವಾದ ದೃಷ್ಟಿಯೂ ಇತ್ತು. ಸಾಹಿತ್ಯ, ಸಂಗೀತಗಳಲ್ಲಿಯೂ ಅಭಿರುಚಿ ಇತ್ತು. ಬಾಳು ಸಂಧ್ಯೆಯನ್ನು ಸಮೀಪಿಸಿದ್ದರಿಂದ ದೈವಭಕ್ತಿಯೂ ಅಖಂಡವಾಗಿತ್ತು. ಬೆಳಗ್ಗೆ ಆರು ಘಂಟೆಗೆ ದೇವರ ಪೂಜೆಗೆ ಕುಳಿತರೆಂದರೆ ಯಾರು ಬಂದರೂ ೮–೮॥ ತನಕ ಮುಗಿಸುತ್ತಿರ ಲಿಲ್ಲ. ಮಧ್ಯಾಹ್ನ ತಪ್ಪದೆ ಮಧ್ವವಿಜಯ ಅಥವಾ ಮಣಿಮಂಜರಿಯ ಪಾರಾ ಯಣ. ಒಬ್ಬರು ಪಂಡಿತರು ಬೇರೆ ಬಂದು ರಾಯರಿಗೆ 'ಸುಧಾ' ಗ್ರಂಥದ ಪಾಠ ವನ್ನೂ ಹೇಳಿ ಹೋಗುತ್ತಿದ್ದರು.

ಭೀಮರಾಯರು ದೊಡ್ಡ ಸಂಸಾರವೊಂದಿಗರು. ಅಂತಲೇ ಅವರಲ್ಲಿ ಲೋಭ, ಕಾರ್ಪಣ್ಯಾದಿ ಸಣ್ಣ ಗುಣಗಳಿರಲಿಲ್ಲ. ಅವರಿಗೆ ತುಂಬ ಮಾತು ಬೇಕು. ರಾಯರ ಸ್ವಭಾವವೂ ಭೀಮರಾಯರ ಸ್ವಭಾವವೂ ಹಾಲುಸಕ್ಕರೆ ಬೆರತಂತೆ ಬೆರೆಯುತ್ತಿದ್ದವು. ಇವರ ಇನ್ನೊಬ್ಬರು ಗೆಳೆಯರೆಂದರೆ ಲಾಯರ್ ಸುಂದರರಾಯರು. ಒಂದು ಕಾಲದಲ್ಲಿ ಬೆಂಗಳೂರಿನಲ್ಲಿ ಪ್ರಸಿದ್ಧ ಲಾಯರು ಗಳು ಯಾರು ಯಾರು ಎಂದು ಕೇಳಿದ್ದರೆ ಡಿ. ವೆಂಕಟರಾಮಯ್ಯನವರು, ಎಲ್. ಶ್ರೀನಿವಾಸಯ್ಯಂಗಾರ್ಯರು, ಸುಂದರರಾಯರು ಎಂದು ಯಾರಾ ದರೂ ಧಾರಾಳವಾಗಿ ಹೇಳಿಬಿಡುತ್ತಿದ್ದರು. ವಯಸ್ಸಾಗಲು ಸುಂದರರಾಯರು ತಮ್ಮ ಆಫೀಸನ್ನು ಮಗನಿಗೆ ಒಪ್ಪಿಸಿ ತಾವು ವಿಶ್ರಾಂತಿಸುಖವನ್ನು ಅನುಭವಿ ಸುತ್ತಿದ್ದರು.

ಸುಂದರರಾಯರ ಮಾತುಕತೆ ಭೀಮರಾಯರಷ್ಟು ಸರಳವಲ್ಲ. ಸ್ವಲ್ಪ ವಕ್ರಮಾರ್ಗ. ನಲವತ್ತು ವರ್ಷಕಾಲ ಒಂದೇ ಸಮನೆ ವಕೀಲಿ ಮಾಡಿದುದರ ಪರಿಣಾಮ ಅವರ ಮೇಲೆ ಚೆನ್ನಾಗಿಯೇ ಆಗಿತ್ತು. ಯಾವುದನ್ನೂ ಚರ್ಚೆ ಯಿಲ್ಲದೆ, ವಿರೋಧವನ್ನು ಸೂಚಿಸದೆ ಅವರು ಒಪ್ಪಿಕೊಳ್ಳುತ್ತಲೇ ಇರಲಿಲ್ಲ; ಮಾತಿನಲ್ಲಿ ನಗೆ, ಕುಚೇಷ್ಟೆಗಳನ್ನು ಬೆರಸದೆ ಅವರು ಯಾವ ಅಭಿಪ್ರಾಯ ವನ್ನೂ ಸೂಚಿಸುತ್ತಿರಲಿಲ್ಲ. ಆದರೆ ದೃಷ್ಟಿ ಉದಾರವಾಗಿರುತ್ತಿದ್ದಿತು. ಕೀಳು ವಿಚಾರ, ನಡತೆಗಳನ್ನು ಕಂಡರೆ ನಾಗಸರ್ಪದಂತೆ ಕೆರಳುತ್ತಿದ್ದರು.

ಈ ಮೂವರು ಗೆಳೆಯರು ಸಾಮಾನ್ಯವಾಗಿ ಒಬ್ಬರನ್ನೊಬ್ಬರು ಬಿಟ್ಟಿರು ತ್ತಿರಲಿಲ್ಲ. ಲಾಲ್‌ಬಾಗಿನಲ್ಲಿ ನೋಡಲಿ, ಶಂಕರಯ್ಯ ಹಾಲಿನಲ್ಲಿ ಆಗುವ ಸಂಗೀತ ಕಛೇರಿಯಲ್ಲಿ ನೋಡಲಿ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪ ನ್ಯಾಸ ಮಂದಿರದಲ್ಲಿ ನೋಡಲಿ, ಮೂವರು ರಾಯರೂ ಒಟ್ಟಿಗೇ ಇರು ತ್ತಿದ್ದರು. ಕಛೇರಿ ನಡೆಯುತ್ತಿರುವಾಗಲೇ, ಉಪನ್ಯಾಸ ಸಾಗುತ್ತಿರುವಾಗಲೇ ಭೀಮರಾಯರಿಗೂ ಸುಂದರರಾಯರಿಗೂ ಚರ್ಚೆ ಆರಂಭವಾಗಿಬಿಡುತ್ತಿತ್ತು. ಶ್ರಾವಕರ 'ಶ್ ಶ್ ಶ್' ಧ್ವನಿ ಅವರನ್ನು ಸುಮ್ಮನಾಗಿಸುತ್ತಿದ್ದಿತು.

ಸುಂದರರಾಯರು ಮಾತುಕತೆಯಲ್ಲಿ ವಕ್ರವಷ್ಟೆ. ಆದರೆ ಅವರ ಅಭಿರುಚಿ ಮಾತ್ರ ಮಿಕ್ಕವರದ್ದಕ್ಕಿಂತಲೂ ಬಹಳ ಮುಂದು ಹೋಗಿತ್ತು. ಅವರು ಯಾವಾಗಲೂ ಧರಿಸುತ್ತಿದ್ದುದು ಅರ್ಧ ಅಂಗುಲ ಜರತಾರಿಯ ಬಾಬಾ ಅಂಚಿನ ಧೋತ್ರ. ಅದನ್ನು ಹಿಂದೆ ಮುಂದೆ ಚೆನ್ನಾಗಿ ತೀಡಿ ತೀಡಿ ಬಹಳ ನಾಜೂಕಾಗಿ ಲಕ್ಷಣವಾಗಿ ಉಡುತ್ತಿದ್ದರು. ಅಮಾವಾಸ್ಯೆಯಾಗಲಿ ಶನಿವಾರ ವಾಗಲಿ ದಿನ ಬಿಟ್ಟು ದಿನ ಮುಖಕ್ಷೌರ ಮಾಡಿಸಿಕೊಳ್ಳದೆ ಇರುತ್ತಿರಲಿಲ್ಲ. ಹೊರಗೆ ಹೊರಟರೆ ಮುಚ್ಚುಕಾಲರಿನ ಸರ್ಜ್ ಕೋಟು, ಕಾಲಿಗೆ ಕರಿಯ ಸ್ಲಿಪ್ಪರ್, ಕೈಯಲ್ಲಿ ದಂತದ ಹಿಡಿಯ ಬೆತ್ತ ಇದ್ದೇ ತೀರಬೇಕು.

ಊಟ ತಿಂಡಿಗಳಲ್ಲಿಯೂ ಅಷ್ಟೇ, ಸುಂದರರಾಯರ ಪ್ರೊಗದಸ್ತು ಪ್ರಸಿದ್ಧ ವಾಗಿತ್ತು. ಮಾಡುವ ತಿಂಡಿ ತುಪ್ಪದ್ದಾಗಿ ಸೊಗಸಾಗಿರಬೇಕಲ್ಲದೆ, ಅದನ್ನು ಕೊಡುವ ರೀತಿಯೂ ಅಷ್ಟೇ ಸೊಗಸಾಗಿರಬೇಕು. ಸುಂದರರಾಯರು ವೀಳೆ ಯದೆಲೆಯನ್ನು ಕೊಳ್ಳುತ್ತಿದ್ದುದು ಒಂದೇ ಅಂಗಡಿಯಲ್ಲಿ ನಂಜುಂಡಪ್ಪ ಅವರಿಗೆ ಮೂವತ್ತೈದು ವರ್ಷಗಳಿಂದ ಮೈಸೂರು ಚಿಗುರೆಲೆಯನ್ನು ಸರಬ ರಾಯಿ ಮಾಡುತ್ತ ಬಂದಿದ್ದ. ಇಡೀ ಪಿಂಡಿಯನ್ನೇ ಶೋಧಿಸಿ ಚಿನ್ನದ ಬಣ್ಣದ, ಎರಡು ಅಂಗುಲ ಅಳತೆಯ ಚಿಗುರೆಲೆಯನ್ನು ಆರಿಸಿ ಒಂದು ಕಟ್ಟ ಪ್ಪನ್ನು ರಾಯರಿಗೆ ಕೊಡುತ್ತಿದ್ದ. ಅಡಿಕೆ ಸುಣ್ಣಗಳಲ್ಲಿಯೂ ಅದೇ ಶಿಸ್ತು,

ಅದೇ ಚೆಲುವು. ಬಣ್ಣಕಟ್ಟಿದ ಅಡಕೆ, ಕೇಸರಿ ಹಾಕದ ಸುಣ್ಣ ಸುಂದರ ರಾಯರ ಮುಂದೆ ಸುಳಿಯಕೂಡದು. ಭೀಮರಾಯರೆಷ್ಟು ಮತಾಭಿಮಾನಿ ಗಳೋ ಸುಂದರರಾಯರಷ್ಟು ಮತ, ಧರ್ಮಗಳ ಹೊರಗಿದ್ದರು. ಈ ವಿಷಯ ದಲ್ಲಿ ಅವರಿಗೂ ಭೀಮರಾಯರಿಗೂ ದೊಡ್ಡ ಜಗಳವೇ ಹುಟ್ಟಿಬಿಡುತ್ತಿತ್ತು.

ಒಂದು ದಿವಸ ಸಂಜೆ ಗೆಳೆಯರು ಮೂವರೂ ಸುಂದರರಾಯರ ಮನೆ ಯಲ್ಲಿ ಸೇರಿದ್ದರು. ಉಪಾಹಾರವೂ ಆಯಿತು. ಲಘುವಾಗಿರಲೆಂದು ಸ್ವಲ್ಪ ಉಪ್ಪಿಟ್ಟು, ಎರಡೆರಡು ರಸಬಾಳೆಹಣ್ಣು, ಹೀರೇಕಾಯಿ ಬೋಂಡ, ರವೆ ಉಂಡೆ, ಕಾಫಿ ಇಷ್ಟೇ ಆಗಿತ್ತು. ಕೊನೆಗೆ ರಾಯರು ತಮ್ಮ ಪರಮಾಯಿಷಿ ಯೆಂದು ಹೆಸರುಬೇಳೆ ಹುರಕಲನ್ನು ತಂದು ಮುಂದೆ ಇಟ್ಟರು. ಬೇಡಬೇಡ ಎನ್ನುತ್ತಲೇ ಬರೀ ತಟ್ಟೆಯನ್ನು ಒಳಕ್ಕೆ ಕಳುಹಿಸಿದ್ದಾಯಿತು. ತಾಂಬೂಲ ವನ್ನು ಹಾಕಿಕೊಳ್ಳುತ್ತಾ ಮಾತಿಗೆ ಮೊದಲಾಯಿತು.

"ಏನು ಸುಂದರೂ, ವಯಸ್ಸಾಗ್ತಾ ಆಗ್ತಾ ನಿಂಗೆ ಬಾಯಿ ಚಪಲ ಹೆಚ್ಚಾಗ್ತಾ ಇದೇಂತ ಕಾಣತ್ತೆ" ಎಂದು ಭೀಮರಾಯರು ಕೀಟಲೆಗೆ ಆರಂಭಿ ಸಿದರು.

"ಏನು ಚಪಲ ಹೇಳು. ರಾಯರು ನಮ್ಮ ಮನೇಗೆ ಬರೋದು ಅಪರೂಪ. ಏನೋ ಗೋಪಾಳದ್ದು ಅಷ್ಟು ಬೋಂಡ ಉಪ್ಪಿಟ್ಟು ಮಾಡಿದ್ದರು."

"ಇದೇ ಗೋಪಾಳದ್ದು ಆದರೆ ಇನ್ನು ಸರಿಯಾಗಿ ಮಾಡಿಸಿದರೆ ಹೇಗಿ ರತ್ತೋ?" ಎಂದರು ರಾಯರು.

"ಸದ್ಯ ನಿಮ್ಮ ಧರ್ಮ, ಸುಮ್ಮನಿರಿ. ಸುಂದರೂ ಅದಕ್ಕೂ ಸೈ. ನಾಳೆ ಮಗೂಗೆ ಹುಟ್ಟಿದ ಹಬ್ಬ ಎಂದು ಹೆಸರಿಟ್ಟು ನಮ್ಮನ್ನು ಕೊಂದೇ ಬಿಡುತ್ತಾನೆ."

"ನಿಜಾ ಕಣಯ್ಯಾ. ನಾಳೆ ನಿಜವಾಗಿಯೂ ಮಗೂಗೆ ಹುಟ್ಟಿದ ಹಬ್ಬ. ನನ್ನ ಮಗೂಗಲ್ಲ-ಮೊಮ್ಮಗೂಗೆ—ರಾಯರೂ ನೀನೂ ಇಲ್ಲೇ ಬಂದುಬಿಡಿ ಊಟಕ್ಕೆ."

"ನಾನು ಪರಿಹಾಸಕ್ಕೆ ಅಂದರೆ ಅದು ನಿಜವೇ ಆಗೋಹೇ. ಆಗಲಪ್ಪಾ. ನಿನ್ನ ಸಂತೋಷ. ನೀವು ರಾಯರೇ?"

"ನಾನು ತಪ್ಪಿಸಿಕೊಳ್ಳುತ್ತೇನೆಯೇ?"

ಗೆಳೆಯರಲ್ಲಿ ತಾವು ಒಂದು ಮನೆಯವರು ಎಂಬ ಭಾವನೆಯಿತ್ತು. ಸುಖ ದಲ್ಲಿ ದುಃಖದಲ್ಲಿ ಎರಡರಲ್ಲಿಯೂ ಒಂದಾಗಿದ್ದರು. ಯಾರಿಗೆ ಯಾವ ಕಷ್ಟ ಬರಲಿ, ಮನೆಯಲ್ಲಿ ಏನು ಘಟನೆ ಸಂಭವಿಸಲಿ, ಮಿಕ್ಕ ಇಬ್ಬರಲ್ಲಿ ಹೇಳಿ ಕೊಂಡು ಸಲಹೆ ಕೇಳದಿದ್ದರೆ ಸಮಾಧಾನವಿಲ್ಲ. ಅವರಲ್ಲಿ ಯಾರ ಮನೆಯಲ್ಲಿ

ಏನು ಹೆಚ್ಚುಗಟ್ಟಳೆಯಾಗಲಿ, ತಿಂಡಿತೀರ್ಥವಾಗಲಿ ಮಿಕ್ಕವರಿಗೆ ಕೊಟ್ಟ ಹೊರತೂ ತೃಪ್ತಿಯಿಲ್ಲ. ಸುಂದರರಾಯರಿಗೆ • ಏನಾದರೂ ತಿನ್ನಬೇಕೆಂದು ಮನಸ್ಸಾಯಿತು, ಅವರು ನಿರ್ಭಯವಾಗಿ

"ಭೀಮೂ, ನಾಳೆ ಒಂದಿಷ್ಟು ತೊಗರಿನುಚ್ಚಿನ ಉಂಡೆ, ಹಸೀಮಜ್ಜಿಗೆ ಪಳಿದ್ಯ ಮಾಡಿಸಿಬಿಡು. ನಾನೂ' ರಾಯರೂ ಅಲ್ಲೇ ಒಕ್ಕರಿಸಿಬಿಡುತ್ತೇವೆ" ಎಂದು ಹೇಳುತ್ತಿದ್ದರು. ರಾಯರಿಗೆ ಅಂಬೋಡೆ ತಿನ್ನಬೇಕೆನಿಸಿದರೆ ಭೀಮ ರಾಯರ ಮನೆಯಿಂದ ಸರಬರಾಯಿ ನಡೆದುಹೋಗುತ್ತಿತ್ತು.

ಮಾತಿಗೆ ಕುಳಿತುಬಿಟ್ಟರಂತೂ ಸರಿಯೇ ಸರಿ. ಮನೆಯವರೆಲ್ಲಾ ಊಟ ಮುಗಿಸಿ, ಕೆಲಸಕಾರ್ಯಗಳನ್ನು ತೀರಿಸಿ ಮಲಗಿ ಒಂದು ನಿದ್ರೆಯನ್ನು ಮಾಡಿ ರುತ್ತಿದ್ದರು. ಎಷ್ಟು ಮಾತನಾಡಿದರೂ ಹೊಸ ವಿಷಯಗಳು ಬರುತ್ತಲೇ ಇರುತ್ತಿದ್ದವು. ಆ ದಿನದ ಮಾತು ಹಾಗೂ ಹೀಗೂ ಹಾರಾಡಿ ಹುಡುಗರ ವಿದ್ಯಾಭ್ಯಾಸದ ಕಡೆ ಹೊರಳಿತು.

"ನಿಮ್ಮ ಲಕ್ಷ್ಮಣಾ ಕೊನೆಗೆ ಏನು ಮಾಡುತ್ತಾನೆ ?" ಎಂದು ಸುಂದರ ರಾಯರು ಕೇಳಿದರು.

"ಸಂಗೀತ ಪಾಠಕ್ಕೆ ಹೋಗುತ್ತಿದ್ದಾನೆ. ನೂರು ಕೀರ್ತನೆ ತನಕ ಆಗಿದೆ ಯಂತೆ. ಹಗಲೂ ರಾತ್ರಿ ಅಭ್ಯಾಸಮಾಡಿಕೊಳ್ಳುತ್ತಾನೆ. ತನ್ನ ತಂಗಿಗೂ ಪಾಠ ಹೇಳಿಕೊಡುತ್ತಾನೆ. ಅವನದೇ ನನಗೆ ದೊಡ್ಡ ಯೋಚನೆಯಾಗಿದೆ ನೋಡಿ."

"ಏನು ಸಂಗೀತವೊ ? ಅದರಲ್ಲಿ ಏನಾಗತ್ತೆ ಹೇಳಿ. ಮೈಸೂರಿನ ತುಂಬ ಸಂಗೀತಗಾರರೇ. ಸಮಾಜದ ಕಛೇರಿಗಳನ್ನು ನಾವೇ ನೋಡುತ್ತಾ ಇಲ್ಲವೇ ? ಹೊರಗಿನಿಂದ ಯಾವ 'ಅಯ್ಯರು' ಬಂದರೂ ಹಣ ಕೊಡುತ್ತಾರೆ ನಮ್ಮ ಜನ. ಹಿತ್ತಲ ಗಿಡ ಮದ್ದಲ್ಲ."

"ನಮ್ಮ ಜನವೂ ಹಾಗೇ ಮಾಡಬೇಕು. ಹೊರಗೆ ಹೋಗಿ ತಿರುಚನಾ ಪಳ್ಳಿ ತಂಜಾವೂರುಗಳಲ್ಲಿ ಕಛೇರಿಮಾಡಿ ಕೊಳ್ಳೆಹೊಡೆದುಕೊಂಡು ಬರಬೇಕು" ಎಂದರು ಭೀಮರಾಯರು.

"ಅದೆಲ್ಲಿ ಸಾಧ್ಯ, ಭೀಮರಾಯರೇ. ನಮ್ಮ ಜನಕ್ಕೆ ಅಭಿಮಾನವಿಲ್ಲ. ಹೊರಗಿನಿಂದ ಯಾರು ಬಂದರೂ ಅವರಿಗೆ ಪಥ್ಯ. ತಂಜಾವೂರು ತಿರುಚನಾಪಳ್ಳಿಯ ಜನರ ರೀತಿಯೇ ಬೇರೆ—ಅವರಿಗೆ ತಮ್ಮವರು ಅಂದರೆ ಪ್ರಾಣ. ಹೊರಗಿನ ವರಿಗೆ ಒಂದು ಪಂಚಪಾತ್ರೆ ಗಂಗಾಮೃತ ಕೂಡ ಕೊಡುವುದಿಲ್ಲ."

"ನಿಜ, ನಿಜ."

"ಒಂದು ದಿವಸ ನಿಮ್ಮ ಲಕ್ಷ್ಮಣ ಹಾಡುವುದನ್ನು ಕೇಳಬೇಕು, ರಾಯರೆ"

ಎಂದು ಸುಂದರರಾಯರು ತಮ್ಮ ಬಹಳ ದಿನಸಗಳ ಆಸೆಯನ್ನು ವ್ಯಕ್ತ ಪಡಿಸಿದರು.

"ಅದೇ ಕಷ್ಟ ನೋಡಿ. ನಾನು ಕೂಡ ಸರಿಯಾಗಿ ಕೇಳಿಲ್ಲ ಅವನ ಸಂಗೀತ. ತಾನು ಚೆನ್ನಾಗಿ ಕಲಿತು ಗುರುವಿಗೆ ಮೊದಲು ಅರ್ಪಿಸಿದ ಹೊರತೂ ಯಾರ ಮುಂದೆಯೂ ಹಾಡುವುದಿಲ್ಲವಂತೆ. ಈ ಮಾತನ್ನು ಒಂದು ರೀತಿಯಾಗಿ ನಯವಾಗಿ ಹೇಳುತ್ತಾನೆ ನೋಡಿ—ನಮಗೇ ಏನೋ ಒಂದು ತರಹ ಕನಿಕರ ಹುಟ್ಟುತ್ತೆ. ಹುಡುಗ ಜಂಭದಿಂದ ಆ ಮಾತು ಆಡಲ್ಲ. ಅವನ ಅಂತಃಕರಣದಿಂದ ಮಾತು ಬರುತ್ತದೆ."

"ಅನಂತಾಚಾರ್ಯರು ನನಗೆ ಸಿಕ್ಕಿದ್ದರು. ಪ್ರಸಂಗವಶಾತ್ ಲಕ್ಷ್ಮಣನ ಮಾತೂ ಬಂತು 'ಹೇಗಿದ್ದಾನೆ ಶಿಷ್ಯ ?' ಎಂದು ಕೇಳಿದೆ. 'ಶಿಷ್ಯ ಏನು ಬಂತು, ಸ್ವಾಮಿ! ಗುರು—ಗುರುವಾಗಿದ್ದಾನೆ. ಅವನೊಬ್ಬ ಯುಗಪುರುಷ. ಅವನ ಹೆಸರು ಹೇಳಿ ಮಿಕ್ಕವರು ಸಂಗೀತಕ್ಕೆ ಕೈಹಾಕಬೇಕಾಗುತ್ತದೆ ನೋಡಿ' ಎಂದು ಹೇಳಿದರು. ಅಂದಿನಿಂದ ನನ್ನ ಕುತೂಹಲ ಹೆಚ್ಚುತ್ತಾ ಇದೆ ನೋಡಿ" ಎಂದು ಸುಂದರರಾಯರು ಹೇಳಿದರು.

"ಈ ಸಲ ರಾಮು ಮೆಟ್ರಿಕ್ ಪರೀಕ್ಷೆಗೆ ಕೂಡುತ್ತಾನಲ್ಲವೇ ?" ಎಂದು ಭೀಮರಾಯರು ಕೇಳಿದರು.

"ಹೌದು."

"ಒಂದು ವಿಷಯ ಮರೆತಿದ್ದೆ, ರಾಯರೇ" ಎಂದು ಸುಂದರರಾಯರು ರಾಗವಾಗಿ ತೆಗೆದರು. ಅವರು ಹೇಳುವ ರೀತಿಯಲ್ಲಿದ್ದ ಸಂಕೋಚವನ್ನು ನೋಡಿ ರಾಯರು "ಹೇಳಿ, ಸಂಕೋಚವೇಕೆ ?" ಎಂದು ಧೈರ್ಯಕೊಟ್ಟರು.

"ಇವತ್ತು ಬೆಳಿಗ್ಗೆ ನಮ್ಮ ಗುಮಾಸ್ತರು ನಂಜುಂಡಯ್ಯನವರು ತಮ್ಮ ತಂಗಿಯ ಮಗನನ್ನು ಕರೆದುಕೊಂಡು ಬಂದಿದ್ದರು. ಬಹಳ ಬಡವರಂತೆ. ಹುಡುಗ ಮೆಟ್ರಿಕ್ ಕ್ಲಾಸಿನಲ್ಲಿ ಓದುತ್ತಾ ಇದ್ದಾನೆ. ಯಾರಾದರೂ ನಿಮ್ಮಂತಹವರು ಹುಡುಗನನ್ನು ಮನೆಯಲ್ಲಿಟ್ಟುಕೊಂಡು ಅನ್ನಬಟ್ಟೆ ಕೊಟ್ಟು ವಿದ್ಯಾದಾನ ಮಾಡಬೇಕೆಂದು ಕೇಳಿಕೊಂಡರು. ಅವರು ಹೇಗೂ ನಿಮ್ಮ ಜನ—ನಿಮ್ಮನ್ನು ಒಂದು ಮಾತು ಕೇಳಿ ನೋಡುತ್ತೇನೆ, ಎಂದು ಹೇಳಿ ಕಳುಹಿಸಿದೆ."

"ಹೇಗೂ ನಿಮ್ಮ ಮಗನೂ ಪರೀಕ್ಷೆಗೆ ಕಟ್ಟುತ್ತಾನೆ. ಜತೆಗೆ ಓದೋದಕ್ಕೆ ಇವನೂ ಆಗುತ್ತಾನೆ" ಎಂದು ಭೀಮರಾಯರು ಸೂಚಿಸಿದರು.

"ಎಷ್ಟು ವಯಸ್ಸು ?"

"ಅವನಿಗೆ ೧೬–೧೮ ಇರಬೇಕು."

"ಕಳುಹಿಸಿ. ಪಟ್ಟಣವಾಸ—ಯಾರಿಗಾದರೂ ಕಷ್ಟ. ನಾಲ್ಕು ಜನ ಇರೋ ಮನೆಯಲ್ಲಿ ಇನ್ನೊಂದು ತುತ್ತು ಅನ್ನ ಇಲ್ಲವೇ ?" ಎಂದು ರಾಯರು ಒಪ್ಪಿಗೆಯನ್ನಿತ್ತರು.

ಸುಂದರರಾಯರಿಗೆ ಆನಂದವಾಯಿತು.

"ಮಹಾರಾಯರಪ್ಪಾ ನೀವು. ಆ ಶ್ರೀನಿವಾಸ ಅನ್ನೋ ಹೆಸರಿದ್ದೋರು ಹೀಗೇಂತ ಕಾಣತ್ತೆ. ಕರ್ಪೂರ ಶ್ರೀನಿವಾಸರಾಯರಿದ್ದರು ನೋಡಿ. ಅವರೂ ಹಾಗೇನೇ. ಮಹಾನುಭಾವರು ಎಷ್ಟು ಜನ ಹುಡುಗರಿಗೆ ಅನ್ನ ಹಾಕಿ ವಿದ್ಯಾದಾನ ಮಾಡಿದರೂಂತೀರಿ."

"ಈ ಕಾಲದಲ್ಲಿ ಹುಡುಗರಿಗೆ ಬಹಳ ಕಷ್ಟ ನೋಡಿ. ಬೆಂಗಳೂರು ಮೈಸೂರಿಗೆ ಬಂದ ಹೊರತು ಮುಂದೆ ವಿದ್ಯೆ ಸಾಗುವ ಹಾಗಿಲ್ಲ. ಇಲ್ಲಿ ಬಂದರೋ ಒಪ್ಪತ್ತು ಅನ್ನ ಕಾಣೋದು ಕಷ್ಟ. ವಾರಗಳು ಸಿಕ್ಕುವುದಿಲ್ಲ. ಭಿಕ್ಷಾನ್ನದ ಹುಡುಗರ ಪಾಡಂತೂ ದೇವರಿಗೇ ಪ್ರೀತಿ. ನಮ್ಮ ಮನೆಗೆ ಒಬ್ಬ ಹುಡುಗ ವಾರಕ್ಕೆ ಬರುತ್ತಾನೆ ನೋಡಿ. ಒಂದು ದಿವಸ ಜೋಳಿಗೆ ಹಿಡಿದು ಬಂದ. ಒಳಗಿನಿಂದ ಅನ್ನ ತರುವುದು ತಡವಾಯಿತು ಎಂದು ಕಾಣುತ್ತೆ. ಹಾಗೇ ಕುಸಿದು ಬಿದ್ದ. ನೀರೂಗೀರೂ ತಟ್ಟಿ ಎಬ್ಬಿಸಿದೆವು. 'ಯಾಕೋ ಮಗೂ, ಬಿದ್ದುಬಿಟ್ಟೆ ?' ಎಂದು ಕೇಳಿದ್ದಕ್ಕೆ 'ಅನ್ನ ಕಂಡು ಮೂರು ದಿವಸ ವಾಯಿತು, ಸಾರ್. ನಿನ್ನೆ ಯಾರೋ ತಂಗಳು ಹಾಕಿದರು. ತಿಂದು ವಾಂತಿ ಮಾಡಿಕೊಂಡೆ' ಎಂದು ಹೇಳಿದ. 'ಊಟಕ್ಕೆ ಅನುಕೂಲವಾಗದಿದ್ದ ದಿವಸ ವೆಲ್ಲಾ ಇಲ್ಲೇ ಬಂದುಬಿಡಪ್ಪ' ಎಂದು ಹೇಳಿದೆ. ಇಂತಹ ಹುಡುಗರು ಈ ಬೆಂಗಳೂರು ಪೇಟೇಲಿ ಎಷ್ಟು ಜನವೋ ?"

"ಕಂಡವರ ದುಡ್ಡು ಮೇದು ಮೇದು ಬೊಜ್ಜು ಬೆಳೆಸುತ್ತಾರಲ್ಲ ನಿಮ್ಮ ಮಠಾಧಿಪತಿಗಳು, ಅವರೇಕೆ ಹಾಸ್ಟಲುಗಳನ್ನು ತೆಗೆದು ಹುಡುಗರಿಗೆ ಅನ್ನಾ ಹಾಕಬಾರದು ?" ಎಂದು ಸುಂದರರಾಯರು ತಮ್ಮ ಬತ್ತಳಿಕೆ ಬಿಚ್ಚಿದರು.

"ನೀನು ಮಠಗಳನ್ನು ಬಯ್ಯೋದು ಬಿಟ್ಟುಬಿಡು, ಸುಂದರೂ. ಊರಿನಲ್ಲಿ ಇಷ್ಟು ಜನ ಶ್ರೀಮಂತರಿದ್ದಾರಲ್ಲಾ ಅವರೇನು ಮಾಡುತ್ತಿರುತ್ತಾರೆ. ಸಿಕ್ಕಸಿಕ್ಕಿದ್ದಕ್ಕೆ ಖರ್ಚುಮಾಡುವ ಹಣವನ್ನು ಇದಕ್ಕೇಕೆ ವಿನಿಯೋಗಮಾಡಬಾರದು?"

"ಅವರಿಗೆ ಮೂರು ಮೂರು ದಿವಸಕ್ಕೆ ಹೊಸ ಹೊಸ ಮೋಟಾರುಕಾರು ಗಳಿಗೆ, ಕಾಫಿ ಜಾನಕೀಯರಿಗೆ ಕೊಡೋದಿಕ್ಕೇ ಹಣ ಸಾಲದು. ಇನ್ನು ಇವು ಗಳಿಗೆಲ್ಲಾ ದುಡ್ಡು ಎಲ್ಲಿಂದ ತರುತ್ತಾರಯ್ಯಾ ?"

"ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂದು ಗಾದೆ ಹೇಳಿದ

ಹಾಗೆ ಬಡಹುಡುಗರನ್ನು ಕೇಳುವವರು ದಿಕ್ಕಿಲ್ಲ" ಎಂದು ಶ್ರೀನಿವಾಸರಾಯರು ಮುಕ್ತಾಯ ಸೂಚಿಸಿದರು. ಎಲ್ಲರೂ ಎದ್ದು ಲಾಲ್‌ಬಾಗಿನ ಕಡೆ ಸಂಜೆ ವಿಹಾರಕ್ಕೆ ಹೊರಟರು.

೬

ವೆಂಕಟೇಶ ರಾಯರ ಮನೆ ಸೇರಿದ ಕೆಲವು ದಿವಸಗಳಲ್ಲಿ ಎಲ್ಲರ ಅಚ್ಚು ಮೆಚ್ಚಾದ. ಎಲ್ಲರ ಕೆಲಸದಲ್ಲಿಯೂ ನೆರವಾಗುತ್ತಿದ್ದ. ಎಲ್ಲರ ಕಷ್ಟಸುಖ ಗಳನ್ನೂ ಹಚ್ಚಿಕೊಳ್ಳುತ್ತಿದ್ದ. ರಾಯರಂತೂ ಹುಡುಗನ ಗುಣವನ್ನು ನೋಡಿ ಬೆರಗಾಗಿಬಿಟ್ಟರು. ಸುಂದರರಾಯರಲ್ಲಿ ಬಾಯಿತುಂಬ ವೆಂಕಟೇಶನ ಗುಣ ಕಥನ ಮಾಡಿಯೂ ಮುಗಿಸಿದ್ದರು.

ವೆಂಕಟೇಶ ರಾಮುವಿನ ಸಹಪಾಠಿಯಾಗಿದ್ದರೂ ಅವರವರಿಗೆ ಅಷ್ಟು ಹೊಂದಿಕೆ ಬೆಳೆಯಲಿಲ್ಲ, ಲಕ್ಷ್ಮಣನ ಮೇಲೆ ವಿಶೇಷ ಪ್ರೇಮ ಹುಟ್ಟಿತು. ತನಗೆ ಅನುವು ದೊರೆತಾಗಲೆಲ್ಲಾ ಲಕ್ಷ್ಮಣನ ಜತೆಯಲ್ಲಿಯೇ ಇರತೊಡಗಿದ. ತನ್ನ ಪಾಠದ ಹೊತ್ತನ್ನು ರಾಮುವಿನೊಂದಿಗೆ ಅವನು ಕಳೆಯಲೇಬೇಕಾಗಿತ್ತು. ಆ ಹೊತ್ತಿನಲ್ಲಿಯೂ, ಮಿಕ್ಕ ವೇಳೆಗಳಲ್ಲಿಯೂ ರಾಮು ವೆಂಕಟೇಶನಿಂದ ತನ್ನ ಕೆಲಸಗಳನ್ನೆಲ್ಲಾ ನಿರ್ದಾಕ್ಷಿಣ್ಯದಿಂದ ಮಾಡಿಸುತ್ತಿದ್ದ. ಮನೆಯಲ್ಲಿ ಆಳು ಗಳಿದ್ದರು. ಆದರೂ ಬೇಕೆಂತಲೇ ರಾಮು ವೆಂಕಟೇಶನಿಗೇ ತನ್ನ ಕೆಲಸಗಳನ್ನು ಒಪ್ಪಿಸುತ್ತಿದ್ದ. ರಾಮುವಿನ ಬಟ್ಟೆಬರೆಗಳನ್ನು ಒಗೆದು ಮಡಿ ಮಾಡಿಸಿಡುವು ದಲ್ಲದೆ, ಅವನಿಗೆ ಹಾಸಿಗೆ ಹಾಕಿಕೊಡುವುದು, ಅವನ ಮೋಜುಗಳಿಗೆ ಬಣ್ಣ ಹಾಕಿಕೊಡುವುದು, ಶಾಲೆಗೆ ಅವನ ಪುಸ್ತಕಗಳನ್ನು ಹೊತ್ತುಕೊಂಡು ಹೋಗುವುದು ಮೊದಲಾದ ಎಲ್ಲಾ ಕೆಲಸಗಳನ್ನೂ ಮಾಡಬೇಕಾಗಿತ್ತು. ಸ್ವಲ್ಪ ಹೆಚ್ಚುಕಡಿಮೆಯಾದರೆ ರಾಮುವಿನ ವಾಗ್ಬಾಣಪರಂಪರೆಗೆ ಸಿಕ್ಕಿ ನೋಯಬೇಕಾಗಿತ್ತು. ಕೋಪ ಬಂದಿತೆಂದರೆ ರಾಮುವಿನ ಮೈಮೇಲೆ ಪ್ರಜ್ಞೆಯೇ ತಪ್ಪುತ್ತಿತ್ತು. ಯಾರಿದ್ದಾರೆ ಯಾರಿಲ್ಲ ಎನ್ನುವುದನ್ನು ಮರೆಯು ತ್ತಿದ್ದ. ಆಳು ಲಕ್ಕನನ್ನು ಬಯ್ಯುವುದಕ್ಕೂ ಒಂದೇ ಭಾಷೆ. ವೆಂಕಟೇಶನನ್ನು ಬಯ್ಯುವುದಕ್ಕೂ ಒಂದೇ ಭಾಷೆ. ಕೋಪ ಹೆಚ್ಚಿತೆಂದರೆ ರೂಲುದೊಣ್ಣೆಯಿಂದ ಬೆನ್ನುಮೂಳೆ ಮುರಿಯುವಂತೆ ಹೊಡೆದೂ ಬಿಡುತ್ತಿದ್ದ. ರಾಮು ರಾಯರ ಮಗ—ರಾಯರ ಹಿರಿಯ ಮಗ—ಮನೆಗೆ ಯಜಮಾನ. ಇದನ್ನು ಅವನು ಮರೆತಿರಲಿಲ್ಲ. ಮನೆಯಲ್ಲಿ ಯಾರೂ ಮರೆಯದಂತೆ ಎಚ್ಚರವಾಗಿರುತ್ತಿದ್ದ.

ಮಲಗುವ ಮೊದಲು ರಾಮು ಒಂದು ಗ್ಲಾಸು ಹಾಲು ಕುಡಿಯುವ

ಪದ್ಧತಿಯಿತ್ತು. ಎಲ್ಲರ ಊಟ ಮುಗಿದಮೇಲೆ ವೆಂಕಟೇಶ ಎಲೆ ಎತ್ತಿಹಾಕಿ, ತಟ್ಟೆಗಳನ್ನು ತೊಳೆದಿಟ್ಟು, ಎಂಜಲು ಗೋಮಯ ಮಾಡಿ ರಾಮುವಿಗೆ ಹಾಲನ್ನು ತೆಗೆದುಕೊಂಡು ಹೋಗಿ ಕೊಟ್ಟು ತಾನು ಮಲಗುವ ವಾಡಿಕೆ. ಒಂದು ದಿವಸ ಇದ್ದಕ್ಕಿದ್ದ ಹಾಗೆ ರಾಮು ರಂಪ ತೆಗೆದುಬಿಟ್ಟ. ತನಗೆ ಕಳು ಹಿಸಿದ ಹಾಲನ್ನು ವೆಂಕಟೇಶ ಕುಡಿದು ತಂದುಕೊಟ್ಟ ಎಂಬ ಆಪಾದನೆ ಯನ್ನು ಹೊಡಿಬಿಟ್ಟು 'ಹೋ' ಎಂದು ಗಟ್ಟಿಯಾಗಿ ಅರಚಲು ಆರಂಭಿಸಿದ. ಸಾವಿತ್ರಮ್ಮ ಸಮಾಧಾನ ಹೇಳಿದರು. ರಾಮು ಜಗ್ಗಲಿಲ್ಲ. ತಾಯಿಯನ್ನೂ ಅಲ್ಲಗಳೆದು ಮಾತನಾಡಿಬಿಟ್ಟ. ಮೀನಾಕ್ಷಮ್ಮ ಇದನ್ನು ನೋಡಲಾರದೆ

"ಹೀಗೆಲ್ಲ ಆಡಬಾರದಪ್ಪಾ, ರಾಮೂ. ನೀನು ದೊಡ್ಡ ಹುಡುಗ. ವೆಂಕ ಟೇಶ ಏನು ಮಗುವೆ? ಅವನೆಂದಿಗೂ ಹಾಗೆ ಮಾಡುವವನಲ್ಲ" ಎಂದು ಹೇಳಿದರು. ರಾಮು ಕೆಣಕಿದ ಫಣಿಯಂತೆ ರೇಗಿ ಬುಸುಗುಟ್ಟುತ್ತಾ

"ಸಾಕು—ನೀನು ಬಾಯಿ ಮುಚ್ಚು, ದೊಡ್ಡಮ್ಮ. ತಿರುಕ-ಮಕ್ಕಳೆಲ್ಲಾ ನಿಮಗೆ ಹೆಚ್ಚು, ಅವರು ಹೇಳಿದ್ದು ಸತ್ಯ, ನಾನು ಹೇಳಿದ್ದು ಸುಳ್ಳು! ತಾಯಿಗೇ ಇಲ್ಲದ ವಾಂಛಲ್ಯ ನಿಮಗೆಲ್ಲಿಂದ ಬರಬೇಕು"

ಎಂದು ಧಿಕ್ಕರಿಸಿ ಮಾತನಾಡಿಬಿಟ್ಟ. ಮೀನಾಕ್ಷಮ್ಮನವರು ಕಣ್ಣಿನಲ್ಲಿ ನೀರು ತಂದುಕೊಂಡು ಒಳಗೆ ಹೊರಟುಹೋದರು. ಸಾವಿತ್ರಮ್ಮ ಅಕ್ಕನನ್ನು ಹಿಂಬಾ ಲಿಸಿ ಸಮಾಧಾನ ಹೇಳಿದಳು. ಮೀನಾಕ್ಷಮ್ಮನ ಮನಸ್ಸು ಬಹಳ ನೊಂದಿತ್ತು. 'ತಾವು ಎಂದೂ ಯಾವ ಬಗೆಯಲ್ಲಿಯೂ ಭೇದವನ್ನೆಣಿಸದಿರುವಾಗ ರಾಮು ಇಂತಹ ಮಾತನ್ನಾಡಿಬಿಟ್ಟನಲ್ಲ' ಎಂದು ಮಮ್ಮಲ ಮರುಗಿದರು.

ಮೀನಾಕ್ಷಮ್ಮನವರನ್ನು ರಾಮು ಅಂದದ್ದು ವೆಂಕಟೇಶನಿಗೆ ತುಂಬ ಯಾತನೆಯನ್ನುಂಟುಮಾಡಿತು. ತನ್ನ ಪರ ವಕೀಲಿಮಾಡಿದುದಕ್ಕಾಗಿ ಅವರಿಗೆ ತಿರಸ್ಕಾರವುಂಟಾಯಿತಲ್ಲಾ ಎಂದು ಪರಿತಾಪಪಟ್ಟ. ಮೀನಾಕ್ಷಮ್ಮನವರಿಗೆ ರಾಮುವಾಡಿದ ಮಾತು ಮತ್ತೆ ಮತ್ತೆ ಕಿವಿಯ ಮೇಲೆ ಬಿದ್ದಂತಾಗಿ ಕರುಳು ಕೊರೆಯುತ್ತಿತ್ತು.

"ನೀನೇ ಹೇಳು, ಸಾವಿತ್ರಿ. ನಾನು ಯಾವಾಗಲಾದರೂ ರಾಮು ವಿಷಯ ದಲ್ಲಿ ಭೇದವನ್ನೆಣಿಸಿದ್ದೇನೆಯೇ?"

"ಹೋಗಲಿ ಬಿಡಿ, ಅಕ್ಕಾ. ಅವನ ಮಾತೇನು. ಎಂದಿಗೂ ಒಂದೇ ಆಯಿತು ಅವನ ಬುದ್ಧಿ. ದೊಡ್ಡೋರು ಚಿಕ್ಕೋರು, ಸಾಕದೋರು ಸಲಹಿದೋರು ಅನ್ನುವ ತಾರತಮ್ಯ ಕೂಡ ಇಲ್ಲ" ಎಂದು ಸಾವಿತ್ರಮ್ಮ ಹೇಳಿದಳು.

ವೆಂಕಟೇಶ ಎದುರಿಗೆ ಬಂದು ನಿಂತ. ಸಣ್ಣ ದನಿಯಲ್ಲಿ

"ಅವ್ಮಾ" ಎಂದ.

ಮೀನಾಕ್ಷಮ್ಮ ಕತ್ತೆತ್ತಿ ನೋಡಿದರು.

"ಒಂದುಮಾತು ಹೇಳೋಣಾಂತ ಬಂದೆ. ಅಪ್ಪಣೆಯಾದರೆ ಹೇಳುತ್ತೇನೆ."

"ಹೇಳಪ್ಪಾ. ಸಂಕೋಚವೇತಕ್ಕೆ?"

"ಇವತ್ತು ನನ್ನಿಂದ ನೀವು ಸಣ್ಣಮಾತು ಕೇಳುವ ಹಾಗಾಯಿತು. ಹೆತ್ತ ತಾಯಿಗಿಂತಲೂ ಹೆಚ್ಚಾಗಿ ಕಾಪಾಡುತ್ತಾ ಇದ್ದೀರಿ. ನನಗೆ ಇಷ್ಟೇ ಲಭ್ಯ ಎಂದು ಕಾಣುತ್ತೆ. ಅಪ್ಪಣೆಯಾದರೆ ನಾಳೆ ಹೊರಟುಹೋಗುತ್ತೇನೆ."

ಮೀನಾಕ್ಷಮ್ಮ, ಸಾವಿತ್ರಮ್ಮ ಇಬ್ಬರೂ ಗಾಬರಿಗೊಂಡರು.

ಸಾವಿತ್ರಮ್ಮನೇ

"ಹಾಗೆಲ್ಲಾ ಅನ್ನಬಾರದು, ವೆಂಕಟೇಶೂ. ಅವನೂ ಹುಡುಗ. ವಿವೇಕವಿಲ್ಲದೆ ಒಂದು ಮಾತು ಆಡಿದಾಂತ ಇಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳಬಾರದು. ನಿನ್ನ ಪಾಡಿಗೆ ನೀನು ಓದಿಕೊಂಡು ಇರಪ್ಪಾ. ನಾಳೆಯಿಂದ ಅವನ ಕೆಲಸ ಅವನೇ ಮಾಡಿಕೊಳ್ಳಲಿ. ನೀನು ತೆಪ್ಪಗೆ ಲಕ್ಷ್ಮಣನ ಜತೆ ಇರು."

"ಹಾಗೆ ಮಾಡು ವೆಂಕಟೇಶೂ, ಮನೆಗಿನೆ ಬಿಟ್ಟು ಹೋಗಬೇಡಪ್ಪಾ. ಮಕ್ಕಳೂ ಅಂದರೆ ಹೊಟ್ಟೆಯಲ್ಲಿ ಹುಟ್ಟಿದವೇ ಮಕ್ಕಳೇನೋ, ವೆಂಕಟೇಶೂ? ನೀನೂ ನಮ್ಮ ಮಗನೇ ಕಣಪ್ಪಾ. ಇದು ಯಾರದೋ ಮನೆ ಅನ್ನೋ ಭಾವನೆ ಬಿಟ್ಟುಬಿಡು. ಗೋಪಾಲಿ ನೋಡು, ಲಚ್ಚಿ ನೋಡು, ಶಾಂತನ್ನ ನೋಡು—ಎಲ್ಲರೂ ಹೇಗೆ ನಿನಗೆ ಹೊಂದಿಕೊಂಡಿದ್ದಾರೆ!"

ಎಂದು ಸಮಾಧಾನ ಹೇಳಿದರು. ವೆಂಕಟೇಶ ನಿರುತ್ತರನಾದ.

ವೆಂಕಟೇಶನ ವಿಚಾರದಲ್ಲಿ ಸಾವಿತ್ರಮ್ಮನವರು ಮಾಡಿದ ಹೊಸ ವ್ಯವಸ್ಥೆ ಕೇಳಿ ರಾಮುವಿನ ಹೊಟ್ಟೆ ಉರಿದುಹೋಯಿತು. ವೆಂಕಟೇಶನ ಸೇವೆ ತಪ್ಪಿದ ದುಃಖವೊಂದು ಕಡೆ, ತಾನು ಮಾಡುತ್ತಿದ್ದ ಅಧಿಕಾರ ಹೋದ ಸಂಕಟವೊಂದು ಕಡೆ. ಅವಕಾಶ ಸಿಕ್ಕಿದಾಗಲೆಲ್ಲಾ ವೆಂಕಟೇಶನನ್ನು ನೋಯಿಸುವ ಯಾವುದಾದರೂ ಸಣ್ಣಪುಟ್ಟ ಮಾತುಗಳನ್ನಾಡಿ ತೃಪ್ತಿಪಟ್ಟುಕೊಳ್ಳುತ್ತಿದ್ದ.

ಒಂದು ದಿನ ರಾಯರೂ ಹುಡುಗರೂ ಎಲ್ಲರೂ ಒಟ್ಟಿಗೆ ಊಟಕ್ಕೆ ಕುಳಿತಿದ್ದರು. ಮೀನಾಕ್ಷಮ್ಮನವರು ಬಡಿಸುವುದಕ್ಕೆ ನಿಂತರೆ ಸ್ವಯಂ ಅನ್ನಪೂರ್ಣಾದೇವಿಯೇ ನಿಂತಂತೆಯೇ ಸರಿ. ಒಂದೂಟ ಮಾಡುವವರ ಕೈಯಲ್ಲಿ ಮೂರು ಊಟವನ್ನು ಗಿಟ್ಟಿಸುತ್ತಿದ್ದರು. ವೆಂಕಟೇಶನಿಗೆ ಎರಡನೆಯ ಸಲ ಅನ್ನ ಬಲವಂತ ಮಾಡಿದಾಗ

"ಬೇಡಮ್ಮಾ—ಹಸಿವಿಲ್ಲ" ಎಂದ.

"ನನಗೂ ಹಸಿವಿಲ್ಲ, ಬೇಡಮ್ಮಾ" ಎಂದು ಲಕ್ಷ್ಮಣನೂ ಅಂದ.

"ಇದೇನ್ರೋ, ಹೀಗೆ ಮಾಡುತ್ತೀರಿ. ಇವತ್ತು ಮಧ್ಯಾಹ್ನ ತಿಂಡಿ ಕೂಡಾ ಇಲ್ಲ. ಹೀಗೆ ಅರೆಹೊಟ್ಟೆ ಊಟಮಾಡಿದರೆ ರಾತ್ರಿ ಒಂದು ಹೊತ್ತಿನಲ್ಲಿ ಹಸಿವು ಹತ್ತಿಕೊಳ್ಳುತ್ತದೆ, ನೋಡಿ"

ಎಂದು ಮೀನಾಕ್ಷಮ್ಮ ಉಪಚರಿಸಿದರು. ಎಲೆಯ ಮುಂದೆ ಕುಳಿತಿದ್ದ ರಾಮು ಈ ಅವಕಾಶ ತೆಗೆದುಕೊಂಡು

"ಹಸಿವು ಹೇಗಾಗಬೇಕು ? ಗಂಟು ಗಂಟು ಕೋಡುಬಳೆ, ಕಾಯಿ ಹುರಿಟ್ಟು, ಹುರಿಗಾಳು ಇರುವಾಗ. ಇಬ್ಬರು ರಾಯರೂ ಚೆನ್ನಾಗಿ ಹೊಡೆದು ಬಂದಿದ್ದಾರೆ" ಎಂದಂದ. ರಾಯರು ಸುಮ್ಮನಿರದೆ "ಏಕೆ, ನಿನಗೆ ಕೊಡಲಿಲ್ಲ ವೇನೊ, ಪಾಪ. ಅದಕ್ಕೇ ಚಾಡಿ ಹೇಳೋದಿಕ್ಕೆ ಹೊರಟೆ" ಎಂದು ಮೂದಲಿಸಿದರು. ರಾಮು ಮುಖ ತಗ್ಗಿಸಿ ಮುಂದಿನ ಊಟ ಸಾಗಿಸಿದ. ರಾಯರು ವೆಂಕಟೇಶನ ಕಡೆ ತಿರುಗಿ

"ಕೋಡುಬಳೆ, ಹುರಿಗಾಳು ಅಷ್ಟೊಂದಿದ್ದರೆ ನನಗಷ್ಟು ಕೊಡಯ್ಯಾ !" ಎಂದರು. ವೆಂಕಟೇಶನಿಗೆ ಏನು ಹೇಳಬೇಕೋ ತೋರದಾಯಿತು. ರಾಯರ ಸೌಜನ್ಯ ಹೊಸದಲ್ಲ. ಆದರೆ ಅವರು ಆಡುತ್ತಿದ್ದ ಪ್ರತಿ ಮಾತಿನಲ್ಲಿಯೂ ಸೌಜನ್ಯದ ಹೊಸ ಹೊಸ ಕಳೆಗಳು ಹೊರಸೂಸುತ್ತಿದ್ದವು.

"ಬಡವರ ಮನೇದು-ಎಣ್ಣೇದು-ದೊಡ್ಡವರ ತನಕ ಬರೋದಲ್ಲ" ಎಂದು ಬಹಳ ಕಷ್ಟದಿಂದ ಹೇಳಿ ಮುಗಿಸಿದ. ರಾಯರು ಊಟ ಮುಗಿದ ಕೂಡಲೆ ವೆಂಕಟೇಶನ ಎಣ್ಣೆ ಕೋಡುಬಳೆ, ಸೀದ ಹುರಿಗಾಳು ತರಿಸಿ ರುಚಿ ನೋಡಿ "ಭೇಷ್ ! ಸೊಗಸಾಗಿದೆಯಯ್ಯಾ" ಎಂದು ಹೇಳದೆ ಬಿಡಲೇ ಇಲ್ಲ.

೧೦

ವೆಂಕಟೇಶ ಇಂಟರ್‌ಮೀಡಿಯೆಟ್ ಕ್ಲಾಸಿಗೆ ಬರುವಷ್ಟರಲ್ಲಿ ಅವನಿಗೆ ಸಾಕಾಗಿಹೋಯಿತು. ರಾಮು-ಅವನು ಇಬ್ಬರೂ ಕಟ್ಟಿದರು. ರಾಮುವಿಗೆ ತೇರ್ಗಡೆಯಾಯಿತು. ವೆಂಕಟೇಶ ಡುಬ್ಬುಕಿ ಹೊಡೆದ. ಮಾರನೆಯ ವರ್ಷ ಕಟ್ಟಿದ. ಆಗಲೂ ಹಾಗೇ ಆಯಿತು. 'ಇನ್ನೊಂದು ವರ್ಷ ನೋಡುವುದು. ತೇರ್ಗಡೆಯಾದರೆ ಮುಂದೆ ಓದುವುದು. ಇಲ್ಲದಿದ್ದರೆ ಸ್ಕೂಲಿಗೆ ದೊಡ್ಡ ನಮಸ್ಕಾರ ಹಾಕಿಬಿಡುವುದು' ಎಂದು ನಿರ್ಣಯಿಸಿಕೊಂಡ. ಆ ವರ್ಷ ರಾಮು ಡಿಗ್ರಿ ಪರೀಕ್ಷೆಗೆ ಕಟ್ಟಿದ. ಯಥಾಪ್ರಕಾರ ರಾಮು ತೇರ್ಗಡೆಯಾದ, ವೆಂಕಟೇಶ ನಿಂತಲ್ಲಿಯೇ ನಿಂತ.

"ಬಿಟ್ಟೆ ಕೂಳು ಸಿಕ್ಕತ್ತೇಂತ ಷೋಕಿ ಮಾಡುತ್ತಾ ಇದ್ದರೆ ವಿದ್ಯೆ ಬರುತ್ತದೆಯೆ ?" ಎಂದು ರಾಮು ಮೂದಲಿಸದೆ ಬಿಡಲೇ ಇಲ್ಲ.

ಮುಂದೆ ರಾಮು ಪುಣೆಗೆ ಹೋಗಿ ಎಲ್‌ಎಲ್.ಬಿ. ಓದುವುದೆಂದು ನಿಶ್ಚಯವಾಯಿತು.

ಮೀನಾಕ್ಷಮ್ಮನವರ ಮನಸ್ಸಿನಲ್ಲಿ ಒಂದು ದೊಡ್ಡ ಚಿಂತೆ. ಗಂಡನಿಗೆ ಆ ವಿಷಯ ಎಷ್ಟು ಸಲ ಹೇಳಿದರೂ ಅವರು ಕಿವಿಯ ಮೇಲೇ ಹಾಕಿಕೊಳ್ಳುತ್ತಿರಲಿಲ್ಲ. ಶಾಂತನಿಗೆ ಹದಿನಾರು ತುಂಬುತ್ತ ಬಂದಿದ್ದರೂ ಅವಳ ಮದುವೆಯ ಏರ್ಪಾಟನ್ನೇ ರಾಯರು ಯೋಚಿಸಿರಲಿಲ್ಲ. ಮೀನಾಕ್ಷಮ್ಮನವರು ಪ್ರಸ್ತಾಪವನ್ನೆತ್ತಿದರೆ

"ನೀನು ನಿಶ್ಚಿಂತಳಾಗಿರು. ನಾನು ಎಲ್ಲಾ ವ್ಯವಸ್ಥೇನೂ ಮಾಡಿದ್ದೇನೆ" ಎಂದು ಹೇಳಿ ಮುಗಿಸುತ್ತಿದ್ದರು. ಶಾಮಣ್ಣನವರಿಗೆ ತಿಳಿಸಿ ರಾಯರಿಗೆ ಹೇಳಿಸಿ ನೋಡಿದರು. ಅವರಿಗೂ ಅದೇ ಉತ್ತರ ಬಂತು. ಮೀನಾಕ್ಷಮ್ಮನವರು ಒಂದು ದಿವಸ ಚಂಡಿಹಿಡಿದುಬಿಟ್ಟರು.

"ಇದೇನೂಂದ್ರೆ ಹೀಗೆ ಮಾಡ್ತೀರಿ. ಶಾಂತನಿಗೆ ಹದಿನಾರು ತುಂಬೋ ಹೊತ್ತು ಬಂತು. ಇನ್ನೂ ಮದುವೆಯನ್ನು ಮುಂದೆ ತಳ್ಳುತ್ತಾ ಹೋದರೆ ಹೇಗಾಗುತ್ತೆ. ಜನ ಈಗಲೇ ಆಡಿಕೊಳ್ಳೋದಿಕ್ಕೆ ಆರಂಭಿಸಿದ್ದಾರೆ."

"ಆಡಿಕೊಂಡರೆ ಆಡಿಕೊಳ್ಳಲಿ ಬಿಡು. ನಮ್ಮ ಮಗೂ ಯೋಗಕ್ಷೇಮಕ್ಕೆ ಕಂಡವರು ಹೊಣೆಯೇ ? ಹುಡುಗಿ ಬೆಳೆದಿದ್ದಾಳೆ ಎಂದು ಕರುಡನಿಗೋ ಕುಂಟನಿಗೋ ಕಟ್ಟೋದಿಕ್ಕಾಗುತ್ತದೆಯೇ ? ಸರಿಯಾದ ವರ ಸಿಕ್ಕಿದ ಕೂಡಲೆ ಲಗ್ನ ಮಾಡೋಣ."

"ನೀವು ವರನನ್ನು ಹುಡುಕದೇನೇ ಇದ್ದರೆ ಸಿಕ್ಕೋ ಒಗೆ ಹೇಗೆ ಹೇಳಿ. ಇನ್ನೂ ರಾಮು ಮದುವೆ ಆಗಬೇಕು—ಲಚ್ಚಿ ಮದುವೆ ಆಗಬೇಕು—ವೆಂಕಟೇಶನದು ಆಗಬೇಕು. ಶಾಂತನದೇ ಮುಗಿಸದೆ ಸುಮ್ಮನೆ ಕುಳಿತಿದ್ದರೆ...."

"ನನ್ನ ಏನು ಮಾಡೂಂತೀ ?"

"ಎದ್ದು ಚಟುಪಟಿಕೆಯಿಂದ ಓಡಾಡಿ ಒಂದು ಗಂಡು ಗೊತ್ತುಮಾಡಿ ಅನ್ನುತ್ತೇನೆ"

"ಹಿಂದಿನ ಅನುಭವ ಮರೆತೆಯೇನು ?"

"ಸರಿ. ಊರೆಲ್ಲಾ ಹಾಗೆಯೇ ಇರುತ್ತದೆಯೇ ?"

ಹಿಂದಿನ ಅನುಭವವಾಗಿ ಮೂರು ವರ್ಷವಾಗಿತ್ತು. ರಾಯರು ತಮ್ಮ ಕಡೆಯವರೊಬ್ಬರಲ್ಲಿ ಪ್ರಸ್ತಾಪ ಮಾಡಿದ್ದರು. ಹುಡುಗ ಆಗತಾನೆ ಬಿ.ಎಸ್‌ಸಿ.

ಮೊದಲನೆಯ ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದ. ಲಕ್ಷಣವಾಗಿದ್ದ, ವಿದ್ಯಾವಂತನಾಗಿದ್ದ ಎಂದು ರಾಯರು ಸ್ವಯಂ ಅವನನ್ನು ಕರೆಸಿ ಮಾತನಾಡಿ ಒಪ್ಪಿಗೆ ಪಡೆದಿದ್ದರು. ಆದರೆ ಹುಡುಗ ಒಂದು ಮಾತು ಹೇಳಿದ್ದ. 'ನನ್ನ ತಂದೆ-ತಾಯಿ ಒಪ್ಪಬೇಕು. ಅವರು ಒಪ್ಪಿದರೆ ಆಗಬಹುದು' ಎಂದು.

ರಾಯರು ತಾವೇ ಖರ್ಚು ಕೊಟ್ಟು ತಂದೆತಾಯಿಗಳನ್ನು ಕರೆಸಿಕೊಂಡರು. ಅವರಿಗೆ ರಾಜೋಪಚಾರವಾಯಿತು. ತಂದೆ-ತಾಯಿ ಹೆಣ್ಣನ್ನು ಸಾಕಷ್ಟು ಪರೀಕ್ಷೆ ಮಾಡಿದ್ದೂ ಆಯಿತು. ಹಾಡಿಸಿ ನೋಡಿದರು, ಓದಿಸಿ ನೋಡಿದರು, ನಡೆಸಿ ನೋಡಿದರು. ಸೂಜಿದಾರ ಕೊಟ್ಟು ಪೋಣಿಸಿ ನೋಡಿ ಕಣ್ಣು ಚೆನ್ನಾಗಿದೆಯೆಂದು ಧೈರ್ಯಮಾಡಿಕೊಂಡರು. ಪಾಪ! ವರನ ತಂದೆ ಮೊದಲೇ ಒಪ್ಪಿಗೆ ಕೊಟ್ಟುಬಿಟ್ಟರು. ವರನ ತಾಯಿ 'ಆಗಲಿ. ಯೋಚನೆ ಮಾಡಿ ಊರಿನಿಂದ ಕಾಗದ ಬರೆಯುತ್ತೇವೆ. ಕೊಡೋದು ತೆಗೆದುಕೊಳ್ಳೋದು ಹೇಳಿದ್ದರೆ ಆಗಿತ್ತು' ಎಂದರು.

'ನಾಲ್ಕು ಸೇರು ಭಂಗಾರ ಇಡುತ್ತೇವೆ. ವರನಿಗೆ ಕೊಡಬೇಕಾದ ಬೆಳ್ಳಿ ತಟ್ಟೆ, ಚಂಬು, ಲೋಟ, ಉದ್ಧರಣೆ, ಚಿನ್ನದ ಉಂಗುರ, ಬಟ್ಟೆಬರೆ ಎಲ್ಲಾ ಕೊಡುತ್ತೇವೆ. ಕೊಡೋದು ಬಿಡೋದು ನಿಮ್ಮ ಇಷ್ಟ. ನಿಮ್ಮ ಸೊಸೆಗೆ ನೀವು ಬೇಕಾದ್ದು ಕೊಡಬಹುದು.'

ಎಂದು ಮೀನಾಕ್ಷಮ್ಮನವರು ಹೇಳಿದ್ದರು. ಉಪಚಾರವೆಲ್ಲಾ ಮಾಡಿಸಿಕೊಂಡು, ಔತಣದೂಟವನ್ನು ಹೊಡೆದು, ರಾಯರ ಖರ್ಚಿನಲ್ಲಿ 'ಟ್ಯಾಕ್ಸಿ' ಮಾಡಿಕೊಂಡು ಊರೆಲ್ಲಾ ಸುತ್ತಿ ಕೊನೆಗೆ ತಮ್ಮ ಊರು ತಲುಪಿದಮೇಲೆ

'ನಮ್ಮ ಹುಡುಗ ಪ್ರೌಢವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋಗಬೇಕೆಂದಿದ್ದಾನೆ. ನೀವು ಅದಕ್ಕೆ ೧೦,೦೦೦ ರೂ.ಗಳನ್ನು ಕೊಡುವುದಾದರೆ ನಿಮ್ಮ ಸಂಬಂಧ ಬೆಳೆಸಲು ಅಡ್ಡಿಯಿಲ್ಲ. ವರನಿಗೂ ವಧುವಿಗೂ ಕೊಡುವುದರಲ್ಲಿ ಯಾವದನ್ನೂ ಕಡಿಮೆ ಮಾಡಲಾಗದು'

ಎಂದು ಕಾಗದ ಬರೆದುಬಿಟ್ಟರು. ರಾಯರು ರೇಗಿ ಅಂದಿನಿಂದ 'ವರಾನ್ವೇಷಣೆ'ಯನ್ನೇ ಬಿಟ್ಟುಬಿಟ್ಟಿದ್ದರು. ಶಾಂತನಿಗೆ ಗಂಡು ಗೊತ್ತಾಗುವ ತನಕ ವರಾನ್ವೇಷಣೆ ತಪ್ಪಿದ್ದಲ್ಲ. ಮೀನಾಕ್ಷಮ್ಮನವರ ಒತ್ತಡವೂ ಹೆಚ್ಚಾಯಿತು.

"ಗಂಡು ಗೊತ್ತಾಗದೇ ಇದ್ದರೆ ನಾನಿಷ್ಟು ನಿಶ್ಚಿಂತೆಯಿಂದ ಇರುತ್ತಿದ್ದೇನೇ, ಮೀನಾ!" ಎಂದರು ರಾಯರು.

"ಯಾರೂಂದ್ರೆ? ಹೇಳಾದರೂ ಹೇಳಬಾರದೇ?"

"ನಾನು ಹೇಳಿದರೆ ನೀನು ಒಪ್ಪುತ್ತೀಯೋ, ಮತ್ತೆ ಅವರಿವರ ಕಾಲು

ಹಿಡಿಯೋದಕ್ಕೆ ಕಳುಹಿಸುತ್ತೀಯೋ ?"

"ಏನು ಮಾಡಿದರೂ ನಮ್ಮ ಮಗಳಿಗೋಸ್ಕರವೇ ಅಲ್ಲವೇಂದ್ರೆ ಹೇಳಿ. ಅದು ಯಾವ ವರ ?"

"ಮನೆಯಲ್ಲಿ ಬೆಣ್ಣೆಯಿಟ್ಟುಕೊಂಡು ತುಪ್ಪಕ್ಕೆ ಸಾಲಕ್ಕೆ ಹೋದರು ಅಂದ ಹಾಗಾಯಿತಲ್ಲೇ ನಮ್ಮ ವಿಚಾರ. ನಮ್ಮ ವೆಂಕಟೇಶ ಏನಾಗಿದ್ದಾನೆ ?"

"ಅಯ್ಯೋ! ನನಗೂ ಆ ಯೋಚನೆ ಹಿಂದೆ ಬಂತೂಂದ್ರೆ. ನಾನು ಹೇಳೋದನ್ನೇ ಮರೆತೆ. ದಿವ್ಯವಾದ ಹುಡುಗ. ನನಗಂತೂ ತುಂಬ ಒಪ್ಪಿಗೆ. ಅವನನ್ನು ಕೇಳಿ ನೋಡಿದ್ದೀರಾ ?"

"ಅವನು ಒಪ್ಪಬಹುದು."

"ಅವನ ಕಡೆಯವರೋ ? ಹಿಂದೆ ಆದ ಹಾಗೆ ಆದರೋ ?"

"ಆ ಭಯವೇನೂ ಇಲ್ಲ. ನಾನು ಸುಂದರರಾಯರಲ್ಲಿ ಪ್ರಸ್ತಾಪ ಮಾಡಿದೆ. ಅವರು ನಂಜುಂಡಯ್ಯನನ್ನು ಕರೆಸಿ ನನ್ನೆದುರಿಗೇ ಹೇಳಿದರು. ಆತನೂ ಸಂತೋಷವಾಗಿ ಒಪ್ಪಿದ. ಇನ್ನು ಹುಡುಗನನ್ನು ಒಪ್ಪಿಸೋದು ನಿನ್ನ ಭಾರ."

"ಅಲ್ಲಾಂದ್ರೆ. ಇಷ್ಟು ಮಾಡಿದವರು ನನಗೆ ಒಂದೂ ಹೇಳಲೇಬೇಡವೇ ? ನೀವು ಈಚೆಗೆ ಬಹಳ ಕೆಟ್ಟುಹೋದಿರೀಂದ್ರೆ. ತಡೀರಿ, ಭೀಮರಾಯರೂ ಸುಂದರರಾಯರೂ ಬರಲಿ ನಿಮಗೆ ಮಂಗಳಾರತಿ ಮಾಡಿಸುತ್ತೇನೆ"

ಎಂದು ನಕ್ಕರು. ರಾಯರೂ ನಕ್ಕರು.

ಅಂದೇ ರಾತ್ರಿ ಊಟಮಾಡಿ ವೆಂಕಟೇಶ, ಲಕ್ಷ್ಮಣ ಇಬ್ಬರೂ ಲಕ್ಷ್ಮಣನ ಕೋಣೆಯಲ್ಲಿ ಓದುತ್ತಾ ಕುಳಿತಿದ್ದರು. ಮೀನಾಕ್ಷಮ್ಮನವರು ಮೆಲ್ಲನೆ ಪ್ರವೇಶಿಸಿ

"ಓದುತ್ತಾಯಿದ್ದೀರಾ ?"

"ಬನ್ನಿ ತಾಯಿ"

ಎಂದು ಎದ್ದು ವೆಂಕಟೇಶ ಚಾಪೆಯನ್ನು ಹಾಸಿದ. ಮೀನಾಕ್ಷಮ್ಮನವರು ಕುಳಿತುಕೊಂಡು

"ನೀನೂ ಕುಳಿತುಕೋ, ವೆಂಕಟೇಶೂ. ನಿನ್ನಲ್ಲೇ ಒಂದು ಮಾತು ಆಡಬೇಕಾಗಿತ್ತು, ಬಂದೆ."

"ಹೇಳಿ ತಾಯಿ."

"ನನ್ನದೊಂದು ಕೋರಿಕೆಯಿದೆಯಪ್ಪಾ. ನೀನು ದೊಡ್ಡ ಮನಸ್ಸುಮಾಡಿ ನಡೆಸಿಕೊಡಬೇಕು."

"ತಾಯಿ, ನೀವು ಹೀಗೆ ಮಾತನಾಡಬಾರದು. ನನಗೆ ಅದರಿಂದ ಅಶ್ರೇ

ಯಪ್ಪ. ಕೋರಿಕೆಯೆಂದು ಏತಕ್ಕನ್ನುವಿರಮ್ಮಾ, ಆಜ್ಞೆಯೆನ್ನಿ."

"ವೆಂಕಟೇಶೂ, ನೀನು ಇದುವರೆವಿಗೂ ಹಾಗೇ ನಡೆದುಕೊಂಡು ಬಂದಿದ್ದೀ. ನಮ್ಮ ರಾಮು, ಲಚ್ಚಿ, ಗೋಪೂ, ಬೇರೆಯಲ್ಲ, ನೀನು ಬೇರೆಯಲ್ಲ." ಮುಂದೆಯೂ ಹಾಗೆ ಇರಬೇಕೂಂತ ನನ್ನ ಅಭಿಲಾಷೆಯಪ್ಪಾ."

"ಅದರಲ್ಲಿ ಸಂಶಯವೇ ಇಲ್ಲವಮ್ಮಾ. ವೆಂಕಟೇಶೂ ನನಗೆ ನಿಜವಾದ ಅಣ್ಣನ ಹಾಗಿದ್ದಾನೆ. ಹೇಳಬೇಕಾದದ್ದನ್ನು ಹೇಳಮ್ಮಾ"

ಎಂದು ಲಕ್ಷ್ಮಣನೂ ಸೇರಿಸಿದ.

"ನೋಡು ವೆಂಕಟೇಶೂ. ಶಾಂತನಿಗೆ ಹದಿನಾರು ತುಂಬುತ್ತ ಬಂತು. ಈ ವರ್ಷ ಮದುವೆ ಮಾಡಬೇಕೂಂತ ನಿಶ್ಚಯಿಸಿದ್ದೇವೆ. ನೀನು ಒಪ್ಪುವು ದಾದರೆ ನಿನಗೆ ಕೊಟ್ಟು ಲಗ್ನ ನೆರವೇರಿಸಬೇಕೆಂದು ಉದ್ದೇಶವಿದೆಯಪ್ಪಾ."

ಲಕ್ಷ್ಮಣನೂ ಚಕಿತನಾದ. ತಾಯಿ ಇದನ್ನು ಹೇಳಿಯಾರು ಎಂದು ಅವನು ನಿರೀಕ್ಷಿಸಿರಲಿಲ್ಲ. ಅವನ ಎದೆ ಉದ್ವೇಗದಿಂದ ಹೊಡೆದುಕೊಳ್ಳ ಲಾರಂಭಿಸಿತು. ವೆಂಕಟೇಶ ಏನು ಹೇಳುವನೋ? ಒಲ್ಲೆನೆಂದರೆ....ಇಂದಿನ ಮೈತ್ರಿ ಮುಗಿದುಹೋಗುವುದಲ್ಲಾ!

ವೆಂಕಟೇಶ ಸ್ವಲ್ಪ ಹೊತ್ತು ಯೋಚಿಸಿ

"ರಾಯರು ಏನಂದರು, ತಾಯಿ?"

"ಸಂತೋಷವಾಗಿ ಒಪ್ಪಿದರಪ್ಪಾ. ಈ ಸೂಚನೆ ಬಂದದ್ದೇ ಅವರಿಂದ."

"ಅಮ್ಮಾ, ನನಗೆ ದೊಡ್ಡವರು, ಹಿರಿಯರು ಎಲ್ಲಾ ನೀವೇ. ನೀವು ಹೇಗೆ ನಿಶ್ಚಯಿಸಿದರೆ ಹಾಗೆ ನಾನು ಮಾಡಲು ಸಿದ್ಧನಾಗಿದ್ದೇನೆ. ನಿಮ್ಮ ಸಂಬಂಧ ಕ್ಕಿಂತಲೂ ಹೆಚ್ಚಿನ ಸೌಭಾಗ್ಯ ನಾನೇನು ಕೋರಲಿ?"

ಎಂದು ಹೇಳಿದ. ಮೀನಾಕ್ಷಮ್ಮ, ಲಕ್ಷ್ಮಣ ಇಬ್ಬರ ಕಣ್ಣುಗಳಲ್ಲಿ ಆನಂದ ಬಾಷ್ಪಗಳುದುರಿದವು.

"ನೂರು ವರ್ಷ ಬಾಳು, ಕಂದಾ!"

ಎಂದು ಮೀನಾಕ್ಷಮ್ಮನವರು ಹರಸಿದರು. ವೆಂಕಟೇಶ ಲಕ್ಷ್ಮಣನ ಕಡೆ ತಿರುಗಿ

"ಆದರೆ....ಒಂದು ಷರತ್ತಪ್ಪಾ."

"ಏನಪ್ಪಾ ಷರತ್ತು? ಹೊಸದಾಗಿ ಏನೋ ಹುಟ್ಟಿಹಾಕಿದೆಯಲ್ಲಾ. ಅಮ್ಮಾ ಎದ್ದು ಹೋಗೋದಕ್ಕೇ ಕಾದಿದ್ದೆಯೋ? ಹೇಳು."

"ನನ್ನ ಮದುವೆಯಲ್ಲಿ ನೀನು ಹಾಡುವ ಹಾಗಿದ್ದರೆ ನಾನು ಒಪ್ಪುತ್ತೇನೆ."

ಲಕ್ಷ್ಮಣನಿಗೆ ಸ್ವಲ್ಪ ಕಷ್ಟಕ್ಕೆ ಬಂದಿತು.

"ಹಾಡುತ್ತೇನೆ. ಮದುವೆಮನೆಯಲ್ಲಿ ಬೇಡ, ವೆಂಕೂ. ನೀನೂ ಶಾಂತಾ ಕುಳಿತುಕೊಳ್ಳಿ. ದಿನಾ ಹಾಡುತ್ತೇನಪ್ಪಾ. ಸರಿಯೆ ?"

"ಉಹೂ, ಅದೆಲ್ಲಾ ಆಗೋದಿಲ್ಲ. ಮದುವೆ ಮನೆ ಕಛೇರಿ ನಿನ್ನದೇ ಆಗಬೇಕು. ನನ್ನ ಭಾವ ಎಂತಹ ವಿದ್ವಾಂಸ ಎಂದು ಎಲ್ಲರಿಗೂ ಗೊತ್ತಾಗ ಲಯ್ಯಾ. ಅದರಿಂದ ನನಗೂ ಒಂದು ಪ್ರತಿಷ್ಠೆ ಬರುತ್ತೆ !"

"ಆಗಲಪ್ಪಾ. ಹಾಡುತ್ತೇನೆ"

ಎಂದು ಲಕ್ಷ್ಮಣ ಒಪ್ಪಿಗೆಯನ್ನಿತ್ತ.

೧೧

ಲಗ್ನವೂ ನಿಷ್ಕರ್ಷೆಯಾಯಿತು. ಸಾಧ್ಯವಾದರೆ ನಾಲ್ಕು ದಿವಸದ ಮಟ್ಟಿಗೆ ಬಂದು ಹೋಗು ಎಂದು ರಾಯರು ಮಗನಿಗೆ ಪುಣೆಗೆ ಪತ್ರ ಬರೆದರು. "ನಾಲ್ಕು ದಿವಸವೆಂದರೆ ಹೋಗುವುದು ಬರುವುದು ಸೇರಿ ಎಂಟು ಹತ್ತು ದಿವಸಗಳು ಹೋಗಿಬಿಡುತ್ತವೆ. ನಾನು ಈಗ ಬರುವುದಕ್ಕಾಗುವುದಿಲ್ಲ" ಎಂದು ರಾಮು ಉತ್ತರ ಬರೆದು ಕೊನೆಯಲ್ಲಿ "ಈ ಸಂಬಂಧದ ವಿಚಾರವಾಗಿ ನನ್ನನ್ನೂ ಒಂದು ಮಾತು ಕೇಳಿದ್ದರೆ ಚೆನ್ನಾಗಿತ್ತು" ಎಂದು ಬರೆದಿದ್ದ. ರಾಯರು ಸಾವಿತ್ರಮ್ಮನಿಗೆ ಕಾಗದ ತೋರಿಸಿ

"ನಮ್ಮ ಮಕ್ಕಳು ಕಷ್ಟಸುಖಕ್ಕೆ ಆಗುತ್ತಾರೆ ಎಂದು ಬಯಸುತ್ತೇವೆ. ಅವರು ನಮ್ಮ ಮೇಲೆ 'ಕೋಗಿಲ್ ಭರ್ತಿ' ಮಾಡುತ್ತಾರೆ" ಎಂದು ನೊಂದು ನುಡಿದಿದ್ದರು.

ಲಕ್ಷ್ಮಣನ ಸಂತೋಷಕ್ಕಂತೂ ಪಾರವೇ ಇಲ್ಲ. ಮದುವೆಯಾಗಿ ಶಾಂತಾ ಯಾರದೋ ಮನೆಗೆ ಹೊರಟು ಹೋಗುತ್ತಾಳಲ್ಲಾ ಎಂದು ಎಷ್ಟೋ ಬಾರಿ ಯೋಚಿಸಿದ್ದ. ಈಗ ಅದು ತಪ್ಪಿದ ಹಾಗಾಯಿತು. ಅಲ್ಲದೆ ಅವಳು ಕೈಹಿಡಿ ಯುತ್ತಿದ್ದುದು ತನ್ನ ವಿಶ್ವಾಸಪಾತ್ರನಾದ ಗೆಳೆಯ ವೆಂಕಟೇಶನ ಕೈಯನ್ನೇ.

ಗೋಪಾಲಿಯ ಉತ್ಸಾಹಕ್ಕಂತೂ ಕೊನೆಯೇ ಇಲ್ಲ. ವೆಂಕಟೇಶನ ಹೆಸರು ಹೇಳಿದೊಡನೆಯೇ ಶಾಂತಾ ಪ್ರಕಟಿಸುತ್ತಿದ್ದ ನಾಚಿಕೆಯನ್ನು ಅಣಕಿಸಿ ವಿನೋದ ಮಾಡುವುದರಲ್ಲಿ ಗೋಪಾಲಿ ಅಗ್ರಗಾಮಿಯಾಗಿದ್ದ. ಮೀನಾಕ್ಷಮ್ಮ ನವರು ಒಂದು ಸಲ

"ರಾಮುನೂ ಇದ್ದಿದ್ದರೆ ಚೆನ್ನಾಗಿತ್ತು, ಅವನಿಲ್ಲದಿರುವುದು ಮನೆ ಬಿಕೋ ಎನ್ನುತ್ತದೆ" ಎಂದು ಹೇಳಿದಾಗ ಗೋಪಾಲಿ

"ಅವನು ಇಲ್ಲದಿರುವುದೇ ಒಳ್ಳೆಯದಾಯಿತು. ಸುಮ್ಮನಿರು, ದೊಡ್ಡಮ್ಮ.

ಸಂತೋಷ ಸಮಯದಲ್ಲಿ ಅವನದು ಏನಾದರೂ ರಾಮಾಯಣ ಇದ್ದೇ ಇರುತ್ತಿತ್ತು. ಯಾರ ಕಣ್ಣಿನಲ್ಲಿಯಾದರೂ ನೀರು ತರಿಸದೇ ಇದ್ದರೆ ಅವನಿಗೆ ಸಮಾಧಾನವೇ ಆಗುತ್ತಿರಲಿಲ್ಲ"

ಎಂದು ಖಂಡಿತವಾಗಿ ನುಡಿದುಬಿಟ್ಟಿದ್ದ.

ಮದುವೆ ವಿಜೃಂಭಣೆಯಿಂದ ನೆರವೇರಿತು. ಗಂಡಿನ ಕಡೆಯುವರು ಬಹಳ ಜನವಿರಲಿಲ್ಲ. ಅವರು ಬಡವರೆಂದು ರಾಯರು ತಾತ್ಸಾರ ಮಾಡಲಿಲ್ಲ. ಶ್ರೀಮಂತ ಬೀಗರು ಸಿಕ್ಕಿದರೆ ಎಷ್ಟು ಔದಾರ್ಯದಿಂದ-ವಿಧಿಯಿಲ್ಲದೆ ವರ್ತಿಸುತ್ತಿದ್ದರೋ ಅಷ್ಟೇ ಔದಾರ್ಯದಿಂದ-ಮನಃಪೂರ್ವಕವಾಗಿ ವರ್ತಿಸಿದರು. ಎಂಟು ದಿವಸವೂ ಒಂದೇ ಸಮನಾಗಿ ಉತ್ಸವ ನಡೆಯಿತು. ಊಟ ಉಪಚಾರ, ತಿಂಡಿತೀರ್ಥ ಯಾವದರಲ್ಲೂ ಕೊರತೆ ಇರಲಿಲ್ಲ. ಸುಂದರರಾಯರು, ಭೀಮರಾಯರು ಕೆಲಸಗಳನ್ನು ಹಂಚಿಕೊಂಡು ಮನೆಯುವರಿಗಿಂತಲೂ ಹೆಚ್ಚು ಉತ್ಸಾಹದಿಂದ ದುಡಿದರು.

ಧಾರೆ ಚಪ್ಪರದಲ್ಲಿಯೇ ಅದೇ ಸಂಜೆ ಲಕ್ಷ್ಮಣನ ಸಂಗೀತ ಕಛೇರಿ ಏರ್ಪಾಡಾಗಿತ್ತು. ಊರಿನ ದೊಡ್ಡ ಮನುಷ್ಯರು, ಮಹಿಳೆಯರು ಬಂದು ನೆರೆದಿದ್ದರು. ಸುಂದರರಾಯರೂ ಭೀಮರಾಯರೂ ಕರಿಯ ನಿಲುವಂಗಿ ಧರಿಸಿ, ಸ್ವಾಗತಿಸಿದ್ದ ಅತಿಥಿಗಳನ್ನು ಮರ್ಯಾದೆಯಿಂದ ಬರಮಾಡಿಕೊಳ್ಳುತ್ತಿದ್ದರು.

ಲಕ್ಷ್ಮಣನ ಸಹಪಾಠಿಗಳೇ ಪಕ್ಕವಾದ್ಯಗಳಿಗೆ ಕುಳಿತಿದ್ದರು. ಅನಂತಾಚಾರ್ಯರ ಶಿಷ್ಯರಲ್ಲಿ ಪುಟ್ಟಯ್ಯ ಪಿಟೀಲಿಗೂ. ರಂಗಪ್ಪ ಮೃದಂಗಕ್ಕೂ ಹೆಸರಾಗಿದ್ದರು. ಲಕ್ಷ್ಮಣನ ಕಛೇರಿಗೆ ನುಡಿಸುವ ಅವಕಾಶ ಸಿಕ್ಕಿತಲ್ಲಾ ಎಂದು ಸಂತೋಷದಿಂದ ಒಪ್ಪಿದ್ದರು. ಭೈರವಿ ವರ್ಣವಾಯಿತು. ಒಂದೆರಡು ಸಣ್ಣ ಕೀರ್ತನೆಗಳಾದವು. ಅತಿಥಿಗಳು ತಾಂಬೂಲವನ್ನು ತೆಗೆದುಕೊಂಡು ಬಂದ ಎರಡು ಮೂರು ನಿಮಿಷಗಳಲ್ಲಿಯೇ ಹೊರಟು ಹೋಗುವುದು ಪದ್ಧತಿಯಾದರೂ ಒಬ್ಬರೂ ಸ್ಥಳ ಬಿಡುವ ಸಂಭವವೇ ಕಾಣಬರಲಿಲ್ಲ. ಕೀರ್ತನೆಗಳನ್ನು ಹಾಡುವಾಗಲೇ ಹರಿಕಾಂಭೋದಿ, ಖರಹರಪ್ರಿಯ ಎರಡು ರಾಗಗಳನ್ನೂ ಲಕ್ಷ್ಮಣ ಹಾಡಿ ತೋರಿಸಿದ್ದ. ವಿಸ್ತಾರವಾದ ರಾಗಾಲಾಪನೆಗೆ ತೋಡಿಯನ್ನು ಎತ್ತಿಕೊಂಡ. ಒಂದನೆಯ ಕಾಲ ಮುಗಿಯುವ ಹೊತ್ತಿಗೆ ರಾತ್ರಿ ೯ ಗಂಟೆಯ ದೀಪ ಮಿನುಗಿತು. ಎರಡನೆಯ ಮೂರನೆಯ ಕಾಲಗಳನ್ನು ಅಷ್ಟು ವಿಸ್ತಾರ ಮಾಡದೆ ಹಾಡಿ ಮುಗಿಸಿದ.

ಬಂದಿದ್ದ ಅತಿಥಿಗಳಿಗೆ ಗಾಯಕ ರಾಯರ ಎರಡನೆಯ ಮಗನೆಂದು ತಿಳಿದ ಮೇಲಂತೂ ಅವರ ಆಶ್ಚರ್ಯ ಹೇಳತೀರದು. ಉರುಟಣೆ ಔಪಾಸನೆಗಳಿಗೆ

ಹೊತ್ತಾಗುವುದೆಂದು ಪುರೋಹಿತರು ಚಡಪಡಿಸಿದರು. ಒಂದೆರಡು ದೇವರ ನಾಮುಗಳನ್ನು ಹಾಡಿ ಲಕ್ಷ್ಮಣ ಕಛೇರಿ ಮುಗಿಸಿದ.

ಕಛೇರಿ ಮುಗಿದಮೇಲೆ ಸುಂದರರಾಯರು ಗಂಧ, ಹಾರ, ತಾಂಬೂಲ ಗಳನ್ನು ಮೂವರು ವಿದ್ವಾಂಸರಿಗೂ ಅರ್ಪಿಸಿದರು. ಲಕ್ಷ್ಮಣನಿಗೆ ತಾವೇ ಹಾರ ಹಾಕುತ್ತಾ

"ಲಕ್ಷ್ಮಣಾ, ಏನು ಅಮೋಘವಾಗಿ ಹಾಡಿದೆಯಪ್ಪಾ. ಸಾಕ್ಷಾತ್ ವಿದ್ಯಾಭಿಮಾನಿದೇವತೆಯೇ ನಿನ್ನಲ್ಲಿ ಬಂದು ನೆಲಸಿದ್ದಾಳೆ. ದೇವರು ನಿನಗೆ ಇನ್ನೂ ವಿದ್ಯೆ, ಆಯುಸ್ಸು, ಸಂಪತ್ತು ಎಲ್ಲಾ ಕೊಟ್ಟು ಕಾಪಾಡಲಪ್ಪಾ" ಎಂದು ಹರಸಿದರು. ಶಾಮಣ್ಣನವರು ಬುರುಕಿ ಹಾಕಿದ ಒಂದು ತಂಬೂರಿ ಯನ್ನು ಸುಂದರರಾಯರ ಕೈಗೆ ಕೊಟ್ಟರು. ಸುಂದರರಾಯರು ಬುರುಕಿ ತೆಗೆದು ತಂಬೂರಿಗೆ ಅರಿಶಿನ ಕುಂಕುಮ ಹಚ್ಚಿ ಹೂವು ಸುತ್ತಿ

"ಇದಕ್ಕೆ ನಿನಗಿಂತಲೂ ಹೆಚ್ಚು ಹಕ್ಕುದಾರರು ಯಾರೂ ಇಲ್ಲ, ಲಕ್ಷ್ಮಣ. ಇದು ದೊಡ್ಡ ವಿದ್ವಾಂಸರಿಂದ ಸೇವೆ ಸ್ವೀಕರಿಸಿದೆ. ಈಗ ತನ್ನ ಯೋಗ್ಯತೆಗೆ ಸರಿಯಾದ ಹಸ್ತ ಸೇರುತ್ತಾ ಇದೆ, ತೆಗೆದುಕೋ"

ಎಂದು ಕೊಟ್ಟರು. ಲಕ್ಷ್ಮಣ ಅದನ್ನು ಕಣ್ಣಿಗೆ ಒತ್ತಿಕೊಂಡು ತನ್ನ ತೀರ್ಥರೂಪರಿಗೂ ಮಾತೃಶ್ರೀಗಳಿಗೂ ನಮಸ್ಕಾರಮಾಡಿ ಬಂದು ಸುಂದರ ರಾಯರಿಗೂ ಶಾಮಣ್ಣನವರಿಗೂ ಭೀಮರಾಯರಿಗೂ ನಮಸ್ಕರಿಸಿದ. ಎಲ್ಲರೂ ತರುಣ ಗಾಯಕನನ್ನು ಮನದಣಿಯ ಆಶೀರ್ವದಿಸಿದರು. ವೆಂಕಟೇಶ ಪ್ರೇಮ ದಿಂದ ಭಾವನನ್ನು ಬಿಗಿದಪ್ಪಿದ. ಅವನ ಹೃದಯದಲ್ಲಿ ಬಹಳ ಮಾತಿತ್ತು ; ಬಾಯಲ್ಲಿ ಒಂದೂ ಹೊರಡದಾಯಿತು. ಶಾಂತಾ ಕತ್ತೆತ್ತಿ ಅಣ್ಣನನ್ನು ನೋಡಿ ದಳು. ಲಕ್ಷ್ಮಣ ಮೆಲ್ಲನೆ ತಂಗಿಯ ಗಲ್ಲವನ್ನು ನೇವರಿಸಿದಾಗ ಅವನ ಕೈ ತುಸು ನೆನೆಯಿತು.

ಬೀಗರ ಔತಣವೂ ಮುಗಿಯಿತು. ಆಂದೇ ರಾಯರು ಎಲ್ಲರಿಗೂ ಉಡು ಗೊರೆಗಳನ್ನು ಹಂಚಿದರು. ಸುಂದರರಾಯರೂ ಭೀಮರಾಯರೂ ಉಡುಗೊರೆ ಗಳನ್ನು ಸ್ವೀಕರಿಸುವುದಕ್ಕೆ ಗಲಭೆ ಮಾಡಿದರು. ರಾಯರ ಮಾತೂ ನಡೆಯ ದಾಯಿತು. ಮೀನಾಕ್ಷಮ್ಮನವರೇ ಬಂದು ಉಪಚಾರ ಹೇಳಿ

"ಬಂಧುಬಳಗಕ್ಕಿಂತಲೂ ಹೆಚ್ಚಿನ ಬಂಧುಬಳಗಾಪ್ಪ ನೀವು. ನೀವು ತೆಗೆದು ಕೊಂಡರೆ ವಧೂವರರಿಗೆ ಶ್ರೇಯಸ್ಸು. ದಯೆಯಿಟ್ಟು ತೆಗೆದುಕೊಳ್ಳಬೇಕು"

ಎಂದು ನುಡಿದರು. ನಿರ್ವಾಹವಿಲ್ಲದೆ ಉಡುಗೊರೆಗಳನ್ನು ಗೊಣಗುಟ್ಟುತ್ತ ಸ್ವೀಕರಿಸಿ

"ಬೀಗರಿಲ್ಲ ನೀವು ಮಾಡುವ ಹಾಗಿದ್ದರೆ ರಾಮೂ ಮದುವೇಗೆ, ಲಚ್ಚೀ ಮದುವೇಗೆ ನಾವು ಬರುವುದೇ ಇಲ್ಲಮ್ಮಾ !"

ಎಂದು ಭೀಮರಾಯರು ಸೂಚಿಸಿದರು. ಬೀಗರ ಕಡೆ ಚಿಳ್ಳೆಪಿಳ್ಳೆ ಮೊದಲುಗೊಂಡು ಎಲ್ಲರಿಗೂ ಉಡುಗೊರೆಗಳನ್ನು ಇತ್ತು ತಣಿಸಿದರು. ರಾಯರ ಔದಾರ್ಯವನ್ನು ಎಲ್ಲರೂ ಬಾಯಿತುಂಬ ಕೊಂಡಾಡಿ, ವಧೂವರರನ್ನು ಮನದಣಿಯ ಹರಸಿದರು.

ಬೀಗರು ನಂಜುಂಡಯ್ಯನವರು ಅವರ ಹೆಂಡತಿ ಭಾಗೀರತಮ್ಮ ಎಲ್ಲಾ ವಿಚಾರದಲ್ಲಿ ಒಮ್ಮತಿಸಮ್ಮತಿಯಿಂದಲೇ ನಡೆದುಕೊಂಡರು. ದೊಡ್ಡವರ ಮನೆಯವರು ಹುಡುಗನ ಮೇಲಿನ ವಿಶ್ವಾಸದಿಂದ ತಮ್ಮಂತಹ ಬಡವರ ಮನೆಗೆ ಹೆಣ್ಣು ಕೊಟ್ಟರಲ್ಲಾ ಎಂದೇ ಅವರ ಎಣಿಕೆ. ತಾವು ಬಡವರೆಂದು ತುಚ್ಛವಾಗಿ ಕಾಣದೆ ಮದುವೆ ಅದ್ಧೂರಿಯಲ್ಲಿ ಯಾವದನ್ನೂ 'ಖೋತಾ' ಮಾಡದೆ ರಾಯರು ಎಲ್ಲವನ್ನು ಸಾಂಗವಾಗಿ ನೆರವೇರಿಸಿದುದು ಅವರ ವಿಚಾರದಲ್ಲಿ ಗೌರವವನ್ನು ಹೆಚ್ಚಿಸಿತು. ಆದರೆ ಬೀಗರ ಕಡೆಯವರೆಲ್ಲಾ ನಂಜುಂಡಯ್ಯ ಭಾಗೀರತಮ್ಮನೇ ಆಗಿರಲಿಲ್ಲ. ಬೀಗರ ಅಕ್ಕ ಒಬ್ಬರು ಮದುವೆಗೆ ದಯಮಾಡಿಸಿದ್ದರು. ಅವರಿಗೂ ಅವರ ಇಬ್ಬರು ರತಿಕುಮಾರಿಯರಿಗೂ ಯಾರೆಷ್ಟು ಉಪಚಾರ ಮಾಡಿದರೂ ಸಾಲದು. ಬೆಳಗಾಗ–ಮುಖಕ್ಕೆ ಗಂಡಿನವರ ಮನೆಗೆ ಬಿಸಿನೀರು ತೆಗೆದುಕೊಂಡು ಹೋದಾಗ ಉಪ್ಪಿಟ್ಟು, ಬಾಳೆಹಣ್ಣು, ಕಾಫಿ ಆಗುತ್ತಿತ್ತು. ಮದುವೆ ಮನೆಗೆ ಇವರು ಬಂದಾಗಲೆಲ್ಲಾ ಏನಾದರೂ ತಿಂಡಿ ತೀರ್ಥ ಆಗುತ್ತಿತ್ತು. ಮಧ್ಯಾಹ್ನ ರಾತ್ರಿ ಪುಷ್ಕಳವಾದ ರಸಕವಳ. ಇಷ್ಟಾದರೂ 'ಅರೆಹೊಟ್ಟೆ ಹಾಕಿ ನಮ್ಮನ್ನು ಸಾಯಿಸಿದರು. ಎಂಥಾ ಮದುವೆ ಮಾಡಾಟ ಇದು, ಬರೀ ದೊಡ್ಡಸ್ತಿಕೇಲೇ ಎಲ್ಲಾ ಪೂರೈಸಿತು' ಎಂದು ಅವರು ಆಡದೆ ಬಿಡಲಿಲ್ಲ. ಬೀಗಿತ್ತಿ ಮರ್ಯಾದಸ್ಥೆ, ಕಷ್ಟಸುಖಗಳನ್ನು ಕಂಡವರು. ಅವರು ಎಷ್ಟೇ ಸುಳುಸೂಕ್ಷ್ಮದಲ್ಲಿ ಹೇಳಿದರೂ ಪುಟ್ಟಿಂಕಮ್ಮನೂ ಆಕೆಯ ಹೆಣ್ಣುಮಕ್ಕಳೂ ಹೆಣ್ಣಿನ ಕಡೆಯವರನ್ನೂ ಮದುವೆ ಏರ್ಪಾಟನ್ನೂ ಆಡಿಕೊಳ್ಳದೆ ಬಿಡುತ್ತಿರಲಿಲ್ಲ. ಪುಟ್ಟಿಂಕಮ್ಮನಿಗೆ ತನ್ನ ಮತ್ತು ತನ್ನ ಮಕ್ಕಳ ಸಮಾನ ಹಾಡು ಹೇಳುವವರು ಯಾರೂ ಇಲ್ಲ ಎನ್ನುವ ಜಂಬ ಬೇರೆ. ಹಸೆಗೆ ಕರೆದದ್ದು, ಆರತಿ ಎತ್ತಿದ್ದು, ಎಣ್ಣೆಶಾಸ್ತ್ರ ಮಾಡಿದ್ದು, ಹೂವು ಮುಡಿಸಿದ್ದು, ಗಂಧ ಬಳಿದದ್ದು, ಕುಂಕುಮ ಇಟ್ಟದ್ದು—ಇವುಗಳ ಸಂಬಂಧವಾದ ಹಾಡುಗಳಲ್ಲದೆ ಬೀಗರನ್ನು ಅಲ್ಲಗಳೆಯುವ ಹಾಡುಗಳಂತೂ ನೂರಾರು ಬರುತ್ತಿದ್ದವು. ಹೆಣ್ಣಿನವರ ಕಡೆ ಅವರ ಕೂಡ ಪೈಪೋಟಿಗೆ ನಿಲ್ಲುವವರು ಯಾರೂ ಇರಲಿಲ್ಲ.

ಾಂತನಿಗೂ ಅಂತಹ ಹಾಡುಗಳು ಬರುತ್ತಿರಲಿಲ್ಲ. ಲಕ್ಷ್ಮಣನ ಕಛೇರಿ ಮುಗಿಸುವ ತನಕ ಇದ್ದ ಪುಟ್ಟಿಂಕಮ್ಮನ ಜಂಬ ಮೂರನೆಯ ದಿವಸದಿಂದ ಇದ್ದಕ್ಕಿದ್ದ ಹಾಗೇ ನಂದಿಹೋಯಿತು. ಬೀಗರ ಕಡೆಯವರು ತಮಗೂ ತಮ್ಮ ಮಕ್ಕಳಿಗೂ ದೊಡ್ಡ ಅಂಚಿನ ಧರ್ಮಾವರ, ಅರಳೀಪೇಟೆಯ ಸೀರೆಗಳನ್ನು ಉಡಿಸಿದಮೇಲಂತೂ ರಾಯರ ಮನೆಯವರನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಹೊಗಳುವುದಕ್ಕೆ ಆರಂಭಿಸಿದರು.

ಮೀನಾಕ್ಷಮ್ಮನವರ ಹೆಗಲ ಮೇಲಿನಿಂದ ದೊಡ್ಡ ಭಾರವನ್ನಿಳುಹಿದಂತೆ ಾಯಿತು ಮದುವೆಯಾಗುತ್ತಲೂ ಅವರ ಮೈಯಲ್ಲಿ ಸ್ವಲ್ಪ ಅಲಸಿಕೆ ತೋರಿ, ಬಿಡದೆ ದಿನವೂ ಜ್ವರ ಬರುವುದಕ್ಕಾರಂಭವಾಯಿತು. ಡಾಕ್ಟರು ಪರೀಕ್ಷೆ ಮಾಡಿ ಇನ್‌ಫ್ಲುಯೆಂಜಾ, ಭಯಪಡಬೇಕಾದ ಕಾರಣವಿಲ್ಲವೆಂದು ಧೈರ್ಯ ಹೇಳಿ ಔಷಧವನ್ನಿತ್ತು ಹೋದರು. ಒಂದೆರಡು ಇಂಜಕ್ಷನ್‌ಗಳೂ ಆದವು. ಜ್ವರ ಬರುವುದು ನಿಂತಿತು. ಮೀನಾಕ್ಷಮ್ಮನವರು ಎದ್ದು ಓಡಾಡುವಂತಾ ದರೂ ಒಮ್ಮೊಮ್ಮೆ ಇದ್ದಕ್ಕಿದ್ದ ಹಾಗೆ ಎದೆನೋವು ಬಂದುಬಿಡುತ್ತಿತ್ತು. 'ಅವರಿಗೆ ತುಂಬ ವಿಶ್ರಾಂತಿ ಬೇಕು. ಮನಸ್ಸಿಗೆ ಉದ್ವೇಗವಾಗದಂತೆ ನೋಡಿ ಕೊಳ್ಳಿ' ಎಂದು ಡಾಕ್ಟರು ಎಚ್ಚರವಿತ್ತರು.

ಮದುವೆಯ ಮನೆಯ ಪರಿಣಾಮ ಎಲ್ಲರ ಮೇಲೂ ತನ್ನ ವರ್ಚಸ್ಸನ್ನು ಬೀರಿತು. ಸ್ವಲ್ಪ ಸ್ವಲ್ಪ ಜ್ವರ, ಅಜೀರ್ಣ, ಶೀತ ಮೊದಲಾದ ಚಿಲ್ಲರೆ ಕಾಹಿಲೆ ಗಳು ಎಲ್ಲರನ್ನೂ ಕಾಡಿಸಿದವು. ಯೋಗ್ಯ ಔಷಧ ಅನುಪಾನ ದೊರೆತು ಎಲ್ಲರೂ ಎಂದಿನಂತೆ ಎದ್ದು ಓಡಿಯಾಡಲಾರಂಭಿಸಿದರು. ಶಾಮಣ್ಣನವರು ಒಂದು ಕೊಡ ಮೆಣಸು, ಜೀರಿಗೆ, ಹಿಪ್ಪಲಿ ಕಷಾಯ ಕಾಸಿ, ಆಳುಕಾಳು ಗಳಿಗೆಲ್ಲಾ ಹುಯಿದು, ತಾವೂ ಸ್ವಲ್ಪ ಕುಡಿಯುತ್ತಿದ್ದರು. ಚಳಿಜ್ವರ ಅವರ 'ತ್ರಿಫಲ'ಕ್ಕೆ ಹೆದರಿ ಅವರ ಬಳಿ ಸುಳಿಯಲು ಅಂಜುತ್ತಿದ್ದವು. ರಾಯರೂ ಮೈ ಕೊಡವಿಕೊಂಡೆದ್ದು ತಮ್ಮ ನಿತ್ಯಾನುಷ್ಠಾನ, ದಿನಚರ್ಯೆಗಳನ್ನಾರಂಭಿಸಿದರು.

೧೨

ರಾಮು ಪುಣೆಯಿಂದ ಬರುವಾಗಲೇ ಅಸಮಾಧಾನದ ಹೊರೆಯನ್ನು ಹೊತ್ತೇ ಬಂದ. ತಾನು ಇಲ್ಲದಿರುವಾಗ ಲಗ್ನಮಾಡಿದುದು ಅವನ ಗೌರವಕ್ಕೆ ಕುಂದು ಬಂದಂತಾಗಿತ್ತು. ಲಗ್ನ ಮಾಡಿದುದನ್ನಾದರೂ ಮರೆಯುತ್ತಿದ್ದ; ಆದರೆ ವೆಂಕಟೇಶನಿಗೆ ಶಾಂತನನ್ನು ಕೊಟ್ಟು ಲಗ್ನ ಮಾಡುವುದೆಂದರೆ ಅವನ ಾಳ್ಮೆ ಮುಗಿದೇ ಹೋಗುತ್ತಿತ್ತು. ಈಗಂತೂ ವೆಂಕಟೇಶ ಮನೆ ಅಳಿಯನಾಗಿ

ಬಿಟ್ಟಿದ್ದ. ಮೊದಲಿನ ಹಾಗೆ ಆಳು ರಂಗನಿಂದ ಮೊದಲುಗೊಂಡು ರಾಯರವರೆಗೆ ಯಾರೂ ಅಧಿಕಾರ ಮಾಡುವ ಹಾಗಿರಲಿಲ್ಲ. ವೆಂಕಟೇಶನಿಗೆ ಎಲ್ಲದರಲ್ಲಿಯೂ ಅಗ್ರಸ್ಥಾನ. ಇದನ್ನು ಕಂಡಮೇಲಂತೂ ರಾಮು ಕಿಡಿಕಿಡಿಯಾಗಿಬಿಟ್ಟ. ಯಾವನಿಂದ ತಾನು ಬೂಟ್ಸಿಗೆ ಬಣ್ಣ ಹಾಕಿಸುತ್ತಿದ್ದನೋ ಅವನನ್ನೇ 'ಭಾವ' ಎಂದು ಕರೆಯಬೇಕಲ್ಲಾ ಎಂದು ಹೀನಾಯಪಟ್ಟುಕೊಳ್ಳುತ್ತಿದ್ದ. ಕೆಲಸ ಮಿಂಚಿ ಬಿಟ್ಟಿತು. ರಾಮು ಹಾಲಿನಲ್ಲಿ ಬಿದ್ದ ಹುಳದಂತೆ ಮಿಲಗುಟ್ಟುತ್ತಿದ್ದ.

ಮದುವೆಯಲ್ಲಿ ಲಕ್ಷ್ಮಣ ಹಾಡಿದ್ದು ; ಎಲ್ಲರೂ ಅವನನ್ನು ಪ್ರಶಂಸಿಸಿದ್ದು ; ಶಾಮಣ್ಣನವರು ಅವನಿಗೆ ತಂಬೂರಿ ಓದಿಸಿದ್ದು ಎಲ್ಲವನ್ನೂ ಕೂಲಂಕಷವಾಗಿ ಕೇಳಿದ. ತಾನು ಮದುವೆಗೆ ಬಾರದೆ ನಿಂತದ್ದು ಬಹಳ ಅನುಚಿತವಾಯಿತೆಂದು ನೊಂದುಕೊಂಡು ತನ್ನನ್ನೇ ಬಯ್ದುಕೊಂಡ. ತಾನು ಮೊದಲನೆಯ ವರ್ಷದ ಎಲ್‌ಎಲ್.ಬಿ. ಪರೀಕ್ಷೆಗೆ ಕಾಲಾವಧಿ (Term) ತುಂಬಿ ಬಂದಿದ್ದಾನೆ. ಮುಂದಿನ ವರ್ಷ ಮುಗಿಯುತ್ತಲೂ ಎಂ.ಎ., ಎಲ್‌ಎಲ್.ಬಿ. ಆಗುತ್ತಾನೆ. ತನಗಿಲ್ಲದ ಪುರಸ್ಕಾರ ಈ ವೆಂಕಟೇಶ, ಲಕ್ಷ್ಮಣ ಇವರುಗಳಿಗೆ ಮನೆಯಲ್ಲಿ ದೊರೆಯುತ್ತಿದೆಯಲ್ಲಾ ಎಂದು ಕೊರಗುತ್ತಲೇ 'ಇರಲಿ, ಕಾಲ ಬಂದೇ ಬರುತ್ತದೆ. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ' ಎಂದು ಸಮಾಧಾನಪಟ್ಟುಕೊಂಡ. ಆದರೆ ತನ್ನ ಅಸಮಾಧಾನವನ್ನು ನೂರೊಂದುರೀತಿಯಲ್ಲಿ ವ್ಯಕ್ತಪಡಿಸಿದ್ದ. ಎಲೆ ಹಾಕಿ ಬಡಿಸಿ ಎಲ್ಲರೂ ಪರಿಷೇಚನೆ ಮಾಡಬೇಕು, ಆ ಹೊತ್ತಿಗೆ ಸರಿಯಾಗಿ 'ಮುರಿತುಕೊಂಡು' ತನ್ನ ಕೋಣೆಯಲ್ಲಿ ಕೂಡುತ್ತಿದ್ದ. ತನ್ನನ್ನು ಯಾರೂ ಊಟಕ್ಕೆ ಕರೆಯಲಿಲ್ಲ ಎಂದು ಕೋಪ. ಬಡಿಸಿದ ಅನ್ನ ಆರಿ ತಂಗಳಾಗುತ್ತಿತ್ತು. ರಾಯರೇ ಎದ್ದು ಹೋಗಿ ಮಗನನ್ನು ಉಪಚರಿಸಿ ಕರೆತಂದು ಎಲೆಯ ಮುಂದೆ ಕೂಡಿಸಬೇಕಾಗುತ್ತಿತ್ತು.

ಸ್ವಲ್ಪ ಬಡಿಸಿದರೆ 'ಅರೆಹೊಟ್ಟೆ ಹಾಕಿ ಸಾಯಿಸುತ್ತೀರೇನು?' ಎನ್ನುತ್ತಿದ್ದ. ನಾಲ್ಕು ಅಗಳು ಹೆಚ್ಚು ಬಿದ್ದಿತೆಂದರೆ 'ಬಿಸಿಲುಮಾರೀಗೆ ಬಡಿಸಿದ ಹಾಗೆ ಬಡಿಸುತ್ತೀರಲ್ಲಾ' ಎನ್ನುತ್ತಿದ್ದ. ಮಧ್ಯಾಹ್ನದ ಫಲಾಹಾರಕ್ಕೆ ಉಪ್ಪಿಟ್ಟು ಮಾಡಿದರೆ ಸಜ್ಜಿಗೆಯನ್ನೇತಕ್ಕೆ ಮಾಡಲಿಲ್ಲ ಎಂದು ರೇಗುತ್ತಿದ್ದ. ಸಜ್ಜಿಗೆಯನ್ನು ಮಾಡಿದರೆ ಉಪ್ಪಿಟ್ಟನ್ನೇತಕ್ಕೆ ಮಾಡಲಿಲ್ಲ ಎಂದು ರೇಗುತ್ತಿದ್ದ. ರಾಮುವಿನ ಕ್ಷಣಚಿತ್ತಕ್ಕೆ ಹೊಂದಿಕೊಂಡು ಹೋಗುವುದು ಅವನ ತಾಯಿಗೇ ಸಾಧ್ಯವಾಗುತ್ತಿರಲಿಲ್ಲ. ಮೀನಾಕ್ಷಮ್ಮನವರು ರಾಮುವಿಗೋಸ್ಕರ ಅಲೆವತ್ತು ಕೊಂಡು ಹಣ್ಣಾಗಿಹೋಗಿದ್ದರು. ಕೊನೆಗೆ ಹಾಸಿಗೆ ಹಿಡಿದೇ ಮಲಗಿ ಬಿಟ್ಟರು. ಡಾಕ್ಟರು ಪರೀಕ್ಷೆಮಾಡಿ 'ಹೃದ್ರೋಗ, ಉಲ್ಬಣಾವಸ್ಥೆಗೆ

ಬರುತ್ತಾ ಇದೆ. ಬಹಳ ಜೋಪಾನವಾಗಿ ನೋಡಿಕೊಳ್ಳಬೇಕು' ಎಂದು ಹೇಳಿ ಹೋದರು. ಲಕ್ಷ್ಮಣನ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಡಾಕ್ಟರ ಅಭಿಪ್ರಾಯವನ್ನು ಕೇಳಿದ ರಾಯರು ಮರಣದಂಡನೆಯನ್ನು ಕೇಳಿದ ಕೈದಿಯಂತಾದರು. ಮೀನಾಕ್ಷಮ್ಮನವರೇ ಎಲ್ಲರಿಗೂ ಸಮಾಧಾನ ಹೇಳಿದರು. ರಾಯರನ್ನು ಉದ್ದೇಶಿಸಿ

"ಬೇಗ, ರಾಮೂಗೂ ಲಚ್ಚಿಗೂ ಮದುವೆ ಮಾಡಿಬಿಡೀಂದ್ರೆ. ಮಾಘದಲ್ಲಿಯೋ ಶ್ರಾವಣದಲ್ಲಿಯೋ ಲಗ್ನಗಳಿವೆ. ನನ್ನ ಕಣ್ಣುಮುಂದೆ ಅದೊಂದು ಆಗಿಹೋಗಲಿ."

"ನಿನಗೆ ಸ್ವಲ್ಪ ಹುಷಾರಾಗಲಿ, ಮೀನಾ. ಖಂಡಿತವಾಗಿಯೂ ಮಾಡೋಣ. ನೀನೇ ಮಲಗಿದ್ದರೆ ಎದ್ದು ಓಡಿಯಾಡುವವರು ಯಾರು ?"

"ನನಗೇನು ಆಗಿದೇಂದ್ರೆ. ಈ ಡಾಕ್ಟರುಗಳು ಹೆದರಿಸುತ್ತಾರೆ. ನೀವು ಹೆದರುತ್ತೀರಿ. ಲಗ್ನವೊಂದು ನಿಶ್ಚಯಿಸಿ—ಆಗ ನೋಡುವಿರಂತೆ ನನಗೆ ಕಾಹಿಲೆ ಇರುತ್ತದೆಯೋ ಓಡುತ್ತದೆಯೋ ಅನ್ನುವುದನ್ನು"

ಎನ್ನುತ್ತಿದ್ದರು. ಶಾಂತನಿಗೆ ಗಂಡು ನೋಡಿದ ಹುರುಪಿಗಿಂತಲೂ ನೂರ್ಮಡಿಯಾದ ಹುರುಪಿನಿಂದ ಹೆಣ್ಣು ಹುಡುಕಲು ತೊಡಗಿದರು. ರಾಯರ ಮಕ್ಕಳಿಗೆ ಹೆಣ್ಣುಕೊಡಲು ಹತ್ತಾರು ಜನ ಮೊದಲೇ ಮುಂದೆ ಬಂದಿದ್ದರು. ಅವರು ಕೊಟ್ಟಿದ್ದ ಜಾತಕಗಳು ರಾಯರ ಸಂದೂಕದಲ್ಲಿ ಭದ್ರವಾಗಿದ್ದವು.

ರಾಯರ ಮನೆಯಲ್ಲಿ ಪ್ರತಿದಿನಸವೂ ಹೆಣ್ಣಿನ ಮಾತೇ. ದಿನವೂ ಒಬ್ಬೊಬ್ಬರು ಹೆಣ್ಣುಗಳನ್ನು ಕರೆತಂದು ತೋರಿಸುತ್ತಿದ್ದರು. ರಾಮು ಏನಾದರೂ ಒಂದು ಕೊರತೆ ಕಂಡು ಒಲ್ಲೆ ಎನ್ನುತ್ತಿದ್ದ. ಒಂದಕ್ಕೆ ಮುಖ ಕಪ್ಪು–ಇನ್ನೊಂದಕ್ಕೆ ಮಚ್ಚೆಯಿದೆ ಬಾಯಿ ಹತ್ತಿರ—ಮತ್ತೊಂದು ಕುಳ್ಳು–ಮಗುದೊಂದು ದೊಂಬರ ಗಣೆಯಿದ್ದ ಹಾಗೆ ಇದೆ ಎಂದು ತಿರಸ್ಕರಿಸುತ್ತಿದ್ದ. ಸಾವಿತ್ರಮ್ಮನವರೂ ಬೇಸತ್ತರು.

"ನೀನು ಹೀಗೆ ಮಾಡುತ್ತಾ ಇರು, ರಾಮೂ, ಕೊನೆಗೆ ನಿನಗೆ ಯಾವ ಹೆಣ್ಣೂ ಸಿಕ್ಕುವುದಿಲ್ಲ, ಮದುವೇನೂ ಆಗುವುದಿಲ್ಲ."

"ಆಗದಿದ್ದರೆ ಚಿಂತೆಯೇ ಇಲ್ಲ, ಬಿಡಮ್ಮ. ಹೆಣ್ಣುಗಳಿಗೇನು ಬರ ಈ ಕಾಲದಲ್ಲಿ. ನಾಯಿಕೊಡೆಗಳು ಇದ್ದ ಹಾಗಿವೆ."

"ಇಷ್ಟು ಸಣ್ಣ ಮಾತುಗಳನ್ನು ಆಡಬಾರದಪ್ಪಾ. ಶಾಂತನ ಮದುವೆ ನಿಶ್ಚಯಿಸೋವಾಗ ನಮ್ಮನ್ನೂ ಯಾರಾದರೂ ಹೀಗೆ ಹೀಯಾಳಿಸಿದ್ದರೆ ?"

"ಹೋಗಲಿ ಬಿಡಮ್ಮ."

"ಬಿಡೋ ಮಾತಲ್ಲ. ಸಾಯಂಕಾಲಕ್ಕೆ ಚಿಕ್ಕಮಗಳೂರು ಹಿರಣ್ಯಪ್ಪನವರು ಮಗಳನ್ನು ಕರೆದುಕೊಂಡು ಬರುತ್ತಾರೆ. ಎಲ್ಲೂ ಹೋಗಬೇಡ. ನೋಡಿದವರೆಲ್ಲಾ ಹೆಣ್ಣು ಚೆನ್ನಾಗಿದೆ ಎಂದು ಹೇಳುತ್ತಾರೆ. ಒಪ್ಪಿಕೊಂಡು ಬಿಡು. ಅವರು ತುಂಬ ಅನುಕೂಲಸ್ಥರು; ಲಕ್ಷಾಂತರ ರೂಪಾಯಿ ಸ್ಥಿತಿಯಿದೆ. ಭಾರಿ ಕಾಫಿ ಪ್ಲಾಂಟರ್, ಯೋಚನೆ ಮಾಡಪ್ಪ."

ರಾಮು ಯೋಚನೆ ಮಾಡಿಯೇ ಇದ್ದ, ನಿರ್ಧಾರವನ್ನೂ ಯೋಚಿಸಿಕೊಂಡೇ ಇದ್ದ. ಹಿರಣ್ಯಪ್ಪನವರ ಶ್ರೀಮಂತಿಕೆಯ ವಿಚಾರ ಬಹಳ ಕೇಳಿದ್ದ. ಮಲೆನಾಡಿನ ಕಾಫಿವ್ಯವಸಾಯಗಾರರ ಪರವಾಗಿ ಹಿರಣ್ಯಪ್ಪನವರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಬರುತ್ತಿದ್ದರು. ಸರ್ಕಾರದಲ್ಲಿಯೂ ಅವರ ವಿಚಾರ ತುಂಬ ಗೌರವವಿತ್ತು. ದೊಡ್ಡ ದೊಡ್ಡ ಅಧಿಕಾರಿಗಳು ಚಿಕ್ಕಮಗಳೂರಿಗೆ ಹೋದಾಗಲೆಲ್ಲಾ ಅವರ ಆತಿಥ್ಯವನ್ನು ಹಿರಣ್ಯಪ್ಪನವರೇ ನೋಡಿಕೊಳ್ಳುತ್ತಿದ್ದರು. ಅವರಿಗೆ ಸರಕಾರ–ಸಾಹುಕಾರ ಎರಡು ವರ್ಗದಲ್ಲಿಯೂ ಬೇಕಾದಷ್ಟು ಜನ ಸ್ನೇಹಿತರಿದ್ದರು.

ರಾಯರಿಗೆ ಸ್ವಲ್ಪ ಯೋಚನೆಗಿಟ್ಟುಕೊಂಡಿತು. ದೊಡ್ಡವರು ತಾವೇ ಸಂಬಂಧ ಬೆಳೆಸಬೇಕೆಂದು ಬಂದಿರುವಾಗ ರಾಮು 'ಯದ್ವಾತದ್ವಾ' ಹೇಳಿ ಕಳುಹಿಸಿಬಿಟ್ಟರೇನು ಮಾಡುವುದು? ತಮ್ಮ ದರ್ಪವನ್ನು ತೋರಿ, ಮಗನಿಗೆ ಇಚ್ಛೆಯಿಲ್ಲದಿದ್ದರೂ ಅವನಿಗೆ ಬೇಡದ ಹೆಣ್ಣನ್ನು ಕಟ್ಟುವುದಕ್ಕೆ ರಾಯರಿಗೆ ಮನಸ್ಸಿಲ್ಲ. ತಾವೂ ಹಿರಣ್ಯಪ್ಪನವರ ಮಗಳನ್ನು ನೋಡಿರಲಿಲ್ಲ. ರಾಮು ಏನು ಹೇಳಬಹುದೆಂಬುದನ್ನೇ ಊಹಿಸಲು ಸಾಧ್ಯವಾಗಿರಲಿಲ್ಲ. ಶಾಮಣ್ಣನವರನ್ನು ಕರೆದು

"ಹಿರಣ್ಯಪ್ಪನವರ ಮಗಳನ್ನು ನೀನು ನೋಡಿದ್ದೀಯಾ, ಶಾಮಿ?" ಎಂದು ಕೇಳಿದರು.

"ಹಿಂದೆ ನೋಡಿದ್ದದ್ದು, ಸ್ವಾಮಿ. ಮೂರು ನಾಲ್ಕು ವರ್ಷವಾಗಿರಬಹುದು."

"ಏನು, ಹೇಗಿದೆ?"

"ಇದೆ ಅಷ್ಟೇ. ಗುಂಡಗೆ ಚೆಂಡಿದ್ದ ಹಾಗಿದೆ. ಎರಡು ಕೆನ್ನೆಯೂ ಎರಡು ಕಿತ್ತಲೆಹಣ್ಣು. ಸಣ್ಣ ಹಣೆ. ಕಿವಿಗಳೆರಡೂ ಆ ಮುಖಕ್ಕೆ ದೊಡ್ಡದಾಗಿ ಕಾಣುತ್ತವೆ. ಏನೋ ಒಂದು ರೀತಿ ಗುಜ್ಜಾನೆಯಂತೆ ಇದ್ದ ಹಾಗಿದೆ. ಮುಖ್ಯ ದೊಡ್ಡವರ ಮನೆ ಹೆಣ್ಣು. ತುಂಬ ಒಡವೆ ವಸ್ತ್ರ ಹಾಕಿದರೆ ಐಬೆಲ್ಲಾ ಮುಚ್ಚಿ ಹೋಗುತ್ತದೆ."

"ಇದನ್ನು ರಾಮು ಒಪ್ಪುತ್ತಾನೆಯೋ ?"

"ಆ ಸಂಶಯ ತಮಗೇಕೆ, ಸ್ವಾಮಿ! ಈ ಸಂಬಂಧವನ್ನು ರಾಮು ಖಂಡಿತಾ ಒಪ್ಪೇ ಒಪ್ಪಿಕೊಳ್ಳುತ್ತಾನೆ."

"ಇದೇನೋ ಶಾಮಿ. ಎಂಥೆಂಥಾ ಹೆಣ್ಣುಗಳೋ ಬಂದುಹೋದವು. ಅವುಗಳಲ್ಲೆಲ್ಲಾ ಒಂದಲ್ಲ ಒಂದು ಕುಂದು ತೆಗೆಯುತ್ತಿದ್ದ. ಇನ್ನು ಇದಕ್ಕೆ ಒಪ್ಪುತ್ತಾನೆಯೇ ?"

"ಲೋಕವೇ ಹಾಗೆ, ಸ್ವಾಮಿ. ಬಹಳ 'ಕುಸಿಬಿಷ್ಟಿ' ಯಾರು ಮಾಡುತ್ತಿರುತ್ತಾರೆ ಅವರು ಒಪ್ಪೋದು ಇಂತಹ ಹೆಣ್ಣುಗಳನ್ನೇ. ನಾನು ಏನು ಹೇಳಿದೆಯೆಂದು ಸಂಜೇಗೆ ನೀವೇ ನೋಡಿ."

ಶಾಮಣ್ಣನವರ ಊಹೆ ನಿಜವಾಯಿತು. ರಾಮು. ಹಿರಣ್ಯಪ್ಪನವರ ಮಗಳನ್ನು ಒಪ್ಪಿದ. ಮದುವೆ ವೈಶಾಖಕ್ಕೆಂದು ನಿರ್ಣಯವಾಗಿಹೋಯಿತು. ಲಗ್ನಪತ್ರಿಕೆಯನ್ನು ಬರೆಯಿಸಿ ಅಚ್ಚಿಗೆ ಕೊಟ್ಟು ಮುಂದಿನ ವ್ಯವಸ್ಥೆಗಳನ್ನು ನೋಡಿಕೊಳ್ಳುವುದಕ್ಕಾಗಿ ಹಿರಣ್ಯಪ್ಪನವರು ಊರಿಗೆ ಪ್ರಯಾಣ ಬೆಳೆಸಿದರು.

ಅಂತೂ ಆ ವರ್ಷ ರಾಯರ ಮನೆಯಲ್ಲಿ ಎಲ್ಲರಿಗೂ ಗುರುಬಲ ಪ್ರಬಲಿಸಿತ್ತೆಂದು ಕಾಣುತ್ತದೆ. ರಾಮು ಮದುವೆ ಸಂದರ್ಭದಲ್ಲಿ ಲಕ್ಷ್ಮಣನ ಮದುವೆಯೂ ನಿಶ್ಚಯವಾಯಿತು.

ವೆಂಕಟಸುಬ್ಬಯ್ಯನವರು ಬೆಂಗಳೂರಿನ ಒಂದು ಬ್ಯಾಂಕಿನ ಖಜಾಂಚಿ (Cashier) ಆಗಿದ್ದರು. ಅವರಿಗೂ ಹಿರಣ್ಯಪ್ಪನವರಿಗೂ ಹತ್ತಿರ ಸಂಬಂಧ. ಹಿರಣ್ಯಪ್ಪನವರ ಮನೆಯ ಲಗ್ನಕ್ಕೆ ಬಂದಿದ್ದಾಗ ತಮ್ಮ ಮಗಳ ವಿಷಯವನ್ನೂ ಪ್ರಸ್ತಾಪಮಾಡಿದರು. ಹುಡುಗಿಯೂ ಲಗ್ನಕ್ಕೆ ಬಂದಿತ್ತು. ಎಲ್ಲರೂ ನೋಡಿದರು. ಹಾಡೂ ಹಸೆ ಹೇಳಿಸಿದರು. ಮೀನಾಕ್ಷಮ್ಮ ಹುಡುಗಿಯನ್ನು ಹತ್ತಿರ ಕೂಡಿಸಿಕೊಂಡು ಮಾತನಾಡಿಸಿ ನೋಡಿದರು

"ನಿನ್ನ ಹೆಸರೇನಮ್ಮಾ ?"

"ಜಯಲಕ್ಷ್ಮಿ."

"ಸ್ಕೂಲಿಗೆ ಹೋಗುತ್ತಾ ಇದ್ದೀಯಾ ?"

"ಹೋಗುತ್ತಾ ಇದ್ದೇನಮ್ಮ. ಹೋದ ವರ್ಷ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದ್ದೆ ಪಾಸಾಯಿತು. ಈ ವರ್ಷ ನಾಲ್ಕನೆಯ ಫಾರಂನಲ್ಲಿ ಓದುತ್ತಾ ಇದ್ದೇನೆ."

"ನಿಮ್ಮಪ್ಪ ಅಮ್ಮಾ ನಿನಗೆ ಮದುವೆ ಮಾಡಬೇಕೆಂದಿದ್ದಾರೆ. ನಿನ್ನ ಇಚ್ಛೆ ಹೇಗಿದೆ ?"

ಹುಡುಗಿ ನಾಚಿಕೆಯಿಂದ ತಲೆಬಾಗಿದಳು.

"ನಮ್ಮ ಹುಡುಗನನ್ನು ನೋಡಿದ್ದೀಯಾ, ಜಯಮ್ಮಾ?"

"ಇ....ಲ್ಲ...." ಎಂದಳು.

ಮೀನಾಕ್ಷಮ್ಮನವರು ಮಗನನ್ನು ಕರೆದು ಹತ್ತಿರ ಕೂಡಿಸಿಕೊಂಡು

"ನೋಡು ಜಯಾ, ಇವನೇ ಲಕ್ಷ್ಮಣ—ನನ್ನ ಮಗ. ನಮ್ಮ ರಾಮು ಹಾಗೆ ಜಾಣನಲ್ಲ. ಶುದ್ಧ ದಡ್ಡ. ಸ್ಕೂಲಿಗೆ ಹೋಗುವುದನ್ನು ಬಿಟ್ಟುಬಿಟ್ಟು ಸಂಗೀತ ಕಲಿಯೋದಕ್ಕೆ ಆರಂಭಿಸಿದ್ದಾನೆ. ಯೋಚನೆ ಮಾಡು. ನೀನು ಓದಿದ ಹುಡುಗಿ—ಇಂತಹ ದಡ್ಡನ್ನ ಮದುವೆಯಾಗುತ್ತೀಯೋ ಹೇಗೆ?"

"ಏನಮ್ಮಾ, ಹೊರಗಿನವರ ಎದುರಿಗೆ ನನ್ನ ದಡ್ಡ-ದಡ್ಡ ಎಂದು ಅವ ಮಾನ ಮಾಡುತ್ತೀ"

ಎಂದು ಲಕ್ಷ್ಮಣ ನಗುನಗುತ್ತಾ ತಾಯಿಯನ್ನು ಪ್ರಶ್ನಿಸಿದ.

"ಹೌದಪ್ಪಾ. ನೀನು ಬಹಳ ಪರೀಕ್ಷೆಮಾಡಿದ್ದೀ! ತುಂಬ ಜಾಣ ಎಂದು ಸುಳ್ಳು ಹೇಳಲೇ? ಜಯಮ್ಮಾ, ಪರೀಕ್ಷೆಗಳನ್ನು ಮಾಡಿ ಜಾಣರಾಗಬಹುದು, ಆದರೆ ದಡ್ಡನಾಗಿ ನಮ್ಮ ಲಚ್ಚಿ ಹಾಗೆ ಹಾಡೋದು ಬಹಳ ಕಷ್ಟ. ತಂಬೂರಿ ಹಿಡಿದು ಅವನು ಹಾಡುವುದಕ್ಕೆ ಕುಳಿತರೆ ಸಾಕ್ಷಾತ್ ಶಾರದಾಮ್ಮನವರನ್ನು ಕಂಡ ಹಾಗೆ ಆಗುತ್ತೆ."

"ನಾನು ಕೇಳಬಹುದೇ?"

ಎಂದು ಜಯಮ್ಮ ಕೇಳಿದಳು. ಲಕ್ಷ್ಮಣ ಮೆಲ್ಲನೆ ಏಳಲಿಕ್ಕೆ ಹೊರಟ. ತಾಯಿ ಅವನ ಕೈ ಹಿಡಿದು ಕುಳ್ಳಿರಿಸಿದರು.

"ನಿನಗೇನಾದರೂ ಸಂಗೀತ ಪಾಠವಾಗಿದೆಯೇನೆ, ತಾಯಿ?"

"ಆಗಿದೆಯಮ್ಮ. ಸ್ವಲ್ಪ ವೀಣೆ ಹೇಳಿಸಿದ್ದಾರೆ."

"ವೀಣೆ ಪಾಠವೇ? ನಾನು ಕೇಳಬಹುದೇ?"

ಎಂದು ಲಕ್ಷ್ಮಣ ಪ್ರಶ್ನಿಸಿದ. ಮೀನಾಕ್ಷಮ್ಮನವರು ಅಣಕಿಸುವ ಧ್ವನಿಯಲ್ಲಿ

"ಕೇಳಬಹುದು. ನೀನು ಮಾತ್ರ ಯಾರೆದುರಿಗೂ ಹಾಡಬೇಡ. ಮಿಕ್ಕವರೆಲ್ಲಾ ನಿನ್ನ ಮುಂದೆ ಹಾಡಬೇಕು, ಜಯಮ್ಮ ಹಾಡುತ್ತೇನೆಂದರೆ ನಾನೇ ಬೇಡವೆನ್ನುತ್ತೇನೆ."

"ನಿನಗೆ ನನ್ನ ಕಂಡರೆ ಯಾವಾಗಲೂ ಅಷ್ಟಷ್ಟೇ ಕಣಮ್ಮ. ಬೇಗ ಬೇರೆಯವರ ಕಡೆ ಸೇರಿಕೊಳ್ಳುತ್ತೀ."

"ಹೌದು ಲಚ್ಚಿ, ಏತಕ್ಕೆ ಗೊತ್ತೇ? ನೀನೂ ಕೇಳೇ ತಾಯಿ, ಜಯಮ್ಮ. ಲಚ್ಚಿ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಅಲ್ಲ. ನಮ್ಮೂರಿನಲ್ಲಿ ಕ್ಷಾಮ

ಬಂದಾಗ ಯಾರೋ ಬಡದಂಪತಿಗಳು ಒಂದು ಮಗು ತಂದರು. ನಾನು 'ಅಯ್ಯೋ' ಅಂದುಕೊಂಡು ಒಂದು ಮೊರ ರಾಗಿ ಕೊಟ್ಟು ಕೊಂಡುಕೊಂಡೆ. ನಮ್ಮ ಮಗನೆಂದೇ ಭಾವಿಸಿ ಸಾಕಿ ಸಲಹಿ ಇಷ್ಟು ದೊಡ್ಡವನನ್ನಾಗಿ ಮಾಡಿದೆವು"

ಎಂದು ಹೇಳಿ ಕಿಲಕಿಲನೆ ನಕ್ಕರು. ಲಚ್ಚಿಗೂ ಹಿಡಿಸಲಾರದಷ್ಟು ನಗು ಬಂದಿತು. ಜಯಮ್ಮ ಮುಖವನ್ನು ಮುಚ್ಚಿಕೊಂಡು ನಗುತ್ತಿದ್ದಳು. ಲಕ್ಷ್ಮಣ ಮೆಲ್ಲನೆ ತಾಯಿಯ ಕಿವಿಯಲ್ಲಿ

"ವೀಣೆ ತರಹೇಳಮ್ಮ."

"ಹೇಳುತ್ತೇನೆ—ನೀನೂ ಒಂದು ಕೀರ್ತನೆ ಹಾಡುವ ಹಾಗಿದ್ದರೆ."

"ಇಲ್ಲಿ ಬೇಡಮ್ಮ. ಇಲ್ಲೇತಕ್ಕೆ ನನ್ನ ಮಾನ ಪರೀಕ್ಷೆ!"

"ಪರೀಕ್ಷೇಲಿ ನೀನು ಸೋಲುವುದಿಲ್ಲ ಎಂದು ಗೊತ್ತು, ಅದಕ್ಕೋಸ್ಕರ. ಇಷ್ಟೊಂದು ನನ್ನ ಕೈಯಲ್ಲೇ ಉಪಚಾರ ಹೇಳಿಸಿಕೊಳ್ಳುತ್ತೀಯಲ್ಲೋ, ಲಚ್ಚಿ...."

"ಆಗಲಮ್ಮ.... ನಿನ್ನ ಇಷ್ಟ"

ಎಂದು ಒಪ್ಪಿದ. ಜಯಮ್ಮ ವೀಣೆಯನ್ನು ತಂದು ಮೂರು ನಾಲ್ಕು ಕೀರ್ತನೆ ನುಡಿಸಿ ತೋರಿಸಿದಳು. ಅವಳು 'ಬ್ರೋಚೇವಾ ರೆವರುರಾ, ರಘುವರಾ' ಕೀರ್ತನೆ ಹೇಳುವಾಗ ಲಕ್ಷ್ಮಣನ ಕಣ್ಣಿನಲ್ಲಿ ನೀರು ಮಿಡಿಯಿತು. ಆ ಮಾತುಗಳು ತನಗಾಗಿಯೇ ನಿರ್ಮಿತವಾಗಿದ್ದವೋ ಎಂದು ಯೋಚಿಸಿದ. ಜಯಮ್ಮನ ಹಾಡುಗಾರಿಕೆ ಮುಗಿಯಲು, ಮೀನಾಕ್ಷಮ್ಮನವರು ಲಕ್ಷ್ಮಣನ ಕೈಗಿತ್ತರು. ಲಕ್ಷ್ಮಣ ಅದನ್ನು ಶ್ರುತಿಮಾಡಿ, ತಂಬೂರಿಯನ್ನಾಗಿ ಉಪಯೋಗಿಸಿಕೊಂಡು, 'ನಂಬಿ ಕೆಟ್ಟವರಿಲ್ಲ ಶ್ರೀಹರಿಯ' ಎನ್ನುವ ದೇವರನಾಮವನ್ನು ಹಾಡಿದ. ಮೀನಾಕ್ಷಮ್ಮನವರು ಅಲ್ಲಿಗೇ ಸುಮ್ಮನಾಗಲಿಲ್ಲ.

"ಲಕ್ಷಣವಾಗಿ ರಾಗ ಹಾಡಿ ಯಾವದಾದರೂ ಕೀರ್ತನೆ ಹಾಡಪ್ಪಾ"

ಎಂದರು. ಮಧ್ಯಮಾವತಿ ರಾಗವನ್ನು ಹಾಡಿ 'ಅಲಕಲಲ್ಲ' ಕೀರ್ತನೆಯನ್ನು ಹಾಡಿ ಮುಗಿಸಿದ. ಹಾಡು ಮುಗಿಯುವ ಹೊತ್ತಿಗೆ ಅರ್ಧ ಮದುವೆಯ ಮನೆಯೇ ಕೋಣೆಯ ತುಂಬ ತುಂಬಿತ್ತು. ಲಕ್ಷ್ಮಣ ಸುತ್ತಲೂ ನೋಡಿ ನಾಚಿದ. ಹಿರಣ್ಯಪ್ಪನವರು ಕಾಣಿಸಿಕೊಂಡು,

"ಹಾಗೇ ಸ್ವಲ್ಪ ಅಠಾಣಾನೂ ಅಂದರೆ...."

ಅರೆಮನಸ್ಸಿನಿಂದ ಶ್ರುತಿಯನ್ನು ಮೀಟುತ್ತಾ 'ಅನುಪಮ ಗುಣಾಂಬುಧಿ' ಕೀರ್ತನೆಯನ್ನು ಹಾಡಿ ಮುಗಿಸಿದ. ಎಲ್ಲರೂ 'ಭಲೆ ಭಲೆ'ಯೆಂದರು.

ಹಿರಣ್ಯಪ್ಪನವರು "ಸಂಗೀತವೆಂದರೆ ಇದು ಕಣಪ್ಪಾ–ಎಲ್ಲರೂ ಹಾಡುತ್ತಾರೆ" ಎಂದರು.

ಗುಂಪು ಚೆದರಿದ ಮೇಲೆ ಜಯಮ್ಮನನ್ನು ಒಳಕ್ಕೆ ಕಳುಹಿಸಿಕೊಟ್ಟು ಮೀನಾಕ್ಷಮ್ಮನವರು

"ಲಚ್ಚಿ, ಹೆಣ್ಣು ಒಪ್ಪಿಗೆಯೇನಪ್ಪಾ ?" ಎಂದರು.

"ನಿನಗೆ ಒಪ್ಪಿಗೆಯಾದರೆ ಆಯಿತಮ್ಮಾ. ನನ್ನನ್ನೇನು ಕೇಳುತ್ತೀ."

"ಚಿನ್ನದಂತಹ ಹುಡುಗಿ. ಎಷ್ಟು ವಿನಯ, ಎಷ್ಟು ಗಂಭೀರ. ಸ್ವಲ್ಪವೂ ಕೊಂಕಿಲ್ಲ, ಪ್ರತಿಷ್ಠೆಯಿಲ್ಲ. ನನಗಂತೂ ಒಪ್ಪು."

"ಹಾಗಾದರೆ ನನಗೂ...."

"ಅವರಿಗೆ ತಿಳಿಸುತ್ತೇನೆ...."

ಎಂದು ಎದ್ದರು. ಲಚ್ಚಿಯೂ ಎದ್ದು

"ಅಮ್ಮ....ಅಮ್ಮ...."

"ಏನು ಮಗೂ ?"

"ಆಗ....ರಾಗಿ ಕೊಟ್ಟು ನನ್ನನ್ನು ತೆಗೆದುಕೊಂಡೆ ಎಂದು ಹೇಳಿದೆಯಲ್ಲಾ —ಅದು ನಿಜವೇ ?"

ಮೀನಾಕ್ಷಮ್ಮನವರು ನಕ್ಕು ಮಗನ ಗಲ್ಲಗಳನ್ನು ನೇವರಿಸಿದರು.

"ತಮಾಷೆಗಂದೆ ಕಣೋ ಲಚ್ಚಿ. ನಿಜ ಅಂದುಕೊಳ್ಳಬೇಡಮ್ಮಾ. ಹುಡುಗಿ ನಾಚುತ್ತಾಯಿತ್ತು. ಸ್ವಲ್ಪ ಸಲಿಗೆ ಬರಲಿಯೆಂದು ತಮಾಷೆಗಂದೆ. ಎಷ್ಟು ವಯಸ್ಸಾದರೂ ನೀನು ಶುದ್ಧ ಮಗು ಕಣೋ ಲಚ್ಚಿ "

"ಹೌದಮ್ಮ. ನಿನ್ನ ಮುಂದೆ ಯಾವಾಗಲೂ ಮಗುವಾಗಿರೋದೇ ನನಗೆ ಒಂದು ಹೆಮ್ಮೆ."

ಮದುವೆಯ ವಿಷಯ ಮೊದಲು ಪ್ರಸ್ತಾಪ ಮಾಡಿದ ವೆಂಕಟಸುಬ್ಬಯ್ಯನವರು ಮತ್ತೆ ಆ ಮಾತೇ ಎತ್ತಿರಲಿಲ್ಲ. ಲಕ್ಷ್ಮಣನ ಹಾಡುಗಾರಿಕೆ ಕೇಳಿದ ಮೇಲೆ ಹಿರಣ್ಯಪ್ಪನವರು ಈ ಸಂಬಂಧವನ್ನು ಹೇಗಾದರೂ ಮಾಡಿಸಬೇಕೆಂದು ಉತ್ಸುಕರಾದರು.

"ಏನು ವೆಂಕಟಸುಬ್ಬಾ, ಮದುವೆ ಮಾತು ಅಲ್ಲಿಗೇ ನಿಲ್ಲಿಸಿದೆ. ರಾಯರ ಹತ್ತಿರ ಪ್ರಸ್ತಾಪ ಮಾಡಲೇನು ?"

"ತಡೀರಿ, ಮಾವಯ್ಯ. ಅವಳನ್ನು ಇನ್ನೊಂದು ಸಲ ಕೇಳಿಬಿಟ್ಟು ನಿಶ್ಚಯಿಸೋಣ."

"ಅನುಮಾನವೇನು ? ಸಂದೇಹಗಳೇನಾದರೂ ಇದ್ದರೆ ಬೇಗ ನಿವೃತ್ತಿ

ಯಾಗಿ ಹೋಗಲಿ."

"ಎಲ್ಲಾ ಸರಿಯಾಗಿದೆ."

"ಹಾಗಾದರೆ...."

"ಹುಡುಗ ಹೆಚ್ಚು ಓದಿದೋನಲ್ಲ ಎನ್ನುವದೊಂದು ಕೊರತೆ. ಮಗಳನ್ನು ಎಂ.ಎ. ಪಾಸುಮಾಡಿದವನಿಗೆ ಕೊಡಬೇಕು ಎನ್ನೋದು ಅವಳ ಬಹಳ ದಿವಸದ ಆಸೆಯಾಗಿತ್ತು."

"ಅಯ್ಯೋ ಹುಚ್ಚಾ. ನಿನ್ನ ಒಣ ಎಂ.ಎ. ಕಟ್ಕೊಂಡೇನು ಮಣ್ಣು ಹೊಯ್ದುಕೊಳ್ಳೋದೇನಯ್ಯಾ. ಆ ಹುಡುಗ ಪಿಹೆಚ್.ಡಿ. ಮಾಡಿದ್ದಾನೆ. ನಿನ್ನೆ ಹಾಡಿದ—ನೀನು ಕೇಳಬೇಕಾಗಿತ್ತು. ಜಯನೂ ಕೇಳಿದಳಲ್ಲಾ, ಅವಳು ಏನನ್ನುತ್ತಾಳೆ ?"

"ಅವಳು ಅನ್ನುವ್ರದೇ ನನ್ನ ಪ್ರಾಣಕ್ಕೆ ಬಂದಿದೆ. 'ಇವರನ್ನಲ್ಲದೆ ನಾನು ಯಾರನ್ನೂ ಮದುವೆಯಾಗುವ್ರವೇ ಇಲ್ಲ' ಎಂದು ಹೇಳುತ್ತಾಳೆ. ಮಗೂ—ಪಾಪ, ಅದಕ್ಕೇನು ಗೊತ್ತಾಗುತ್ತೆ ?"

"ಈ ವಿಷಯಗಳಲ್ಲಿ ಮಕ್ಕಳಿಗೆ ತಿಳಿಯುವಷ್ಟು ನನಗೂ ನಿನಗೂ ತಿಳಿದರೆ ಸಾಕಾಗಿದೆ. ನೋಡು, ಜಯ ಜಾಣೆ. ಏನಾದರೂ ಹೆಚ್ಚೂ ಕಡಿಮೆ ಬಂದರೂ ಸರಿಹೊಂದಿಸಿಕೊಂಡು ಹೋಗೊ ಯೋಗ್ಯತೆ ಅವಳಿಗಿದೆ. ನಾನು ತಿಳಿದ ರೀತಿಯಲ್ಲಿ ಹುಡುಗನೂ ಜಯನನ್ನು ಒಪ್ಪಿದ ಹಾಗೆ ಕಾಣುತ್ತದೆ. ಎಲ್ಲಕ್ಕೂ ದೊಡ್ಡ ವಿಷಯವೆಂದರೆ ಜಯನಿಗೆ ಮೀನಾಕ್ಷಮ್ಮನವರಂತಹ ಅತ್ತೆ ಸಿಗುವ್ರದು. ಅದಕ್ಕಿಂತ ಹೆಚ್ಚಿನ ಪುಣ್ಯ ಇನ್ನೇನು ಬೇಕಯ್ಯಾ. ನಮ್ಮ ಮನೇ ಮದುವೆಯಲ್ಲೇ ನೋಡುತ್ತಾ ಇದ್ದೀಯಲ್ಲಾ. ಮಹಾತಾಯಿ ಹೇಗೆ ನಡೆದು ಕೊಳ್ಳುತ್ತಿದ್ದರೆನ್ನುವುದು. ಇಂತಹ ಬೀಗರು ನೂರು ಜನವನ್ನಾದರೂ ಸುಧಾರಿಸಬಹುದಪ್ಪಾ. ನನ್ನ ಮಾತು ಕೇಳು—ಈ ಮದುವೆಯನ್ನು ನಿಶ್ಚಯಿಸಿ ಭಾದ್ರಪದದಲ್ಲಿ ಲಗ್ನವಿದೆ, ಮಂಗಳಕಾರ್ಯ ಮುಗಿಸಿಬಿಡು."

ಹಿರಣ್ಯಪ್ಪನವರ ಮಾತು ತೆಗೆದುಹಾಕುವ ಹಾಗಿರಲಿಲ್ಲ ಮನೆಯಲ್ಲಿಮಾತ್ರವಲ್ಲದೆ ಕುಲದಲ್ಲಿಯೇ ಅವರ ಸ್ಥಾನ ದೊಡ್ಡದಾಗಿತ್ತು. ವೆಂಕಟಸುಬ್ಬಯ್ಯ ದೊಡ್ಡ ಮನಸ್ಸು ಮಾಡಿ 'ಆಗಲಿ' ಎಂದು ಒಪ್ಪಿದರು.

ರಾಮು ರೇಗಾಟ ಹಾರಾಟವನ್ನು ಮದುವೆ ಮನೆಯಲ್ಲಿಯೂ ಬಿಡಲಿಲ್ಲ. ಕಾಫಿ ಬರುವ್ರದು ಹೊತ್ತಾಯಿತೆಂದು ಒಂದು ದಿವಸ ರೇಗಿದ್ದ. ಔಪಾಸನೆ ಮಾಡುವಾಗ ತುಪ್ಪದ ಹೊಗೆ ಕಣ್ಣುಮೂಗಿಗೆಲ್ಲಾ ಸುತ್ತಿಕೊಂಡಿತೆಂಸೂ ರೇಗಿದ್ದ. ಇನ್ನೊಂದು ದಿವಸ ತನ್ನ ಹೆಂಡತಿ ಪದ್ಮಾಳೆ ಮಧ್ಯಾಹ್ನ ಕಾಫಿ ತರಲಿ

ಎಂದು ಹೇಳಿಕಳುಹಿಸಿದ್ದ. ಹಳ್ಳಿಗಾಡು ಹುಡುಗಿ. ಜತೆಗೆ ಕೇವಲ ಸನಾತನ ವಾತಾವರಣದಲ್ಲಿಯೇ ಬೆಳೆದಿದ್ದವಳು. ಅವಳು ಒಪ್ಪಲಿಲ್ಲ. ಮನೆಯವರೆಲ್ಲಾ ಪಂಚಾಯಿತಿ ಮಾಡಿದಮೇಲೆ ಕಾಫಿ ತಿಂಡಿಯನ್ನು ತೆಗೆದುಕೊಂಡು ಹೋಗಿ ಗಂಡನ ಕೋಣೆಯ ಬಾಗಿಲು ಬಳಿ ಇಟ್ಟು ಓಡಿ ಬಂದುಬಿಟ್ಟಳು. ರಾಮು ರೇಗಿಕೊಂಡು ಕಾಲಿನಲ್ಲಿ ತಿಂಡಿ ಕಾಫಿಯನ್ನು ಒದೆದುಬಿಟ್ಟ. ತೊಟ್ಟಿಯಲ್ಲಿದ್ದ ಹಿರಣ್ಣಯ್ಯನವರ ಮನೆಯ ಹೊಸ ಜಮಖಾನಕ್ಕೆ ಕಾಫಿಯ ಅಭಿಷೇಕ ವಾಯಿತು.

ಹಾಸ್ಯಕ್ಕೂ ರಾಮುವಿಗೂ ಬದ್ಧದ್ವೇಷ. ಹಿರಣ್ಣಯ್ಯನವರ ಪುರೋಹಿತರು ಶಾಮಭಟ್ಟರು ಹಾಸ್ಯಪ್ರಿಯರು. ಅವರ ಹಾಸ್ಯ ನಾಲ್ಕು ತಲೆಮಾರು ಹಿಂದಿನದಾದರೂ ಅದನ್ನು ನಿಷ್ಕಲ್ಮಷ ರೀತಿಯಲ್ಲಿ ಹೇಳುವುದು ಭಟ್ಟರ ವೈಶಿಷ್ಟ್ಯವಾಗಿತ್ತು. ಮೊದಲನೆಯ ದಿವಸವೇ ರಾಮು ಭಟ್ಟರಿಗೆ ಚುರುಕು ಮುಟ್ಟಿಸಿದ್ದ. ಸಲಿಗೆಯಿಂದ ಭಟ್ಟರು ರಾಮುವನ್ನು ಏಕವಚನದಲ್ಲಿ ಸಂಬೋಧಿಸಿದ್ದರು.

"ನೀನೂ ತಾನೂ ಬಿಟ್ಟುಬಿಡಿ, ಭಟ್ಟರೆ. ನೀವು ಏಕವಚನ ಉಪಯೋಗಿಸಿದರೆ ನಾನೂ ಉಪಯೋಗಿಸಬೇಕಾದೀತು !"

ಎಂದು ಹೇಳಲು ಭಟ್ಟರು ಅವಾಕ್ಕಾದರು. ರಾಮುವೆಲ್ಲಿ 'ನೀನೂ ತಾನೂ' ಉಪಯೋಗಿಸಿಬಿಡುವನೋ ಎಂದು ಹೆದರಿ 'ಅಳಿಯದೇವರು ದಯೆ ಮಾಡಿಸಬೇಕು, ಕೂತುಕೊಳ್ಳೋಣವಾಗಬೇಕು—ನಿಂತುಕೊಳ್ಳುವ ಕೃಪೆ ಮಾಡಬೇಕು' ಎಂದು ಅತಿಮರ್ಯಾದೆಯನ್ನು ಆರಂಭಿಸಿಬಿಟ್ಟಿದ್ದರು. ರಾಮು ಒಳಗೇ ಕುದಿಯುತ್ತಿದ್ದರೂ ವಿಧಿಯಿಲ್ಲದೆ ಸುಮ್ಮನಿರಬೇಕಾಗಿತ್ತು.

ಉರುಟಣೆ ಮಾಡಿಸುವಾಗ ಭಟ್ಟರ ಹಾಸ್ಯಪ್ರಿಯತೆ ಪೂರ್ಣಕಳೆಯನ್ನು ಪಡೆಯುತ್ತಿತ್ತು. ಪದ್ಮನಿಗೆ ಉರುಟಣೆ ಹೇಳಿಕೊಡುತ್ತಾ

"ಅತ್ತೆಯ ಮಗನೆ–ಕೋತಿಯ ಮರಿಯೆ
ಮಾವನ ಮಗನೆ–ಮಲ್ಲಿಗೆಯ ಅರಳೆ.
ಎನ್ನ ಮನದನ್ನ–ನಮ್ಮ ಮನೆ ತಂಗಳನ್ನ
ರಾಮಚಂದ್ರ ಆಗಸರೇ ನಿಮ್ಮ ಬಾಳೆಯ ಕಂಬದಂತಹ ಕಾಲುಗಳಿಗೆ ಅರಿಶಿನ ಹಚ್ಚುತ್ತೇನೆ !"

ಎಂದು ಒಂದೊಂದು ಹಾಸ್ಯೋಕ್ತಿಗಳನ್ನು ಸೇರಿಸುತ್ತಿದ್ದರು. ರಾಮು ಮೊದಲನೆಯ ದಿವಸ ಎಲ್ಲವನ್ನೂ ಕೇಳಿಕೊಂಡು ಸುಮ್ಮನಿದ್ದ. ಎರಡನೆಯ ದಿವಸ ಭಟ್ಟರು 'ಅತ್ತೆಯ ಮಗನೇ ಕೋಡಗಿಯ ಮರಿಯೆ !' ಎಂದು ಹೇಳಿ

ಕೊಟ್ಟ ಕೂಡಲೆ, ಎದುರಿಗಿದ್ದ ಕನ್ನಡಿಗಳಶದ ಕನ್ನಡಿಯನ್ನು ಭಟ್ಟರ ಮುಖಕ್ಕೆ ತೋರಿ

"ಇದು—ನನಗಿಂತ ನಿಮಗೇ ಹೆಚ್ಚು ಒಪ್ಪುತ್ತೆ, ಭಟ್ಟರೆ"

ಎಂದು ಅವರ ಮುಖ ಮುರಿದುಬಿಟ್ಟ. ಅಂದಿನಿಂದ ಬೀಗರ ಹಾಡುಗಳ ಹೊಡೆದಾಟ, ಪಿಟ್ಟೆಹಿಟ್ಟಿನ ಪೆಟ್ಟಾಟ, ಹಪ್ಪಳದ ಹುಡಿಯಾಟಗಳೆಲ್ಲಾ ನಿಂತೇಹೋದವು. ಬೀಗರ ಕಡೆಯುವರೆಲ್ಲಾ ತುಂಬ ಅಸಮಾಧಾನಪಟ್ಟು ಕೊಂಡರು. ಸಾವಿತ್ರಮ್ಮ ಮಗನ ಚರ್ಯೆಗೆ ಬೇಸರಪಟ್ಟುಕೊಂಡು "ಓದಿದರೆ ಬಂತೇ ಭಾಗ್ಯ. ಗುಣ ಇರಬೇಕು" ಎಂದು ಕಣ್ಣಲ್ಲಿ ನೀರು ಹಾಕಿಕೊಂಡರು.

ಮದುವೆಯೇನೋ ಮುಗಿಯಿತು. ಯಾರಿಗೂ ಸಮಾಧಾನವಾಗಲಿಲ್ಲ. ಹಿರಣ್ಣಯ್ಯನವರಿಗೆ ಖರ್ಚು ಮಿಗಲಿಲ್ಲ; ಆದರೆ ಅತಿಥಿಗಳು ಸಂತೋಷ ಪಡಲಿಲ್ಲ; ಎಲ್ಲರ ಬಾಯಲ್ಲೂ ರಾಮುವಿನ ಕಟುಮಾತುಗಳೇ. ಕಟುಬಾಯಿ ಕಾವೇರಮ್ಮನವರು ಅಂದೇ ಬಿಟ್ಟರು "ಸರಿಹೋಯಿತು ಬಿಡಿ. ಕಂತೆಗೆ ತಕ್ಕ ಬೊಂತೆ! ಹೆಣ್ಣಿನ ರೂಪ, ಗಂಡಿನ ಗುಣ ಎರಡಕ್ಕೂ ಚೆನ್ನಾಗಿ ಕೂಡುತ್ತೆ" ಎಂದು.

೧೩

ಹೀಗಾಡುತ್ತಾ ಹಾಗಾಡುತ್ತಾ ಲಕ್ಷ್ಮಣನ ಮದುವೆಯೂ ಬಂದೇ ಬಿಟ್ಟಿತು. ಲಕ್ಷ್ಮಣನ ಇಚ್ಛೆಯಂತೆ ಒಂದೇ ದಿವಸದಲ್ಲಿ ಕಾರ್ಯಕಲಾಪ ಗಳೆಲ್ಲಾ ಮುಗಿದುಹೋದವು. ರಾಮು ಪುಣೆಗೆ ಹೋಗಿದ್ದವನು ಲಗ್ನಕ್ಕೆ ಬಂದುಹೋದ. ತಮ್ಮನ ಮೇಲೆ ಇಷ್ಟು ಸೌಜನ್ಯ ತೋರಿದನಲ್ಲಾ ಎಂದು ಎಲ್ಲರೂ ಸಂತೋಷಪಟ್ಟರು.

ತಮ್ಮ ಬಲ ದಿನೇ ದಿನೇ ಕುಂದುತ್ತ ಬಂದಿದ್ದರೂ ಮೀನಾಕ್ಷಮ್ಮನವರು ಅದನ್ನ ತೋರಗೊಡುತ್ತಿರಲಿಲ್ಲ. ಒಂದರಮೇಲೊಂದು ಬಂದ ಎರಡು ಮದುವೆ ಗಳ ಆಯಾಸ ಮೀನಾಕ್ಷಮ್ಮನವರನ್ನು ತೀರ ಹಣ್ಣುಮಾಡಿಬಿಟ್ಟಿತು. ಹಾಸಿಗೆ ಹಿಡಿದು ಮಲಗಿಬಿಟ್ಟರು. ಸಂಜೆಯ ಹೊತ್ತಿಗೆ ಸಣ್ಣ ಜ್ವರ ಬಂದು ನಿಶ್ಶಕ್ತಿ ಯನ್ನು ಹೆಚ್ಚಿಸುತ್ತಿತ್ತು. ಜ್ವರದ ಜತೆಗೆ ಪ್ರಬಲವಾದ ಕೆಮ್ಮು ಆರಂಭ ವಾಯಿತು. ಶ್ವಾಸಕೋಶಗಳಿಗೆ ಅಪಾಯವಾಗಿದೆ, ನ್ಯೂಮೋನಿಯಾ ಇರ ಬಹುದು ಎಂದು ಡಾಕ್ಟರು ಪೆನಿಸಿಲಿನ ಚೀಲ, ಆ್ಯಂಟಿ ಫ್ಲಾಜಸ್ಟಿನ್ ಚಿಕಿತ್ಸೆಯನ್ನು ಆರಂಭಿಸಿದರು. ಕೆಮ್ಮು ಬಂದು ನಿಂತಿತೆಂದರೆ ಪುನರ್ಜನ್ಮ ಬಂದಂತಾಗುತ್ತಿತ್ತು. ಎದೆಯಲ್ಲೆಲ್ಲಾ ಉರಿ.

ಡಾಕ್ಟರ ಚಿಕಿತ್ಸೆಯಿಂದ ಮಧ್ಯೆ ಮಧ್ಯೆ ಸ್ವಲ್ಪ ಗುಣ ಕಂಡುಬರುತ್ತಿತ್ತು. ಮತ್ತೆ ಯಥಾಪ್ರಕಾರವಾಗುತ್ತಿತ್ತು. ತಡೆದಿದ್ದ ಪ್ರವಾಹ ಕಟ್ಟೆಯನ್ನೊಡೆದು ಕೊಂಡು ಹೋಗುವಂತೆ ಹೆಚ್ಚಿನ ವೇಗದಲ್ಲಿ ಕೆಮ್ಮು ಆರಂಭವಾಗಿಬಿಡುತ್ತಿತ್ತು. ತಾಯಿಯ ಸ್ಥಿತಿ ಲಕ್ಷ್ಮಣನ ಚೇತನವನ್ನು ಉಡುಗಿಸಿಬಿಟ್ಟಿತು. ಅವನಿಗೆ ಯಾವುದರಲ್ಲಿಯೂ ಆಸಕ್ತಿಯಿಲ್ಲದಂತಾಯಿತು. ತಾಯಿಯ ಹಾಸಿಗೆಯನ್ನು ಬಿಟ್ಟು ಕದಲುತ್ತಿರಲಿಲ್ಲ. ಆಕೆಯ ಎಲ್ಲಾ ಕೆಲಸಗಳನ್ನೂ ತಾನೇ ನಿರ್ವಹಿಸು ತ್ತಿದ್ದ. ಕಾಹಿಲೆ ವಿಚಾರದಲ್ಲಿ ಲಕ್ಷ್ಮಣನಿಗೆ ಅನುಮಾನ ಬಂದಿತ್ತು. ಒಂದು ದಿನ ಡಾಕ್ಟರು ಭೇಟಿ ಕೊಟ್ಟು ಹಿಂದಿರುಗುತ್ತಿದ್ದಾಗ ಅವರನ್ನು ಹಿಂಬಾಲಿಸಿ

"ಸರ್!"

"ಏನು ಲಕ್ಷ್ಮಣರಾವ್?"

"ನಮ್ಮ ತಾಯಿಗೆ ಖಂಡಿತವಾಗಿಯೂ ನ್ಯೂಮೋನಿಯಾ ಏನು? ಇದ್ದು ದನ್ನು ಸಂಕೋಚವಿಲ್ಲದೆ ತಿಳಿಸಿಬಿಡಿ."

"ಅಷ್ಟೇಪ್ಪ. ಏನೂ ಹೆದರಬೇಡಿ. ಪ್ರಾಣಕ್ಕೇನೂ ಭಯವಿಲ್ಲ."

"ನೀವು ನನ್ನನ್ನು ಸಮಾಧಾನಗೊಳಿಸುವುದಕ್ಕೆ ಮರೆಮಾಜಬೇಕಾದ್ದಿಲ್ಲ. ದಯೆಯಿಟ್ಟು ನಿಜವನ್ನು ತಿಳಿಸಿ."

"ಲಕ್ಷ್ಮಣರಾವ್, ಅದು ನ್ಯೂಮೋನಿಯಾ ಅಲ್ಲ—ಕ್ಷಯ."

"ಪ್ರಾ....ಣ....'

"ಉಳಿಯಬಹುದು. ಆದರೆ ದೇಹ ಬಹಳ ಕೃಶವಾಗಿಹೋಗಿದೆ. ಹೃದಯ ಶ್ವಾಸಕೋಶ ರಕ್ತ ಎಲ್ಲಾ ದುರ್ಬಲವಾಗಿದೆ. ಚೆನ್ನಾಗಿ ಆರೈಕೆ ಮಾಡಿ ನೋಡಿ ಕೊಂಡರೆ ಪ್ರಾಣಕ್ಕೇನೂ ಅಪಾಯ ತಟ್ಟಲಾರದು."

"ಬದುಕಿದೆ!"

ಎಂದು ನಿಟ್ಟುಸಿರುಬಿಟ್ಟ.

ಆರೈಕೆ, ಡಾಕ್ಟರರಿಗೆ ಹೇಳುವುದು ಸುಲಭವಾಗಿತ್ತು. ತಾಯಿಗೆ ಒಂದು ಪಾವು ಹಾಲು ಕುಡಿಸಬೇಕಾದರೆ ಲಕ್ಷ್ಮಣನಿಗೆ ಸಾಕಾಗಿಹೋಗುತ್ತಿತ್ತು. ಮೀನಾಕ್ಷಮ್ಮನವರು ಆರೈಕೆಗೆ 'ಬಡಪೆಟ್ಟಿಗೆ' ಒಪ್ಪುತ್ತಿರಲಿಲ್ಲ. ಲಕ್ಷ್ಮಣ, ಶಾಂತಾ ಮುಷ್ಕರಕ್ಕಾರಂಭಿಸಿದರು. ಮೀನಾಕ್ಷಮ್ಮನವರು ಊಟ ಮಾಡಿದ ಹೊರತೂ ತಾವು ಊಟ ಮಾಡುತ್ತಿರಲಿಲ್ಲ. ಮಕ್ಕಳು ಸೊರಗುವವಲ್ಲಾ ಎಂದುಕೊಂಡು ಅವರು ಆರೈಕೆಗೆ ಒಪ್ಪುತ್ತಿದ್ದರು.

ರಾಯರಿಗೆ ಚಿಂತೆ ಚೆನ್ನಾಗಿ ಹಿಡಿದುಬಿಟ್ಟಿತು. ಸಂಸಾರದ ಎಲ್ಲ ಕಾರ ಭಾರವನ್ನೂ ಸಾವಿತ್ರಮ್ಮನಿಗೆ ಒಪ್ಪಿಸಿಬಿಟ್ಟರು. ತಾವು ತನ್ಮೇಕಚಿತ್ತರಾಗಿ

ಶ್ರೀಮದ್ರಾಮಾಯಣದ ಪಾರಾಯಣೆಗೆ ಕುಳಿತುಬಿಟ್ಟರು. ಮನೆಯಲ್ಲಿ ಒಂದೇ ಸಮನೆ ನವಗ್ರಹಜಪ, ಸೂರ್ಯನಮಸ್ಕಾರ, ಸತ್ಯನಾರಾಯಣ ಪೂಜೆಗಳು ಆರಂಭವಾದವು. ಯಾರು ಯಾವ ಜಪ, ಯಾವ ಪೂಜೆಯನ್ನು ಸೂಚಿಸಿ ದರೂ ರಾಯರು ಕೂಡಲೇ ಒಪ್ಪುತ್ತಿದ್ದರು. ಭೀಮರಾಯರ ಜತೆಯಲ್ಲಿ 'ರಾಯರ ವೃಂದಾವನ'ಕ್ಕೂ ಹೋಗಿ ನಮಸ್ಕಾರ ಮಾಡಿ ಬರುತ್ತಿದ್ದರು. ರಾಯರ ಮುಖದ ಮೇಲೆ ಸುಕ್ಕು, ತಲೆಯಲ್ಲಿ ಎಳ್ಳು ಚೆಲ್ಲಿದಂತೆ ಬಿಳಿಯ ಕೂದಲೂ ಕಾಣಿಸಿಕೊಳ್ಳಲಾರಂಭಿಸಿದವು.

ಅಮ್ಮಾವರ ಕಾಹಿಲೆ ವಿಚಾರ ಹೊಸಹಳ್ಳಿಗೆ ಮುಟ್ಟಿತು. ಕಂದಾಯದ 'ಬೇಬಾಕು' ಮಾಡುವುದಕ್ಕೆ ಹೋಗಿದ್ದ ಶಾಮಣ್ಣನವರು ಮೀನಾಕ್ಷಮ್ಮ ನವರ ಕಾಹಿಲೆ ವಿಚಾರ ರಂಗೇಗೌಡನ ಹತ್ತಿರ ಅಂದಿದ್ದರು. ಅದೇ ವಾರ ಗೌಡ ಕೈಯಲ್ಲಿ ಒಂದು ಬಾಳೆಯ ಗೊನೆ, ಮೂಟೆಯಲ್ಲಿ ೧೦-೨೦ ಎಳನೀರು ಹಾಕಿಕೊಂಡು ರಾಯರ ಮನೆಗೆ ಬಂದು ಇಳಿದೇ ಬಿಟ್ಟ.

ಅಮ್ಮಾವರಿಗೆ ಕಾಣಿಸಿಕೊಂಡ. ಮೊದಲು ಗುರುತೇ ಸಿಕ್ಕಲಿಲ್ಲ. ಅಮ್ಮಾ ಅವರು ಒಣಗಿ ಕಾಷ್ಠವಾಗಿದ್ದುದನ್ನು ಕಂಡು ಬಳಬಳನೆ ಅವನ ಕಣ್ಣುಗಳಲ್ಲಿ ನೀರು ಬಂತು. ನಿಂತಲ್ಲಿಯೇ ಅಡ್ಡಬಿದ್ದು ಒಂದೆಡೆ ಕುಳಿತ.

"ಯಾರು ರಂಗಪ್ಪನೇ?" ಎಂದರು ಮೀನಾಕ್ಷಮ್ಮನವರು. ಆಲೈಸಿದ ಹೊರತೂ ಧ್ವನಿ ಕೇಳಿಬರುತ್ತಿರಲಿಲ್ಲ.

"ಔದ್ರಮ್ಮಣ್ಣಿ."

"ಏನು ಬಂದೆ, ರಂಗಪ್ಪ?"

"ಇಂಗೇ ಒಸಿ ಕೋಲ್ಟಿನ ಕೆಲಸ ಇತ್ತು, ನೋಡ್ಕೊಂಡು ಓಗಾನಾಂತ ಬಂದೆ. ಈಸು ದಿನವಾದ್ರೂ ನಮ್ಗೆ ತಿಳಿಸೋಕೆ ಬ್ಯಾಡ್ವಾ, ಅಮ್ಮಣ್ಣೀ?"

"ಏನು ದೊಡ್ಡ ವಿಷಯಾಪ್ಪ. ಮಕ್ಕಳುಮರಿ ಎಲ್ಲಾ ಚಂದಾಕಿದ್ದಾ ರೇನೋ?"

"ಅವ್ರೇ ಅಮ್ಮಣ್ಣೀ."

"ನಿನ್ನ ಮಗಳು ಚೆನ್ನಿ ಹೆತ್ತಳೇನೋ?"

"ಎತ್ತಳು ತಾಯಿ—ಗಂಡುಮಗ."

"ಎಸರೇನಿಟ್ರಿ?"

"ಕರಿಯಾಂತ."

"ಕೃಷ್ಣದೇವರ ಹೆಸರಾಯಿತು. ನಿನ್ನ ಮಗ ಏನು ಮಾಡಿಕೊಂಡಿದ್ದಾ ನೆಯೋ?"

"ಜತೇಲೇ ಗೆಯ್ಕೊಂಡವ್ನೆ."

"ಲಚ್ಮಕ್ಕ ಚೆಂದಾಕವಳೇನೋ ?"

"ಅವ್ಳೇ ಅಮ್ಮಣ್ಣಿ. ಈಗ ಸಂಸಾರ ನೇರಾಯ್ತು. ಅವನೂ ಚೆಂದಾಕೆ ಮಡಕೊಂಡವ್ನೆ. ಗಂಡ ಎಂಡ್ರು ಮುಚ್ಚಟೆಯಾಗವ್ರೆ. ಎಲ್ಲಾ ನಿಮ್ಮ ಅರಕೆ ನಮ್ಮವ್ವ, ಒಡೆದೋಗಿದ್ದ ಸಂಸಾರ ಒಂದು ಮಾಡ್ದಿ."

"ಎಲ್ಲಾರ್ನೂ ಇನ್ನೊಂದು ಸಲ ನೋಡಬೇಕು, ರಂಗಪ್ಪ. ನಿನ್ನ ಹಸ ನನ್ನ ಜ್ಞಾಪಿಸಿಕೊಳ್ಳುತ್ತೇನೋ ?"

"ಅದರ ದುಕ್ಕ ಬ್ಯಾಡ್ರವ್ವಾ. ನಿಮ್ಮ ಅಟ್ಟಿ ತಾವಕ್ಕೆ ನೂರ್ಸಲ ಓಡೋಯ್ತದೆ, ಅರಚಿ ಅರಚಿ ಗಂಟಲು ಕಿತ್ಕೊಳ್ತೈತೆ."

"ಮೂಕಜೀವ. ಅದು ಕೂಡ ನನ್ನ ಮರೆತಿಲ್ಲ."

"ಅಯ್ಯೋ ನಮ್ಮವ್ವಾ. ನಿಮ್ಮನ್ನ ಯಾರು ಮರೀತಾರೆ ನನ್ನ ತಾಯಿ. ಅಳ್ಳಿ ನೀವು ಬುಟ್ಟುಬುಟ್ಟಿರಿ—ಆಳು ಆಳು ಸುರೀತೈತೆ. ಊರ ಲಕ್ಸ್ಮಿ ಬಿಟ್ಟು ಒಂಟೋದಂಗೆ ಆಗೋಯ್ತು—ಯಾವಾಗ ಬತ್ತೀರವ್ವಾ ?"

"ಬರ್ತೀನಪ್ಪಾ, ಸ್ವಲ್ಪ ಗುಣವಾಗುತ್ತಲೂ ನಮ್ಮ ರಾಮಪ್ಪ, ಲಚ್ಚಪ್ಪ ಇಬ್ಬರ ಹೆಂಡತಿಯರನ್ನೂ ಕರೆದುಕೊಂಡು ಬರುತ್ತೇನೆ. ಏಳು—ಊಟ ಮಾಡು"

ಎಂದು ಉಪಚರಿಸಿದರು. ರಂಗೇಗೌಡ ಊರು ತಲುಪಿದವನೇ ಕೂಲಂಕಷ ವಾಗಿ ಅಮ್ಮಾವರ ಸುದ್ದಿ ಎಲ್ಲರಿಗೂ ತಿಳಿಸಿದ. ಅಮ್ಮಾವರಿಗೆ ಗುಣವಾದರೆ ಊರ ಮುಂದಿನ ಮಾರಮ್ಮನಿಗೆ ಒಂದು ಕೋಣ ಕೊಡತಕ್ಕದ್ದೆಂದು ನಿರ್ಧರಿ ಸಿದರು ಭಟ್ಟರಿಗೆ ಹೇಳಿ ನಂಜುಂಡೇಶ್ವರನಿಗೆ ಎಳ್ಳೆಣ್ಣೆ ದೀಪದ ಏರ್ಪಾಟು ಮಾಡಿದರು. ಮೂರು ಮೂರು ದಿವಸಕ್ಕೆ ಒಬ್ಬೊಬ್ಬರು ಬೆಂಗಳೂರಿಗೆ ಹೋಗಿ ಅಮ್ಮನವರನ್ನು ನೋಡಿ ಬಂದು ಅವರ ಆರೋಗ್ಯದ ವಿಚಾರ ಇತರರಿಗೆ ತಿಳಿಸು ತ್ತಿದ್ದರು.

ರಾಮು ಪುಣೆಯಲ್ಲಿದ್ದುದು ಅನುಕೂಲವೇ ಆಯಿತು. ಅಲ್ಲಿಂದ ಉತ್ತಮ ಹಣ್ಣುಗಳನ್ನು ಅವನು ವಾರವಾರವೂ ಕಳುಹಿಸುತ್ತಿದ್ದ. "ಪುಣೆಯ ಅಂಜೂರ ಮೀನಾಕ್ಷಮ್ಮನವರ ಪ್ರಕೃತಿಗೆ ತುಂಬ ಹಿತವನ್ನುಂಟುಮಾಡುತ್ತ ಬಂತು. ಒಂದೆರಡು ತಿಂಗಳಲ್ಲಿ ಎದ್ದು ಮೆಲ್ಲನೆ ಮನೆಯಲ್ಲಿಯೇ ನಡೆಯುವ ಮಟ್ಟಿ ಗಾದರು. ರಾಯರು ಸ್ವಲ್ಪ ನಿದ್ರಿಸುವುದಕ್ಕೆ ಮೊದಲುಮಾಡಿದರು.

ಪರೀಕ್ಷೆ ಮುಗಿಸಿಕೊಂಡು ರಾಮು ಊರಿಗೆ ಬಂದ. ಮೀನಾಕ್ಷಮ್ಮನವರು ಗುಣವಾದದ್ದು ಅವನಿಗೂ ಸಂತೋಷವನ್ನುಂಟುಮಾಡಿತ್ತು.

"ನೋಡಿದಿರೋ, ಹೇಗಿದೆ ನಾನು ಕಳುಹಿಸಿದ ಹಣ್ಣುಗಳ ಪ್ರಭಾವ!" ಎಂದು ಶಾಮಣ್ಣನವರ ಹತ್ತಿರ ಜಂಭ ಹೊಡೆದುಕೊಂಡ.

ಶಾಮಣ್ಣನವರು ರಾಮುವಿನ ಮಾತನ್ನು ಸಹಿಸಲಾರದೆ

"ಹಣ್ಣು ತಾವೇನೂ ಸೃಷ್ಟಿಸಲಿಲ್ಲವಲ್ಲಾ. ಕೊಂಡು ತಾನೇ ಕಳುಹಿಸಿದಿರಿ?"

ಎಂದು ಚುರುಕಾಗಿ ಮುಟ್ಟಿಸಿದ್ದರು.

ರಾಮುವಿನ ಪರೀಕ್ಷೆಯ ಫಲಿತಾಂಶ ಹೊರಬಿತ್ತು. ಎಲ್‌ಎಲ್.ಬಿ. ಡುಂ ಎಂದು ಹೋಗಿತ್ತು. ಆದರೆ ಎಂ.ಎ. ಎರಡನೆಯ ತರಗತಿಯಲ್ಲಿ ತೇರ್ಗಡೆಯಾಗಿತ್ತು. ರಾಮುವಿಗೆ ಸಖೇದಾಶ್ಚರ್ಯವಾಯಿತು. ಎಲ್‌ಎಲ್.ಬಿ. ಹೇಗೆ ಹೋಯಿತು? ವಿಶ್ವವಿದ್ಯಾನಿಲಯಕ್ಕೆ ಕಣ್ಣಿಲ್ಲ ಎಂದು ಮರುಗಿ ಅಧಿಕಾರಿಗಳನ್ನು ಶಪಿಸಿದ.

೧೪

ಅದೇ ವರ್ಷ ಗೋಪಾಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕಟ್ಟಿದ್ದ. ಅವನ ದುರ್ದೈವದಿಂದ ನಾಪಾಸಾಗಿ ಹೋಗಿತ್ತು. ಗೋಪಾಲಿ ಪರೀಕ್ಷೆಗಳನ್ನು ಪಾಸು ಮಾಡುವುದರಲ್ಲಿ ರಾಮಣ್ಣನನ್ನು ಅನುಸರಿಸದೆ ಲಕ್ಷ್ಮಣನನ್ನು ಅನುಸರಿಸಿದ್ದ. ಲೋವರ್ ಸೆಕಂಡರಿಯಲ್ಲಿಯೂ ಅವನು ಮೊದಲನೆಯ ವರ್ಷವೇ ತೇರ್ಗಡೆ ಹೊಂದಿರಲಿಲ್ಲ. ಅದೇ ಸಂಪ್ರದಾಯವನ್ನೇ ಮುಂದೆಯೂ ಅನುಸರಿಸಿಕೊಂಡು ಹೋಗುವಂತೆ ಮೆಟ್ರಿಕ್ಯುಲೇಷನ್ನಿನಲ್ಲಿಯೂ ನಾಪಾಸಾಗಿದ್ದ.

ಲಕ್ಷ್ಮಣ ನಾಪಾಸಾಗುವುದಕ್ಕೆ ಒಂದು ಕಾರಣವಿತ್ತು. ಶಾಲೆಯ ಶಿಕ್ಷಣ ಅವನಿಗೆ ತೃಪ್ತಿಯನ್ನು ಕೊಟ್ಟಿರಲಿಲ್ಲ. ಅವನಿಗೆ ಸಾಹಿತ್ಯದ ಮೇಲೆ ವಿಶೇಷ ಪ್ರೇಮವಿತ್ತು. ಇತಿಹಾಸವನ್ನು ಕಂಡರೆ ತಾತ್ಸಾರವಿರಲಿಲ್ಲ. ಅವನು ಸಾಹಿತ್ಯ, ಇತಿಹಾಸಗಳ ಜತೆಗೆ ಗಣಿತ (ರೇಖಾಗಣಿತ, ಬೀಜಗಣಿತ ಇತ್ಯಾದಿ), ಭೂಗೋಳ, ಪೌರಶಾಸ್ತ್ರ ಮೊದಲಾದ ವಿಷಯಗಳನ್ನೂ ಕಲಿಯಬೇಕಾಗಿತ್ತು. ಭಾಷೆಗಳಲ್ಲಿ ಅವನು ಎಷ್ಟು ಮುಂದಾಗಿದ್ದನೋ ಗಣಿತದಲ್ಲಿ ಅಷ್ಟು ಹಿಂದಾಗಿದ್ದ. ಪರೀಕ್ಷೆಯಲ್ಲಿಯೂ ಅವನಿಗೆ ಕೈಕೊಟ್ಟಿದ್ದುದು ಗಣಿತವೇ.

ಶಾಲೆಯ ಶಿಕ್ಷಣದ ಪದ್ಧತಿ ಗೋಪಾಲಿಗೆ ತುಂಬ ಬೇಸರವನ್ನುಂಟುಮಾಡಿತ್ತು. ಅಚ್ಚಿನ ಇಟ್ಟಿಗೆಗಳನ್ನು ತಯಾರಿಸಿದಂತೆ ಎಲ್ಲಾ ವಿದ್ಯಾರ್ಥಿಗಳಿಗೂ ಒಂದೇ ಬಗೆಯ ಶಿಕ್ಷಣವನ್ನಿತ್ತು, ಒಂದೇ ಎರಕದಲ್ಲಿ ಅವರನ್ನು ಹುಯ್ಯುತ್ತಿದ್ದುದು ಶಾಲೆಯ ಪದ್ಧತಿಯೆಂದು ಅವನು ಮನಗಂಡಿದ್ದ. ಈ ಶಿಕ್ಷಣದಿಂದ ವಿದ್ಯಾರ್ಥಿಗಳು ಬೆನ್ನುಲುಬು ನೀಗಿಕೊಂಡು ಪರಾವಲಂಬಿ

ಗಳಾಗುತ್ತಿದ್ದುದನ್ನು ಕಣ್ಣಾರೆ ಕಂಡಿದ್ದ.

ಅವನ ಮನಸ್ಸು ವಿಶೇಷವಾಗಿ ಸಾಹಿತ್ಯದ ಕಡೆಗೆ ಓಡುತ್ತಿತ್ತು. ಪಾಠಕ್ಕೆ ಷೆಲ್ಲಿ ಕವಿಯ ಒಂದು ಪದ್ಯ ಸಾಕಾಗಿದ್ದರೆ ಅಷ್ಟನ್ನೇ ಓದಿ ಮುಗಿಸು ವುದು ಗೋಪಾಲಿಗೆ ತೃಪ್ತಿಯನ್ನುಂಟುಮಾಡುತ್ತಿರಲಿಲ್ಲ. ಷೆಲ್ಲಿ ಕವಿಯ ಎಲ್ಲಾ ಕಾವ್ಯಗಳು, ಅವನ ಜೀವನ ಚರಿತ್ರೆ, ಅವನ ಮೇಲೆ ಮತ್ತು ಅವನ ಕಾವ್ಯಗಳ ಮೇಲೆ ಪ್ರಕಟವಾಗಿದ್ದ ವಿಮರ್ಶೆಗಳು—ಇಷ್ಟನ್ನೂ ಓದಿ ಷೆಲ್ಲಿಯ ಮೇಲೆ ತನ್ನ ಅಭಿಪ್ರಾಯವನ್ನು ಜೋಡಿಸಿಕೊಳ್ಳುತ್ತಿದ್ದ. ಒಂದೊಂದು ಸಲ ಗೋಪಾಲಿಯ ಉಪಾಧ್ಯಾಯರು ತಮಗಿಂತಲೂ ತಮ್ಮ ಶಿಷ್ಯನಿಗೆ ಒಂದು ವಿಷಯ ಹೆಚ್ಚು ಗೊತ್ತಿದೆಯೆಂಬುದನ್ನರಿತು ಆ ಮಹಾಪರಾಧಕ್ಕಾಗಿ ಅವನನ್ನು ದಂಡಿಸುತ್ತಿದ್ದರು.

ಹೊಸ ವಿಚಾರ, ತತ್ವಗಳನ್ನರಿಯಲು ಗೋಪಾಲಿಯ ಮನಸ್ಸು ಬಹಳ ತವಕಪಡುತ್ತಿತ್ತು. ಇದಕ್ಕಾಗಿ ಎಷ್ಟು ಶ್ರಮವಾದರೂ ಅವನು ಗಮನಿಸುತ್ತಿ ರಲಿಲ್ಲ. ಅವನ ವಯಸ್ಸಿನ ಹುಡುಗರು, ಅಪ್ಪ ಕೊಡುತ್ತಿದ್ದ ಚಿಲ್ಲರೆ ಹಣ ವನ್ನು ಕಾಲರ್ ಟೈಗಳಿಗೆ ವಿನಿಯೋಗಿಸುತ್ತಿದ್ದರೆ ಗೋಪಾಲಿ ಪುಸ್ತಕಗಳನ್ನು ಕೊಳ್ಳಲಿಕ್ಕೆ ವಿನಿಯೋಗಿಸುತ್ತಿದ್ದ.

ಗೋಪಾಲಿಗೆ ತನ್ನ ಶಾಲೆಯ ಇಂಗ್ಲಿಷ್ ಮತ್ತು ಇತಿಹಾಸದ ಶಿಕ್ಷಕ ರನ್ನು ಕಂಡರೆ ತುಂಬ ಗೌರವ. ಆ ಶಿಕ್ಷಕರ ಹಿಂಡಿನಲ್ಲಿ ಅವರೇ ಇಬ್ಬರು ವಿದ್ವಾಂಸರು. ತಮ್ಮ ವಿಷಯಗಳಲ್ಲಿ ಪೂರ್ಣ ಪಾಂಡಿತ್ಯ ಇಬ್ಬರಿಗೂ ಇತ್ತು. ಜತೆಗೆ ಶಿಷ್ಯರು ನಿಜವಾದ ವಿದ್ಯೆಯನ್ನು ಕಲಿತು, ಮುಂದಕ್ಕೆ ಬರಲಿ ಎಂಬ ಸದಾಶಯವೂ ಅವರ ಮನಸ್ಸಿನಲ್ಲಿತ್ತು.

ಒಂದು ದಿನಸ ಇತಿಹಾಸದ ತರಗತಿಯಲ್ಲಿ ಒಂದು ಪ್ರಕರಣ ನಡೆಯಿತು. ಅಧ್ಯಾಪಕರು ಇಂಗ್ಲೆಂಡಿನ ಇತಿಹಾಸವನ್ನು ಬೋಧಿಸುತ್ತಾ ಮೇರಿಯ ವಿಚಾರ ಪಾಠ ಹೇಳುತ್ತಿದ್ದರು. ಅವಳ ವಿಚಾರ ಹೆಚ್ಚಾಗಿ ಬರೆದಿರುವ ಗ್ರಂಥಕಾರರ ಸಂಗತಿಯನ್ನೂ ತಿಳಿಸುತ್ತಿದ್ದರು. ಆಗ ಗೋಪಾಲಿ

"ರೆನಾಲ್ಡ್ಸ್ ಬರೆದಿರುವ 'ಮೇರಿ ಕ್ವೀನ್ ಆಫ್ ಸ್ಕಾಟ್ಸ್' (Marie Queen of Scots) ಎನ್ನುವ ಕಾದಂಬರಿ ಹೇಗಿದೆ, ಸರ್ ?"

ಎಂದು ಕೇಳಿದ. ಅಧ್ಯಾಪಕರ ಕಣ್ಣು, ಕಿವಿ, ಮೂಗು ಕೆಂಪೇರಿದವು. ತಡೆಯಲಾರದಷ್ಟು ಕೋಪ ಉಕ್ಕೇರಿ ಬಂದಿತು.

"ಗೋಪಾಲ್ !"

"ಸರ್."

"ನೀನು ಒಳ್ಳೆಯ ಹುಡುಗ—ಓದುವುದರಲ್ಲಿ ಒಳ್ಳೆಯ ಅಭಿರುಚಿ ಇಟ್ಟು ಕೊಂಡಿರತಕ್ಕವನು ಎಂದಿದ್ದೆ. ರೆನಾಲ್ಡ್ಸ್ ಮೊದಲಾದ ಕೀಳು ಬರೆಹಗಾರ ರನ್ನೆಲ್ಲಾ ನೀನು ಆಸಕ್ತಿಯಿಂದ ಓದುವುದು ನನಗೆ ಗೊತ್ತಿರಲಿಲ್ಲ. ಈಗ ಗೊತ್ತಾದ ಹಾಗಾಯಿತು."

"ಕ್ಷಮಿಸಿ, ಸರ್. ತಾವು ತಪ್ಪು ತಿಳಿದುಕೊಂಡಿರುವಿರಿ. ನಾನು ಇದುವರೆ ವಿಗೂ ರೆನಾಲ್ಡ್ಸ್‌ನ ಒಂದು ಗ್ರಂಥವನ್ನೂ ಓದಿಲ್ಲ. ತಾವು ಮೇರಿ ವಿಚಾರ ಹೇಳುತ್ತಿದ್ದಿರಿ—ಅವನ 'ಮೇರಿ ಕ್ವೀನ್ ಆಫ್ ಸ್ಕಾಟ್ಸ್' ಹೇಗಿದೆ ಎಂದು ಕೇಳಿದೆ, ಅಷ್ಟೇ."

ಅಧ್ಯಾಪಕರಿಗೆ ಕೋಪವಿಮ್ಮಡಿಸಿತು.

"ತಪ್ಪುಮಾಡಿ–ಸುಳ್ಳೂ ಹೇಳುವೆಯಾ, ಅವಿಧೇಯ. ನಡೆ ಕ್ಲಾಸಿನಿಂದ"

ಎಂದು ಗದರಿಸಿದರು. ಗೋಪಾಲನ ಮನಸ್ಸಿಗೆ ಬಹಳ ವ್ಯಥೆಯಾಯಿತು. ಉಪಾಧ್ಯಾಯರು ತಪ್ಪುಮಾಡುತ್ತಿರುವರಲ್ಲಾ ಎಂದು ಖಿನ್ನನಾದ. ಅವರ ಮಾತಿಗೆ ಮಾತು ಬೆಳೆಸಲಿಚ್ಛಿಸದೆ ತನ್ನ ಪುಸ್ತಕಗಳನ್ನು ಕಂಕುಳಲ್ಲಿಟ್ಟುಕೊಂಡು ನೇರವಾಗಿ 'ಪಬ್ಲಿಕ್ ಲೈಬ್ರರಿ'ಯ ಕಡೆ ನಡೆದ.

ಅಂದಿನಿಂದ ಮೂರು ದಿವಸ ಶಾಲೆಯ ಮುಖ ನೋಡಲಿಲ್ಲ. ಹೊತ್ತಿಗೆ ಸರಿಯಾಗಿ ಮನೆಯಲ್ಲಿ ಊಟ ಮಾಡುವುದು, ಶಾಲೆಯ ಬದಲು 'ಪಬ್ಲಿಕ್ ಲೈಬ್ರರಿ'ಗೆ ಹೋಗಿ ಅಲ್ಲಿ ರೆನಾಲ್ಡ್ಸ್‌ನ ಕಾದಂಬರಿಗಳನ್ನು ಓದುವುದು.

ನಾಲ್ಕನೆಯ ದಿವಸ ಎರಡನೆಯ ಘಂಟೆಯೇ (Period) ಇತಿಹಾಸದ ಕ್ಲಾಸು. ಅಧ್ಯಾಪಕರು ಹಾಜರಿಯನ್ನು ತೆಗೆದುಕೊಳ್ಳುತ್ತಾ

"ಗೋಪಾಲರಾವ್" ಎಂದು ಕೂಗಿದರು.

"ಪ್ರೆಸೆಂಟ್ ಸರ್ (Present Sir)."

ಅಧ್ಯಾಪಕರು ಕತ್ತೆತ್ತಿ ನೋಡಿದರು: ಗೋಪಾಲನೇ ಹಾಜರಿಯನ್ನು ಹೇಳಿದ್ದ.

"ಮೂರು ದಿವಸದಿಂದ ಶಾಲೆಗೆ ಏಕಯ್ಯಾ ಬರಲಿಲ್ಲ?"

"ಸ್ವಲ್ಪ ಕೆಲಸವಿತ್ತು, ಸರ್."

"ಏನು ಕೆಲಸ—ರಜೆಗೆ ಬರೆದುಕೊಳ್ಳುವುದಕ್ಕೇನಾಗಿತ್ತು?"

"ರಜೆ ಕೇಳುವ ಹಾಗಿರಲಿಲ್ಲ."

"ಅಂತಹುದೇನಪ್ಪಾ ರಾಜಕಾರ್ಯ?"

"ಹೇಳೂಂದರೆ ಹೇಳುತ್ತೇನೆ, ಸರ್."

"ಹೇಳಯ್ಯಾ."

"ಅಂದು ನಾನು ರೆನಾಲ್ಡ್ಸ್‌ನ ಕಾದಂಬರಿ ಓದಿಲ್ಲ ಎಂದು ಹೇಳಿದೆ. ತಾವು ನಂಬಲಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆಂದು ಭಾವಿಸಿಕೊಂಡು ನನ್ನನ್ನು ಕ್ಲಾಸಿನಿಂದ ಹೊರಗೆ ಕಳುಹಿಸಿದಿರಿ. ತಮ್ಮ ಮಾತು ಸುಳ್ಳಾಗ ಬಾರದೆಂದು ಈ ಮೂರು ದಿವಸ ರೆನಾಲ್ಡ್ಸ್‌ನ ಕಾದಂಬರಿಗಳನ್ನೆಲ್ಲಾ ಓದಿ ಬಂದಿದ್ದೇನೆ."

ಅಧ್ಯಾಪಕರು ಅವಾಕ್ಕಾದರು. ಗೋಪಾಲನೇ ಮಾತನ್ನು ಮುಂದುವರಿಸಿದ :

"ರೆನಾಲ್ಡ್ಸ್ ನನ್ನ ಮನಸ್ಸಿಗೆ ಬರಲಿಲ್ಲ. ಬಹಳ ಕೀಳು ದರ್ಜೆಯ ಲೇಖಕ. ಕೊಳೆತ ಈರುಳ್ಳಿಯನ್ನು ಮೈಸೂರು ಗಂಧ ಎಂದುಕೊಳ್ಳುವ ಸ್ವಭಾವ ಅವನದು"

ಎಂದ. ಅಧ್ಯಾಪಕರು ಗೋಪಾಲನನ್ನು ಮೇಜಿನ ಬಳಿ ಕರೆದರು. ಅವನ ಕೈ ಹಿಡಿದು "I am sorry, my boy. I have been a great fool." ಎಂದರು. ಅಂದಿನಿಂದ ಗೋಪಾಲನಿಗೂ ಇತಿಹಾಸದ ಅಧ್ಯಾಪಕರಿಗೂ ಹೃತ್ಪೂರ್ವಕವಾದ ಗೆಳೆತನವೇ ಬೆಳೆಯಲಾರಂಭವಾಯಿತು.

ನುಗ್ಗಾಟ, ಹೋರಾಟಗಳು ಗೋಪಾಲನಲ್ಲಿ ಬಹಳ ಕಡಿಮೆ. ಶಾಲೆಯ ಸ್ಪರ್ಧೆಗಳಲ್ಲಿ ಬಹುಮಾನ ತೆಗೆದುಕೊಂಡು, ವಿದ್ಯಾರ್ಥಿಗಣದ 'ವೀರ'ನೆನಿಸಿಕೊಳ್ಳುವುದು ಅವನ 'ಜಾಯಮಾನ'ಕ್ಕೆ ಬಂದಿರಲಿಲ್ಲ. ಪುಸ್ತಕ ಭಂಡಾರದ ಸೌಲಭ್ಯ ಮತ್ತು ಸಾಕಷ್ಟು ಕಾಗದ ಮಸಿ ಇದ್ದರೆ ಆಯಿತು.

ಶಾಲೆಯಲ್ಲಿ ಗೋಪಾಲ ಬರೆಯುತ್ತಿದ್ದ ಪ್ರಬಂಧಗಳನ್ನು ಇಂಗ್ಲೀಷ್, ಕನ್ನಡ ಪಂಡಿತರು ಕೆಲವು ಸಲ ಶಾಲೆಗೆ ಓದಿ ತೋರಿಸುತ್ತಿದ್ದರು. ಅವುಗಳಲ್ಲಿ ಒಂದೆರಡನ್ನು ಶಾಲೆಯ ಪತ್ರಿಕೆಯಲ್ಲಿಯೂ ಪ್ರಕಟಿಸುತ್ತಿದ್ದರು. ಗೋಪಾಲನ ಬರವಣಿಗೆಯ ಶೈಲಿ ಕಾಲೇಜು ವಿದ್ಯಾರ್ಥಿಗೆ ಕೀರ್ತಿ ತರುವಂತಹುದೆಂದು ಅವನ ಅಧ್ಯಾಪಕರೇ ಪ್ರಶಂಸಿಸಿದ್ದರು.

ಗ್ರಂಥಗಳನ್ನು ಓದುವ ಕುತೂಹಲವಿದ್ದಂತೆ ಬರೆಯುವ ಕುತೂಹಲವೂ ಇದ್ದಿತು. ತನ್ನ ಆನಂದಕ್ಕಾಗಿ ಕೆಲವು ಕಥೆ, ಪ್ರಬಂಧಗಳನ್ನು ಬರೆದಿಟ್ಟು ಕೊಳ್ಳುತ್ತಿದ್ದ. ಅದನ್ನು ಪ್ರಕಟನೆಗೆ ಕಳುಹಿಸುವಷ್ಟು ಧೈರ್ಯವಿಲ್ಲ. ಮನೆಯಲ್ಲಿ ಯಾರಿಗೂ ಗೊತ್ತಾಗಬಾರದೆಂದು ಆಸೆ.

ಗೋಪಾಲ ಅನುವು ದೊರೆತಾಗಲೆಲ್ಲಾ ಏನಾದರೂ ಬರೆಯುತ್ತಿದ್ದುದು ಲಕ್ಷ್ಮಣನಿಗೆ ಗೊತ್ತಿತ್ತು. ಅದೇನೆಂದು ಕೇಳಲು ಸರಿಯಾದ ಅವಕಾಶ ದೊರೆತಿರಲಿಲ್ಲ. ಒಂದು ದಿನ ಗೋಪಾಲ ಕಥೆಯೊಂದನ್ನು ಮುಗಿಸುವುದಕ್ಕೂ

ಲಕ್ಷ್ಮಣ ಅವನ ಕೋಣೆಗೆ ಹೋಗುವುದಕ್ಕೂ ಸರಿಹೋಯಿತು. ಲಕ್ಷ್ಮಣ ಬಂದದ್ದು ನೋಡಿ ಗೋಪಾಲ ಹಸ್ತಪ್ರತಿಯನ್ನು ಮುಚ್ಚಿಟ್ಟ.

"ಅದೇನು ಗೋಪೀ—ಅವಸರದಿಂದ ಮುಚ್ಚಿಡುತ್ತಿರುವೆ ?"

"ಏನೂ ಇಲ್ಲ, ಲಚ್ಚಣ್ಣ."

"ತೆಗೆ—ತೆಗೆ ನೋಡೋಣ."

"ನಿನ್ನ ತನಕ ಬರುವುದಲ್ಲ, ಲಚ್ಚಣ್ಣ."

"ತೆಗೆಯಪ್ಪಾ, ಪರವಾಯಿಲ್ಲ. ನಾನು ಯಾರಿಗೂ ಹೇಳುವುದಿಲ್ಲ."

"ಖಂಡಿತವಾಗಿ....?"

"ಖಂಡಿತವಾಗಿಯೂ ಹೇಳುವುದಿಲ್ಲ."

"ಒಂದು ಕಥೆ ಬರೆಯುತ್ತಾ ಇದ್ದೆ. ಅಲ್ಪ ವಿಷಯವೆಂದು ನಿನ್ನ ಹತ್ತಿರ ಹೇಳಲಿಲ್ಲ."

"ಓದುವೆಯಾ ?"

"ನೀನು ಕೇಳುವುದಾದರೆ."

"ಸಂತೋಷವಾಗಿ ಕೇಳುತ್ತೇನೆ."

ಕಥೆ ಒಬ್ಬ ಶಿಲ್ಪಿಯ ಜೀವನಕ್ಕೆ ಸಂಬಂಧಿಸಿದ್ದು : ಶಿಲ್ಪಿ ಸಮಾಜದ ಪ್ರತಿಷ್ಠಿತ ಮೂರ್ತಿಗಳ ಶಿಲ್ಪಗಳನ್ನು ಮಾಡಿ ಪ್ರಸಿದ್ಧ ಕಲಾವಿದನೆನಿಸಿಕೊಂಡಿರುತ್ತಾನೆ. ಕಲೆಯಿಂದ ಸಾಕಷ್ಟು ಹಣವನ್ನು ಗಳಿಸಿ ಶ್ರೀಮಂತಿಕೆಯ ಜೀವನವನ್ನೇ ನಡೆಸುತ್ತಾ ಸುಖವಾಗಿರುತ್ತಾನೆ. ಆದರೆ ಅವನಿಗೊಂದು ಹಂಬಲ—ಬಡತನವನ್ನು ಚಿತ್ರಿಸಿ ಒಂದು ಶಿಲ್ಪವನ್ನು ಕಡೆಯಬೇಕೆಂದು. ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗುತ್ತಿರುತ್ತವೆ. ಯಾವ ಮೂರ್ತಿಯನ್ನು ಕಡೆಯಲಿ ಅದರ ಮುಖದ ಮೇಲೆ ಸುಖಸಂಪತ್ತಿನ ಕಳೆಯೇ ಕೂಡುತ್ತಿರುತ್ತದೆ. ಕಲಾವಿದ ಬೇಸತ್ತು ಸುಮ್ಮನಾಗಿಬಿಡುತ್ತಾನೆ. ಕೆಲವರ್ಷ ಕಳೆಯುತ್ತದೆ–ಕಲಾವಿದನ ಒಬ್ಬಳೇ ಮಗಳು ಮೋಟಾರಿನ ಅಪಘಾತಕ್ಕೆ ಸಿಕ್ಕಿ ಸಾಯುತ್ತಾಳೆ. ಹೆಂಡತಿ ಆ ದುಃಖದೆದುರಿಗೆ ಸಿಕ್ಕಿ ತಾನೂ ಮೃತಿಹೊಂದುತ್ತಾಳೆ–ಕಲಾವಿದನಿಗೆ ಜಗತ್ತೇ ಬೇಡವಾಗುತ್ತದೆ. ಆಸ್ತಿಪಾಸ್ತಿಯನ್ನೆಲ್ಲಾ ಧರ್ಮಕ್ಕೆ ಬರೆದು ಹುಚ್ಚನಂತೆ ಅಲೆಯತೊಡಗುತ್ತಾನೆ. ಅನ್ನನೀರಿಲ್ಲದೆ ಸೊರಗುತ್ತಾನೆ. ಚಳಿಯೆನ್ನದೆ ಮಳೆಯೆನ್ನದೆ ಧರ್ಮಛತ್ರಗಳ ಜಗುಲಿಗಳ ಮೇಲೆ ಮಲಗಿ ಅಲ್ಲಿನ ಭಿಕಾರಿಗಳ ಸ್ನೇಹ ಬೆಳೆಸುತ್ತಾನೆ. ಇದ್ದಕ್ಕಿದ್ದಹಾಗೆ ಅವನಿಗೆ ಹೊಸ ರಕ್ತಸಂಚಾರ ಆರಂಭವಾಗುತ್ತದೆ. ಕೈಗೆ ಒಂದು ಚೂರು ಇದ್ದಿಲು ಸಿಕ್ಕಿದರೆ ಸಾಕು, ಬೀದಿಯ ಗೋಡೆಗಳ ಮೇಲೆ ಬರೆಯತೊಡಗುತ್ತಾನೆ. ಗೀಚಿದರೆ ಚಿತ್ರ—

ಕೆರೆಯಂಗಳದಿಂದ ಜೇಡಿಮಣ್ಣನ್ನು ತಂದು ಮೂರ್ತಿಗಳನ್ನು ಮಾಡಿ ಬೀದಿಯಲ್ಲಿ ಕಂಡಕಂಡವರಿಗೆ ಉದಾರವಾಗಿ ದಾನಕೊಡಲು ಆರಂಭಿಸುತ್ತಾನೆ. ಸುಂದರ ಮೂರ್ತಿಗಳು–ಸುಂದರ ಚಿತ್ರಗಳು ಮೂರ್ತಿ–ಚಿತ್ರಗಳ ಸೌಂದರ್ಯ ಸ್ತ್ರೀಪುರುಷರ ಹೊರಮೈಯನ್ನು ಆಶ್ರಯಿಸಿರಲಿಲ್ಲ. ಅವರ ಅಂತರಂಗವನ್ನು ಹೊರಸೂಸುತ್ತಿತ್ತು. ಕಾಂಚಾಣಕ್ಕೆ ಕೈಯೊಡ್ಡಿರುವ ಚಿತ್ರ—ಭಿಕ್ಷುಕಿ ತನ್ನ ಮಗುವಿಗೆ ಮೊಲೆಯೂಡಿಸುವ ಚಿತ್ರ: ತಾಯಿಗೆ ಹೊಟ್ಟೆಗೆ ಕೂಳಿಲ್ಲ, ಇನ್ನು ಮೊಲೆಯಲ್ಲಿ ಹಾಲು ಎಲ್ಲಿಂದ ಬರಬೇಕು. ಮಗುವಿಗೆ ತೃಪ್ತಿಯಾಗುವುದಿಲ್ಲ, ಅಳುತ್ತದೆ—ತಾನೇ ಒಣಗಿ ಕಾಷ್ಠವಾಗಿರುವ ಒಬ್ಬ ಹಳ್ಳಿಯವನು ಒಂದು ಹೊರೆ ಕಟ್ಟಿಗೆಯನ್ನು ಹೊತ್ತು ನಿಂತಿರುವ ಚಿತ್ರ—ಹೀಗೇ ಚಿತ್ರಗಳನ್ನು ಬರೆದುಕೊಟ್ಟು ಊರ ಮಕ್ಕಳ ಸ್ನೇಹವನ್ನು ಸಂಪಾದಿಸುತ್ತಾನೆ. ಅವನು ಹೋದ ಕಡೆ ಒಂದು ಹಿಂಡು ಬಳಗ. ಒಂದು ದಿವಸ ಹುಚ್ಚ ಓಡಿಹೋಗಿಬಿಡುತ್ತಾನೆ. ಮಕ್ಕಳ ಮುಖವೆಲ್ಲಾ ಪೆಚ್ಚಾಗುತ್ತವೆ. ಮಕ್ಕಳು ಅವನನ್ನು ಮತ್ತೆ ಕಾಣುವುದಿಲ್ಲ—ಯಾರೂ ಕಾಣುವುದಿಲ್ಲ. ಕೊನೆಯ ದರ್ಶನ ಮುನಿಸಿಪಾಲಿಟಿಯ ಆರೋಗ್ಯ ಖಾತೆಯವರಿಗೆ ದೊರಕಿರುತ್ತದೆ.

ಸ್ವಲ್ಪಕಾಲ ಲಕ್ಷ್ಮಣ ಮಾತನಾಡದೆ ಸುಮ್ಮನಿದ್ದ. ಅವನ ಬಾಯಿಂದ ಏನು ಬರುವುದೋ ಎಂದು ಗೋಪಾಲಿ ಕುತೂಹಲದಿಂದ ಕಾಯುತ್ತಿದ್ದ.

"ಇದನ್ನು ಓದುವುದಕ್ಕೆ ಸಂಕೋಚಪಡಬೇಕೆ?"

"ನಿನಗೆ ಸೇರಿತೇ, ಲಚ್ಚಣ್ಣ?"

"ನನಗೇಕಪ್ಪಾ—ಓದಿದವರೆಲ್ಲರಿಗೂ ಸೇರಲೇಬೇಕು. ಎಷ್ಟು ದೊಡ್ಡ ವಿಚಾರಗಳನ್ನು ಯೋಚಿಸುತ್ತೀಯಪ್ಪಾ, ಗೋಪೀ. ನಾನೂ ಇದನ್ನೇ ಯೋಚಿಸುತ್ತೇನೆ ನೋಡು, ನಿನಗೆ ಕಾಗದ ಮಸಿ ಸಾಧನ, ನನಗೆ ಸರಿಗಮ ಪಧನಿಸ ಸಾಧನ."

"ಅಯ್ಯೋ—ನೀನೆಲ್ಲಿ ನಾನೆಲ್ಲಿ, ಲಚ್ಚಣ್ಣ. ನೀನು ಬಹಳ ಮುಂದೆ ಹೋಗಿದ್ದೀ—ನಾನು ಈಗೀಗ ಅಕ್ಷರಾಭ್ಯಾಸವನ್ನು ಆರಂಭಿಸುತ್ತಾ ಇದ್ದೇನೆ."

"ಜೀವನವೆಲ್ಲಾ ಅಷ್ಟೇ ನೋಡು. ಒಂದು 'ಅ'ಕಾರದಲ್ಲಿ ಮುಗಿದು ಹೋಗುತ್ತೆ. ತಾತ್ವಿಕರು ಅದನ್ನು ಓಂಕಾರವೆನ್ನುತ್ತಾರೆ. ಸಾಮಾನ್ಯರು ಅಕ್ಷರಮಾಲೆಯ ಮೊದಲನೆಯ ಅಕ್ಷರವೆನ್ನುತ್ತಾರೆ. ಅದಷ್ಟು ನಮಗೆಲ್ಲಾ ಅರ್ಥವಾದರೆ ಸಾಲದೆ? ಬರಿ ಗೋಪಿ, ನಿಲ್ಲಿಸಬೇಡ. ಅವರಿವರು ಅಲ್ಲಗಳೆಯುತ್ತಾರೆ ಎಂದು ಎದೆಗುಂದಬೇಡ. ಬರೆದದ್ದನ್ನು ನನಗೆ ಓದಿ ಹೇಳು. ಕೇಳಿ ಸಂತೋಷಪಡುತ್ತೇನೆ. ನಾನು ಪಂಡಿತನಲ್ಲ, ಜ್ಞಾನಿಯಲ್ಲ, ಹೆಚ್ಚು ಕಲಿತವನೂ ಅಲ್ಲ

ನಿನಗೆ ನನ್ನಿಂದ ಯಾವ ಪ್ರಯೋಜನವೂ ಇಲ್ಲ—ನನಗುಂಟು. ನಿನ್ನ ಬರವಣಿಗೆ ಕೇಳಿದರೆ ಹೃದಯ ಹಗುರಾಗುತ್ತೆ. ಎಲ್ಲರೂ ಸಣ್ಣಪುಟ್ಟ ವಿಚಾರಗಳನ್ನೇ ಸದಾ ಚಿಂತಿಸುತ್ತಿರುವಾಗ ಯಾರಾದರೂ ದೊಡ್ಡ ವಿಚಾರಗಳನ್ನು ಎತ್ತಿದರೆ ಕತ್ತಲೆಯಲ್ಲಿ ಮಿಂಚುಹುಳ ಸುಳಿದಂತಾಗುತ್ತದೆ."

"ಇನ್ನು ಇದಕ್ಕಿಂತ ಭಾಗ್ಯ ಬೇಕೇ, ಲಚ್ಚಣ್ಣ ?"

ಎಂದು ಗೋಪಾಲಿ ತನ್ನ ಕೃತಜ್ಞತೆಯನ್ನು ಹೃತ್ಪೂರ್ವಕವಾಗಿ ಸೂಚಿಸಿದ.

ಅಂದಿನಿಂದ ಗೋಪಾಲಿ ಲೇಖನಿಗೆ ಹೊಸ ಹುರುಪು ಬಂದಿತು. ಅವನ ಮನಸ್ಸು ಫಲವತ್ತಾದ ಭೂಮಿಯಂತಿತ್ತು. ಈಗ ಅದರ ಮೇಲೆ ಚನ್ನಾಗಿ ಮಳೆ ಹುಯಿದಂತಾಯಿತು.

೧೫

ರಾಮುವಿಗೆ ಎಲ್‌ಎಲ್.ಬಿ. ಪರೀಕ್ಷೆಯನ್ನು ಮುಗಿಸಿಕೊಂಡು ಬಂದ ಕೂಡಲೆ ಮುಂದೇನು ಮಾಡುವುದು ಎಂದು ವಿಚಾರ ಆರಂಭವಾಯಿತು. ಸ್ವಂತ ವಕೀಲಿಯನ್ನು ಆರಂಭಿಸುವುದಕ್ಕೆ ಮುಂಚೆ ಯಾರಾದರೂ ತಿಳಿದ ವಕೀಲರ ಕಛೇರಿಯಲ್ಲಿ ನಾಲ್ಕು ದಿವಸ ಇದ್ದರೆ ಕೆಲಸ ಚೆನ್ನಾಗಿ ಬರುತ್ತದೆ ಎಂದು ಸುಂದರರಾಯರು ಅಭಿಪ್ರಾಯಪಟ್ಟರು. ವಕೀಲಿವೃತ್ತಿಯ ಲಾಟರಿ ಜೀವನದ ಬದಲು ಯಾವದಾದರೂ ಕೆಲಸ ಸಿಕ್ಕಿದರೆ ಒಳ್ಳೆಯದೆಂದು ರಾಮುವಿನ ಅಭಿಪ್ರಾಯ.

"ಕಂಡವರ ಮನೆಯ ಬಾಗಿಲಿಗೆ ಹೋಗಿ ನನ್ನ ಮಗನಿಗೆ ಕೆಲಸ ಕೊಡಿ ಎಂದು ನಾನು ಕೇಳಲಾರೆನಪ್ಪಾ"

ಎಂದು ರಾಯರು ಖಂಡಿತವಾಗಿ ನುಡಿದುಬಿಟ್ಟಿದ್ದರು. ಸುಂದರರಾಯರ ನಿರ್ಣಯವೇ ಕೊನೆಯದಾಯಿತು. ರಾಮು ಚೆನ್ನಪಟ್ಟಣದ ಮಲ್ಲಿಕಾರ್ಜುನಯ್ಯನವರ ಆಫೀಸಿಗೆ ಹೋಗಬೇಕೆಂದು ವ್ಯವಸ್ಥೆಯಾಯಿತು.

ಮಲ್ಲಿಕಾರ್ಜುನಯ್ಯನವರ ಕಛೇರಿ ಬಹಳ ಹಳೆಯ ಕಛೇರಿ. ವೃತ್ತಿಯಲ್ಲಿ ಅವರಿಗೆ ಬೇಕಾದಷ್ಟು ಅನುಭವವಿತ್ತು, ಕ್ರಿಮಿನಲ್-ಸಿವಿಲ್ ಎರಡೂ ಬಗೆಯ ಕೇಸುಗಳೂ ಬರುತ್ತಿದ್ದುದರಿಂದ ರಾಮುವಿನ ಶಿಕ್ಷಣ ಸಾಂಗವಾಗಿ ನೆರವೇರಬಹುದೆಂದು ಸುಂದರರಾಯರು ಭಾವಿಸಿದರು.

ಬೆಳಗ್ಗೆ ಮನೆ ಬಿಟ್ಟು ಹೋದರೆ ಕೋರ್ಟು ಮುಗಿಸಿಕೊಂಡು ಮನೆಗೆ ಹಿಂದಿರುಗುವ ಹೊತ್ತಿಗೆ ಸಂಜೆಯಾಗುತ್ತಿತ್ತು. ಮತ್ತೆ ಲಾಯರ ಕಛೇರಿಗೆ ಹೋಗಬೇಕಾಗಿತ್ತು. ಒಂದೊಂದು ದಿವಸ ಅನ್ನ ಕಾಣುವುದೂ ಕಷ್ಟವಾಗು

ತ್ತಿತ್ತು. ಕೆಲವು ದಿವಸ ಹೊಟೇಲಿನಲ್ಲಿ ಉಂಡು ಕೋರ್ಟಿಗೆ ಹೋಗುತ್ತಿದ್ದ.

ಕಛೇರಿಗೆ ರಾಮು ಬಂದುದು ಮಲ್ಲಿಕಾರ್ಜುನಯ್ಯನವರಿಗೂ ಅನುಕೂಲ ವಾಯಿತು. ತಮ್ಮ ಕೆಲಸವನ್ನು ಕ್ರಮೇಣ ಅವನ ಮೇಲೆ ಒರಗಿಸಿ ತಾವು ಮನೆ ಸೇರಿಬಿಡುತ್ತಿದ್ದರು. ಎದುರು ಕಡೆಯ ವಕೀಲರು ರಾಮುವನ್ನು ಜಜ್ಜು ತ್ತಿದ್ದರೂ ಮಲ್ಲಿಕಾರ್ಜುನಯ್ಯನವರು ಮನೆ ಬಿಟ್ಟು ಬರುತ್ತಿರಲಿಲ್ಲ. ರಾಮು ವಿಗೆ ಸ್ವತಂತ್ರ ಕಛೇರಿಯ ಅನುಕೂಲಗಳೆಲ್ಲ ದೊರೆತಂತಾದುವು. ಆದರೆ ವರ ಮಾನ ಮಾತ್ರ ಶೂನ್ಯವಾಗಿತ್ತು. ಕಕ್ಷಿಗಾರರು ಕೃಪೆಯಿಟ್ಟು ತಿಂಡಿ ಖರ್ಚಿ ಗೆಂದು ಕೊಡುತ್ತಿದ್ದ ಒಂದೆರಡು ರೂಪಾಯಿಗಳಲ್ಲಿ ತೃಪ್ತಿಪಟ್ಟುಕೊಳ್ಳ ಬೇಕಾಗಿತ್ತು.

ದುಡಿತ ತನ್ನದು, ಆದಾಯ ಮಲ್ಲಿಕಾರ್ಜುನಯ್ಯನವರದು ಎಂದು ರಾಮು ಕೊರಗುತ್ತಿದ್ದ. ತನ್ನ ಅಸಂತುಷ್ಟಿಯನ್ನು ಸೂಚಿಸಿದರೂ ಮಲ್ಲಿಕಾರ್ಜುನಯ್ಯ ನವರು ಸುಮ್ಮನಿದ್ದುದನ್ನು ನೋಡಿ ಅವರ ಮೇಲೆ ಕಿಡಿಕಿಡಿಯಾಗಿದ್ದ. ಮಲ್ಲಿ ಕಾರ್ಜುನಯ್ಯನವರು ಎಲ್ಲವನ್ನೂ ಕಾಣುತ್ತಿದ್ದರೂ ಕಂಡೂ ಕಾಣದಂತೆ ಇದ್ದುಬಿಡುತ್ತಿದ್ದರು.

ವಕೀಲರ ಕಛೇರಿ ಉಂಟುಮಾಡುತ್ತಿದ್ದ ಅಸಂತುಷ್ಟಿಯ ಪ್ರದರ್ಶನವನ್ನು ರಾಮು ಮನೆಯಲ್ಲಿ ಮಾಡುತ್ತಿದ್ದ. ಮನೆಗೆ ಬಂದೊಡನೆಯೇ ಒಮ್ಮೆಲೇ 'ಧೂಮಕೇತು'ವಾಗಿಬಿಡುತ್ತಿದ್ದ. ರಾಮುವಿಗೆ ಕೋಪ ಬಂದಿದೆಯೆಂದು ಇತ ರರು ಅರಿಯುವುದರೊಳಗಾಗಿ ಅವನ ಕೋಪ ನೆತ್ತಿಯವರೆಗೂ ಏರಿಬಿಡು ತ್ತಿತ್ತು. ರಾಯರು ಎಷ್ಟೋ ಸಲ ಮಗನಿಗೆ ವಿವೇಕ ಹೇಳಿದರು.

"ವಯಸ್ಸು ಆದಷ್ಟು ದಿವಸವೂ ಹೀಗೆ ಇದ್ದರೆ ಹೇಗೋ, ರಾಮು ? ನಿಧಾನ ಕಲಿತುಕೊಳ್ಳಪ್ಪಾ. ಈ ರೇಗಾಟ ಹಾರಾಟ ಕಡಿಮೆ ಮಾಡು. ತಾಳಿದವನು ಬಾಳಿಯಾನು ಎನ್ನುವುದನ್ನು ಜ್ಞಾಪಕದಲ್ಲಿ ಇಟ್ಟುಕೊಂಡಿರು"

ಎಂದು ಹೇಳಿ ಹೇಳಿ ಬೇಸತ್ತಿದ್ದರು. ಅವಕಾಶ ಸಿಕ್ಕಿದಾಗಲೆಲ್ಲಾ ಸಾವಿ ತ್ರಮ್ಮನವರೂ ಅದೇ ಮಾತನ್ನೇ ಹೇಳುತ್ತಿದ್ದರು

"ಅಕ್ಕನ ದೇಹಸ್ಥಿತಿ ನಿನಗೆ ಗೊತ್ತಿಲ್ಲವೇ, ರಾಮು ? ಸ್ವಲ್ಪ ಗಲಭೆ ಯಾದರೂ ಅವರ ಎದೆ ಹೊಡೆದುಕೊಳ್ಳುವುದಕ್ಕೆ ಆರಂಭಿಸುತ್ತದೆ. ಅದಕ್ಕೆ ಅವಕಾಶ ಕೊಡಬೇಡ–ಪ್ರಾಣಕ್ಕೇ ಅಪಾಯ ಎಂದು ಡಾಕ್ಟರು ಒತ್ತಿಯೊತ್ತಿ ಹೇಳುತ್ತಾ ಇದ್ದಾರೆ"

ಎಂದು ಎಚ್ಚರಿಸುತ್ತಿದ್ದರು. ರಾಮು ಒಪ್ಪಿ ಕ್ಷಣಕಾಲ ತಣ್ಣಗಾಗುತ್ತಿದ್ದ. ಮರುಕ್ಷಣವೇ ಯಾವುದೋ ಕಾರಣಕ್ಕೆ—ಕಾರಣವಲ್ಲದ ಕಾರಣವೇ ಹೆಚ್ಚು

—ಜ್ವಾಲಾಮುಖಿ ಅಗ್ನಿಕಣಗಳನ್ನು ಹೊರಚೆಲ್ಲಲು ಆರಂಭಿಸುತ್ತಿತ್ತು.

ಮೀನಾಕ್ಷಮ್ಮನವರು ದಿನದಿನಕ್ಕೆ ಕ್ಷಯಿಸುತ್ತ ಬಂದರು. ಸ್ಥಳ, ಹವ ಬದಲಾಯಿಸಿದ ಹೊರತು ಗುಣಮುಖವಾಗುವುದು ಕಷ್ಟ ಎಂದು ಡಾಕ್ಟರು ಹೇಳಿದರು. ತಮ್ಮ ದೇಹಸ್ಥಿತಿ ಮೀನಾಕ್ಷಮ್ಮನವರಿಗೂ ಗೊತ್ತಾಯಿತು. ಬಿಟ್ಟು ಹೋಗಿದ್ದ ಲಲಿತಾಸಹಸ್ರನಾಮ, ಅನ್ನಪೂರ್ಣಾ ಅಷ್ಟೋತ್ತರ, ಕುಂಕುಮಾರ್ಚನೆಗಳನ್ನು ಅಂದಿನಿಂದಲೇ ಆರಂಭಿಸಿಬಿಟ್ಟರು.

"ಆಯಾಸವಾಗುತ್ತೆ, ಬೇಡ. ಇವುಗಳನ್ನೆಲ್ಲಾ ಕೆಲವು ದಿವಸ ಬಿಟ್ಟು ಮಾಡಿದರೆ ಆಗುವುದಿಲ್ಲವೆ ?"

ಎಂದು ರಾಯರು ಹೇಳಿ ನೋಡಿದರು. ಮೀನಾಕ್ಷಮ್ಮನವರ ಕಿವಿಯ ಮೇಲೆ ಆ ಮಾತುಗಳು ಬೀಳಲಿಲ್ಲ.

ಅದೇ ವರ್ಷ ಪದ್ಮಾ, ಜಯಾ ಇಬ್ಬರೂ ಅತ್ತೆಯ ಮನೆಯನ್ನು ಸೇರಿದರು. ಮೀನಾಕ್ಷಮ್ಮನವರ ಮುಖ ನಾಲ್ಕು ದಿವಸ ಗೆಲುವಾಯಿತು.

"ನನ್ನ ಮಕ್ಕಳು ಹೆಂಡತಿಯರನ್ನು ಇಟ್ಟುಕೊಂಡು ಬಾಳುವುದನ್ನು ನೋಡಬೇಕೆಂದಿದ್ದೆ. ನನ್ನ ಇಷ್ಟಾರ್ಥ ಪೂರೈಸಿತು"

ಎಂದು ಹೇಳುತ್ತಿದ್ದರು.

ಹವ ಬದಲಾಯಿಸುವುದು ತುಂಬ ಅಗತ್ಯವೆಂದು ಡಾಕ್ಟರು ಒತ್ತಾಯಪಡಿಸತೊಡಗಿದರು. ಮೀನಾಕ್ಷಮ್ಮನವರು ಯೋಚಿಸಿ

"ಆಗಲಿ. ಹಾಗಾದರೆ ನಾಲ್ಕು ದಿವಸ ಹಳ್ಳಿಗೆ ಹೋಗಿಬರುತ್ತೇನೆ. ನನ್ನ ಸೊಸೆಯರನ್ನು ಕರೆದುಕೊಂಡು ಹೋಗಿ ನಮ್ಮ–ಅಲ್ಲ–ಅವರ ಹಳ್ಳಿ ತೋರಿಸಿಕೊಂಡು ಬರುತ್ತೇನೆ"

ಎಂದು ಹೇಳಿದರು. ರಾಯರು ಹಳ್ಳಿಗೆ ಕಾಗದ ಬರೆದರು.

ಗೌರತ್ತೆ ತೀರಿಕೊಂಡ ಮೇಲೆ ಧನಿಷ್ಠಾಪಂಚಕವೆಂದು ಐದು ತಿಂಗಳು ಹಳ್ಳಿಯ ಮನೆ ಬಾಗಿಲು ಹಾಕಬೇಕಾಗಿತ್ತು. ಐದು ತಿಂಗಳು ತುಂಬುವ ಹೊತ್ತಿಗೆ ರಾಯರು ಸಂಸಾರಸಮೇತರಾಗಿ ಬೆಂಗಳೂರಿಗೆ ಬಂದುಬಿಟ್ಟಿದ್ದರು. ಮನೆಯ ಬೀಗದ ಕೈಯನ್ನು ಶಾನುಭಟ್ಟರ ವಶಕ್ಕೆ ಕೊಟ್ಟಿದ್ದರು. ಧನಿಷ್ಠಾಪಂಚಕದ ಅವಧಿ ಮುಗಿಯಲು ಭಟ್ಟರು ಮನೆಯನ್ನು ತೊಳೆಯಿಸಿ, ಶುದ್ಧ ಪುಣ್ಯಾಹ ಮಾಡಿಸಿದ್ದರು. ಊರಿನ ಟಪಾಲು ಆಫೀಸಿನವರು ಸರಿಯಾದ ಕಟ್ಟಡವನ್ನು ಹುಡುಕುತ್ತಿದ್ದರು. ರಾಯರ ಅಪ್ಪಣೆಯನ್ನು ಪಡೆದು ಬೀದಿಯ ಕಡೆಗಿದ್ದ ಎರಡು ಕೋಣೆಗಳನ್ನು ಹತ್ತು ರೂಪಾಯಿ ಬಾಡಿಗೆಗೆ ಅವರಿಗೆ ಕೊಟ್ಟಿದ್ದರು. ಮಿಕ್ಕ ಮನೆ ಅವರ ವಶದಲ್ಲಿಯೇ ಇತ್ತು. ಭಟ್ಟರೂ ಅವರ

ಪರಿವಾರದವರೂ ಬಂದು ಅಲ್ಲಿಯೇ ಕುಳಿತುಕೊಳ್ಳುವುದು, ಮಲಗಿಕೊಳ್ಳು ವುದು ಮಾಡುತ್ತಿದ್ದರು.

ರಾಯರ ಕಾಗದ ಬರುತ್ತಲೂ ಭಟ್ಟರು ಮನೆಯನ್ನು ಚೆನ್ನಾಗಿ ಸಾರಿಸಿಸಿ, ಸುಣ್ಣ ಹೊಡೆಸಿ ಸಂಸಾರಕ್ಕೆ ಅಣಿಮಾಡಿಟ್ಟರು. ಮೀನಾಕ್ಷಮ್ಮನವರು ಹಳ್ಳಿಗೆ ಬರುವ ಸುದ್ದಿ ಕೇಳಿ ಜನ ಹಿಗ್ಗಿಹೋಯಿತು. ರಂಗೇಗೌಡನೇ ನಿಂತು ಕೊಂಡು ರಾಯರ ಮನೆ ಬೀದಿಗೆ ನೀರು ಹಾಕಿಸಿ, ಬೀದಿಯಲ್ಲಿ ಬಿದ್ದಿದ್ದ ಎಂಜಲು ಹಾಳೆಗಳನ್ನೆಲ್ಲಾ ತೆಗೆದುಹಾಕಿಸಿ, ರಾಯರ ಮನೆಗೆ ಬಾಳೆಯ ಕಂಬ, ಮಾವಿನೆಲೆ ತೋರಣ ಕಟ್ಟಿಸಿ, ಭಟ್ಟರ ಮನೆಯವರಿಗೆ ಹೇಳಿ ಮನೆ ಮುಂದೆ ಅಲಂಕಾರಕ್ಕಾಗಿ ರಂಗವಲ್ಲಿ ಇಡಿಸಿ ಮೀನಾಕ್ಷಮ್ಮನವರ ಸ್ವಾಗತದ ಸಿದ್ಧತೆ ಯನ್ನು ಮಾಡಿದ.

ಹೊಲೆಯರ ಹಟ್ಟಿ ಮರಿಗೌಡ ಸುಮ್ಮನಿರಲಿಲ್ಲ. ಊರಿನ ಬಾಗಿಲಿಗೇ ಬಾಳೆಯ ಕಂಬ, ಮಾವಿನಸೊಪ್ಪಿನ ಅಲಂಕಾರ ಮಾಡಿಸಿ, ನಾಲ್ಕು ಮೈಲಿ ನಿಂದ 'ಕೊಂಬಿನ ಮರ್ವಾದೆ' ಇಡಿಸಿಬಿಟ್ಟಿದ್ದ.

"ಕೊಂಬಿನ ಮರ್ವಾದೆ ಅಮಲ್ದಾರ್ರು ಮೊದಲಾದ ಆಫೀಸರುಗಳಿಗೆ ಮಾತ್ರವೇ ಅಲ್ವೆನ್ಲಾ, ಮರಿಯಾ?"

ಎಂದು ಯಾರೋ ಕೇಳಿದ್ದಕ್ಕೆ

"ನಮ್ಮಮ್ಮಾವ್ರ ಆಫೀಸರುಗಳ ಆಫೀಸರು, ಬುದ್ಧಿ! ನಮ್ಮೂರ ಲಸ್ಮಿ. ಅವರಿಗಿಂತ ಎಚ್ಚು ನಮ್ಗೆ ಯಾರವರೆ!"

ಎಂದು ಉತ್ತರ ಹೇಳಿದ್ದ.

ಮೀನಾಕ್ಷಮ್ಮನವರು ಸೊಸೆಯರಿಬ್ಬರನ್ನೂ ಕರೆದುಕೊಂಡು ಹೊರಟಿ ದ್ದರು. ಅವರ ಜತೆ ಯಾರು ಹೋಗುವುದು ಎಂದು ಜಿಜ್ಞಾಸೆ ಹೊರಟಿತ್ತು. ಅಕ್ಕನ ಜತೆ ಹೋಗುವುದಕ್ಕೆ ಸಾವಿತ್ರಮ್ಮನೂ ಸಿದ್ಧವಾಗಿದ್ದಳು. ಶಾಂತಾ, ವೆಂಕಟೇಶ, ಲಕ್ಷ್ಮಣ, ಶಾಮಣ್ಣೋರು ಎಲ್ಲರೂ ಸಿದ್ಧರಾಗಿದ್ದರು. ಸದ್ಯಕ್ಕೆ ಲಕ್ಷ್ಮಣ ಒಬ್ಬ ಹೋಗಲಿ, ಇಲ್ಲಿನ ಕೆಲಸ ನೋಡಿಕೊಂಡು ನಾಲ್ಕು ದಿನಸ ಬಿಟ್ಟು ಶಾಮಣ್ಣ ಹೋಗಲಿ ಎಂದು ರಾಯರು ಹೇಳಿದ್ದರು. ಪಾಯಸದ ಅಡಿಗೆ ಮಾಡಿ ಸಾವಿತ್ರಮ್ಮ ಅಕ್ಕನಿಗೆ ಬಡಿಸಿದ್ದಳು. ಮೀನಾಕ್ಷಮ್ಮ ಊಟ ಮಾಡು ತ್ತಿರುವಾಗ

"ಬೇಗ ಬಂದುಬಿಡಿ, ಅಕ್ಕಾ. ನಿಮ್ಮನ್ನ ಬಿಟ್ಟು ಹೆಚ್ಚು ದಿವಸ ಇರಲಾರೆ"

ಎಂದು ಸಾವಿತ್ರಮ್ಮ ಬಿಕ್ಕಳಿಸಿ ಅಳುತ್ತ ಅಳುತ್ತ ಹೇಳಿದ್ದಳು. ಊಟ ಮುಗಿಸಿ ಕೈತೊಳೆಯುವ ಹೊತ್ತಿಗೆ ಬಸ್ಸು ಬಂದು ಬಾಗಿಲಿನಲ್ಲಿ ನಿಂತಿತು.

ಸಾಮಾನುಗಳನ್ನು ಮೇಲೆ ಹಾಕಿ ಲಕ್ಷ್ಮಣ ಪದ್ಮಾ–ಜಯರೊಂದಿಗೆ ಕುಳಿತನು. ಮೀನಾಕ್ಷಮ್ಮ ಒಳಗೆ ಹೋಗಿ ರಾಯರ ಎರಡು ಕಾಲುಗಳನ್ನೂ ಮುಟ್ಟಿ ನಮಸ್ಕರಿಸಿ ಬಂದರು.

"ಆರೋಗ್ಯ ಚೆನ್ನಾಗಿ ನೋಡಿಕೋ, ಮೀನಾ. ನಾನೂ ಇಷ್ಟರಲ್ಲಿಯೇ ಬಂದುಬಿಡುತ್ತೇನೆ"

ಎಂದು ಹೇಳಿದರು. ಸಾವಿತ್ರಮ್ಮ ಅಕ್ಕನಿಗೆ ಹಣೆಗಿಟ್ಟು, ಫಲತಾಂಬೂಲ ಕೊಟ್ಟಳು. ಹಾಗೇ ಮೀನಾಕ್ಷಮ್ಮನವರ ಎರಡು ಕಾಲುಗಳನ್ನು ಮುಟ್ಟಿ ನಮಸ್ಕಾರ ಮಾಡಿದಳು. ಶಾಂತಾ, ವೆಂಕಟೇಶನೂ ನಮಸ್ಕರಿಸಿದರು. ಮೀನಾಕ್ಷಮ್ಮ ಮಗಳಿಗೂ ತಂಗಿಗೂ ಹಣೆಗಿಟ್ಟು 'ಹೋಗಿಬಿಟ್ಟು ಬರುತ್ತೇನೆ' ಎಂದು ಹೇಳಿ ಬಸ್ಸು ಹತ್ತಿ ಕುಳಿತರು.

ಊರಿಗೆ ಮೂರು ನಾಲ್ಕು ಮೈಲು ದೂರವಿರುವಾಗಲೇ ಕೊಂಬು ಕಹಳೆ ಕೇಳಿಬಂತು. ಅದೇನು ಶಬ್ದ ಎಂದು ಪದ್ಮಾ ಕೇಳಿದಳು.

"ಯಾರೋ ಆಫೀಸರು ಬರುತ್ತಾರೆ ಎಂದು ಕಾಣುತ್ತದೆ. ಕೊಂಬು ಊದಿಸುತ್ತಿದ್ದಾರೆ"

ಎಂದು ಮೀನಾಕ್ಷಮ್ಮನವರು ಉತ್ತರ ಕೊಟ್ಟಿದ್ದರು. ಊರ ಬಾಗಿಲಿನಲ್ಲಿ ಬಸ್ಸು ಬಂದು ನಿಂತಿತು. ನೆರೆದಿದ್ದ ಜನತಂಡವನ್ನು ನೋಡಿ ಮೀನಾಕ್ಷಮ್ಮನವರು ಬೆರಗಾದರು. ಮರಿಗೌಡ ಮೀನಾಕ್ಷಮ್ಮನವರನ್ನು ಗುರುತಿಸಿ

"ಅಡ್ಡಬಿದ್ದೆ ಕಾಣಮ್ಮಣ್ಣೀ!"

ಎಂದು ಕೂಗಿದ. ಅವನ ಪರಿವಾರದವರೂ ನಿಂತಲ್ಲಿಯೇ ಅಡ್ಡಬಿದ್ದರು.

"ಎಂಗಿದ್ದೀರವ್ವಾ ?"

"ಚಂದಾಕಿದ್ದೇನೋ ಮರಿಯು. ನೀವೆಲ್ಲಾ ಕ್ಷೇಮವೇಪ್ಪಾ ?"

"ಊನ್ರಮ್ಮಣ್ಣಿ—ನಿಮ್ದಯದಿಂದ !"

ಎಂದು ಹೇಳಿದ. ಈ ಎಲ್ಲ ಮರ್ಯಾದೆ, ತಳಿರುತೋರಣ ತಮಗಾಗಿಯೇ ಎಂದು ಮೀನಾಕ್ಷಮ್ಮನವರರಿತರು. ಬಸ್ಸು ಅಲ್ಲಿಂದ ರಾಯರ ಮನೆಯ ಮುಂದೆ ಬಂದು ನಿಂತಿತು. ಅಲ್ಲಿ ಒಂದು ಗುಂಪು ನೆರೆದಿತ್ತು. ರಂಗೇಗೌಡ, ಅವನ ಪರಿವಾರ ಮೀನಾಕ್ಷಮ್ಮನವರಿಗೆ ಅಡ್ಡಬಿದ್ದರು. ಭಟ್ಟರು ಮನೆಯ ಬಾಗಿಲಲ್ಲಿ ಮಣೆ ಹಾಕಿಸಿ ಒಂದು ತಂಬಿಗೆ ನೀರು ಇಡಿಸಿದ್ದರು. ಭಟ್ಟರ ಮಗಳು, ಸೊಸೆ ಮೀನಾಕ್ಷಮ್ಮನವರ ಕಾಲು ತೊಳೆದು ಆರತಿ ಎತ್ತಿದರು. ಭಟ್ಟರೇ ಈಡುಗಾಯಿ ಹಾಕಿದರು. ಒಳಗೆ ಎಲ್ಲರಿಗೂ ಕಾಫಿ, ಉಪ್ಪಿಟ್ಟು, ಬಾಳೆಯಹಣ್ಣು, ಎಳನೀರಿನ ಏರ್ಪಾಟು ಆಗಿತ್ತು. ಉಪಾಹಾರ ಮಾಡುತ್ತಾ

ಮೀನಾಕ್ಷಮ್ಮನವರು

"ಏನು ಭಟ್ಟರೇ, ಬಹಳ ಮರ್ಯಾದೆಯಾಗಿಬಿಡ್ತಲ್ಲ!"

"ನಾನೇನು ಮಾಡಲಮ್ಮ. ಎಲ್ಲಾ ನಿನ್ನ ತಪ್ಪು. ಊರಿನವರ ಹೃದಯ ಕಮಲದಲ್ಲಿ ನೆಲೆಸಿರುವ ಲಕ್ಷ್ಮಿ ನೀನು."

"ನಾನು ಪುಣ್ಯವಂತೆ, ಭಟ್ಟರೇ. ಭಾಗ್ಯಶಾಲಿ."

"ಸಂದೇಹವೇನಮ್ಮ—ಸಂದೇಹವೇನು !"

ಎಂದು ಭಟ್ಟರು ಹೂಗುಟ್ಟಿದರು.

ಪದ್ಮನಿಗಿಂತಲೂ ಜಯನಿಗೆ ಹಳ್ಳಿಯ ವ್ಯವಹಾರವೆಲ್ಲಾ ಬಹಳ ಹೊಸ ಹೊಸದಾಗಿ ಕಂಡಿತು. ಅವಳು ಹುಟ್ಟಿದ್ದು, ಬೆಳೆದದ್ದು ಎಲ್ಲಾ ಪಟ್ಟಣವೇ ಆಗಿತ್ತು. ಹೊಸಹಳ್ಳಿಯ ಮುಗ್ಧ ಜನ ಮೀನಾಕ್ಷಮ್ಮನವರ ವಿಚಾರದಲ್ಲಿ ಇಟ್ಟಿದ್ದ ಮಾತೃಪ್ರೇಮ ಅವಳನ್ನು ಆಶ್ಚರ್ಯಗೊಳಿಸಿತು. ಹಳ್ಳಿಯ ಜೀವನ ದಲ್ಲಿ ಬೇರೆಬೇರೆ ಸಂಸಾರಗಳೇ ಇಲ್ಲ. ಬೇರೆಬೇರೆ ಮನೆಗಳೇ ಇಲ್ಲ. ಒಂದ ಕ್ಕೊಂದು ಹೆಣೆದುಕೊಂಡಿದ್ದುದನ್ನು ಕಂಡುಕೊಂಡಳು. ಹಾರುವ ಶಾಮಭಟ್ಟ ರಿಲ್ಲದೆ ರಂಗೇಗೌಡ ಪೈರು ನೆಡುವ ಹಾಗಿರಲಿಲ್ಲ; ರಂಗೇಗೌಡ ಪೈರು ನೆಟ್ಟ ಹೊರತೂ ಭಟ್ಟರೂ ಕೂಳು ಕಾಣುವ ಹಾಗಿರಲಿಲ್ಲ. ಆದರೆ ಈ ಅನ್ಯೋನ್ಯತೆಗೆ ಸ್ವಲ್ಪ ಭಂಗ ಬಂದಿತೆಂದರೆ ಹಳ್ಳಿ ರಣಭೂಮಿಯೇ ಆಗುತ್ತಿತ್ತು.

ಜಯನ ಮನಸ್ಸಿನ ಮೇಲೆ ಹಳ್ಳಿ ಎಷ್ಟು ಪರಿಣಾಮವನ್ನು ಉಂಟು ಮಾಡಿತೋ ಪದ್ಮನ ಮನಸ್ಸಿನ ಮೇಲೆ ಅಷ್ಟು ಪರಿಣಾಮವನ್ನುಂಟುಮಾಡ ಲಿಲ್ಲ. ಅವಳಿಗೆ ಮಲೆನಾಡಿನ ಹಳ್ಳಿಗಳ ಸಾಕಷ್ಟು ಪರಿಚಯವಿತ್ತು. ಮಲೆ ನಾಡಿನ ಆದ್ಯಂತವಿಲ್ಲದ ಮಳೆ, ಜಿಗಣೆಗಳ ಕಾಟ, ಕಾಫಿ ಗಿಡಕ್ಕೆ ಹುಳು ಹತ್ತಿತೆಂಬ ಚಿಂತೆಗಳೆಲ್ಲವನ್ನೂ ಬೇಕಾದಷ್ಟು ಅನುಭವಿಸಿದ್ದಳು. ಹಣಕಾಸಿನ ವಿಚಾರ ಬಂದಾಗ ಹಳ್ಳಿಗರು ಎಷ್ಟು ಸತ್ಯಪ್ರಿಯತೆಯನ್ನೂ ನ್ಯಾಯತತ್ಪರತೆ ಯನ್ನೂ ತೋರುತ್ತಿದ್ದರೆಂಬುದನ್ನು ಬಲ್ಲವಳಾಗಿದ್ದಳು.

ರಂಗೇಗೌಡನ ತಮ್ಮ ಕರೀಗೌಡ ಆಲೆ ಕಟ್ಟಿಸಿದ್ದ. "ಅಮ್ಮಾವ್ರು ಅಪ ರೂಪಕ್ಕೆ ಬಂದವ್ರೆ, ಮರ್‍ವಾದೆ ಮಾಡ್ಬೇಕು" ಎಂದು ತನ್ನ ಆಲೆಮನೆಗೆ ಬರಮಾಡಿಕೊಂಡು ಕಬ್ಬಿನ ಹಾಲು, ಬಿಸಿಬೆಲ್ಲ, ಬಿಸಿಬೆಲ್ಲದ ಕೊಪ್ಪರಿಗೆಯಲ್ಲಿ ಬೆಂದ ಕೊಬ್ಬರಿಗಳ ಸಮಾರಾಧನೆ ಮಾಡಿದ್ದ. ಏಲಕ್ಕಿ, ನಿಂಬೇಹಣ್ಣಿ ಬೆರೆತ ಕಬ್ಬಿನಹಾಲನ್ನು ಒಬ್ಬೊಬ್ಬರು ನಾಲ್ಕೈದು ಬಟ್ಟಲಷ್ಟು ಗಿಟ್ಟಿಸಿದರು.

ಮೀನಾಕ್ಷಮ್ಮನವರು ಸೊಸೆಯರನ್ನು ನೋಡಿ "ಈಗ ಜತೇಲಿ ಅವರು ಇರಬೇಕಾಗಿತ್ತು. ನಿಮ್ಮ ಕೈಯಲ್ಲೆಲ್ಲಾ ಕಬ್ಬು ಕೊಟ್ಟು ಸಿಗಿಸ್ತೇ ಸಿಗಿಸು

ತ್ತಿದ್ದರು."

ಸೊಸೆಯಂದಿರಿಗೆ ಜಮೀನು, ತೋಟಗಳ ಪರಿಚಯವನ್ನೆಲ್ಲಾ ಮಾಡಿಕೊಟ್ಟರು. ಜಮೀನನ್ನು ಸಾಗುವಳಿ ಮಾಡುತ್ತಿದ್ದ ರೈತರ ಗುರುತನ್ನೂ ಮಾಡಿಕೊಟ್ಟು—ಅವರಿಗೆ

"ಬೈಲಾ, ಕೆಂಪಾ, ರಂಗಪ್ಪಾ, ಇವರೇ ನಿಮ್ಮ ಅಮ್ಮಾವರುಗಳು. ನನ್ನ ಸಾವಿತ್ರಮ್ಮನ್ನ ಹೇಗೆ ಮರ್ಯಾದೆಯಿಂದ ನಡೆಸಿಕೊಂಡು ಬಂದಿರಿ ಹಾಗೆ ಮುಂದೆಯೂ ನಮ್ಮ ಜಯಮ್ಮ-ಪದ್ಮಮ್ಮನ್ನ ನಡೆಸಿಕೊಂಡು ಬರಬೇಕಪ್ಪಾ."

"ಅಪ್ಪಣೆ ತಾಯಿ."

ದಿನವೂ ಯಾರದಾದರೂ ಆತಿಥ್ಯವಾಗುತ್ತಲೇ ಇತ್ತು. ಹಳ್ಳಿಗಾಡಿನ ಆತಿಥ್ಯ. ಲಾಡು ಚಿರೋಟಿಗಳನ್ನು ಮಾಡದಿದ್ದರೂ, ಮಾಡುತ್ತಿದ್ದ ರಾಗಿ ರೊಟ್ಟಿ, ತೊಗರಿನುಚ್ಚಿನ ಉಂಡೆ, ಒತ್ತುಶಾವಿಗೆಗಳಲ್ಲಿ ತಮ್ಮ ವಿಶ್ವಾಸದಿಂದ ಲಾಡು ಚಿರೋಟಿಗಳಿಗಿಂತ ಹೆಚ್ಚಿನ ರುಚಿಯನ್ನು ತರುತ್ತಿದ್ದರು. ಪದ್ಮ ರಾಗಿಪದಾರ್ಥಗಳನ್ನು ಮುಟ್ಟುತ್ತಿರಲಿಲ್ಲ. ಭಟ್ಟರ ಮಗಳು ತಾನೇ ಖುದ್ದಾಗಿ ರೊಟ್ಟಿಮಾಡಿ, ಬಾಳೆಹಣ್ಣಿನ ಸೀಕರಣೆ ಮಾಡಿ ಜಯನ್ನ ಪದ್ಮನ್ನ ಕರೆದಿದ್ದಳು. ರೊಟ್ಟಿಗೆ ತುಂಬ ತೆಂಗಿನಕಾಯಿ, ಹಸೀಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಬೆಣ್ಣೆ ಹಾಕಿ ಕಲಸಿ ಚೆನ್ನಾಗಿಯೇ ಮಾಡಿದ್ದಳು. ಜಯ ಸಂಕೋಚ ಬಿಟ್ಟು ಹೊಡೆಯುವುದಕ್ಕೆ ಆರಂಭಿಸಿದಳು. ಪದ್ಮ ಸೀಕರಣೆಯನ್ನು ರುಚಿ ನೋಡಿ "ನನಗೆ ಸಾಕಮ್ಮ" ಎಂದಳು.

"ರೊಟ್ಟಿ ರುಚಿ ನೋಡೇ, ಪದ್ಮಾ—ಸೊಗಸಾಗಿದೆ."

"ನನಗೆ, ರಾಗಿ ಪದಾರ್ಥ ತಿಂದರೆ ವೈಗಾಗಲ್ಲಮ್ಮ—ಅಭ್ಯಾಸವಿಲ್ಲ"

ಎಂದು ಕುತ್ತಿಗೆಯನ್ನು ಕೊಂಕಿಸಿಕೊಂಡು ಅಂದಳು. ಭಟ್ಟರ ಮಗಳಿಗೆ ಇದು ಸಹನವಾಗಲಿಲ್ಲ.

"ಹೌದಮ್ಮ, ನೀವು ಶ್ರೀಮಂತರು. ನಿತ್ಯ ಲಾಡು ಚಿರೋಟಿ ತಿನ್ನುವವರು. ನಾವು ಬಡವರು-ನಮಗೆ ಈ ಒಣರೊಟ್ಟಿಯೇ ಪಂಚಭಕ್ಷ್ಯಪರಮಾನ್ನ"

ಎಂದು ಮೂದಲಿಸಿದಳು. ಪದ್ಮ ಅತ್ತು ಕರೆದು ಅತ್ತೆಗೆ ದೂರು ಹೇಳಿ ಅವರ ಕೈಲಿ 'ಛೀಮಾರಿ' ಮಾಡಿಸಿಕೊಂಡು ತೆಪ್ಪಗಾದಳು. ಅದೇ ಅವಕಾಶದಲ್ಲಿಯೇ ಮೀನಾಕ್ಷಮ್ಮನವರು

"ರಾಗಿ, ಅಕ್ಕಿ, ಗೋಧಿ ಇವು ಮನುಷ್ಯರ ಯೋಗ್ಯತೆಯನ್ನು ನಿರ್ಣಯಿಸುವುದಿಲ್ಲವಮ್ಮಾ. ವಜ್ರದ ಓಲೆ, ಕೆಂಪಿನ ಓಲೆಗಳೂ ಯೋಗ್ಯತೆಯನ್ನು ನಿರ್ಣಯಿಸುವುದಿಲ್ಲ. ಮನಸ್ಸು ಚೆನ್ನಾಗಿರಬೇಕು. ಅಂತಃಕರಣವಿರಬೇಕು. ನಮ್ಮ

ರಂಗಪ್ಪ, ಮರಿಗುಡ್ಡ, ಭಟ್ಟರು ಇವರ ಯೋಗ್ಯತೆಗೆ ಬೆಲೆ ಕಟ್ಟೋದಿಕ್ಕೆ ಸಾಧ್ಯವೇ ? ಚಿನ್ನದಂತಹ ಜನ, ಚಿನ್ನದಂತಹ ಮನಸ್ಸು"

ಎಂದು ಸೊಸೆಯಂದಿರಿಗೆ ಹೇಳಿದ್ದರು.

ಲಕ್ಷ್ಮಣ ಬಂದಿದ್ದ ಸುದ್ದಿ ಅವನ ಹಳೆಯ ಗೆಳೆಯರಲ್ಲಿ ಬೇಗನೆ ಹರಡಿ ಬಿಟ್ಟಿತು. ಲಕ್ಷ್ಮಣ ಬೆಂಗಳೂರಿನಲ್ಲಿ ಒಬ್ಬ ಪ್ರಸಿದ್ಧ ವಿದ್ವಾಂಸರ ಹತ್ತಿರ ಸಂಗೀತ ಕಲಿಯುತ್ತಿರುವುದು ಅವರಿಗೆ ಶಾಮಣ್ಣನವರ ಮೂಲಕ ಗೊತ್ತಾಗಿತ್ತು.

"ಈಗ ಪಲ್ಲವಿ ಹಾಡುತ್ತಾನ್ರಯ್ಯಾ!"

ಎಂದು ಶಾಮಣ್ಣನವರು ತಿಳಿಸಿದ್ದರು. ಗರ್ಲ್ಸ ಸ್ಕೂಲ್ ಸಂಗೀತದ ಮೇಷ್ಟ್ರು, ರಾಮಸ್ವಾಮಿ ಅಯ್ಯಂಗಾರಿ, ವೆಂಕಟಶಾಮಿ, ರಂಗದಾಸ ಎಲ್ಲರೂ ದೇವಸ್ಥಾನದಲ್ಲಿ ಸಭೆ ಸೇರಿದರು. ಗಹನವಾದ ವಿಷಯವೊಂದನ್ನು ಅವರು ನಿರ್ಣಯಿಸಬೇಕಾಗಿತ್ತು.

"ಲಕ್ಷ್ಮಣರಾಯರನ್ನು ಹೇಗೆ ಕೇಳುವುದು ?" ಎಂದು ಗರ್ಲ್ಸ ಸ್ಕೂಲ್ ಮೇಷ್ಟ್ರು ಸಂಶಯ ತೆಗೆದರು.

"ಹೇಗೆ ಕೇಳೋದು ಅಂದರೆ, ನಾಳೆ ಶನಿವಾರದ ಭಜನೆಯಲ್ಲಿ ನೀನು ಹಾಡಬೇಕು ಎಂದು ಹೇಳೋದೇ" ಎಂದು ಪುಳಿಯೋಗರೆ ರಾಮಸ್ವಾಮಿ ಅಯ್ಯಂಗಾರಿ ಉತ್ತರ.

"ಅಲ್ಲಾ ಸ್ವಾಮಿ. ಮೊದಲು ಅಂದರೆ ಹುಡುಗರಾಗಿದ್ದರು. ಈಗ ಬೆಂಗಳೂರಿನಲ್ಲಿ ವಿದ್ಯಾ ಕಲಿತು ಬಂದಿದ್ದಾರೆ. ಬಡ ಹಳ್ಳಿ ಜನ ನಮ್ಮ ಮಾತು ಯಾವ ಲಕ್ಷ್ಯ ಸ್ವಾಮಿ ?" ಎಂದು ವೆಂಕಟಶಾಮಿ ಸಂದೇಹ ಸೂಚಿಸಿದ.

"ಆ ಭಯವೇನೂ ಇಲ್ಲ. ಲಕ್ಷ್ಮಣರಾಯನ ತಲೆ ಅದಕ್ಕೆಲ್ಲ ತಿರುಗೋದಿಲ್ಲ. ಭಾರತದ ಶಾಮಣ್ಣನವರು ಇದ್ದಿದ್ದರೆ ಚೆನ್ನಾಗಿತ್ತು" ಎಂದು ರಂಗದಾಸ ಹೇಳಿದ.

"ಪ್ರಯತ್ನ ಮಾಡೋಣ. ನಾವು—ಅವರ ಹಳೆಯ ಸ್ನೇಹಿತರು. ನಾವು ಕೇಳಿದರೆ ಪ್ರಾಯಶಃ ಲಕ್ಷ್ಮಣರಾಯರು ಇಲ್ಲಾ ಎನ್ನಲಾರರು. ಮಿಕ್ಕಿದ್ದನ್ನು ದೇವರಿಗೆ ಬಿಟ್ಟುಬಿಡೋಣ" ಎಂದು ಮೇಷ್ಟ್ರು ಧೈರ್ಯ ಹೇಳಿದರು.

ಭಾರಿ ಭಜನೆ ಏರ್ಪಾಟಿಗೆ ತಕ್ಕಹಾಗೆ ಭಾರಿ 'ಚರುಪು' ಇರಬೇಕೆಂದು ಅಮಲ್ದಾರರನ್ನೇ ಮುತ್ತಿಗೆ ಹಾಕಿದರು. ಕಛೇರಿಗಿಂತ ಮೊದಲೇ ಚರುಪಿನ ವ್ಯವಸ್ಥೆಯಾಗಿಹೋಯಿತು. ಮೇಷ್ಟ್ರು, ದಾಸರು ಎಲ್ಲರೂ ಹೆದರಿ ಹೆದರಿ ಕೊಂಡೇ ಲಕ್ಷ್ಮಣನನ್ನು ಕೇಳಿದರು. ಅವನು ಕೂಡಲೇ ಒಪ್ಪಿ ಅವರನ್ನು

ಆನಂದಪಡಿಸಿಬಿಟ್ಟ.

ಭಜನೆಮನೆ ಸಾಲುವುದಿಲ್ಲವೆಂದು ಮುಂದೆ ಒಂದು ದೊಡ್ಡ ಚಪ್ಪರವನ್ನೇ ಎಬ್ಬಿಸಿಬಿಟ್ಟರು. ಅಡಿಕೆ ಮರಗಳಿಗೂ, ತೆಂಗಿನ ಗರಿಗಳಿಗೂ ಏನೂ ಕ್ಷಾಮ ವಿರಲಿಲ್ಲ. ಸೊಗಸಾಗಿ ಚಪ್ಪರ ಹಾಕಿ ಕಂಬಕ್ಕೆಲ್ಲಾ ಕಾಡು ಹೂವಿನ ಅಲಂಕಾರ ಮಾಡಿ, ಹಾಡುವವರಿಗೆ ಗರ್ಲ್ಸ್ ಸ್ಕೂಲಿನಿಂದ ನಾಲ್ಕು ಬೆಂಚು ತರಿಸಿ ವೇದಿಕೆ ಹಾಕಿಸಿ ಪೆಟ್ರೋಮ್ಯಾಕ್ಸ್ ದೀಪದ ವ್ಯವಸ್ಥೆಮಾಡಿ ಜಬರ್ ಮಾಡಿಬಿಟ್ಟರು. ಪಕ್ಕವಾದ್ಯಗಳಿಗೆ ಯಥಾಪ್ರಕಾರ ರಂಗಸ್ವಾಮಿಅಯ್ಯಂಗಾರಿ, ವೆಂಕಟಶಾಮಿ ಕುಳಿತರು.

ಊರಿಗೆ ಊರೇ ಬಂದುಬಿಟ್ಟಿತ್ತು. ಮೀನಾಕ್ಷಮ್ಮನವರು ಸೊಸೆಯ ರೊಂದಿಗೆ ತಾವೂ ಬಂದಿದ್ದರು. ಈ ವಿಷಯದಲ್ಲಿ ತಾಯಿಗೂ ಮಗನಿಗೂ ಸ್ವಲ್ಪ ಮಾತುಕತೆ ನಡೆದಿತ್ತು.

"ನೀನೂ ಬರುತ್ತೀಯಾ, ಅಮ್ಮಾ?"

"ಏಕೆ, ನಾನು ಬರಬಾರದೇನು?"

"ಅಷ್ಟು ಹೊತ್ತು ಕುಳಿತುಕೊಳ್ಳಲಿಕ್ಕಾಗುವುದಿಲ್ಲ. ಮೊದಲೇ ಬೆನ್ನು ನೋವು. ಅಲಸಿಕೆ ಹೆಚ್ಚಾಗಿ ಜ್ವರಗಿರ ಬಂದೀತು ಎಂದು ನನಗೆ ಭಯ."

"ಊರಿಗೆ ಊರೇ ನಿನ್ನ ಸಂಗೀತ ಕೇಳಬಹುದು. ನಾನು ಮಾತ್ರ ಕೇಳ ಬಾರದೇನೋ, ಲಚ್ಚಣ್ಣ!"

"ಹಾಗಲ್ಲಮ್ಮಾ. ನಿನಗೆ ಬೇಕಾದರೆ ದಿನಾ ಹಾಡುತ್ತೇನೆ. ಸುಮ್ಮನೆ ಆಯಾಸವಾಗತ್ತಲ್ಲಾ ಎಂದು ಹೇಳಿದೆ ಅಷ್ಟೆ. ನೀನು ಬರಬಾರದು ಎಂದು ನಾನು ಬಯಸುತ್ತೇನೆಯೇ?"

"ಸಭೆಯಲ್ಲಿ ನೀನು ಹಾಡಿದ್ದು ನಾನು ಕೇಳಿಲ್ಲ. ಶಾಂತನ ಮದುವೆಯಲ್ಲಿ ನೀನು ಹಾಡಿದಾಗ ಬರೀ ಓಡಾಟದಲ್ಲಿಯೇ ಆಗಿಹೋಯಿತು. ನಾನು ಬಂದೇ ಬರುತ್ತೇನಪ್ಪಾ. ಬಹಳ ಆಯಾಸವಾದರೆ ನಾನೇ ಎದ್ದು ಮನೆಗೆ ಹೊರಟು ಬರುತ್ತೇನೆ."

"ಹಾಗೇ ಮಾಡಮ್ಮಾ"

ಎಂದು ಲಕ್ಷ್ಮಣ ತಾಯಿಗೆ ಸೋಲಬೇಕಾಯಿತು.

ಕಛೇರಿ ಆರಂಭವಾಯಿತು. 'ವಾತಾಪಿ ಗಣಪತಿಂ ಭಜೇ'ಯಿಂದಲೇ ಆರಂಭ. ರಾಮಸ್ವಾಮಿ ಕೈ ಸೋಲುತ್ತಾ ಬಂತು. ವೆಂಕಟಶಾಮಿ ತಪ್ಪು ತಾಳ ಹಾಕಿದ. ಲಕ್ಷ್ಮಣ ಸ್ನೇಹಿತರ ದೋಷಗಳನ್ನು ತಿಳಿದು

"ಸಾವಕಾಶವಾಗಿ ಅನುಸರಿಸಿಕೊಂಡು ಹೋಗಿ"

ಎಂದು ಧೈರ್ಯ ಹೇಳಿದ. ಲಕ್ಷ್ಮಣ ಹಾಡುತ್ತಹೋದಂತೆ ರಾಮಸ್ವಾಮಿ ಪಿಟೀಲನ್ನು ಕೆಳಗಿಟ್ಟು ತಾನೂ ತೆಪ್ಪಗೆ ಕೇಳುತ್ತ ಕುಳಿತುಬಿಟ್ಟ. ವೆಂಕಟ ಶಾಮಿ 'ಟೇಕ'ಗಳನ್ನು ಮಾತ್ರ ಹಾಕುತ್ತ ಹಾಗೂ ಹೀಗೂ ಲಕ್ಷ್ಮಣನ ಜತೆ ಯಲ್ಲಿ ಹೋಗಲು ಪ್ರಯತ್ನಪಡುತ್ತಿದ್ದ. ನಾಲ್ಕು ಕೀರ್ತನೆ ಮುಗಿಸುವ ಹೊತ್ತಿಗೆ ತಾಲ್ಲೂಕು ಕಛೇರಿಯ ಗಂಟೆ ೧೧ ಬಡಿಯಲಾರಂಭಿಸಿತು. ಲಕ್ಷ್ಮಣ ಒಂದೆರಡು ದೇವರನಾಮಗಳನ್ನು ಹಾಡಿ ಮಂಗಳ ಹಾಡಿಬಿಟ್ಟ. ಕಛೇರಿ ಮುಗಿಯಲು ಎದ್ದು ಹೋಗಿ ಮೊದಲು ತಾಯಿಗೆ ನಮಸ್ಕಾರ ಮಾಡಿದ. ಮೀನಾಕ್ಷಮ್ಮನವರು ಮಾತನಾಡಲಾರದಾಗಿದ್ದರು. ಮಗನ ತಲೆಯ ಮೇಲೆ ಕೈಯಿಟ್ಟು ಹರಸಿದರು. ಎಲ್ಲರೂ ಬಗೆಬಗೆಯಾಗಿ ಲಕ್ಷ್ಮಣ ನನ್ನು ಹೊಗಳಿದರು. ಕಣ್ಣೀರು ಒರಸಿಕೊಂಡು ಒರಸಿಕೊಂಡು ಅಮಲ್ದಾರರ ಕರವಸ್ತ್ರವೆಲ್ಲಾ ನೆನೆದು ಒದ್ದೆಮುದ್ದೆಯಾಗಿತ್ತು. ಅವರೇ ಎದ್ದುನಿಂತು ಸಭೆಯನ್ನುದ್ದೇಶಿಸಿ ನಾಲ್ಕು ಮಾತುಗಳನ್ನಾಡಿ, ಮುಂದೆ ಲಕ್ಷ್ಮಣರಾಯನಿಗೆ ಎಂತಹ ಭವಿಷ್ಯವಿದೆ ಎಂಬುದನ್ನು ಸೂಚಿಸಿದರು.

ಈ ಎಲ್ಲ ಹೊಗಳಿಕೆಯ ಮಾತುಗಳನ್ನು ಕೇಳಿಕೇಳಿ ಲಕ್ಷ್ಮಣನಿಗೆ ಬೇಸರ ಬಂದಿತ್ತು. ಅವನ ಧ್ಯಾನವೆಲ್ಲಾ ಚೆನ್ನಪ್ಪನವರ ಮೇಲೆ ನೆಟ್ಟಿತ್ತು. 'ಇಂದು ಅವರು ಕೇಳಿದ್ದರೆ' ಎಂದು ಮನಸ್ಸು ಕಾತುರಪಡುತ್ತಿತ್ತು. ಹಿಂದಿನ ನೆನಪು —ಅದೇ ಭಜನೆಯ ಮನೆ—ತಾನು ಹಾಡಿದುದು—ಚೆನ್ನಪ್ಪನವರು ಹಾಡಿ ದುದು—ಅವರು ಹೇಳಿದ ಮಾತುಗಳು ಕಿವಿಗೆ ಕಟ್ಟಿದಂತಿದ್ದವು. ಅವರ ಸ್ತುತಿಯನ್ನೆಲ್ಲಾ ಗುರುವಿಗೆ ಮನಸ್ಸಿನಲ್ಲಿಯೇ ಅರ್ಪಿಸಿಬಿಟ್ಟ.

ಲಕ್ಷ್ಮಣನ ಸಂಗೀತವನ್ನು ಎಲ್ಲರೂ ಮೆಚ್ಚಿದರು, ಎಲ್ಲರೂ ಹೊಗಳಿದರು. ಆದರೆ ಅವನೇ ಅದನ್ನು ಮೆಚ್ಚಲಿಲ್ಲ.

"ಇಲ್ಲ, ಇದು ಸಂಗೀತವಲ್ಲ. 'ಸಂಗಮಪಧನಿಸ'ಗಳ ಹೋರಾಟ. ಸುಖ ವಾದ 'ಶಾರೀರ'ದ ಸಮ್ಮೋಹನಾಸ್ತ್ರ. ಒಂದು ದಿವಸ ನಿಜವಾದ ಸಂಗೀತ ವನ್ನು ಹಾಡಬೇಕು"

ಎಂದಂದುಕೊಂಡ ಅವನಿಗೆ ಆಗ—ಮನಸ್ಸಿನ ಆ ಅಸ್ತವ್ಯಸ್ತ ಸ್ಥಿತಿಯಲ್ಲಿ ಗೋಪಾಲನ ಕಥೆಯ ನೆನಪು ಬಂದಿತು. ಜನತೆಯ ಆಸೆ ಮುಗಿಯುವಲ್ಲಿ ಕಲಾವಿದನ ಆಸೆ ಆರಂಭವಾಗುತ್ತದೆ. 'ಜನತೆಗೆ ಯಾವುದು ಹಿತವಾಗುತ್ತ ದೆಯೋ ಅದು ಕಲಾವಿದನಿಗೆ ಅಹಿತವಾಗುತ್ತದೆ ಜನತೆಗೆಲ್ಲಿ ತೃಪ್ತಿ ತೋರು ವುದೋ. ಕಲಾವಿದನಿಗಲ್ಲಿ ಅತೃಪ್ತಿ ಹೊಳೆಯುತ್ತದೆ' ಎನ್ನುವ ಮಾತುಗಳು ಕಥೆಯಲ್ಲಿ ತನ್ನನ್ನು ಉದ್ದೇಶಮಾಡಿ ಬರೆದನೋ ಎಂದು ಯೋಚಿಸತೊಡಗಿದ.

"ಮನೆಗೆ ಹೋಗೋಣವೇನಪ್ಪಾ ?" ಎಂದು ಮೀನಾಕ್ಷಮ್ಮನವರು ಎಚ್ಚರಗೊಳಿಸಿದಾಗಲೇ ಸ್ಮೃತಿ. ನಕ್ಕು "ಆಗಲಮ್ಮಾ" ಎಂದ.

೧೬

ಮಾರನೆಯ ದಿವಸ ಬಸ್ಸಿನಲ್ಲಿ ಶಾಮಣ್ಣನವರು ಬಂದಿಳಿದರು. ಹಿಂದಿನ ಸಂಜೆ ಲಕ್ಷ್ಮಣನ ಕಛೇರಿಯಾದದ್ದು ಕೇಳಿ 'ಎಂತಹ ಅವಕಾಶ ತಪ್ಪಿ ಹೋಯಿತು' ಎಂದು ಬಹಳ ವ್ಯಸನಪಟ್ಟುಕೊಂಡರು.

"ಏನು ಶಾಮಣ್ಣ, ಬಂದುಬಿಟ್ಟಿರಿ ? ಅಲ್ಲಿ ಮನೆಯ ಕಡೆ...."

"ಪರವಾಯಿಲ್ಲ, ಹೋಗಿ ಬಾ ಎಂದು ರಾಯರು ಹೇಳಿದರಮ್ಮಾ, ನನಗೂ ಮನಸ್ಸು ತಡೆಯಲಿಲ್ಲ. ಬಂದುಬುಟ್ಟೆ"

ಎಂದು ಹೇಳಿದರು. ಶಾಮಣ್ಣನವರು ಬಂದುದು ಲಕ್ಷ್ಮಣನಿಗೆ ಬಲಭುಜ ಬಂದಂತಾಯಿತು. ಮೀನಾಕ್ಷಮ್ಮನವರ ದೇಹಸ್ಥಿತಿ ತೀರಾ ಕೆಡುತ್ತ ಬಂದಿತ್ತು. ಕಾಹಿಲೆ ದಿವಸಕ್ಕೆ ಒಂದೊಂದು ರೂಪವನ್ನು ತಾಳಲಾರಂಭಿಸಿತು. ತಮ್ಮ ಸ್ಥಿತಿಯ ಪರಿಣಾಮ ಮೀನಾಕ್ಷಮ್ಮನವರಿಗೂ ಗೊತ್ತಾಯಿತು. ಮನಸ್ಸಿಗೆ ಧೈರ್ಯ ತಂದುಕೊಂಡರು. ಹೊರಗೆ ಯಾವ ಬಗೆಯ ನೋವನ್ನೂ ತೋರಗೊಡುತ್ತಿರಲಿಲ್ಲ.

ಸೊಸೆಯಂದಿರ ಶಿಕ್ಷಣದ ಕಡೆಗೆ ಗಮನಕೊಡಲಾರಂಭಿಸಿದರು. ಮನೆಯಲ್ಲಿ ಯಾರ ಯಾರ ಬಗ್ಗೆ ಹೇಗೆ ಹೇಗೆ ನಡೆದುಕೊಳ್ಳಬೇಕು, ಮನೆಗೆ ಬಂದು ಹೋಗುವವರ ವಿಚಾರದಲ್ಲಿ ಹೇಗೆ ವರ್ತಿಸಬೇಕು, ನೆಂಟರಿಷ್ಟರ ಗುಣದೋಷಗಳ ಪರಿಚಯ—ಎಲ್ಲವನ್ನೂ ತಿಳಿಸುತ್ತ ಬಂದರು. ಪದ್ಮನನ್ನು ಕರೆದು ಕೂಡಿಸಿಕೊಂಡು

"ರಾಮೂನ್ನ ನೋಡಿಕೊಳ್ಳುವುದು ಸ್ವಲ್ಪ ಜವಾಬ್ದಾರಿ ಕೆಲಸಾ, ಪದ್ಮಾ. ಅವನ ಮನಸ್ಸು ಒಳ್ಳೆಯದು; ಆದರೆ ಬಹಳ ದುಡುಕು. ಮುಂಗೋಪ ಹೆಚ್ಚು. ನೀನೆಲ್ಲಾ ಸೈರಿಸಿಕೊಂಡು ಹೋಗಬೇಕಮ್ಮ. ಇನ್ನು ಮುಂದೆ ನೀನೇ ಮನೇ ಯಜಮಾನತಿ—ರಾಮುವೇ ಯಜಮಾನ. ದೊಡ್ಡವರ ಗೌರವಕ್ಕೆ ಕುಂದುತರದ ಹಾಗೆ ನಡೆದುಕೊಂಡು ಹೋಗಬೇಕು."

"ಹಾಗೇ ಆಗಲಿ, ಅತ್ತೆಮ್ಮನವರೇ."

"ಇನ್ನೊಂದು ಮಾತು. ಇದನ್ನು ಹೇಳಿದೆ ಎಂದು ಮನಸ್ಸಿಗೆ ಏನೂ ತಿಳಿದುಕೊಳ್ಳಬೇಡ. ಗೋಪಾಲಿ ಹೇಗೋ ಲಕ್ಷ್ಮಣನೂ ಹಾಗೇ ನಿನಗೂ ರಾಮೂಗೂ. ಅವರಿಬ್ಬರನ್ನೂ ನೋಡಿಕೊಳ್ಳುವುದು ನಿಮ್ಮ ಭಾರ.

ಜಯನೂ ನೀನೂ ಯಾವಾಗಲೂ ಹೊಂದಿಕೊಂಡು ಹೋಗಿ. ನಿಮ್ಮನಿಮ್ಮಲ್ಲಿ ಏನಾದರೂ ಒಡಕು ಹುಟ್ಟಿದರೆ ಗಂಡಂದಿರಿಗೆ ಚಾಡಿ ಹೇಳಬೇಡಿ—ನೀವೇ ಸರಿಪಡಿಸಿಕೊಳ್ಳಿ."

ಆ ಮಾತನ್ನೇ ಮೀನಾಕ್ಷಮ್ಮನವರು ಜಯನಿಗೂ ಹೇಳಿದರು.

"ಸಂಗೀತ ಒಂದು ಬಿಟ್ಟರೆ ಲಕ್ಷ್ಮಣನಿಗೆ ಪ್ರಪಂಚ ವ್ಯವಹಾರ ಒಂದೂ ತಿಳಿಯಲ್ಲಮ್ಮ. ಅವನು ಯಾವಾಗಲೂ ಮಗುವಾಗಿಯೇ ಇರುತ್ತಾನೆ. ಮನಸ್ಸಿಗೆ ಏನಾದರೂ ನೋವಾದರೆ ಇತರರ ಹಾಗೆ ಹೊರಗೆ ಹಾಕುವ ಸ್ವಭಾವವಲ್ಲ ಅವನದು. ಒಳಗೇ ಕೊರಗುತ್ತಾನೆ. ನೀನು ಜಾಣೆ. ಎಲ್ಲಾ ತಿಳಿದುಕೊಳ್ಳಬಲ್ಲೆ. ಅವನನ್ನು ಸಂರಕ್ಷಿಸುವ ಭಾರ ನಿನ್ನದು."

"ಇವತ್ತು ಯಾಕೆ ಹೀಗೆ ಮಾತನಾಡುತ್ತೀರಿ, ಅತ್ತೆಮ್ಮನವರೇ? ನಮಗೆ ಬುದ್ಧಿ ಹೇಳಿ ದಾರಿ ತೋರಿಸೋಕೆ ನೀವು ಇರುವಾಗ ನಮಗೇನು ಯೋಚನೆ —ಏನು ಕೊರತೆ?"

"ನಾನು ಇರೋದು—ಅದು ಮುಗಿಯುತ್ತಾ ಬಂತು ಕಣೆ, ತಾಯಿ"

ಎಂದು ಕಣ್ಣಿನಲ್ಲಿ ನೀರು ತಂದುಕೊಂಡು ಹೇಳಿದರು. ಮೀನಾಕ್ಷಮ್ಮನವರ ಮನಸ್ಸಿನಲ್ಲಿ ಏನೋ ಹೊಳೆಯಿತು. ಹೇಗೂ ಶುಕ್ರವಾರ-ಕುಂಕುಮಾರ್ಚನೆ ಮಾಡಿ ನಾಲ್ಕು ಜನ ಮುತ್ತೈದೆಯರಿಗೆ ಹೂವಿಳ್ಯ ಮಾಡುವ ಎಂದುಕೊಂಡರು. ಶಾಮಣ್ಣನವರನ್ನು ಕರೆದು

"ಒಂದು ದಿವಸದ ಮಟ್ಟಿಗೆ ಬಂದು ಹೋಗಬೇಕಂತೆ ಎಂದು ಅವರಿಗೆ ಹೇಳಿಕಳುಹಿಸಿ, ಶಾಮಣ್ಣನವರೇ"

ಎಂದು ಹೇಳಿದರು. ಕುಂಕುಮಾರ್ಚನೆ, ಹೂವಿಳ್ಯ ಮುಗಿಯುವ ಹೊತ್ತಿಗೆ ಮೂರು ಗಂಟೆ ಆಯಿತು. ಅನಂತರ ಊಟದ ಶಾಸ್ತ್ರ ಮುಗಿಸಿ ಮಲಗಿದರು. ಸಂಜೆ ಬಸ್ಸು ಬರುವ ಹೊತ್ತಿಗೆ ಜ್ವರದಿಂದ ಮೈಕಾದು ಕೆಂಡದಂತಾಗಿತ್ತು.

ರಾಯರು ಸ್ವಲ್ಪ ಗಾಬರಿಯಾಗಿಯೇ ಬಂದರು. ಬೆಳಿಗ್ಗೆಯಿಂದ ನಡೆದುದನ್ನು ಕೇಳಿ ಶಾಮಣ್ಣನವರನ್ನು ಆಕ್ಷೇಪಿಸಿದರು.

"ತಿಳಿದೂ ತಿಳಿದೂ ಕುಂಕುಮಾರ್ಚನೆ, ಹೂವಿಳ್ಯಕ್ಕೆ ನೀನು ಹೇಗೆ ಅವಕಾಶ ಕೊಟ್ಟೆ, ಶಾಮಣ್ಣ?"

"ನಾನೇ ಹೇಳಿದೇಂದ್ರೆ. ಶಾಮಣ್ಣನವರ ಮೇಲೆ ಕೋಪಿಸಿಕೊಳ್ಳಬೇಡಿ. ನನ್ನದು ಕೊನೆಯಾಸೆಗಳು ಕೆಲವಿದ್ದವು. ಅವುಗಳಲ್ಲಿ ಇದೂ ಒಂದಾಗಿತ್ತು."

"ನೀನು ಹೀಗೆ ಮಾತನಾಡಬಾರದು, ಮೀನಾ. ಅಧೈರ್ಯ ತಂದುಕೊಳ್ಳುವುದೇ?"

"ಅಧೈರ್ಯವಲ್ಲ. ಪೂರ್ತಿ ಧೈರ್ಯವೇ ಇದೆ. ನಿಮ್ಮ ಕೊನೆಯ ದರ್ಶನ ಎಲ್ಲಿ ತಪ್ಪುತ್ತೋ ಎಂತಾ ಹೆದರಿದ್ದೆ. ನಾನು ಇನ್ನು ಹೋಗಿ ಬರುತ್ತೇನೆ."

"ಎಲ್ಲಿಗೆ, ಎಲ್ಲಿಗೇ ಮೀನಾ ?"

ಎಂದು ರಾಯರು ಕೇಳಿದ್ದು ಮೀನಾಕ್ಷಮ್ಮನವರ ಕಿವಿಯ ಮೇಲೆ ಬೀಳ ಲಿಲ್ಲ. ಸುತ್ತಲೂ ನಿಂತಿದ್ದ ಮಗ–ಸೊಸೆಯಂದಿರನ್ನು ಹತ್ತಿರ ಕರೆದು ಎಲ್ಲ ರನ್ನೂ ಪ್ರೀತಿಯಿಂದ ನೇವರಿಸಿದರು.

"ರಾಮೂನ್ನ ನೋಡಲಿಲ್ಲ. ಸಾವಿತ್ರಮ್ಮಂಗೆ ಹೇಳಪ್ಪಾ. ವೆಂಕಟೇಶ, ಶಾಂತಾ, ಗೋಪೀ....ಎಲ್ಲರಿಗೂ ಹೇಳು"

ಎಂದು ಮಗನಿಗೆ ತಿಳಿಸಿ, ಮೆಲ್ಲಗೆ ಏಳಲು ಪ್ರಯತ್ನಿಸಿದರು. ಲಕ್ಷ್ಮಣ ಹಿಡಿದೆತ್ತಿ ಕುಳ್ಳಿರಿಸಿದ. ಗಂಡನನ್ನು ನೋಡುತ್ತಾ

"ಸ್ವಲ್ಪ ನಿಂತುಕೊಳ್ಳುತ್ತೀರಾ"

ಎಂದರು. ರಾಯರು ಎದ್ದು ನಿಂತರು. ಮೀನಾಕ್ಷಮ್ಮನವರು ಮತ್ತೆ ಒಂದು ಸಲ ಸುತ್ತಲೂ, ಕಣ್ತುಂಬ ಗಂಡ, ಮಗ, ಸೊಸೆಯಂದಿರು, ಶಾಮಣ್ಣ ಎಲ್ಲರನ್ನೂ ನೋಡಿ ಗಂಡನ ಪಾದಗಳನ್ನು ಮುಟ್ಟಿ ಆದರ ಮೇಲೆ ತಲೆಯ ನ್ನಿಟ್ಟರು.

—ಮತ್ತೆ ಏಳಲಿಲ್ಲ.

೧೭

ರಾಯರ ಜೀವನವೇ ಬದಲಾಯಿಸಿಬಿಟ್ಟಿತು. ಏನೋ ಒಂದು ಮಂಕು ಕವಿದಂತಾಯಿತು. ರಾಮಾಯಣವನ್ನು ಹಿಡಿದು ಕುಳಿತರೆ ಅದೇ ಆಗುತ್ತಿತ್ತು. ಶನಿಕೆ ಪಿಕಾಸಿ ಹಿಡಿದು ತೋಟದ ಕೆಲಸಕ್ಕೆ ನಿಂತರೆ ಅದೇ. ಸಂಧ್ಯಾವಂದನೆಗೆ ಕುಳಿತರೆ ಅದೇ ಆಗುತ್ತಿತ್ತು. ಒಂದು ನೂರು ಸಲ ಮಾತನಾಡಿಸಿದರೆ ಒಂದು ಸಲ ಉತ್ತರ ಕೊಡುತ್ತಿದ್ದರು. ಅಸಂಬದ್ಧವಾದ ಉತ್ತರಗಳೇ ಹೆಚ್ಚು.

ರಾಯರ ಸ್ಥಿತಿಯನ್ನು ನೋಡಿ ಗೆಳೆಯರಿಬ್ಬರೂ ಬಹಳ ಮರುಗಿದರು. ಏನು ಮಾಡುವುದಕ್ಕೂ ದಿಕ್ಕು ತೋಚದಂತಾಯಿತು. ಊರು ಬಿಟ್ಟು ನಾಲ್ಕು ದಿವಸ ದೇಶ ಸುತ್ತಿಬಂದರೆ ಕೊಂಚ ಮರೆತಂತೆ ಆಗಬಹುದು ಎಂದು ರಾಯರಿಗೆ ಹೇಳಿ ನೋಡಿದರು. ರಾಯರು ತಾವು ಬೆಂಗಳೂರು ಬಿಟ್ಟು ಕದಲುವುದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟರು. ಹೊರಗೆ ಹೋಗಿ ಬಂದರೆ ಹಿಂದಣ ರೂಢಿಯಂತೆ 'ಮೀನಾ' ಎಂದು ಕೂಗುವರು. ಸಾವಿತ್ರಮ್ಮ ಬಂದು ಎದುರು ನಿಂತರೆ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಂಡು ತಲೆತಗ್ಗಿಸಿ

ಕೊಂಡು ಕೋಣೆಯೊಳಗೆ ಹೋಗಿಬಿಡುತ್ತಿದ್ದರು.

ಮೀನಾಕ್ಷಮ್ಮ ತಮ್ಮನ್ನು ಬಿಟ್ಟು ಹೊರಟುಹೋದರೆಂಬುದು ರಾಯರ ಮನಸ್ಸಿಗೆ ಬರಲೊಲ್ಲದು. ಬೆಳಗ್ಗೆಯಿಂದ ಸಂಜೆಯವರೆವಿಗೂ ಮೀನಾಕ್ಷಮ್ಮನವರು ಮಾಡುತ್ತಿದ್ದುದು ಕಣ್ಣಿಗೆ ಕಟ್ಟಿದಂತಿತ್ತು. ಕೋಣೆಯಲ್ಲಿಯೇ ಕುಳಿತು ಗಡಿಯಾರ ನೋಡುತ್ತಾ

'ಮೀನಾ ಈಗ ತುಳಸೀಕಟ್ಟೆಗೆ ಪ್ರದಕ್ಷಿಣೆ ನಮಸ್ಕಾರ ಹಾಕುತ್ತಿರಬಹುದು.'

'ಮೀನಾ ಈಗ ರಾಮೂ ಬರುತ್ತಾನೇಂತ ತಿಂಡಿ ಮಾಡುತ್ತಿರಬಹುದು.'

'ಮೀನಾ ಈಗ ಜಯ–ಪದ್ಮರ ಕೈಯಲ್ಲಿ ಹಾಡೂ ಹಸೆ ಹೇಳಿಸುತ್ತ ಹೂವು ಪೋಣಿಸುತ್ತಿರಬಹುದು'

ಎಂದು ಯೋಚಿಸಿ 'ಮೀನಾ' ಎಂದುಕೊಂಡು ತುಳಸೀಕಟ್ಟೆಯ ಬಳಿಗೋ ಅಡಿಗೆಯ ಮನೆಗೋ ಓಡುವರು. ಮೀನಾ ಇರುತ್ತಿರಲಿಲ್ಲ. ನಿರಾಶೆಯಿಂದ ತಮ್ಮ ಕೋಣೆಯನ್ನು ಸೇರಿ ದುಃಖದಲ್ಲಿ ಮೈಮರೆಯುತ್ತಿದ್ದರು. ನಿಂತರೆ, ಕುಳಿತರೆ ಎದುರಿಗೆ ಮೀನಾಕ್ಷಮ್ಮ ಬಂದು ನಿಂತಂತಾಗುತ್ತಿತ್ತು. ಅವರ ಮೃದು ನಗೆ, ಸಹಜ ಗಾಂಭೀರ್ಯ, ಉದಾತ್ತ ನಡೆವಳಿಕೆ ಕಣ್ಣಿಗೆ ಕಟ್ಟಿದಂತಾಗುತ್ತಿದ್ದವು. ಸಾವಿತ್ರಿಯನ್ನು ತಂದು ತಮಗೆ ಮದುವೆ ಮಾಡಿದುದು —ತಮ್ಮ ಕಿವಿಯ ಆಭರಣವನ್ನು ತೆಗೆದು ಸಾವಿತ್ರಿಗೆ ಇಡುತ್ತಿದ್ದುದು— ಸಾವಿತ್ರಿಗೆ ನೀರೆರೆದು ಹೆರಳು ಹಾಕಿ ಅಲಂಕರಿಸಿ ತಮ್ಮ ಬಳಿಗೆ ಕಳುಹಿಸುತ್ತಿದ್ದುದು–ರಾಮುವಿನ ಎಲ್ಲ ರೋಷದೋಷಗಳನ್ನೂ ಸಹಿಸುತ್ತಿದ್ದುದು–ಮನೆಯ ಆಳುಕಾಳುಗಳು, ಆಶ್ರಿತರು ಎಲ್ಲರ ವಿಚಾರದಲ್ಲಿಯೂ ಅವರು ತೋರುತ್ತಿದ್ದ ಮರುಕ ರಾಯರ ಸ್ಮೃತಿಯನ್ನು ಕೆದಕುತ್ತಿದ್ದವು. ನಿದ್ರಿಸುತ್ತಿದ್ದಂತೆ ಗಾಬರಿಯಾಗಿ 'ಮೀನಾ–ಮೀನಾ!' ಎಂದು ಮನೆಯಲ್ಲೆಲ್ಲಾ ಓಡಾಡುವರು. ಒಂದು ದಿವಸ ಹೊಸಲು ಎಡವಿ ಬಿದ್ದು ಹಣೆಯನ್ನು ಒಡೆದುಕೊಂಡಿದ್ದರು.

ರಾಯರ ಸ್ಥಿತಿ ಮನೆಯಲ್ಲಿ ಎಲ್ಲರಿಗೂ ತುಂಬ ಆತಂಕಕ್ಕೆ ಕಾರಣವಾಯಿತು. ಶಾಮಣ್ಣನವರು

"ಪತಿವ್ರತೆಯರ ಕಥೆ ಹೇಳುತ್ತಾರೆ. ನಮ್ಮ ರಾಯರಂತಹ ಸತೀವ್ರತರ ಕಥೆಯೇತಕ್ಕೆ ಹೇಳುವುದಿಲ್ಲವೋ ?"

ಎಂದು ಭೀಮರಾಯರನ್ನೊಮ್ಮೆ ಕೇಳಿದರು. ಭೀಮರಾಯರು ಅದಕ್ಕೆ ಉತ್ತರವಾಗಿ

"ಆ ಕಾಲದಲ್ಲಿ ರಾಯರಂತಹ ಸತೀವ್ರತರು ಇರಲಿಲ್ಲಾಂತ ಕಾಣುತ್ತದೆ"

ಎಂದು ಮಾರುತ್ತರ ಕೊಟ್ಟಿದ್ದರು.

ರಾಯರಿಗೆ ಮನೋರೋಗ ಪ್ರಬಲವಾಗಿ ಹಿಡಿದುಬಿಟ್ಟಿತು. ಅವರಿಗೆ ಮೀನಾಕ್ಷಮ್ಮನವರ ಹೆಸರು, ಚರಿತ್ರೆ, ರೂಪಗಳನ್ನು ಬಿಟ್ಟು ಬೇರೊಂದೂ ಬೇಡವಾದವು. ಯಾರಾದರೂ ಮೀನಾಕ್ಷಮ್ಮನವರ ಸುದ್ದಿ ಹೇಳುತ್ತಿದ್ದರೆ ಕೇಳುವರು. ಬೇರೆ ವಿಷಯ ತೆಗೆದರೆ ಆಮೆಯಂತೆ ತಮ್ಮ ಚಿಪ್ಪಿನ ಒಳಗೆ ಸೇರಿಕೊಂಡುಬಿಡುತ್ತಿದ್ದರು. ಗೃಹಕೃತ್ಯದಾಡಳಿತವೆಲ್ಲಾ ರಾಮಚಂದ್ರನೇ ನಿರ್ವಹಿಸಬೇಕಾಯಿತು. ಎಂದಿನಂತೆ ಶಾಮಣ್ಣನವರೇ ಕೆಲಸಕಾರ್ಯಗಳನ್ನು ನೋಡಿಕೊಂಡು ಹೋಗುತ್ತಿದ್ದರು. ಹಣಕಾಸಿನ ಆಡಳಿತ ಮಾತ್ರ ರಾಮಚಂದ್ರನ ಪಾಲಿಗೆ ಬಂತು.

ಮೀನಾಕ್ಷಮ್ಮನವರು ತೀರಿಕೊಂಡ ಮೇಲೆ ಸಾವಿತ್ರಮ್ಮ ಸಾಮಾನ್ಯವಾಗಿ ಯಾವುದಕ್ಕೂ ಬರುತ್ತಲೇ ಇರಲಿಲ್ಲ. ಗಂಡನ ಸ್ಥಿತಿಯೂ ಹೀಗೆ ವಿಪರೀತಕ್ಕಿಟ್ಟುಕೊಂಡ ಮೇಲಂತೂ ಗಂಡನ ಸೇವೆ, ಪೂಜೆಪುರಸ್ಕಾರಗಳು ಬಿಟ್ಟು ಅವಳಿಗೆ ಬೇರೆಯೇನೂ ಬೇಕಾಗುತ್ತಿರಲಿಲ್ಲ. ಮೊದಲು ಅಡಿಗೆಯ ಕೆಲಸವನ್ನೆಲ್ಲಾ ತಾನೇ ನೋಡಿಕೊಂಡು ಹೋಗುತ್ತಿದ್ದಳು. ಈಗ ಅದು ಶಾಂತಾ, ಜಯ, ಪದ್ಮರನ್ನು ಸೇರಿತು. ಅವರು ತಮ್ಮಲ್ಲಿಯೇ ಒಂದು ಒಪ್ಪಂದ ಮಾಡಿಕೊಂಡು ಒಂದೊಂದು ದಿವಸದ ಅಡಿಗೆ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು.

ರಾಮಚಂದ್ರನ ಕೈಗೆ ಅಧಿಕಾರ ಬಂದದ್ದು 'ಮಿಣಚಂಭಟ್ಟನ ಪ್ರಾಣಕ್ಕೆ ಬಂತು' ಎನ್ನುವಂತೆ ಆಗುತ್ತಾ ಬಂತು. ಹಾಲು ತೆಗೆದುಕೊಳ್ಳುವುದು ಕಡಿಮೆಯಾಯಿತು. ಪ್ರತಿದಿನವೂ ರಾತ್ರಿ ಲಕ್ಷ್ಮಣನಿಗೂ ವೆಂಕಟೇಶನಿಗೂ ಕುಡಿಯುವುದಕ್ಕೆ ಹಾಲು ಕೊಡುವ ಪದ್ಧತಿಯಿತ್ತು, ಅದು ನಿಂತುಹೋಯಿತು. ತರಕಾರಿ ಒಪ್ಪೊತ್ತೇ ಸಾಕೆಂದು ಹೊಸ ಯಜಮಾನರು ಆಜ್ಞೆಮಾಡಿಬಿಟ್ಟರು. ದೀಪದ ಖರ್ಚು ಬಹಳವಾಗುತ್ತಿದೆಯೆಂದು ರಾತ್ರಿ ೧೦ ಘಂಟೆಯಾಗುತ್ತಲೂ ಮೇನ್ ಸ್ವಿಚ್ (Main Switch) ಹಾಕಿಬಿಡುವುದೂ ಆರಂಭವಾಯಿತು. ರಾತ್ರಿ ಲಹರಿ ಬಂದಾಗ ಲಕ್ಷ್ಮಣ ಅಭ್ಯಾಸ ಮಾಡಿಕೊಳ್ಳುವ ಪದ್ಧತಿಯಿತ್ತು. ಗೋಪಾಲ ಸಾಮಾನ್ಯವಾಗಿ ತನ್ನ ಬರವಣಿಗೆಯನ್ನೆಲ್ಲಾ ರಾತ್ರಿಯೇ ಮಾಡುತ್ತಿದ್ದ. ಅವರಿಬ್ಬರೂ 'ಪ್ರಭಾಕರ' ಕಂದೀಲುಗಳನ್ನು ತಂದಿಟ್ಟುಕೊಂಡು ತಮ್ಮ ಅಭ್ಯಾಸಗಳನ್ನು ಮುಂದೆ ಸಾಗಿಸಬೇಕಾಯಿತು.

ಒಂದು ದಿವಸ ರಾಮಚಂದ್ರನ ಕೃಪಾಕಟಾಕ್ಷ ರಾಯರ ಮನೆಗೆ ವಾರಕ್ಕೂ ಭಿಕ್ಷಕ್ಕೂ ಬರುತ್ತಿದ್ದ ಹುಡುಗರ ಮೇಲೆ ಬಿತ್ತು. ಹುಡುಗರೂ ತನ್ನ ಪಂಕ್ತಿ

ಯಲ್ಲೇ ಊಟಕ್ಕೆ ಕುಳಿತಿದ್ದರು. ಅವತ್ತು ಪದ್ಮನ ಅಡಿಗೆಯ ಸರದಿ. ಶಾಂತಾ, ಜಯ ಇಬ್ಬರೂ ಬಡಿಸುತ್ತಿದ್ದರು.

'ಈ ಭಿಕಾರಿಗಳಿಗೆಲ್ಲಾ ನನ್ನ ಹೆಂಡತಿ ಅಡಿಗೆ ಮಾಡಿ ಹಾಕುವದೆಂದರೇನು ?'

ಎನ್ನುವ ಯೋಚನೆ ಹೊಳೆಯಿತು. ಊಟ ಮುಗಿಸುವುದರೊಳಗಾಗಿಯೇ ಅವಸರ.

"ನಾಳೆಯಿಂದ ನೀವು ಯಾರೂ ಇಲ್ಲಿ ಊಟಕ್ಕೆ ಬರಬೇಡಿರಯ್ಯ. ನಮ್ಮಲ್ಲಿ ಅನುಕೂಲವಾಗುವುದಿಲ್ಲ"

ಎಂದು ಹೇಳಿಬಿಟ್ಟ. ಹುಡುಗರು ಎದ್ದು ಕೈತೊಳೆದುಕೊಂಡು ಹೊರಟು ಹೋದರು. ಮತ್ತೆ ರಾಯರ ಮನೆಯ ಬಳಿ ಸುಳಿಯಲಿಲ್ಲ. ಸಾವಿತ್ರಮ್ಮನವರು ಸುದ್ದಿ ಕೇಳಿ ಬಹಳ ದುಃಖಪಟ್ಟರು. ಮಗ ಸಮಾಧಾನವಾಗಿ ಎಲೆಯಡಿಕೆ ಹಾಕಿಕೊಳ್ಳುತ್ತಿದ್ದಾಗ ಅವನ ಬಳಿ ಬಂದು

"ಇದೇನಪ್ಪಾ ರಾಮಣ್ಣಾ, ಹೀಗೆ ಮಾಡಿಬಿಟ್ಟೆ ?"

"ಏನು ಮಾಡಿದೆನಮ್ಮ ?"

"ಆ ಬಡಹುಡುಗರನ್ನೆಲ್ಲಾ ಅಟ್ಟಿಬಿಟ್ಟೆಯಂತಲ್ಲಾ ?"

"ಮನೆಯಲ್ಲಿ 'ಅಣ್ಣಾವಂಟಿಗಾರರ' ಗುಂಪು ಹೆಚ್ಚಾಯಿತು. ಇದರಿಂದ ಮನೆಗೆ ಖರ್ಚು ತಪ್ಪಲಿಲ್ಲ, ಅವರಿಗೆ ವಿದ್ಯೆ ಬರಲಿಲ್ಲ. ಸ್ವಲ್ಪ ಕಷ್ಟಪಟ್ಟು ಸ್ವಾವಲಂಬನ ಕಲಿತುಕೊಳ್ಳಲಿ ಎಂದು ಹಾಗೆ ಹೇಳಿದೆನಮ್ಮ. ಅವರ ಒಳ್ಳೆಯದಕ್ಕೇ ನಾನು ಹಾಗೆ ಮಾಡಿದ್ದು."

"ಖರ್ಚುಯೇನು ಬಂತಪ್ಪಾ, ಹತ್ತು ಜನ ಊಟಮಾಡುವ ಮನೆಯಲ್ಲಿ ನಾಲ್ಕು ಜನ ಓದೋ ಹುಡುಗರು ಊಟಮಾಡಿದರೆ ಆಗುತ್ತಿದ್ದುದೇನು ನಷ್ಟ ? ದೇವರು ಯಾವದಕ್ಕೆ ಕಡಿಮೆ ಮಾಡಿದ್ದಾನೆ, ಅವರ ಮನೆ ಯಾವಾಗಲೂ ಅನ್ನದಾನಕ್ಕೆ ಪ್ರಸಿದ್ಧವಾದದ್ದು, ನೀನು ಹೀಗೆ ಮಾಡುವುದು ಚೆನ್ನಲ್ಲಪ್ಪ."

"ಹಾಗಾದರೆ ನೀನೇ ನಡೆಸಮ್ಮಾ—ಇದೆಲ್ಲಾ ಶಾಮಣ್ಣ ಲಕ್ಷ್ಮಣರ ಪಿತೂರಿಯೆಂದು ಕಾಣುತ್ತದೆ"

ಎಂದು ತಾಯಿಯ ಮುಂದೆ ಬೀಗದ ಗೊಂಚಲನ್ನು ಎಸೆದ. ಸಾವಿತ್ರಮ್ಮ ಬೀಗದ ಕೈಗೊಂಚಲನ್ನು ಅವನ ಮೇಜಿನ ಮೇಲಿಟ್ಟು

"ರಾಮೂ, ಇದೇ ಮೊದಲು ಇದೇ ಕೊನೆ—ನಿನಗೆ ಇನ್ನುಮೇಲೆ ಏನೂ ಹೇಳಲ್ಲಪ್ಪಾ. ನಾನು ಮಾಡಿದ್ದು ತಪ್ಪಾಯಿತು, ಕ್ಷಮಿಸು. ಹೇಗೂ ನೀನು ಮನೆ ಯಜಮಾನ, ನಿನಗೆ ಹೇಗೆ ಸಂತೋಷವೋ ಹಾಗೆ ಮಾಡು"

ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟುಹೋದಳು. ರಾಮು ತಾಯಿಯ ಮೇಲಿನ ಕೋಪವನ್ನು ಹೆಂಡತಿಯ ಮೇಲೆ ತೀರಿಸಿಕೊಂಡು, ಪದ್ಮನನ್ನು ಹಿಡಿದು ಚೆನ್ನಾಗಿ ಬಡಿದು, ಅವಸರವಸರವಾಗಿ ಅಂಗಿ ರುಮಾಲು ಧರಿಸಿ ಕೋರ್ಟಿಗೆ ನಡೆದ.

ರಾಮುಚಂದ್ರನ ಯಜಮಾನಿಕೆಯ ಶಖೆ ಮನೆಯಲ್ಲಿ ಎಲ್ಲರಿಗೂ ತಗುಲ ತೊಡಗಿತು. ಹಳೆಯ ತಂಬೂರಿ, ಅಗ್ಗಕ್ಕೆ ಸಿಕ್ಕಿತೆಂದು ಇಪ್ಪತ್ತು ರೂಪಾಯಿ ಗಳನ್ನಿತ್ತು ಶಾಮಣ್ಣನವರು ಒಂದು ತಂಬೂರಿಯನ್ನು ಕೊಂಡು ತಂದಿದ್ದರು. ಅದಕ್ಕೆ ಕುದುರೆ, ತಂತಿಗಳಿರಲಿಲ್ಲ. ಅದಕ್ಕೂ ಖರ್ಚುಮಾಡಿ ತಂಬೂರಿಯನ್ನು ಸಿದ್ಧಮಾಡುತ್ತಿದ್ದರು. ಶಾಮಣ್ಣನವರ ಈ ಹೊಸ ವ್ಯಾಪಾರವನ್ನು ನೋಡಿ ವೆಂಕಟೇಶ

"ಇದೇನು ಶಾಮಣ್ಣನವರೆ, ತಂಬೂರಿ ತಂದುಕೊಂಡಿದ್ದೀರಲ್ಲಾ, ಕುಮಾರ ವ್ಯಾಸನನ್ನು ಜೀರ್ಣೋದ್ಧಾರ ಮಾಡುತ್ತೀರೋ ?"

"ನನ್ನೇ ಜೀರ್ಣೋದ್ಧಾರ ಮಾಡಿಕೊಳ್ಳುತ್ತೇನಪ್ಪಾ. ಈ ಹೊಸ ಆಡಳಿತ ದಲ್ಲಿ ನನಗೂ ಇವತ್ತಲ್ಲ ನಾಳೆ ಅಪ್ಪಣೆಚೀಟಿ ಸಿಕ್ಕತ್ತೇಂತ ಗೊತ್ತು."

"ಎಲ್ಲಾದರೂ ಉಂಟೆ? ನಿಮ್ಮನ್ನ....ಇಷ್ಟು ದಿವಸ ರಾಯರ ಮನೆಗೆ ಜೀವ ತೇದಿದ್ದೀರಿ...."

"ವೆಂಕಟೇಶೂ....ನಾನೊಬ್ಬನೇ ಅಲ್ಲ, ನೀನೂ ಸೇರುತ್ತೀ. ನಿನ್ನ ಜತೆಗೆ ಲಕ್ಷ್ಮಣನೂ ಸೇರುತ್ತಾನೆ. ಎಲ್ಲಾ ಸ್ವಲ್ಪ ಈಗಿನಿಂದಲೇ ಜೋಕೆಯಿಂದಿರಿ."

"ಹಾಗೇ ಆಗಲಿ."

"ಒಂದು ಮಾತು. ನೀನು ಮುಂದಕ್ಕೆ ಏನು ಯೋಚನೆ ಮಾಡಿ ಕೊಂಡಿದ್ದೀ ?"

"ಯಾವದಾದರೂ ಲೈಫ್ ಇನ್‌ಷ್ಯೂರೆನ್ಸ್ (Life Insurance) ಕಂಪೆ ನಿಗೆ ಏಜಂಟಾಗಿ ಕೆಲಸ ಮಾಡೋಣಾಂತಿದ್ದೀನಿ. ಸದ್ಯಕ್ಕೆ ಸರ್ಕಾರದ ವಿಮಾ ಕಂಪೆನಿಗೆ ಬರೆದುಕೊಂಡಿದ್ದೇನೆ. ಭೀಮರಾಯರೂ ಸುಂದರರಾಯರೂ ಸಹಾಯ ಮಾಡುತ್ತೇವೆ ಎಂದು ಹೇಳಿದ್ದಾರೆ."

"ಏನಾದರೂ ಮಾಡಪ್ಪಾ. ನಿನ್ನ ಕಾಲಮೇಲೆ ನೀನು ನಿಂತುಕೊಳ್ಳುವ ಏರ್ಪಾಟು ಮಾಡಿಕೋ. ಕಾಲ ಹೇಗೆ ಹೋಗಿ ಹೇಗೆ ಬರುತ್ತದೆಯೋ ?"

"ನಿಜ ಶಾಮಣ್ಣನವರೇ. ನನ್ನದೇನೋ ಹೇಗೋ ಆಗತ್ತೆ. ನನಗೆ ಲಕ್ಷ್ಮಣ ನದೇ ಯೋಚನೆ."

"ಅವನು ಸಂಪಾದನೆ ಕಡೆ ಲಕ್ಷ್ಯ ಕೊಡಲ್ಲ, ವೆಂಕಟೇಶೂ. ಇಲ್ಲದಿದ್ದರೇನು

ಘನವಾದ ೩-೪ ಪಾಠಗಳು ಈ ಕ್ಷಣ ಸಿಕ್ಕತ್ತೆ. ಅವನ ಲೆಕ್ಕಾಚಾರವೇ ಬೇರೆ. ಸಮಾಜದವರು ಪ್ರತಿವರ್ಷವೂ ಕಛೇರಿಗೆ ಕರೆಯುತ್ತಲೇ ಇದ್ದಾರೆ. ತಾನು ದಕ್ಷಿಣ ದೇಶಕ್ಕೆ ಹೋಗಿ ಅಲ್ಲಿ ಜಯಭೇರಿ ಹೊಡೆದು ಬಂದ ಹೊರತೂ ಸಮಾಜದಲ್ಲಿ ಕಛೇರಿ ಮಾಡುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟ. ಅನಂತಾಚಾರ್ಯರ ಹತ್ತಿರ ಕಲಿತದ್ದು ಮುಗಿದಿದೆ. ದಕ್ಷಿಣಕ್ಕೆ ಹೋಗಿ ನಾಯನಾ ಪಿಳ್ಳೆಗಳ ಹತ್ತಿರ ಒಂದೆರಡು ವರ್ಷ ಇದ್ದು ಬರಬೇಕೂಂತ ಅವನ ಆಸೆ. ತಂದೆಯ ಸ್ಥಿತಿ ನೋಡಿ ಅವನ ಬಾಯಿ ಕಟ್ಟಿಹೋಗಿದೆ. ಒಳಗೇ ಕೊರಗುತ್ತಾ ಇದ್ದಾನಪ್ಪಾ."

"ಅಣ್ಣನಿಗೆ ಧನಪಿಶಾಚಿ, ತಮ್ಮನಿಗೆ ಸಂಗೀತಪಿಶಾಚಿ ಹಿಡಿದುಬಿಟ್ಟಿದೆ! ನಮ್ಮ ಮನೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪಿಶಾಚಿ ಹಿಡಿದಿದೆಯೆಂದು ಕಾಣುತ್ತದೆ."

"ಹಿಡಿಯಲಪ್ಪ ಹಿಡಿಯಲಿ. ಆದರೆ ಪಿಶಾಚಿ ಹಿಡಿದೋರು ಇತರರನ್ನು ಹಿಡಿಯದಿದ್ದರೆ ಸಾಕು!"

ಎಂದು ಶಾಮಣ್ಣನವರು ನಗುತ್ತಾ ನುಡಿದರು.

೧೮

ರಾಮಚಂದ್ರನಿಗೆ ಮಲ್ಲಿಕಾರ್ಜುನಯ್ಯನವರ ಕಛೇರಿ ಸಾಕಾಗಿತ್ತು. ಮಲ್ಲಿಕಾರ್ಜುನಯ್ಯನವರು ಕಛೇರಿಗೆ ಬರದೆ ಎಲ್ಲಾ ಕೆಲಸವನ್ನೂ ರಾಮಚಂದ್ರನ ಕೈಯಲ್ಲೇ ಮಾಡಿಸುತ್ತಿದ್ದುದನ್ನು ಕಕ್ಷಿಗಾರರು ಕಂಡಿದ್ದರು. ಅವರಲ್ಲಿ ಒಬ್ಬಿಬ್ಬರು ಪುಟಲಾಯರುಗಳು ರಾಮಚಂದ್ರನಿಗೆ ಉಪದೇಶವನ್ನಾರಂಭಿಸಿದರು.

"ನೀವೇ ಆಫೀಸ್ ಮಾಡಿಬಿಡಿ, ಸ್ವಾಮಿ. ನಾವೆಲ್ಲಾ ನಿಮ್ಮ ಆಫೀಸಿಗೇ ಬಂದುಬಿಡುತ್ತೇವೆ. ಇದೆಲ್ಲಿ ಸಹವಾಸ ಮಲ್ಲಿಕಾರ್ಜುನಯ್ಯನವರದು"

ಎಂದು ಮೇಲಿಂದಮೇಲೆ ಹೇಳತೊಡಗಿದರು. ಅವರ ಆಟ ಮಲ್ಲಿಕಾರ್ಜುನಯ್ಯನವರ ಮುಂದೆ ನಡೆಯುತ್ತಿರಲಿಲ್ಲ. ರಾಮಚಂದ್ರ ಚಿಕ್ಕ ಲಾಯರು— ಹೇಳಿದ ಹಾಗೆ ಕೇಳುತ್ತಾನೆ. ಏನೋ ಅಷ್ಟೋ ಇಷ್ಟೋ ಕೊಟ್ಟರೆ ತೃಪ್ತನಾಗಿ ಕೆಲಸ ಮಾಡಿಕೊಂಡು ಹೋಗುತ್ತಾನೆ ಲಾಯರ ಹೆಸರು ಹೇಳಿ ತಾವು ಕೈ ತುಂಬ ಸಂಪಾದಿಸಬಹುದೆಂದು ಅವರ ಎಣಿಕೆ. ರಾಮಚಂದ್ರ ಅವರ ಮಾತಿಗೆ ಕಿವಿ ಜೋತುಬಿಟ್ಟ. ಬೇರೆ ಆಫೀಸನ್ನೇ ತೆಗೆದು ದೊಡ್ಡದಾಗಿ

ಎಚ್. ಎಸ್. ರಾಮಚಂದ್ರರಾಯರು, ಎಂ.ಎ., ಎಲ್‌ಎಲ್.ಬಿ.
ಹೈಕೋರ್ಟು ಅಡ್ವೋಕೇಟರು

ಎಂದು ಬೋರ್ಡನ್ನು ಹಾಕಿಬಿಟ್ಟ. ತಮ್ಮಲ್ಲಿಯೇ ಪಾಠ ಕಲಿತು, ತಮ್ಮ ಕಕ್ಷಿಗಾರರನ್ನೇ ಹಾರಿಸಿಕೊಂಡು ಹೋದನಲ್ಲಾ ಎಂದು ಮಲ್ಲಿಕಾರ್ಜುನಯ್ಯನವರಿಗೆ ಒಳಗೆ ಬೆಂಕಿ ಬೆಂಕಿ! ಮೇಲೆ

"ಬಹಳ ಸಂತೋಷ, ರಾಮಚಂದ್ರರಾವ್. ದೇವರು ನಿಮ್ಮನ್ನು ಚೆನ್ನಾಗಿ ಕಾಪಾಡಲಿ. ವೃತ್ತಿಯಲ್ಲಿ ದೊಡ್ಡ ಹೆಸರು ಸಂಪಾದಿಸಿ"

ಎಂದು ಶುಭಾಕಾಂಕ್ಷೆಯನ್ನು ಬಯಸಿದ್ದರು. ಗೊತ್ತಾದ ಫೀಜಿ(Fees) ನಲ್ಲಿ ಎಂಟಾಣೆ ಭಾಗ ಪೂಟಲಾಯರು(Tout)ಗಳಿಗೆ ಹೋಗುತ್ತಿದ್ದರೂ ಮೊದಲನೆಯ ತಿಂಗಳಲ್ಲಿಯೇ ಐವತ್ತು ರೂಪಾಯಿನಷ್ಟು ರಾಮಚಂದ್ರನಿಗೆ ಸಂಪಾದನೆಯಾಯಿತು. ಹೊಸಹಳ್ಳಿ ಕಡೆ ಬಾಕಿ ವಸೂಲಿಗೆ ಹೋಗಿದ್ದಾಗ ಶಾಮಣ್ಣನವರು ರಾಮಚಂದ್ರ ವಕೀಲನಾಗಿರುವ ವಿಚಾರ ಅಲ್ಲಿಯ ರೈತರಿಗೆಲ್ಲಾ ತಿಳಿಸಿ ಅವರ ಕೇಸುಗಳೂ ಬರುವಂತೆ ಮಾಡಿದ್ದರು. ರಾಮಚಂದ್ರನ ಮಾವನವರು ತಮಗೆ ಬೇಕಾದವರಿಗೆಲ್ಲಾ ಅಳಿಯನ ವಿಷಯ ತಿಳಿಸಿ ಹೈಕೋರ್ಟು ಕೆಲಸಗಳನ್ನು ಅವನಿಗೇ ಕೊಡಿಸುತ್ತಿದ್ದರು. ತಿಂಗಳು ತಿಂಗಳಿಗೆ ರಾಮಚಂದ್ರನ ವರಮಾನ ಏರುತ್ತ ಬಂತು. ಕೈಯಲ್ಲಿ ದಿವಸ ದಿವಸಕ್ಕೆ ಹೆಚ್ಚು ಹಣ ಚಲಿಸಲು ಮೊದಲಾಯಿತು. ಮೊದಲೇ ರಾಮಚಂದ್ರನನ್ನು ಹಿಡಿಯುವವರಿಲ್ಲ; ಈಗಂತೂ ಸರಿಯೇ ಸರಿಯಾಯಿತು. ಹಣ ಶೇಖರವಾಗುತ್ತ ಆಗುತ್ತ ಬಂದಂತೆ ರಾಮಚಂದ್ರನ ದಾಹವೂ ಹೆಚ್ಚುತ್ತಬಂದಿತು. ಆ ದಾಹವನ್ನು ಆರಿಸಲು ಮನೆಯಲ್ಲಿ ಯಾರೂ ಸಮರ್ಥರಾಗಲಿಲ್ಲ.

ರಾಮಚಂದ್ರ ದಿವಸಕ್ಕೆ ಇಪ್ಪತ್ತೆಂಟು ಕೋರ್ಟುಗಳನ್ನು ಸುತ್ತಬೇಕಾಗಿತ್ತು. ಈ ಕೋರ್ಟಿನ ಕೆಲಸ ಮುಗಿಸಿಕೊಂಡು ಇನ್ನೊಂದು ಕೋರ್ಟಿಗೆ ಹೋಗುವಷ್ಟರಲ್ಲಿ ಕೇಸನ್ನೂ ಕೂಗಿ ಮುಂದಕ್ಕೆ ಹಾಕಿಬಿಡುತ್ತಿದ್ದರು. ಕೆಲಸ ಹೆಚ್ಚಿದಂತೆ ಈ ತೊಂದರೆಯೂ ಹೆಚ್ಚಿತು. ಕಕ್ಷಿಗಾರರು ಗೊಣಗುಟ್ಟಲಾರಂಭಿಸಿದರು. ಯೋಚಿಸಿ ಯೋಚಿಸಿ ಕೊನೆಗೆ ಕೋರ್ಟು ಹರಾಜಿನಲ್ಲಿ ಸಿಕ್ಕಿದ ಒಂದು ಮಾರಿಸ್ ಸಣ್ಣ ಕಾರನ್ನು ಅಗ್ಗವಾಗಿ ಕೊಂಡು ಅದನ್ನು ರಿಪೇರಿಮಾಡಿಸಿ ಉಪಯೋಗಿಸಲಾರಂಭಿಸಿದ.

ಗಂಡನ ಮನೋವೃತ್ತಿ ಹೆಂಡತಿಯ ಮೇಲೂ ಪರಿಣಮಿಸಲಾರಂಭವಾಯಿತು. ಮೊದಲೇ ಶ್ರೀಮಂತರ ಮಗಳು, ಸುಖವಾಗಿ ಬೆಳೆದವಳು, ಜತೆಗೆ ಹುಟ್ಟುಸೋಮಾರಿ; ಮನೆಯಲ್ಲಿ ಲಕ್ಷ್ಮಣ, ವೆಂಕಟೇಶನ ಹೆಂಡತಿಯರಿರು

ವಾಗ ತನ್ನ ಹೆಂಡತಿ ಕೆಲಸಮಾಡಕೂಡದೆಂಬುದೇ ರಾಮಚಂದ್ರನ ಶಾಸನ. ಗಂಡನ ಶಾಸನವನ್ನು ಪದ್ಮ ಮೊದಲು ಅಷ್ಟಾಗಿ ಕಿವಿಯ ಮೇಲೆ ಹಾಕಿ ಕೊಂಡಿರಲಿಲ್ಲ. ಅತ್ತಿಗೆ ನಾರಗಿತ್ತಿಯರು ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುವಾಗ ತಾನು ನೋಡುತ್ತ ನಿಂತಿರುವುದು ಪದ್ಮನಿಗಾಗುತ್ತಿರಲಿಲ್ಲ. ಬೇಡಬೇಡವೆಂದರೂ ತಾನೇ ಕೆಲಸವನ್ನು ಹುಡುಕಿಕೊಂಡು ಅವರ ಜತೆಗೂ ದುಡಿಯುತ್ತಿದ್ದಳು. ಜಯ, ಶಾಂತಾ ಯಾರಾದರೂ ಸೋತರೆ ಅವರನ್ನು ವಿಶ್ರಮಿಸ ಹೇಳಿ ತಾನೇ ಸಂತೋಷದಿಂದ ಕೆಲಸಕಾರ್ಯಗಳನ್ನು ಮಾಡಿ ಮುಗಿಸುತ್ತಿದ್ದಳು.

"ನೀನು ಏತಕ್ಕೆ ಮಾಡುತ್ತಿ ? ಅವರಿಬ್ಬರೂ ಇದ್ದಾರೆ, ಮಾಡಲಿಬಿಡು"

ಎಂದು ರಾಮಚಂದ್ರ ಉಪದೇಶವನ್ನು ತಪ್ಪದೆ ಹೆಂಡತಿಗೆ ಕೊಡುತ್ತಿದ್ದ. ತನ್ನ ಮಾತನ್ನು ಲಕ್ಷಿಸಲಿಲ್ಲವಲ್ಲಾ ಎಂಬ ಕೋಪದಿಂದ ಮೂಗು ಮುಖ ನೋಡದೆ ಹೆಂಡತಿಯನ್ನು ಬಡಿಯುತ್ತಿದ್ದ. ಈ ನರಮೇಧವನ್ನು ನೋಡ ಲಾರದೆ ಶಾಂತಾ, ಜಯ ಎಲ್ಲಾ ಕೆಲಸಗಳನ್ನೂ ತಾವೇ ಮಾಡಿಕೊಂಡು ಹೋಗುತ್ತಿದ್ದರು.

ತಾನು ಹೆಚ್ಚು–ಮೇಲು, ಇತರರು ಕಡಿಮೆ–ಕೀಳು ಎಂಬ ಭಾವನೆಯನ್ನು ಹೆಂಡತಿಯ ಸರಳ ಮನಸ್ಸಿನಮೇಲೆ ರಾಮಚಂದ್ರ ಚೆನ್ನಾಗಿ ಬಿತ್ತಲಾರಂಭಿಸಿದ. ವೆಂಕಟೇಶನನ್ನು 'ಹೊಟ್ಟೆಗಿಲ್ಲದವನು' ಎಂದೇ ಸಂಬೋಧಿಸುತ್ತಿದ್ದ. ಲಕ್ಷ್ಮಣ ನಂತೂ ಅವನ ಭಾಗಕ್ಕೆ 'ತಂಬೂರಿದಾಸಯ್ಯ'ನಾಗಿದ್ದ.

ಗಂಡನ ರಣಶಿಕ್ಷೆಯನ್ನು ಸಹಿಸಲಾರದೆ ಪದ್ಮ ಅವನಿಗೆ ಹೇಗೆ ಬೇಕೋ ಹಾಗೆ ಇರತೊಡಗಿದಳು. ರಾಮಚಂದ್ರ ಯಾರನ್ನು ಬಯ್ಯುವನೋ ಅವರನ್ನು ಅವಳೂ ಬಯ್ಯುವಳು. ಅವನು ಯಾರನ್ನು ಹೊಗಳುವನೋ ಅವರನ್ನು ಅವಳೂ ಹೊಗಳುವಳು. 'ಬೂಚಿ' ಮಾತುಗಳಲ್ಲಿ ಗಂಡನಿಗಿದ್ದ ಪ್ರೇಮವನ್ನು ಕಂಡುಕೊಂಡಳು. ಅವನಿಗೆ ಹಿತವಾಗುವ ರೀತಿಯಲ್ಲಿ ಬೇಕಾದಷ್ಟು ಬೂಚಿ ಯನ್ನಾಡುವುದನ್ನು ಕಲಿತಳು. ತಾನು ಗೆದ್ದದ್ದು ಒಂದು ಪ್ರೋನೋಟು ದಾವೆಯಾದರೂ ಅದನ್ನು ಹೆಂಡತಿಯ ಮುಂದೆ ಬಡಾಯಿ ಕೊಚ್ಚಿಕೊಂಡ ಹೊರತೂ ರಾಮಚಂದ್ರನಿಗೆ ತೃಪ್ತಿಯಿಲ್ಲ. ಪದ್ಮ ತಪ್ಪದೆ

"ಏನು ಜಾಣರೂಂದ್ರೆ ನೀವು; ಎಲ್ಲಾ ಕೇಸನ್ನೂ ಗೆದ್ದುಬಿಡ್ತೀರಲ್ಲಾ. ಎದುರು ಕಡೆಯವರ ಗತಿಯೇನೂಂದ್ರೆ!"

ಎನ್ನುತ್ತಿದ್ದಳು. ಊಟ ಮುಗಿಸಿದಮೇಲೆ ಪದ್ಮನೇ ಎಲಡಿಕೆ ಮಡಿಸಿ ತಂದುಕೊಡುತ್ತಿದ್ದಳು. ರಾಮಚಂದ್ರ ಹೆಮ್ಮೆಯಿಂದ

"ಇವತ್ತು ಹೈಕೋರ್ಟು ಕೇಸು ಕಣೇ."

"ಹೈಕೋರ್ಟು ಕೇಸೇ !! ನೀವು ಗೆದ್ದು ಬರೋದು ಖಂಡಿತ. ಹೈಕೋರ್ಟಿಗೆ ಹೋದರೆ ನೀವು ಹೋಗಬೇಕು! ಸುಮ್ಮನೆ ಎಲ್ಲಾರೂ ಹೋದರೆ ಬಂತೇ ಭಾಗ್ಯ ?"

ಎಂದು ಹೇಳುತ್ತಿದ್ದಳು. ಸಂತೋಷದಿಂದ ರಾಮಚಂದ್ರನ ಬಾಯಂಚುಗಳು ಕಿವಿಯವರೆಗೂ ಬಂದುಬಿಡುತ್ತಿದ್ದವು. ಹೆಂಡತಿ ಯಾರ ಮೇಲೆ ಏನು ಚಾಡಿ ಹೇಳಿದರೂ ರಾಮಚಂದ್ರ ನಂಬುತ್ತಿದ್ದ. ಇದನ್ನು ತಿಳಿದಿದ್ದ ಪದ್ಮ ಸಮಯೋಚಿತವಾಗಿ ಈ ಆಯುಧವನ್ನು ಉಪಯೋಗಿಸಲಾರಂಭಿಸಿದಳು. ರಾಮಚಂದ್ರ ಮನೆಗೆ ಬಂದ ಹೊತ್ತಿನಲ್ಲಿ ಕೈಯಲ್ಲಿ ಒಂದೆರಡು ಪಾತ್ರೆಗಳನ್ನು ಹಿಡಿದು ಅಡಿಗೆಯ ಮನೆಗೂ ಬಚ್ಚಲುಮನೆಗೂ ಹತ್ತಾರು ಸಲ ಓಡಿಯಾಡಿ 'ನನ್ನ ಹೆಂಡತಿ ಎಷ್ಟು ದುಡಿಯುತ್ತಾಳೆ—ಒಂದೇ ಸಮನಾಗಿ' ಎಂದು ಅವನೆಂದುಕೊಳ್ಳುವಂತೆ ಮಾಡಿಬಿಡುತ್ತಿದ್ದಳು. ಅವನು ಅತ್ತ ಕೋರ್ಟಿಗೆ ಹೋದರೆ ತಾನೂ ಊಟ ಮಾಡಿ ಕೋಣೆಯ ಕದ ಹಾಕಿ ಸುಖವಾಗಿ ಮಲಗಿ ನಿದ್ರಿಸುತ್ತಿದ್ದಳು. ಶಾಂತಾ, ಜಯ ಮನೆಯಲ್ಲಿ ಎಲ್ಲರಿಗೂ ಬಡಿಸಿ, ರಾಯರಿಗೆ ಬೇಕಾದ ಪಥ್ಯದ ಅಡಿಗೆ ಮಾಡಿಕೊಟ್ಟು, ತಾವೂ ಊಟ ಮಾಡಿ ಕೈತೊಳೆಯುವ ಹೊತ್ತಿಗೆ ಮಧ್ಯಾಹ್ನವಾಗಿಬಿಡುತ್ತಿತ್ತು. ಬಿಸಿಲಿನಲ್ಲಿ ಹೋಗಿರುವವನು ಬಂದು ರೇಗುತ್ತಾನಲ್ಲಾ ಎಂದು ಹೆದರಿಕೊಂಡು ಏನಾದರೂ ತಿಂಡಿ ಕಾಫಿ ತಪ್ಪದೆ ಮಾಡಿಡುತ್ತಿದ್ದರು. ರಾಮು ಬರುವ ಹೊತ್ತಿಗೆ ಸರಿಯಾಗಿ ಪದ್ಮ ಎದ್ದು ಅವನಿಗೆ ತಾನೇ ತಿಂಡಿ-ಕಾಫಿಯನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು. ರಾಮುವಿಗೆ ಸುಮ್ಮನೆ ತಿನ್ನುವ ಅಭ್ಯಾಸವೇ ಇರಲಿಲ್ಲ.

"ನೀನು ತಾನೇ ಮಾಡಿದ್ದು ?"

"ಹು."

"ದುಡಿ ದುಡಿ. ರಟ್ಟೆ ಗಟ್ಟಿಯಾಗಿದೆ, ದುಡಿ. ಈ ಮನೆ ಒಳಗೆ ದುಡಿಯುವುದಕ್ಕೆ ನೀನು, ಹೊರಗೆ ದುಡಿಯುವುದಕ್ಕೆ ನಾನು ಕಂಕಣ ತೊಟ್ಟಿದ್ದೇವೆ. ಮಿಕ್ಕವರೆಲ್ಲಾ ಸುಮ್ಮಾನ ಹತ್ತಲಿ."

ದಿನವೂ ಈ ಮಾತುಗಳನ್ನು ಶಾಂತಾ, ಜಯ ಇಬ್ಬರೂ ಕೇಳುತ್ತಿದ್ದರು. ಶಾಂತನಿಗೆ ಕಾಣದ ಹಾಗೆ ಜಯು, ಜಯನಿಗೆ ಕಾಣದ ಹಾಗೆ ಶಾಂತಾ ಅತ್ತು ಸಮಾಧಾನ ಮಾಡಿಕೊಂಡು ಸುಮ್ಮನಾಗುತ್ತಿದ್ದರು. ಒಂದು ದಿವಸ ಕೆಲಸ ಎಂದಿಗಿಂತಲೂ ಹೆಚ್ಚಾಗಿತ್ತು. ಹಳ್ಳಿಯವರು ಆರು ಜನ ಬಂದುದರಿಂದ ಅವರಿಗೆ ಬೇರೆ ಅಡಿಗೆ ಮಾಡಬೇಕಾಯಿತು. ಹಿಟ್ಟು ತೊಳಸಿ ತೊಳಸಿ ಜಯು,

ಶಾಂತರ ಕೈ ಬಿದ್ದುಹೋಯಿತು. ಮಧ್ಯಾಹ್ನದ ತಿಂಡಿಯನ್ನೂ ಮಾಡಿಟ್ಟು, ಫಿಲ್ಟರ್‌ನಲ್ಲಿ ಕಾಫಿಯನ್ನು ಹಾಕಿ ಇಬ್ಬರೂ ಹಾಗೇ ತಲೆ ಕೆಳಗೆ ತೋಳುಕೊಟ್ಟು ಅಡಿಗೆಯ ಮನೆಯಲ್ಲಿಯೇ ಮಲಗಿದರು. ರಾಮುವಿಗೆ ಅವತ್ತು ಕೋರ್ಟಿನಲ್ಲಿ ಮುಖಪ್ರಕ್ಷಾಳನವಾಗಿತ್ತು. ಕಕ್ಷಿಗಾರನಿಗೆ ವಿವೇಕ ಹೇಳದೆ, ಕೆಟ್ಟ ಕೇಸನ್ನು ಹಾಕಿ, ಕಕ್ಷಿಗಾರನಿಗೆ ಸ್ಟಾಂಪು ಹಣವನ್ನೂ ಇತರ ಖರ್ಚುಗಳನ್ನೂ ಉಂಟು ಮಾಡಿದ್ದನೆಂದು ಜಡ್ಜಿಗಳು ರಾಮುವನ್ನು ಚೆನ್ನಾಗಿ ಬಯ್ದಿದ್ದರು. ಆ ಕೋಪ ಕುದಿಯುತ್ತಲೇ ಇತ್ತು. ಯಥಾಪ್ರಕಾರ ಹೆಂಡತಿ ತಿಂಡಿ-ಕಾಫಿ ಮುಂದಿಟ್ಟ ಕ್ಷಣವೇ ಮನೆಯವರನ್ನೆಲ್ಲಾ ಬಯ್ಯಲಾರಂಭಿಸಿದ. ಶಾಂತಾ, ಜಯರಿಗಂತೂ ಹೀನಬೈಗಳ ಸುರಿಮಳೆಯಾಗಿಹೋಯಿತು. ಅಡಿಗೆಯ ಮನೆಯಲ್ಲಿ ಮಲಗಿದ್ದ ಇಬ್ಬರೂ ಚೆನ್ನಾಗಿ ಕೇಳಿಸಿಕೊಂಡು ಅಂದೇ ಒಂದು ನಿರ್ಧಾರಕ್ಕೆ ಬಂದರು: 'ಏನೇ ಆದರೂ ಮಧ್ಯಾಹ್ನದ ಕಾಫಿ-ತಿಂಡಿ ತಾವು ಮಾಡಬಾರದೆಂದು.' ಮಾರನೆಯ ಮಧ್ಯಾಹ್ನ ತಾನು ಏಳುವ ಹೊತ್ತಿಗೆ ಪದ್ಮ ಎದ್ದು ಅಡಿಗೆಯ ಮನೆಗೆ ಹೋದಳು. ತಿಂಡಿ-ಕಾಫಿ ಸಿದ್ಧವಾಗಿರಲಿಲ್ಲ. ಗಂಡ ಬರುವ ಹೊತ್ತಿಗೆ ಒಲೆ ಹೊತ್ತಿಟ್ಟು ಕಾಫಿಗೆ ನೀರಿಟ್ಟಳು. ರಾಮು ಬಂದೇ ಬಿಟ್ಟ. ಅವಸವಸರ ವಾಗಿ ಕೆಟ್ಟ ಕಾಫಿಯೊಂದನ್ನು ರಾಮುವಿಗೆ ತೆಗೆದುಕೊಂಡು ಹೋಗಿ ಕೊಟ್ಟಳು. ಕಾಫಿಯನ್ನು ಪದ್ಮನ ತಲೆಯ ಮೇಲೆ ಸುರಿದು ಅವಳನ್ನು ಚೆನ್ನಾಗಿ ಹೊಡೆದು ಸಮಾಧಾನ ಹೊಂದಿದ. ಈ ಹತ್ಯಾಕಾಂಡವನ್ನು ನೋಡಲಾರದೆ ಪುನಃ ಜಯಾ, ಶಾಂತರೇ ಮಧ್ಯಾಹ್ನದ ಉಪಾಹಾರ ಮಾಡತೊಡಗಿದರು.

ಒಂದು ಮಧ್ಯಾಹ್ನ ಊಟ ಮಾಡಿ ಪದ್ಮ ಹೋಗಿ ಮಲಗಿಬಿಟ್ಟಳು. ಅವತ್ತು ರಾಮಚಂದ್ರನಿಗೆ ಕೋರ್ಟು ಕೆಲಸ ಹೆಚ್ಚು ಇರಲಿಲ್ಲ. ಬೇಗ ಮುಗಿಸಿ ಕೊಂಡು ಮನೆಗೆ ಬಂದ. ಕಾಫಿ ಇನ್ನೂ ಸಿದ್ಧವಾಗಿರಲಿಲ್ಲ. ಮೈಮೇಲೆ ಆವೇಶ ಬಂದಿತು, ಹೆಂಡತಿಯನ್ನು ಲಕ್ಷ್ಯವಿಲ್ಲದೆ ಬಡಿಯುವುದಕ್ಕಾರಂಭಿಸಿದ. ಅವನ ಪ್ರಹಾರವನ್ನು ತಡೆಯಲಾರದೆ ತೊಟ್ಟಿಗೆ ಓಡಿಬಂದಳು. ಅಲ್ಲಿಗೂ ಅಟ್ಟಿಸಿ ಕೊಂಡು ಬಂದ. 'ಹೋ' ಎಂದು ಚೀರಿದಳು. ಅವಳು ಕೂಗಿದ ರಭಸಕ್ಕೆ ರೂಮಿನಲ್ಲಿದ್ದ ವೆಂಕಟೇಶ, ಲಕ್ಷ್ಮಣ ಇಬ್ಬರೂ ಓಡಿಬಂದರು. ರಾಮಚಂದ್ರನ ಕೋಪ ಇಮ್ಮಡಿಸಿತು. ಕೋಪದ ಭರದಲ್ಲಿ ಹೆಂಡತಿಯನ್ನು ಒದ್ದುಬಿಟ್ಟ. ಪದ್ಮನಿಗೆ ಸ್ಮೃತಿ ತಪ್ಪಿತು. ಇದನ್ನು ಕಣ್ಣಾರೆ ಕಂಡ ವೆಂಕಟೇಶ, ಲಕ್ಷ್ಮಣರು ತುಂಬ ನೊಂದುಕೊಂಡರು. ಲಕ್ಷ್ಮಣ ಜಯನನ್ನು ಬರಹೇಳಿ ಪದ್ಮನಿಗೆ ಉಪ ಚರಿಸಲು ಹೇಳಿದ. ವೆಂಕಟೇಶನ ದೇಹಾದ್ಯಂತವೂ ಕೋಪದಿಂದ ಕಂಪಿಸ ತೊಡಗಿತು.

"ಬಹಳ ಗಟ್ಟಿಗನಯ್ಯಾ, ವೀರ. ಹೆಂಡತಿಯನ್ನು ಸಾಯಬೀಳ ಹೊಡೆಯುವ ಮಹಾವೀರ. ವಿದ್ಯಾ ಕಲಿತು ಲಾಯರ್ ಆದ್ದಕ್ಕೆ ನಿನ್ನ ಜನ್ಮ ಸಾರ್ಥಕವಾಯಿತು. ರಾಯರಿಗೆ ಏನು ಗೌರವವೋ—ತಮ್ಮ ಮಗನನ್ನು ನೋಡಿ ಅವರು ಎಷ್ಟು ಹೆಮ್ಮೆಪಟ್ಟುಕೊಂಡರೂ ಸಾಲದು!"

"ನಿನಗೆಷ್ಟೋ ಬಾಯಿ? ಮನೆಯಲ್ಲಿ ತಿರುಪೆಕೂಳು ತಿಂದುಕೊಂಡು ಬಿದ್ದಿರೋ ನಾಯಿ! ನನ್ನ ಹೆಂಡತಿಯನ್ನು ನಾನು ಬೇಕಾದ್ದು ಮಾಡುತ್ತೇನೆ. ನೀನು ಯಾರು ಕೇಳುವುದಕ್ಕೆ?"

"ನಾನು ಒಬ್ಬ ಮನುಷ್ಯ. ನಿನ್ನ ಹಾಗೆ ಒಂದು ಕಾಡುಪಶುವಲ್ಲ! ಹೆಂಡತಿ ಕಂಡರೆ ನಿರ್ವಾಹವಿಲ್ಲದಷ್ಟು ವಿಶ್ವಾಸ. ಅವಳು ಕೆಲಸ ಮಾಡಿದರೆ ಸವೆದುಹೋಗುತ್ತಾಳೆ—ಎನ್ನುವಷ್ಟು ಆದರ. ಹೊಡೆಯುವುದು ನೋಡಿದರೆ ಕೀಳು ಜನ ನಾಚಿಕೊಳ್ಳಬೇಕು."

"ನನ್ನ ಸುದ್ದಿ ನಿನಗೇಕೋ? ಬೇಕಾದರೆ ಇರು, ಸಾಕಾದರೆ ನನ್ನ ಮನೆ ಬಿಟ್ಟು ಹೋಗು. ನನ್ನ ಸುದ್ದಿಗೆ ಮತ್ತೇನಾದರೂ ಬಂದರೆ ಕತ್ತು ಹಿಡಿದು ಆಚೆ ತಳ್ಳಿಸುತ್ತೇನೆ."

"ತಳ್ಳಿಸದೆ ಏನಪ್ಪಾ ಮಾಡುತ್ತೀ. ಕಷ್ಟಪಟ್ಟು ಎಲ್ಲಾ ಸಂಪಾದಿಸಿದ್ದೀ. ಸ್ವಂತ ತಾಯಿಗೆ ಗುಟುಕು ನೀರು ಕುಡಿಸುವ ಮಹಾನುಭಾವ. ಇನ್ನು ನಾವು ಒಂದು ಲಕ್ಷ್ಯವೇ?"

ರಾಮಚಂದ್ರನ ನಾಲಿಗೆಗೆ ಲಗಾಮು ತಪ್ಪಿತು. ವೆಂಕಟೇಶನನ್ನು ಎಷ್ಟು ವಿಧದಲ್ಲಿ ಎಷ್ಟು ಹೊಲಸು ಮಾತುಗಳಲ್ಲಿ ಬಯ್ಯಬಹುದೋ ಅಷ್ಟನ್ನೂ ಮುಗಿಸಿದ. ಕೇಳಿ ಕೇಳಿ ವೆಂಕಟೇಶನಿಗೂ ಸಾಕಾಯಿತು.

"ಹೆಣ್ಣುಮಗಳು ನಾಲ್ಕು ತಿಂಗಳು ಬಸುರಿ, ಅವಳನ್ನು ಒದ್ದೆಯಲ್ಲಾ, ಪಾಪೀ. ನಾಳೆ ಏನಾದರೂ ಹೆಚ್ಚುಕಡಿಮೆಯಾದರೆ?"

"ಆದರೆ—ನಿಮ್ಮಪ್ಪನ ಮನೆ ಗಂಟೇನೋ ಹೋಯಿತು?"

ಎಂದ. ವೆಂಕಟೇಶನ ಸಹನೆ ಮೇರೆ ಮೀರಿತು. ರಾಮುವಿನ ಷರಟಿನ ಕುತ್ತಿಗೆ ಹಿಡಿದು ಫಟೇರೆಂದು ನಾಲ್ಕು ಬಿಸಿಬಿಸಿಯಾಗಿ ಕೊಟ್ಟ. ರಾಮುವಿನ ಹೊಲಸು ಬಾಯಿ ನಿಂತಿತು. 'ಗೊಳೋ' ಎಂದು ಅಳಲಾರಂಭಿಸಿದ.

"ಇಷ್ಟು ದಿವಸ ಧಣಿ ಮಗ ಎಂದು ಸುಮ್ಮನಿದ್ದೆ. ಇನ್ನೊಂದು ದಿವಸ ಹೀಗೆ ಮಾಡು, ಹಲ್ಲು ಮುರಿದು ಕೈಗೆ ಕೊಡುತ್ತೇನೆ"

ಎಂದು ಅವನನ್ನು ಬಿಟ್ಟ. ರಾಮು ಅಳುತ್ತಲೇ ಹೋಗಿ ಕೋಣೆ ಸೇರಿಕೊಂಡ.

ಪದ್ಮನಿಗೆ ಹೆಚ್ಚು ಘಾತವೇನೂ ದೈವವಶಾತ್ ಆಗಲಿಲ್ಲ. ಮೂರುನಾಲ್ಕು ದಿವಸ ಹೊಟ್ಟೆ ಹಿಡಿದುಕೊಂಡ ಹಾಗೆ ಆಗಿ ನೋಯುತ್ತಿತ್ತು. ಬಿಸಿನೀರಿನ ಕಾವಟ ಕೊಡಲು ನೋವು ಕಡಿಮೆಯಾಗುತ್ತಾ ಬಂತು.

ವೆಂಕಟೇಶ ಅಂದೇ ಹೋಗಿ ಹನ್ನೆರಡು ರೂಪಾಯಿ ಬಾಡಿಗೆಗೆ ಒಂದು ಸಣ್ಣ ಮನೆ ನೋಡಿ ಬಂದ. ಸಂಸಾರ ಹೂಡುವುದಕ್ಕೆ ತಕ್ಕ ಅನುಕೂಲವಿರಲಿಲ್ಲ. 'ಏನಾದರೂ ಚಿಂತೆಯಿಲ್ಲ. ಸದ್ಯ ಈ ಹಾಳು ಸಹವಾಸ ತಪ್ಪಿದರೆ ಸಾಕು' ಎಂದು ನಿಶ್ಚಯಿಸಿದ. ಶಾಂತನ ಕಿವಿಯಲ್ಲಿ ಒಂದು ಜತೆ ವಜ್ರದೋಲೆ ಇತ್ತು. ಅದನ್ನು ಮಾರಿ ಮನೆಗೆ ಬೇಕಾದ ಪಾತ್ರೆಪದಾರ್ಥ ಎಲ್ಲವನ್ನೂ ಹೊಂದಿಸಿ ಕೊಂಡ.

ರಾಯರಿಗೆ ಹೇಳಿ ಬರಲು ಹೋದ. ಅವರ ಸ್ಥಿತಿಯನ್ನು ನೋಡಿ ಕಂಬನಿ ದುಂಬಿ ಹಿಂತಿರುಗಿದ. ಸಾವಿತ್ರಮ್ಮ ಎಷ್ಟೋ ಹೇಳಿ ನೋಡಿದರು. ವೆಂಕಟೇಶ ಮನಸ್ಸು ಬದಲಾಯಿಸಲಿಲ್ಲ. ಲಕ್ಷ್ಮಣನಿಗೂ ಜಯನಿಗೂ ಹೇಳುವುದು ಬಹಳ ಕಷ್ಟವಾಯಿತು. ಶಾಂತಾ, ಜಯ ಒಬ್ಬರ ಕುತ್ತಿಗೆ ಒಬ್ಬರು ತಬ್ಬ ಕೊಂಡು ಅತ್ತರು.

"ಮನೆ ದೂರವಿಲ್ಲ, ದಿನಾ ಬರುತ್ತಿರುತ್ತೀಯೋ ಇಲ್ಲಮ್ಮ" ಎಂದು ಶಾಂತಾ ಜಯನನ್ನು ಕೇಳಿದಳು.

ಜಯನ ಬಾಯಲ್ಲಿ ಮಾತು ಹೊರಡದು.

"ನಾವು ಗೆದ್ದ ಹಾಗೆ ಆಯಿತು. ಇನ್ನು ಎಲ್ಲಾ ನಿನ್ನ ಮೇಲೆ, ಲಚ್ಚಣ್ಣನ ಮೇಲೆ ಆರಂಭವಾಗುತ್ತದಲ್ಲೇ, ಜಯ."

"ಏನು ಮಾಡುವುದಮ್ಮ ? ಬಂದದ್ದು ಬರಲಿ. ದೇವರಿದ್ದಾನೆ, ಕರ್ಮ ಧರ್ಮ ನೋಡುವುದಕ್ಕೆ"

ಎಂದು ಜಯ ಸಮಾಧಾನ ಮಾಡಿದಳು. ಸಾವಿತ್ರಮ್ಮ ಓಡಿಬಂದರು. ಶಾಂತನನ್ನು ಮಣೆಯ ಮೇಲೆ ಕೂರಿಸಿ ಕುಂಕುಮ, ಎಲಡಿಕೆಯನ್ನು ಕೊಟ್ಟರು. ಅದರ ಜತೆಗೆ ಒಂದು ರವಿಕೆ ಕಣ, ಒಂದು ಸವರನ್ ಇತ್ತು.

"ಶಾಂತಾ, ನಿಮ್ಮಮ್ಮ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ರಾಮೂನ್ನ ಎಲ್ಲಾರೂ ನನಗೋಸ್ಕರ ಕ್ಷಮಿಸೀಮ್ಮಾ. ಹೆಣ್ಣುಮಗಳು ನೀನು ಹೀಗೆ ನೊಂದುಕೊಂಡು ಹೋಗುವುದು ಶ್ರೇಯಸ್ಸಲ್ಲ. ಅವನಿಗೂ ಶ್ರೇಯಸ್ಸಲ್ಲ ವಿವೇಕವಿಲ್ಲ, ತಾನು ಪಾಳೆಯಗಾರ ಎಂದು ತಿಳಿದುಕೊಂಡಿದ್ದಾನೆ"

ಎಂದು ಹೇಳಿದರು. ರಾಯರು ಒಳಗಿನಿಂದ ಕೂಗಿದ ಧ್ವನಿ ಕೇಳಿಬರಲು ಸಾವಿತ್ರಮ್ಮ ಒಳಗೆ ಹೋದರು. ವೆಂಕಟೇಶ ಹೊರಡುವ ಹೊತ್ತಿಗೆ ರಾಮುವಿನ

ಮೋಟಾರು ಧ್ವನಿ ಕೇಳಿಬಂತು. ಅವನೇ ಒಳಗೆ ಬಂದ. ವೆಂಕಟೇಶ ಅವನನ್ನು ನೋಡಿ

"ಹೈಕೋರ್ಟ್ ಅಡ್ವೋಕೇಟ್ ರಾಮಚಂದ್ರರಾಯರೇ, ತಮ್ಮ ಅಪ್ಪಣೆಯಂತೆ ಮನೆ ಬಿಟ್ಟು ಹೋಗುತ್ತಿದ್ದೇವೆ. ಇವತ್ತು ನೀವೇ ಗೆದ್ದಿರಿ, ಆದರೆ ಒಂದು ಮಾತು, ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡಿರಿ. ಇವತ್ತು ನಿಮ್ಮದು ಮೇಲುಗೈ. ನಿಮಗೆ ಈಗ ಶುಕ್ರದೆಶೆ ನಡೆಯುತ್ತಾ ಇದೆ. ಅದರ ಬಲದಲ್ಲಿ ಬೇಕಾದ್ದು ಮಾಡಬಹುದು ಅಂದುಕೊಂಡು ಮಾಡುತ್ತಾ ಇದ್ದೀರಿ—ಮಾಡಿ, ಪ್ರಪಂಚ ಚಿಕ್ಕದು. ಮತ್ತೆ ಯಾವಾಗಲಾದರೂ ನೀವೂ ನಾವೂ ಸಂಧಿಸಿಯೇ ಸಂಧಿಸುತ್ತೇವೆ. ನಿಮಗೆ ಹೇಗೆ ಈಗ ಶುಕ್ರದೆಸೆಯೋ ಆಗ ನನಗೆ ಶುಕ್ರದೆಶೆ ಆರಂಭವಾಗಿರತ್ತೆ. ನಿಮ್ಮ ಲೆಕ್ಕವನ್ನೆಲ್ಲಾ ಬಡ್ಡಿ, ಚಕ್ರಬಡ್ಡಿ ಸಹಿತ ತೀರಿಸುತ್ತೇನೆ—ಅದನ್ನು ಮರೆಯಬೇಡಿ"

ಎಂದು ಹೇಳಿ ಹೆಂಡತಿಯೊಡನೆ ಹೊರಟುಹೋದ. ತನಗಾದ ಅವಹೇಳನವನ್ನು ಲಕ್ಷ್ಮಣನೂ ನೋಡಿದನಲ್ಲಾ ಎಂದು ರಾಮಚಂದ್ರನಿಗೆ ಕೋಪ ಬಂತು.

"ಅವನು ಹುಚ್ಚುಹುಚ್ಚಾಗಿ ಮಾತನಾಡುತ್ತಾ ಇದ್ದರೆ ನಿಂತುಕೊಂಡು ನೋಡುತ್ತಾನೆ...."

"ನಾನೇನು ಮಾಡಬೇಕಾಗಿತ್ತು ?"

"ನನ್ನ ಪರ ನಾಲ್ಕು ಮಾತು ಆಡುವುದಕ್ಕೇನಾಗಿತ್ತು ?"

"ನಿನ್ನ ಪರ ಆಡುವುದಕ್ಕೇನೂ ಇರಲಿಲ್ಲ."

"ಅಣ್ಣ-ತಮ್ಮ ಅನ್ನೋ ಭಾವನೆ ಕೂಡ ಇಲ್ಲ."

"ಹೇಗೆ ಬರಬೇಕು ? ಅದೂ ನಿನಗೆ. ಒಂದು ಕಡೆ ದರ್ಪ, ಒಂದು ಕಡೆ ಹಣ—ಎರಡೂ ಇರುವಾಗ ನಿನಗೆ ಯಾರು ಏತಕ್ಕೆ ಬೇಕು ? ದರ್ಪ, ಹಣವೇ ನಿನ್ನ ಅಣ್ಣ-ತಮ್ಮ, ಎಲ್ಲಾನೂ."

"ನೀನು ಎಷ್ಟಾದರೂ ಅವರ ಕಡೆಯೇ ಅಲ್ಲವೇ ?"

"ನಾನು ಅವರ ಕಡೆ ನಿಜ, ನಿನ್ನ ಕಡೆ ಯಾರಿದ್ದಾರೆ, ತೋರಿಸು. ಮುಂದಕ್ಕೆ ಇದೇ ಕಟ್ಟಿಟ್ಟ ಬುತ್ತಿ."

"ಆಗಲಿ ಬಿಡಯ್ಯಾ. ಏನಾದರೂ ನಿನ್ನ ಸಹಾಯವೇನೂ ಕೇಳುವ ಹಾಗಿಲ್ಲ."

"ಬಹಳ ಸಂತೋಷಾಪ್ಪ"

ಎಂದು ಲಕ್ಷ್ಮಣ ಮಾತು ಮುಗಿಸಿದ. ವೆಂಕಟೇಶ, ಶಾಂತಾ ಹೊರಟು ಹೋದುದು ಲಕ್ಷ್ಮಣ ಜಯ ಇಬ್ಬರಿಗೂ ಏನೋ ಕಳೆದುಕೊಂಡಂತೆ ಆಗಿತ್ತು.

ವೆಂಕಟೇಶ, ಲಕ್ಷ್ಮಣರ ಮನಸ್ಸು ಬೆರೆತು ಹೇಗೆ ಒಂದಾಗಿತ್ತೋ ಜಯ, ಶಾಂತರ ಮನಸ್ಸೂ ಹಾಗೇ ಒಂದಾಗಿತ್ತು. 'ನಾವು ಗೆದ್ದ ಹಾಗಾಯಿತು. ಇನ್ನೆಲ್ಲಾ ನಿನ್ನ ಮೇಲೆ ಲಚ್ಚಣ್ಣನ ಮೇಲೆ ಆರಂಭವಾಗುತ್ತದಲ್ಲೇ, ಜಯಾ' ಎಂದು ಶಾಂತಾ ಹೇಳಿದ್ದುದು ಮತ್ತೆ ಮತ್ತೆ ಜಯನ ಜ್ಞಾಪಕಕ್ಕೆ ಬರುತ್ತಿತ್ತು. ತನ್ನ ಅಸಹಾಯಕತೆಯನ್ನು ನೆನೆದು ನಿಟ್ಟುಸಿರುಬಿಟ್ಟಳು.

೧೯

ಪದ್ಮ ಗಂಡು ಮಗುವನ್ನೇ ಹೆತ್ತಳು. ಸದ್ಯ ಮಗುವಿಗೆ ಯಾವ ಅಂಗವೂ ಹೀನವಾಗಿರಲಿಲ್ಲ. ಸಾವಿತ್ರಮ್ಮನಿಗೆ ಒಂದು ಕಡೆ ಹಿಡಿಸಲಾರದಷ್ಟು ಸಂತೋಷ, ಒಂದು ಕಡೆ ತಡೆಯಲಾರದಷ್ಟು ಸಂಕಟ.

"ಅಕ್ಕ ಬದುಕಿದ್ದರೆ ಎಷ್ಟು ಅಕರಾಸ್ತೆ ಪಡುತ್ತಿದ್ದರೋ. ಅವರನ್ನು ಉಳಿಸಿ ಕೊಳ್ಳುವ ಅದೃಷ್ಟ ನಮಗಿಲ್ಲ"

ಎಂದು ದುಃಖಪಟ್ಟಳು. ಮನೆಯಲ್ಲಿ ಸಂತೋಷದ ವಿಷಯವೇನೇ ಆದರೂ ಸಾವಿತ್ರಮ್ಮ ತಟ್ಟನೆ ಅಕ್ಕನನ್ನು ಜ್ಞಾಪಿಸಿಕೊಳ್ಳುತ್ತಿದ್ದಳು. ತಿಂಗಳಿಗೊಮ್ಮೆ ಯಾದರೂ ಅಕ್ಕನ ಹೆಸರು ಹೇಳಿ ನಾಲ್ಕು ಜನ ಮುತ್ತೈದೆಯರಿಗೆ ಹೂವಿಳ್ಯ ಕೊಟ್ಟ ಹೊರತೂ ಆಕೆಗೆ ಸಮಾಧಾನವಿಲ್ಲ. ರಾಮಚಂದ್ರ ಅದಕ್ಕೂ ಆಕ್ಷೇಪಣೆ ತೆಗೆದಿದ್ದ. ಸಾವಿತ್ರಮ್ಮ ಕೆಣಕಿದ ಸಿಂಹಿಣಿಯಂತಾಗಿಬಿಟ್ಟಳು!

"ಆ ಸುದ್ದಿ ನಿನಗೇಕೋ, ರಾಮು. ಅವರ ದೊಡ್ಡತನದಿಂದಲೇ ನಾನೂ ನೀನೂ ಇಲ್ಲಿರೋದು. ನಿನ್ನ ಪಾಡಿಗೆ ನೀನಿರು. ಈ ಮಾತೆಲ್ಲಾ ನಿನಗೇಕೆ?"

ಎಂದು ಥಳಿಸಿಬಿಟ್ಟಿದ್ದಳು. ದಿನಕ್ಕೊಮ್ಮೆ ಶಾಂತಾ ಬಂದು ತಂದೆಯನ್ನು ನೋಡಿಕೊಂಡು ಹೋಗುತ್ತಿದ್ದಳು. ರಾಮು ಮಗನ ನಾಮಕರಣಕ್ಕೆ ಅವಳಾಗಲಿ ವೆಂಕಟೇಶನಾಗಲಿ ಕಾಲಿಡಲಿಲ್ಲ. ರಾಮು ಖರ್ಚೇ ಮಿಕ್ಕಿತು ಎಂದುಕೊಂಡು ಎಲ್ಲವನ್ನೂ ಅಲ್ಪ ಖರ್ಚಿನಲ್ಲಿಯೇ ಮುಗಿಸಿಬಿಟ್ಟ.

ರಾಮುವಿಗೆ ನಿಜವಾಗಿಯೂ ಶುಕ್ರದೆಶೆಯೇ ಆರಂಭವಾಗಿತ್ತು. ಅವನು ಯಾವ ಕೇಸಿಗೆ ಕೈಹಾಕಿದರೂ ಅದರಲ್ಲಿ ಗೆದ್ದೇ ಬರುತ್ತಿದ್ದ. ಇದಕ್ಕೆ ಒಂದು ಕಾರಣವೂ ಇತ್ತು. ಹಿರಣ್ಯಪ್ಪನವರು ಬಂದಬಂದಾಗಲೆಲ್ಲಾ ಅಳಿಯನನ್ನು ಕರೆದುಕೊಂಡು ಹೋಗಿ ದೊಡ್ಡದೊಡ್ಡ ಅಧಿಕಾರಿಗಳಿಗೂ, ಮ್ಯಾಜಿಸ್ಟ್ರೇಟ್ ಮುನ್‌ಸೀಫರಿಗೂ ಪರಿಚಯ ಮಾಡಿಕೊಟ್ಟು ಬರುತ್ತಿದ್ದರು. ರಾಮು ಅವರ ಉಪಯೋಗವನ್ನು ಚೆನ್ನಾಗಿ ಮಾಡಿಕೊಂಡಿರುತ್ತಿದ್ದ. ಅವರ 'ಮರ್ಜಿ'ಯನ್ನನು ಸರಿಸುವ ವಿದ್ಯೆಯಲ್ಲಂತೂ ಪಾರಂಗತನಾಗಿದ್ದ. ಕೆಲವು ಕೋರ್ಟುಗಳಲ್ಲಂತೂ

ರಾಮಚಂದ್ರನೇ ಸರ್ ತೇಜ್ ಬಹದ್ದೂರ್ ಸಪ್ರೂ.

ವಕೀಲಿವೃತ್ತಿಯಲ್ಲಿ ಮುಂದುವರಿಯುವುದಕ್ಕೆ ಬರೀ ವಕೀಲನಾಗಿರುವುದಷ್ಟೇ ಸಾಲದೆಂದು ರಾಮು ಬೇಗನೆ ಅರಿತುಕೊಂಡ. ವರ್ಗವಾಗಿಹೋಗುವ ಮ್ಯಾಜಿಸ್ಟ್ರೇಟ್ ಮುನ್ಸೀಫರಿಗೆ ಔತಣಸಮಾರಂಭಗಳನ್ನೇರ್ಪಡಿಸುತ್ತಿದ್ದುದಲ್ಲದೆ ವರ್ಗವಾಗಿಹೋಗುವ ಇತರ ದೊಡ್ಡ ಅಧಿಕಾರಿಗಳಿಗೂ ಏರ್ಪಡಿಸುತ್ತಿದ್ದ. ಸರ್ಕಾರಿ ಅಧಿಕಾರಿಗಳು ಎಂದರೆ ರಾಮುವಿಗೆ ಸಾಕ್ಷಾತ್ ಹರಿಹರಸ್ವರೂಪರು. ಅವರು ತನ್ನನ್ನು ನೋಡಿ ನಕ್ಕರೆ ಸಾಕು, ಮಾತನಾಡಿಸಿದರೆ ಸಾಕು; ಟೀಗೆ ಪಕ್ಕದಲ್ಲಿ ಕೂಡಿಸಿಕೊಂಡರಂತೂ ಮುಗಿದೇ ಹೋಯಿತು. ರಾಮು ಅಷ್ಟನ್ನು ಸ್ವರ್ಗದಲ್ಲಿರುವೆನೆಂದೇ ಭಾವಿಸುತ್ತಿದ್ದ. ಸರ್ಕಾರಿ ಅಧಿಕಾರಿಗಳು ಎಷ್ಟು ಮೇಲೆಂದು ಭಾವಿಸುತ್ತಿದ್ದನೋ ಇತರರು ಅಷ್ಟೂ ಕೀಳೆಂದು ಭಾವಿಸುತ್ತಿದ್ದ. ಸರ್ಕಾರಕ್ಕೆ ವಿರೋಧವಿಲ್ಲದ ಸಾರ್ವಜನಿಕ ಕೆಲಸದಲ್ಲಿ ಕೈಯಾಡಿ ನಾಲ್ಕು ಕಡೆ ತನ್ನ ಹೆಸರು ಗುಡುಗಾಡುವಂತೆ ಮಾಡಬೇಕೆಂದು ರಾಮು ಬಯಸಿದ.

ರಾಮುವಿನ ಕಕ್ಷಿಗಾರರು ಕೆಲವರು ಸಹಕಾರ ಸಂಘಗಳ ಸೂತ್ರಚಾಲಕರಾಗಿದ್ದರು. ಸಹಕಾರ ಸಂಘ, ಸಹಕಾರ ಬ್ಯಾಂಕುಗಳನ್ನು ಏಣಿಯನ್ನಾಗಿ ಉಪಯೋಗಿಸಿಕೊಳ್ಳುವುದೇ ಲೇಸೆಂದು ಅವರು ಸಲಹೆಯಿತ್ತರು. ರಾಮುವಿಗೂ ಅದು ಸೂಕ್ತವಾಗಿ ಕಂಡುಬಂತು.

ರಾಮು ಎಲ್‌ಎಲ್.ಬಿ., ಮುಗಿಸಿಕೊಂಡು ಬರುವಾಗಲೇ ಕೈಯಲ್ಲಿ ಒಂದು ಸಾವಿರ ರೂಪಾಯಿನಷ್ಟು ಗಂಟು ಮಾಡಿಕೊಂಡು ಬಂದಿದ್ದ. ತಿಂಗಳಿಗೆ ತನಗೆ ಬೇಕಾಗುವುದಕ್ಕಿಂತಲೂ ಹೆಚ್ಚಾಗಿ ಹಣ ತರಿಸಿಕೊಂಡು ಮೂಲಧನ ಮಾಡಿಕೊಂಡಿದ್ದ. 'ಕೃಷ್ಣಜನ್ಮಾಷ್ಟಮಿ ಸಹಕಾರ ಸಂಘ'ದ ಕೆಲವು ಷೇರುಗಳನ್ನು ಕೊಂಡಿದ್ದ. ಉಳಿದ ಹಣವನ್ನು 'ಕರ್ಣಾಟಕ ಬ್ಯಾಂಕ್'ನ ಷೇರುಗಳಿಗೆ ವಿನಿಯೋಗಿಸಿದ್ದ.

ಕರ್ಣಾಟಕ ಬ್ಯಾಂಕ್ ಸಂಸ್ಥಾನದಲ್ಲೆಲ್ಲಾ ಹೆಸರಾದ ದೊಡ್ಡ ಸಹಕಾರ ಬ್ಯಾಂಕ್. ಸುಮಾರು ೨,೩೦೦ ಜನದಷ್ಟು ಷೇರುದಾರರಿದ್ದರು. ಆ ಬ್ಯಾಂಕಿನ ಷೇರುಗಳಿಗೆ ಜನ ಹಾತೊರೆಯುತ್ತಿದ್ದರು. ಕರ್ಣಾಟಕ ಬ್ಯಾಂಕಿನ ಡೈರೆಕ್ಟರ್ ಪದವಿಗಂತೂ ವಿಶೇಷ ಸ್ಪರ್ಧೆಯಿರುತ್ತಿದ್ದಿತು. ಒಮ್ಮೆಲೇ ಪ್ರಯತ್ನಪಟ್ಟವರು ಯಾರೂ ಜಯಶೀಲರಾಗುತ್ತಿರಲಿಲ್ಲ. ಆದಕ್ಕೆ ಮೊದಲು 'ಕೃಷ್ಣಜನ್ಮಾಷ್ಟಮಿ' ಮೊದಲಾದ ಸಣ್ಣಪುಟ್ಟ ಸಂಘ, ಬ್ಯಾಂಕುಗಳ ಡೈರೆಕ್ಟರ್ ಪದವಿಯನ್ನು ದೊರಕಿಸಿಕೊಂಡು ಅನಂತರ ಕರ್ಣಾಟಕ ಬ್ಯಾಂಕಿಗೆ ಮುತ್ತಿಗೆ

ಹಾಕುತ್ತಿದ್ದರು. ಕರ್ಣಾಟಕ ಬ್ಯಾಂಕಿನ ಡೈರೆಕ್ಟರ್ ಪದವಿ ಸಿಕ್ಕಿಬಿಟ್ಟರೆ ಮಿಕ್ಕ ಡೈರೆಕ್ಟರ ಪದವಿಗಳನ್ನು ಕಸದ ಕೂಪಕ್ಕೆ ತಳ್ಳಿಬಿಡುತ್ತಿದ್ದರು.

'ಕೃಷ್ಣಜನ್ಮಾಷ್ಟಮಿ' ದಿವಸ ಸ್ಥಾಪಿತವಾದುದರಿಂದ ಆ ಸಹಕಾರ ಸಂಘ 'ಕೃಷ್ಣಜನ್ಮಾಷ್ಟಮಿ ಕೋ-ಆಪರೇಟಿವ್ ಸೊಸೈಟಿ'ಯಾಯಿತು. ಅದರ ಡೈರೆಕ್ಟರ್ ಪದವಿಯಂತೂ ರಾಮುವಿಗೆ ಸುಲಭವಾಗಿ ಸಿಕ್ಕಿತು. ಅದೇ ವರ್ಷವೇ ಕರ್ಣಾಟಕ ಬ್ಯಾಂಕಿನ ಡೈರೆಕ್ಟರ ಪದವಿಯನ್ನೂ ಹೊಡೆಯ ಬೇಕೆಂದು ರಾಮು ವಿಶ್ವಸಾಹಸ ಮಾಡಲಾರಂಭಿಸಿದ.

ಜನಾಬ್ ಷರೀಫ್ ಖಾನರು ಕಬ್ಬಿಣದ ಸಾಮಾನಿನ ಅಂಗಡಿಯ ಮಾಲೀಕರು. ವ್ಯವಹಾರಕ್ಕೆ ಬೇಕಾಗುವಷ್ಟು ಇಂಗ್ಲೀಷಿನ ಜ್ಞಾನವೂ ಇತ್ತು. ಲೋಕವನ್ನು ಚೆನ್ನಾಗಿ ಬಲ್ಲವರಾದುದರಿಂದ ಯಾರನ್ನು ಹೇಗೆ ಹೇಗೆ ಆಡಿಸ ಬೇಕೆಂಬ ತಿಳಿವಳಿಕೆ ಇತ್ತು. ಕರ್ಣಾಟಕ ಬ್ಯಾಂಕಿನ ಡೈರೆಕ್ಟರ್ ಪದವಿಯನ್ನು ಬಯಸುತ್ತಿದ್ದವರಲ್ಲಿ ಅವರೂ ಒಬ್ಬರಾಗಿದ್ದರು.

ಚಿಂತಾಮಣಿ ಲಕ್ಷ್ಮಣಶೆಟ್ಟರು ದೊಡ್ಡ ಜವಳಿ ವ್ಯಾಪಾರಿಗಳು—ಅವರು ಹಿಂದೆ ಒಂದೆರಡು ಸಲ ಬ್ಯಾಂಕಿನ ಡೈರೆಕ್ಟರಾಗಿದ್ದವರು. ಅವರಿಗೂ ಷರೀಫ್ ಖಾನರಿಗೂ ತುಂಬ ಸ್ನೇಹವಿತ್ತು. ಷರೀಫ್‌ಖಾನರೇ ಶೆಟ್ಟರ ಪರಿಚಯವನ್ನು ಲಾಯರಿಗೆ ಮಾಡಿಕೊಟ್ಟರು

ರಾಮಚಂದ್ರ, ಷರೀಫ್‌ಖಾನರು, ಲಕ್ಷ್ಮಣಶೆಟ್ಟರು ಮೂರು ಜನವೂ ಬ್ಯಾಂಕಿನ ಡೈರೆಕ್ಟರ ಪದವಿಗೆ ಉಮೇದುವಾರರಾಗುವುದೆಂದೂ, ಕೂಡಿ ಕೆಲಸ ಮಾಡುವುದೆಂದೂ ಗೊತ್ತಾಯಿತು. ರಾಮಚಂದ್ರನಿಗೆ ಲಾಯರುಗಳು, ಸರ್ಕಾರಿ ನೌಕರರ ಬೆಂಬಲ; ಷರೀಫ್‌ಖಾನರಿಗೆ ಮುಸಲ್ಮಾನ ಮತದಾರರ ಬೆಂಬಲ; ಶೆಟ್ಟರಿಗೆ ವ್ಯಾಪಾರಸ್ಥರ ಬೆಂಬಲ. ಮೂವರೂ ಕೂಡಿ ಕೆಲಸ ಮಾಡಲಾರಂಭಿಸಿದರು. ಸಂಜೆಯಾಗುತ್ತಲೂ ರಾಮಚಂದ್ರನ ಕಛೇರಿಯಲ್ಲಿ ಕೂಡಿ ತಮ್ಮ ಅಂದಿನ ಕೆಲಸಕಾರ್ಯಗಳನ್ನು ಚರ್ಚಿಸುತ್ತಿದ್ದರು.

ಚುನಾವಣೆಯೂ ಮುಗಿಯಿತು. ಫಲಿತಾಂಶ ಹೊರಬಿತ್ತು. ಹತ್ತು ಜನ ಡೈರೆಕ್ಟರುಗಳಲ್ಲಿ ರಾಮುವಿಗೆ ೬ನೆಯ ರ‍್ಯಾಂಕು, ಶೆಟ್ಟರಿಗೆ ೯ನೆಯ ರ‍್ಯಾಂಕು, ಖಾನರಿಗೆ ೧೦ನೆಯ ರ‍್ಯಾಂಕು ದೊರೆತಿತ್ತು. ಎಲ್ಲರೂ ತಮ್ಮ ಮತದಾರರ ಕೈಯಲ್ಲಿ 'ಪೂರ್ಣಮತ'(Single Vote)ವನ್ನು ದೊರಕಿಸಿಕೊಂಡಿದ್ದರು. ಒಬ್ಬರನ್ನೊಬ್ಬರು ಕತ್ತರಿಸುವುದಕ್ಕೆ ತೊಡಗಿದ್ದುದರಿಂದ ಯಾರೂ ಆಕ್ಷೇಪಣೆ ಯನ್ನೆತ್ತುವ ಹಾಗಿರಲಿಲ್ಲ. ಮುಂದೆಯೂ ಮೂರು ಜನವೂ ಕೂಡಿ ಕೆಲಸ ಮಾಡತಕ್ಕದ್ದೆಂದು ನಿರ್ಣಯಿಸಿಕೊಂಡರು. ಶೆಟ್ಟರು ಬ್ಯಾಂಕಿನ ಕಾರ್ಯದರ್ಶಿ

ಗಳಾದರು, ಸಾಹೇಬರು ಖಜಾಂಚಿಗಳಾದರು, ರಾಮು ಅದರ ವಕೀಲ (Legal Adviser)ನಾದ.

ರಾಮುವಿನ ಮತ್ತು ಅವನ ಇಬ್ಬರು ಸ್ನೇಹಿತರ ಕೈಗೆ ಇಡೀ ಬ್ಯಾಂಕೇ ಸಿಕ್ಕಿದಂತಾಯಿತು. ಮುಂದಿನ ಚುನಾವಣೆಗಳಲ್ಲಿ ತಮ್ಮ ಬುಡ ಭದ್ರವಾಗುವಂತೆ ಮೂವರೂ ತಮ್ಮ ಕಡೆಯ ಜನಕ್ಕೆ ಷೇರುಗಳನ್ನೂ ಸಾಲಗಳನ್ನೂ ಕೊಡಿಸುತ್ತಿದ್ದರು. ಇತರರಿಗೆ 'ಷೇರುಗಳಿಲ್ಲ, ಎಲ್ಲಾ ತುಂಬಿ ಹೋಗಿವೆ' ಎಂದು ಹೇಳುತ್ತಲೇ ಡೈರೆಕ್ಟರುಗಳು ತಮ್ಮ ಷೇರಿನ ಲೆಕ್ಕವನ್ನು ಶಿಖರಕ್ಕೆ ಏರಿಸಿದರು.

ಕರ್ಣಾಟಕ ಬ್ಯಾಂಕಿನ ಡೈರೆಕ್ಟರ್ ಪದವಿ ನಾನಾ ವಿಧದಲ್ಲಿ ರಾಮುವಿಗೆ ಅನುಕೂಲ ಮಾಡಿತು. ಡೈರೆಕ್ಟರುಗಳಿಗೆ ಬರುವ ಆದಾಯವಲ್ಲದೆ, ಬ್ಯಾಂಕಿನ ವಕೀಲನೆಂದೂ ಆದಾಯ ಬರುತ್ತಿತ್ತು. ಈ ಅಲ್ಪಾದಾಯವನ್ನು ರಾಮು ಲೆಕ್ಕಕ್ಕೆ ಇಟ್ಟಿರಲಿಲ್ಲ. ಸಾಲ ಕೊಡಿಸಬೇಕಾದರೆ, ಸ್ವತ್ತುಗಳ ಮೇಲೆ ತನ್ನ ಅಭಿಪ್ರಾಯವನ್ನು ಸೂಚಿಸಬೇಕಾದರೆ ಸರಿಯಾದ ಶುಲ್ಕವನ್ನು ವಸೂಲು ಮಾಡುತ್ತಿದ್ದ. ಸಾಲ ಕೇಳಲು ಬರುತ್ತಿದ್ದವರ ಮೇಲೆ ಬೇಕಾದಷ್ಟು ಅಧಿಕಾರ ಮಾಡಬಹುದಾಗಿತ್ತು. ಅವರನ್ನು ಮನಸ್ಸಿಗೆ ತೋರಿದಂತೆ ಬಯ್ಯಬಹುದಾಗಿತ್ತು. ಮನೆಯ ಹತ್ತಿರ ಬಂದರೆ ಆಫೀಸಿನ ಹತ್ತಿರ ಬಾ, ಆಫೀಸಿನ ಹತ್ತಿರ ಬಂದರೆ ಬ್ಯಾಂಕಿನ ಹತ್ತಿರ ಬಾ ಎಂದು ಅಂಡಲೆಸಬಹುದಾಗಿತ್ತು. ರಾಮುವನ್ನೂ ಅವನ ಕುರುಕುಲವನ್ನೂ ವಿರೋಧಿಸಿ ಯಾರೂ ಬದುಕುವ ಹಾಗೇ ಇರಲಿಲ್ಲ. ಅಂತಹವರು ತಮ್ಮ ಷೇರುಗಳನ್ನು ನೀಗಿಕೊಂಡು ಬ್ಯಾಂಕಿಗೆ ನಮಸ್ಕಾರ ಹೊಡೆದುಬಿಡಬೇಕಾಗುತ್ತಿತ್ತು.

ಈ ಸಂಬಂಧಗಳಿಂದ ರಾಮು ಊರಿನಲ್ಲಿ ಒಬ್ಬ ಗಣ್ಯಪುರುಷನಾಗಿಬಿಟ್ಟ. ಅವನನ್ನು ಕೇಳದೇ, ಅವನನ್ನು ಸಮಿತಿಗೆ ಸೇರಿಸಿಕೊಳ್ಳದೇ ಯಾರೂ ಸಾರ್ವಜನಿಕ ಕೆಲಸಗಳಿಗೆ ಕೈಹಾಕುವ ಹಾಗೇ ಇರಲಿಲ್ಲ. ಹಾಗೆ ಯಾರಾದರೂ ಉಪೇಕ್ಷೆಮಾಡಿದರೆ ಸಮಿತಿ ಹುಟ್ಟಿದಲ್ಲಿಯೇ ಸಾಯುತ್ತಿತ್ತು. ಸಮಿತಿಯ ಸದಸ್ಯರು ಪರಸ್ಪರ ಜಗಳವಾಡಿ ಮುಗಿಸುತ್ತಿದ್ದರು. ರಾಮು ಮೀಸೆ ಹುರಿ ಮಾಡುತ್ತ

"ನಾನು ಹೇಳಲಿಲ್ಲವೇ. ನನ್ನನ್ನು ಬಿಟ್ಟು ಕಮಿಟಿ ಮಾಡುತ್ತೇವೆಂದರೆ...."

ಎಂದು ಅರ್ಥಗರ್ಭಿತವಾದ ನಗುವೊಂದನ್ನು ತೇಲಿಸುತ್ತಿದ್ದ.

ರಾಮುವಿನ ಮಿತ್ರರಿಬ್ಬರೂ ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿದ್ದರು. ಸಾಹೇಬರು ಮುಸಲ್ಮಾನರ ಸಂಘದ ಪರವಾಗಿಯೂ ಶೆಟ್ಟರು ವೈಶ್ಯ ಸಂಘದ

ಪರವಾಗಿಯೂ ಬರುತ್ತಿದ್ದರು. ರಾಮುವೂ ಸದಸ್ಯನಾಗಿಬಿಟ್ಟರೆ ಮೂರು ಜನವೂ ಒಟ್ಟಿಗೆ ಹೋಗುವುದಕ್ಕೆ ಬರುವುದಕ್ಕೆ ಚೆನ್ನಾಗುತ್ತದೆಂದು ಯೋಚಿಸಿದರು. ಬ್ಯಾಂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಒಬ್ಬ ಸದಸ್ಯನನ್ನು ಕಳುಹಿಸಬಹುದಾಗಿತ್ತು. ಬ್ಯಾಂಕಿನ ಡೈರೆಕ್ಟರುಗಳಲ್ಲಿ ಒಬ್ಬರಾದ ಮಳೂರು ಕೃಷ್ಣ ಅಯ್ಯಂಗಾರ್ಯರು ಕೆಲವು ವರ್ಷಗಳಿಂದ ಸಭೆಗೆ ಹೋಗುತ್ತಿದ್ದರು. ಮೂರು ಜನವೂ ಅಯ್ಯಂಗಾರ್ಯರಲ್ಲಿಗೆ ಹೋಗಿ ಒಂದು ಆಲೋಚನೆಯನ್ನು ಅವರ ಮುಂದಿಟ್ಟರು.

"ನೋಡಿ ಅಯ್ಯಂಗಾರ್ಯರೇ, ನೀವು ಅಸೆಂಬ್ಲಿ ಸ್ಥಾನ ಬಿಟ್ಟುಕೊಟ್ಟರೆ ಶೆಟ್ಟರು ಕಾರ್ಯದರ್ಶಿ ಸ್ಥಾನವನ್ನು ನಿಮಗೆ ಬಿಟ್ಟುಕೊಡುತ್ತಾರೆ. ಬೇಕಾದರೆ ನಾನೇ ಬಿಟ್ಟುಕೊಡುತ್ತೇನೆ. ನೀವು ಖಜಾಂಚಿಗಳಾಗಬಹುದು."

ಅಯ್ಯಂಗಾರ್ಯರಿಗೆ ವಯಸ್ಸಾಗಿತ್ತು. ಬ್ಯಾಂಕಿನ ಕಾರ್ಯದರ್ಶಿಯಾಗಿ ಸ್ವಲ್ಪ ಸಾಲ ತೀರಿಸಿಕೊಳ್ಳಬೇಕೆಂದು ಅವರ ಬಹಳ ದಿವಸಗಳ ಅಭಿಲಾಷೆಯಾಗಿತ್ತು. ಷರೀಫ್ ಖಾನರು ಈ ಆಲೋಚನೆಯನ್ನು ತಮ್ಮ ಮುಂದಿಟ್ಟ ತಕ್ಷಣವೇ ಅಯ್ಯಂಗಾರ್ಯರು ಸಂತೋಷದಿಂದ ಒಪ್ಪಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಮುಂದಿನ ಡೈರೆಕ್ಟರುಗಳ ಸಭೆಯಲ್ಲಿ ರಾಮಚಂದ್ರನನ್ನು ಅಸೆಂಬ್ಲಿಗೆ ಕಳುಹಿಸುವುದೆಂದು ನಿರ್ಣಯವಾಗಿಬಿಟ್ಟಿತು. ಅಯ್ಯಂಗಾರ್ಯರು ಶೆಟ್ಟರಿಗೆ ಗಂಟುಬಿದ್ದರು.

"ಯಾವಾಗ ರಾಜೀನಾಮೆ ಕಳುಹಿಸುತ್ತೀರಪ್ಪಾ?"

"ಕಳುಹಿಸೋಣ, ಏನು ಅವಸರ!"

ಎಂದು ಶೆಟ್ಟರು ತಳ್ಳಿಕೊಂಡೇ ಬಂದರು. ಒಂದು ದಿವಸ ಅಯ್ಯಂಗಾರ್ಯರು ರೇಗಿ ಗಲಭೆ ಮಾಡಿದಾಗ

"ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿದೆನೇ?"

ಎಂದು ಶೆಟ್ಟರು ಬಾಯಿಬಡಿದುಬಿಟ್ಟರು. ರಾಜೀನಾಮೆ ಕೊಡುತ್ತೇನೆಂದು ಶೆಟ್ಟರು ಹೇಳಿರಲಿಲ್ಲ. ಅವರ ಪರವಾಗಿ ಖಾನರು ಹೇಳಿದ್ದರು. ಖಾನರನ್ನು ಕೇಳಿದಾಗ

"ರಾಜೀನಾಮೆ ಕೊಡಬೇಕಾದವರು ಅವರು. ಅವರನ್ನು ನೀವು ಕೇಳದೇ ನನ್ನನ್ನು ಕೇಳಿದರೆ ಏನು ಪ್ರಯೋಜನ?"

ಎಂದುಬಿಟ್ಟರು. ಅಯ್ಯಂಗಾರ್ಯರು ಸಪ್ಪೆಮುಖ ಹಾಕಿಕೊಂಡು ಸುಮ್ಮನಾದರು. ಇನ್ನು ಹೆಚ್ಚು ಗಲಭೆ ಎಬ್ಬಿಸಿದರೆ ಮುಂದಿನ ಡೈರೆಕ್ಟರ್ ಎಲೆಕ್ಷನ್ನಿನಲ್ಲಿ ಎಲ್ಲಿ ಸೊನ್ನೆಬೀಳುವುದೋ ಎಂಬ ಭಯವೂ ಕಾರಣವಾಯಿತು.

ಅಸೆಂಬ್ಲಿಗೆ ಈ ಮೂವರಿಂದ ಯಾವ ಪ್ರಯೋಜನವಾಗದಿದ್ದರೂ ಇವರಿಗೆ ಅಸೆಂಬ್ಲಿಯಿಂದ ಬಹಳ ಪ್ರಯೋಜನವಾಗುತ್ತಿತ್ತು. ವರ್ಷಕ್ಕೆ ಎರಡು ಸಲ ಕೈಯಿಂದ ನೂರು ಕಾಸು ಖರ್ಚಾಗದಂತೆ ಮೈಸೂರಿಗೆ ಪ್ರವಾಸಗಳಾಗುತ್ತಿದ್ದವು. ಬಿಟ್ಟೀ ಊಟ, ತಿಂಡಿ, ದಿನಭತ್ಯ. ಎಷ್ಟೋ ದಿವಸಗಳು ಅಸೆಂಬ್ಲಿಗೆ ಹೋಗದೆಯೇ ಕನ್ನಂಬಾಡಿ, ಪಟ್ಟಣ, ನಂಜನಗೂಡು ಸುತ್ತಾಡಿಕೊಂಡಿದ್ದು ಕೊನೆಯ ದಿವಸ ಅಸೆಂಬ್ಲಿಯ ಗುಮಾಸ್ತರನ್ನು ಆಶ್ರಯಿಸಿ ಹಾಜರಿ ಹಾಕಿಸಿಕೊಂಡು ಎಲ್ಲಾ ದಿವಸಗಳಿಗೂ ಭತ್ಯಹಣವನ್ನು ವಸೂಲ್ಮಾಡಿಕೊಳ್ಳುತ್ತಿದ್ದರು.

ಸರ್ಕಾರದ ವಿರೋಧವಾಗಿ ಯಾರು ಮಾತನಾಡಿದರೂ ಅವರನ್ನು ಪ್ರತಿಭಟಿಸುವುದು ತನ್ನ ಕರ್ತವ್ಯವೆಂದು ರಾಮಚಂದ್ರ ತಿಳಿದುಕೊಂಡಿದ್ದ. ಅಸೆಂಬ್ಲಿಯ ಸದಸ್ಯರಲ್ಲಿ ಯಾರಾದರೂ

"ಕಂದಾಯದ ಹೊರೆ ತಾಳಲಾರೆವು, ಸ್ವಾಮಿ. ಮಳೆಬೆಳೆಯಲ್ಲಾ ಹೋಗಿಬಿಟ್ಟಿತು. ಹಳ್ಳಿಯ ಜನ ತಿನ್ನುವುದಕ್ಕಿಲ್ಲದೆ ಕಂಗಾಲಾದರು"

ಎಂದು ಬೊಬ್ಬೆಹಾಕಿದರೆ, ರಾಮಚಂದ್ರ

"ಇಷ್ಟು ಸ್ವಲ್ಪ ಕಂದಾಯ ಹಾಕಿ ನಮಗೆ ಇಷ್ಟೊಂದು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವ ಘನಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ನಮ್ಮಲ್ಲಿಯೇ ಕಂದಾಯ ಹೆಚ್ಚು ಎನ್ನುವ ಇವರು ಇಂಗ್ಲೆಂಡ್ ಅಮೇರಿಕಾ ದೇಶಗಳನ್ನು ಪರಿಶೀಲಿಸಬೇಕು"

ಎಂದು ಮಾರುತ್ತರ ಕೊಡುತ್ತಿದ್ದ. ಮತ್ತೊಬ್ಬ ಸದಸ್ಯ

"ಸರ್ಕಾರದ ಅಧಿಕಾರಿಗಳ ಸಂಬಳ ತಗ್ಗಿಸಬೇಕು. ಅವರಿಗೆ ಸಂಬಳ ಹೆಚ್ಚಿದಷ್ಟು ದರ್ಪ, ದುರಭ್ಯಾಸ ಹೆಚ್ಚುತ್ತವೆ. ಗ್ರಾಮಾಂತರಗಳಲ್ಲಿ ಅವರ ಹಾವಳಿಯಂತೂ ಸಹಿಸಲಸಾಧ್ಯವಾಗಿದೆ"

ಎಂದರೆ, ರಾಮಚಂದ್ರ

"ನಮ್ಮ ಅಧಿಕಾರಿಗಳ ದಕ್ಷತೆಗೆ, ಅವರ ಯೋಗ್ಯತೆಗೆ ಈಗ ಕೊಡುತ್ತಿರುವ ಸಂಬಳ ಬಹಳ ಕಡಿಮೆ. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಕೊಡುತ್ತಿರುವಷ್ಟನ್ನು ಕೂಡ ಕೊಡದಿರುವುದು ಶೋಚನೀಯ. ಅಧಿಕಾರಿಗಳ ಸಂಬಳದ ವಿರೋಧವಾಗಿ ಮಾತನಾಡುವವರಿಗೆ ಜವಾಬ್ದಾರಿಯಿಲ್ಲ. ಜವಾಬ್ದಾರಿ ಸ್ಥಾನಗಳ ಕಷ್ಟಸುಖಗಳು ಗೊತ್ತಿಲ್ಲ"

ಎಂದು ಆರ್ಭಟಿಸಿ ಅಧಿಕಾರಿವರ್ಗದ ಚಿರಕೃತಜ್ಞತೆಗೆ ಪಾತ್ರನಾಗುತ್ತಿದ್ದ. ಸರ್ಕಾರದ ಕೃಪೆಗೆ ಪಾತ್ರವಾಗಿದ್ದ ಪತ್ರಿಕೆಗಳು ರಾಮಚಂದ್ರನ ಭಾಷಣ

ವನ್ನು ದಪ್ಪಕ್ಷರಗಳಲ್ಲಿ ಮುದ್ರಿಸಿ ಅವನ 'ದೇಶಾಭಿಮಾನ'ವನ್ನು ಮನದಣಿಯು ಕೊಂಡಾಡುತ್ತಿದ್ದವು.

ಸರ್ಕಾರದವರು ರಾಮುವಿನ ನಿಷ್ಠತೆಯನ್ನು ಗಮನಿಸದಿರಲಿಲ್ಲ. ತಮ್ಮ ಪಕ್ಷವನ್ನು ಇಷ್ಟು ಅಭಿಮಾನದಿಂದ ಪ್ರತಿಪಾದಿಸುವ ರಾಮಚಂದ್ರನನ್ನು ಸಮಯಾನುಕೂಲವೊದಗಿದಾಗ ಗೌರವಿಸಬೇಕೆಂದು ಸರ್ಕಾರದವರೂ ನಿಶ್ಚಯಿಸಿಕೊಂಡಿದ್ದರು.

೨೦

ಗೋಪಾಲನಿಗೆ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿತ್ತು. ಅವನು ಮುಂದೆ ಮೈಸೂರಿಗೆ ಹೋಗಿ ಕಾಲೇಜು ಸೇರಬೇಕಾಗಿತ್ತು. ರಾಮಚಂದ್ರ ಉದಾರಮನಸ್ಸಿನಿಂದ 'ಅಪ್ಲಿಕೇಷನ್ ಹಾಕಿರು. ಸೀಟು ಎಲ್ಲಾದರೂ ತಪ್ಪಿಹೋದೀತು' ಎಂದು ಹೇಳಿದ್ದ.

ರಾಯರ ಸ್ಥಿತಿ ತೀರಾ ಕೆಡುತ್ತ ಬಂತು. ಜನಗಳ ನೆನಪೇ ಮರೆತು ಹೋಯಿತು. ಭೀಮರಾಯರೂ ಸುಂದರರಾಯರೂ ಅವರ ಹಾಸಿಗೆ ಬಿಟ್ಟು ಕದಲುತ್ತಿರಲಿಲ್ಲ. ಶಾಮಣ್ಣನವರು ತಪ್ಪದೆ ದಿನಕ್ಕೆ ಒಂದು ಗಂಟೆ ಕಾಲ ರಾಯರ ಮುಂದೆ ಭಾರತಶ್ರವಣ ಮಾಡುತ್ತಿದ್ದರು. ಶಾಮಣ್ಣನವರ ಭಾರತವನ್ನೋ ಲಕ್ಷ್ಮಣನ ಹಾಡಿಕೆಯನ್ನೋ ಕೇಳುವಾಗ ರಾಯರ ಮುಖ ಶಾಂತವಾಗಿರುತ್ತಿತ್ತು. ಮಿಕ್ಕ ವೇಳೆಗಳಲ್ಲಿ ಸುಕ್ಕುಗೊಂಡು ತೀವ್ರವಾದ ವೇದನೆಯನ್ನು ಸೂಚಿಸುತ್ತಿತ್ತು. ಕೊರಗಿ ಕೊರಗಿ ಸಾವಿತ್ರಮ್ಮನಂತೂ ಹಂಚೀಕಡ್ಡಿಯಂತೆ ಆಗಿಬಿಟ್ಟಿದ್ದಳು. ರಾಯರಿಗೆ ಮಾತು ನಿಂತು ಎಷ್ಟೋ ದಿವಸವಾಗಿ ಬಿಟ್ಟಿತ್ತು. ಕಣ್ಣಿನಿಂದಲೇ ಮಲಗಿದೆಡೆಯಿಂದ ತಮ್ಮ ಇಂಗಿತವನ್ನು ಸೂಚಿಸುತ್ತಿದ್ದರು. ಶಾಮಣ್ಣನವರೂ ದಿನವೂ ದೇವರ ಪೂಜೆಮಾಡಿ ತೀರ್ಥೋದಕ ಒಂದು ಚಮಚದಷ್ಟು ರಾಯರಿಗೆ ಕುಡಿಸುತ್ತಿದ್ದರು.

ಕೊನೆಕೊನೆಗೆ ರಾಯರು ಏನೂ ತೆಗೆದುಕೊಳ್ಳಲಾಗುತ್ತಿರಲಿಲ್ಲ. ಒಂದು ತೊಟ್ಟು ಹಾಲು ಕುಡಿಸಿದರೆ ಅದು ಕೂಡಲೇ ವಾಂತಿಯಾಗಿಬಿಡುತ್ತಿತ್ತು. ರಾಯರ ಮಕ್ಕಳನ್ನು ಕರೆದು ಸುಂದರರಾಯರು

"ಇನ್ನೇನೂ ಆಸೆಯಿಲ್ಲಪ್ಪಾ. ಗಂಟೆಗಳೋ ದಿವಸಗಳೋ...."

"ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ?"

ಎಂದು ಲಕ್ಷ್ಮಣ ಕೇಳಿದ. ತಂದೆಯನ್ನು ಉಳಿಸಿಕೊಳ್ಳುವುದಕ್ಕೆ ಏನು ಬೇಕಾದರೂ ಮಾಡಲು ಸಿದ್ಧನಾಗಿದ್ದ.

"ವೈದ್ಯರು ಡಾಕ್ಟರುಗಳ ಕೈಯಲ್ಲಿ ಏನಾದರೂ ಆಗಬಹುದಾಗಿತ್ತು. ರಾಯರಿಗೇ ಉಳಿಯುವುದು ಬೇಕಿಲ್ಲ. ಇನ್ನು ಯಾರು ಏನು ಮಾಡುವುದ ಕ್ಕಾಗುತ್ತದೆ ?" ಎಂದು ಸುಂದರರಾಯರು ಕೇಳಿದರು.

ಒಂದು ಸಂಜೆ ಶಾಮಣ್ಣನವರು ಭಾರತವನ್ನು ಸಣ್ಣ ದನಿಯಲ್ಲಿ ಓದು ತ್ತಿದ್ದರು. ರಾಯರು ಆಯಾಸದಿಂದ ಕಣ್ಣು ಮುಚ್ಚಿ ತೆಗೆದು ಮಾಡುತ್ತಿದ್ದರು.

"ನಿಲ್ಲಿಸಲೇ ?"

ಎಂದು ಶಾಮಣ್ಣನವರು ಕೇಳಿದರು. ರಾಯರು 'ಬೇಡ'ವೆಂದು ಸೂಚಿಸಿ ದರು. ಅಕ್ಷಯಪಾತ್ರೆಯ ಭಾಗವನ್ನು ಓದುತ್ತಿದ್ದರು. ದ್ರೌಪದಿ ಶ್ರೀಕೃಷ್ಣ ನನ್ನು ಪ್ರಾರ್ಥಿಸುವ ವಿಭಾಗ. ಶಾಮಣ್ಣನವರು ಮಾಯಾಮಾಳವಗೌಳ ದಿಂದ ಪೂರ್ವಿಕಲ್ಯಾಣಿಗೆ ಜಾರಿದ್ದರು. ರಾಯರಿಗೆ ನಿದ್ರೆ ಹತ್ತಿತು. ಶಾಮಣ್ಣ ನವರು ಭಾರತ ವಾಚನವನ್ನು ನಿಲ್ಲಿಸಿ ಮೆಲ್ಲನೆ ತಂಬೂರಿಯನ್ನು ಕೆಳಗಿಟ್ಟು ರಾಯರಿಗೆ ಹೊದಿಸಿ ಹೊರಕ್ಕೆ ಬಂದರು.

ಅರ್ಧಗಂಟೆ ಕಳೆಯಿತು. ಔಷಧದ ಸರದಿ ಬಂತು. ಸಾವಿತ್ರಮ್ಮ ಔಷಧಿ ಯನ್ನು ಕೈಯಲ್ಲಿ ಹಿಡಿದು ಮೆಲ್ಲನೆ ರಾಯರ ಹೊದಿಕೆಯನ್ನು ತೆಗೆದಳು. ನಿದ್ರೆ ಶಾಂತವಾದ, ಗಾಢವಾದ ನಿದ್ರೆ. ಅವಳ ಎದೆ ಝುಗ್ಗೆಂದಿತು. ಕೈಯಲ್ಲಿದ್ದ ಔಷಧದ ಪಾತ್ರೆ ಕಳಚಿ ಕೆಳಗೆ ಬಿತ್ತು—ಪಾತ್ರೆ ಒಡೆಯಿತು, ಸಾವಿತ್ರಮ್ಮನ ಹೃದಯವೂ ಒಡೆದು ಹೋಯಿತು.

"ಅಯ್ಯೋ—ನನ್ನ ಸ್ವಾಮಿ !"

ಎಂದು ಚೀರಿ ಬಿದ್ದುಬಿಟ್ಟಳು. ರಾಯರ ಪ್ರಾಣಪಕ್ಷಿ ಪೂರ್ವಿಯ ಸಂಧ್ಯಾಸಂಭ್ರಮದೊಂದಿಗೆ ಹಾರಿಹೋಗಿತ್ತು.

* * *

ಹನ್ನೆರಡು ದಿವಸಗಳೂ ಸಾಂಗವಾಗಿ ಕರ್ಮವಿಧಿಗಳೆಲ್ಲಾ ನಡೆದವು. ಹನ್ನೆರಡನೆಯ ದಿವಸವೇ ವೈಕುಂಠಸಮಾರಾಧನೆ. ಅದೂ ಮುಗಿಯಿತು. ಹಳ್ಳಿ ಯಿಂದ ಬಂದಿದ್ದ ಶಾಮಭಟ್ಟರು ಅವತ್ತೇ ಹೊರಟುಬಿಟ್ಟರು ಶಾಮಣ್ಣನವರ ಊಟ ಮುಗಿಯುವ ಹೊತ್ತಿಗೆ ಸಂಜೆಯಾಗಿತ್ತು. ರಾಮಚಂದ್ರ ಹೊರಗಿನ ವೆರಾಂಡದಲ್ಲಿ ಪತ್ರಿಕೆಯನ್ನೋದುತ್ತ ಕುಳಿತಿದ್ದ. ಶಾಮಣ್ಣನವರು ಕೈಯಲ್ಲಿ ಒಂದು ಗಂಟು, ಒಂದು ತಂಬೂರಿ, ಒಂದು ಪುಸ್ತಕ ಹಿಡಿದು ಬಂದು ಮುಂದೆ ನಿಂತರು.

"ಏನು ಶಾಮಣ್ಣನವರೇ. ಎಲ್ಲಿಗೆ ಹೊರಟುಬಿಟ್ಟಿರಿ ?"

ಎಂದು ರಾಮಚಂದ್ರ ಕೇಳಿದ.

"ಈ ಸಾವು ಸಂಚಯನ ಸಮಯಗಳಲ್ಲಿ ಹೋಗುವವರು 'ಹೋಗಿ ಬರುತ್ತೇನೆ' ಎಂದು ಹೇಳಬಾರದಂತೆ. ಆದರೆ ನಾನು ಮನೆಯವನೇ ಆಗಿದ್ದೆ. ತಮ್ಮ ಅಪ್ಪಣೆ ಪಡೆದು ಹೋಗೋಣಾಂತ ಬಂದೆ."

"ಅಂದರೆ, ಎಲ್ಲಾದರೂ ಹೋಗಿ ಮತ್ತೆ ಬರುತ್ತೀರೊ ಅಥವಾ ಬರುವುದೇ ಇಲ್ಲವೋ, ಹೇಗೆ ?"

"ಬರುವ ಸಂಭವವಿಲ್ಲ. ಇಷ್ಟು ದಿವಸ ಅನ್ನಬಟ್ಟೆ ಕೊಟ್ಟು ಕಾಪಾಡಿದಿರಿ. ನನ್ನ ಋಣಾನುಬಂಧ ತೀರಿತು. ಅಪ್ಪಣೆಯಾಗಬೇಕು."

ಶಾಮಣ್ಣನವರು ಹೋಗುವುದು ರಾಮಚಂದ್ರನಿಗೆ ಸ್ವಲ್ಪವೂ ಇಷ್ಟವಿಲ್ಲ—ಆದರೆ ಅವರು ನಿಲ್ಲುವುದಕ್ಕೆ ಒಪ್ಪುವ ಹಾಗಿರಲಿಲ್ಲ.

"ಹಳ್ಳಿಯ ಲೆಕ್ಕಪತ್ರ ಎಲ್ಲಾ ಅಣಿಮಾಡಿ ತಮ್ಮ ಮೇಜಿನ ಮೇಲೆ ಇಟ್ಟಿದ್ದೀನಿ. ನೋಡಿಕೊಳ್ಳಬೇಕು"

"ಇರುವುದಕ್ಕೆ ಸಾಧ್ಯವೇ ಇಲ್ಲವೇ, ಶಾಮಣ್ಣನವರೇ ?"

"ಇಲ್ಲ—ಕ್ಷಮಿಸಬೇಕು"

ಎಂದು ಹೇಳಿ ಹೊರಟುಬಿಟ್ಟರು. ಮನೆಯನ್ನು ಬಿಟ್ಟು ತಾವು ಹೊರಟು ಹೋಗುವ ಸುದ್ದಿಯನ್ನು ಹಿಂದಿನ ರಾತ್ರಿಯೇ ಲಕ್ಷ್ಮಣನಿಗೆ ತಿಳಿಸಿದ್ದರು. ಲಕ್ಷ್ಮಣನೂ ಹೇಳಿ ನೋಡಿದ್ದ. ಶಾಮಣ್ಣನವರು ಮನಸ್ಸು ಗಟ್ಟಿಮಾಡಿಬಿಟ್ಟಿದ್ದರು.

"ಎಲ್ಲಿಗೆ ಹೋಗುತ್ತೀರಿ, ಶಾಮಣ್ಣನವರೇ ?"

"ಇನ್ನೂ ನಿಶ್ಚಯಿಸಿಲ್ಲ. ನಾಲ್ಕು ದಿವಸ ಶೃಂಗೇರಿಗೆ ಹೋಗಿ ಗುರುಗಳ ಸೇವೆ ಮಾಡಿಕೊಂಡು ಮುಂದೆ ಹೋಗೋಣಾಂತ ಇದ್ದೀನಿ. ಕೈಯಲ್ಲಿ ತಂಬೂರಿಯಿದೆ, ಕಂಕುಳಲ್ಲಿ ಜೋಳಿಗೆಯಿದೆ, ಕಂಠದಲ್ಲಿ ಕುಮಾರವ್ಯಾಸ ಇದ್ದಾನೆ."

"....ಹೌದು....ದೇಶ ವಿಶಾಲವಾಗಿದೆ. ಸರ್ವಜ್ಞ ಹೇಳುವ ಹಾಗೆ

> ಕರದಿ ಕಪ್ಪರವುಂಟು ಹಿರಿದೊಂದು ನಾಮುಂಟು
> ಹರನೆಂಬ ದೈವ ನಮಗುಂಟು ತಿರಿವರಿಂ
> ಸಿರಿವಂತರಾರು ? ಸರ್ವಜ್ಞ ॥"

"ಸರಿಯಾದ ಮಾತು. ಮುಂದೆ ನೀನು ಏನು ಮಾಡುತ್ತೀ ?"

"ಅದೇ ದೊಡ್ಡ ಸಮಸ್ಯೆ. ನಾನೂ ನಿಮ್ಮ ಮೇಲ್ಪಂಕ್ತಿಯನ್ನನುಸರಿಸಬೇಕಾಗುತ್ತದೆಂದು ಕಾಣುತ್ತದೆ. ನೀವು ಹೊರಟುಹೋದಮೇಲೆ ಈ 'ರಾಮರಾಜ್ಯ'ದಲ್ಲಿ ಒಬ್ಬನೇ ಇರುವುದು ಹೇಗೆ ಎಂದು ಯೋಚನೆ ಹತ್ತಿದೆ."

"ಯೋಚಿಸಬೇಡ ಲಚ್ಚಣ್ಣಾ, ಸತ್ಯ-ಧರ್ಮ ನೀನು ಬಿಟ್ಟಿಲ್ಲ. ಸತ್ಯ-ಧರ್ಮ

ಗಳೇ ನಿನ್ನನ್ನು ಕಾಪಾಡುತ್ತವೆ. ಒಂದಲ್ಲ ಒಂದು ದಿನಸ ನಿಮ್ಮಣ್ಣನೂ ನಿನ್ನ ಪ್ರತಿಭೆಯ ಪ್ರಭಾವ ಕಾಣುತ್ತಾನೆ."

"ನಾನು ಅದನ್ನ ಬಯಸಲ್ಲ, ಶಾಮಣ್ಣನವರೇ. ಇತರರಿಗೆ ಹಿಂಸೆಮಾಡದೆ ಅವನ ಪಾಡಿಗೆ ಅವನು ಸುಖವಾಗಿದ್ದರೆ ಸಾಕು. ನೀವೇ ನೋಡುತ್ತಿದ್ದಿರಲ್ಲಾ—ಅವನಿಗಾದರೂ ಸುಖವಿದೆಯೇ? ಮನಸ್ಸು ಯಾವಾಗಲೂ ಕಿರಿಕಿರಿ, ಯಾವಾಗಲೂ ಒಂದಲ್ಲ ಒಂದಕ್ಕೆ ಅಸಂತುಷ್ಟಿ. ಮನಸ್ಸಿಗೆ ಪೋಷಣೆಯಾಗದೆ ದೇಹ ಬೆಳೆಯುತ್ತದೆಯೇ? ಅವನ ಸ್ಥಿತಿ ನೋಡಿದರೆ ನನಗಾದರೂ ದುಃಖವಾಗುವ್ವದಿಲ್ಲವೇ?"

"ಅಪ್ಪ, ನಿನ್ನ ದಾರಿ ಬೇರೆ; ಅವನ ದಾರಿ ಬೇರೆ. ಎರಡೂ ಸೇರುವ ಸಂಭವವಿಲ್ಲ. ನೀನು ಮೇಲಕ್ಕೆ ಹೋಗುವುದಕ್ಕೆ ಆಸೆಪಡುತ್ತೀ; ಅವನು ಮುಂದೆ ಹೋಗುವುದಕ್ಕೆ ಆಸೆಪಡುತ್ತಾನೆ—ಏನಾದರೂ ಬಡ ಶಾಮಣ್ಣನ್ನ ಮರೆಯಬೇಡ. ನನಗೆ ಲಭ್ಯವಿದ್ದರೆ ಮತ್ತೆ ನಿನ್ನ ನೋಡುತ್ತೇನೆ"

ಎಂದು ಸಮಾಧಾನ ಹೇಳಿದರು. ಲಕ್ಷ್ಮಣನಿಗೆ ಎಲ್ಲ ಕಡೆಯಿಂದಲೂ ಶೂನ್ಯತೆ ಕವಿದಂತಾಯಿತು. ಮನಸ್ಸಿಗೆ ಯಾವ ರೀತಿಯಲ್ಲಿಯೂ ಶಾಂತಿಯಿಲ್ಲ. ದಕ್ಷಿಣಕ್ಕೆ ಹೋಗಿ ವಿದ್ಯಾಭ್ಯಾಸ ಮುಂದುವರಿಸುವ ಆಸೆ ಕನಸಾಗಿ ಉಳಿಯುವ ಸಂಭವವೇ ಹೆಚ್ಚಾಯಿತು. 'ಮನೆಯೂ ಇನ್ನುಮೇಲೆ ನನ್ನ ಭಾಗಕ್ಕೆ ದೂರವಾಗುವುದೋ' ಎಂದು ಒಂದೇ ಸಮನೆ ಯೋಚಿಸುವನು.

೨೧

ಹಿರಣ್ಯಪ್ಪನವರಿಗೂ ರಾಮಚಂದ್ರನಿಗೂ ಬೆಳಗಾದರೆ ಅರಾರಾ ಕಛೇರಿ ಯಾತ್ರೆ ಆರಂಭವಾಗಿತ್ತು. ಅವರು ಈ ಯಾತ್ರೆಯ ಸಲುವಾಗಿ ಬಂದು ನಿಂತಿದ್ದರು. ರಾಮಚಂದ್ರ ತನ್ನ ಕೇಸಿನ ಕಟ್ಟುಗಳನ್ನು ಲಾಯರು ಮಿತ್ರರ ಕೈಗೆ ಹಾಕಿ ತಾನೂ ಯಾತ್ರೆಯಲ್ಲಿ ಉದ್ಯುಕ್ತನಾಗಿದ್ದ. ಹತ್ತು ಹತ್ತು ಸಲ ಷರೀಫ್ ಖಾನರೂ ಶೆಟ್ಟರೂ ಬಂದು 'ಏನಾಯಿತು–ಏನಾಯಿತು?' ಎಂದು ವಿಚಾರಿಸಿಕೊಂಡು ಹೋಗುತ್ತಿದ್ದರು. ರಾಮಚಂದ್ರ ಜೋಲುಮೋರೆ ಹಾಕಿಕೊಂಡು

"ಇನ್ನೂ ಏನೂ ಗೊತ್ತಾಗಿಲ್ಲ. ನೋಡಬೇಕು. ಅದೃಷ್ಟ ಹೇಗೆ ಇದೆಯೋ ಏನೋ?"

"ನಿಮಗೇನು ಭಯ ಬಿಡಿ, ಸ್ವಾಮಿ"

ಎಂದು ಶೆಟ್ಟರು ಧೈರ್ಯ ಹೇಳಿ ಹೋಗುತ್ತಿದ್ದರು. ಮೂರನೆಯ ದಿನಸ ಖಾನರೂ ಶೆಟ್ಟರೂ ಬಂದಾಗ ರಾಮಚಂದ್ರನ ಮುಖದಲ್ಲಿ ಪೂರ್ಣ ಕಳೆ ಕೂಡಿ

ಬಿಟ್ಟಿತ್ತು. ಉದ್ವೇಗದಿಂದ ಅವನು ಹುಚ್ಚನಂತೆ ಆಡುತ್ತಿದ್ದ. ಶೆಟ್ಟರೂ ಉದ್ವೇಗದಿಂದಲೇ

"ಏನಾಯಿತು ?"

ಎಂದು ಕೇಳಿದರು. ರಾಮಚಂದ್ರ ಉದ್ದನೆಯ ಲಕೋಟೆಯನ್ನು ಅವರ ಕೈಯಲ್ಲಿ ಕೊಟ್ಟ. ಶೆಟ್ಟರೂ ಸಾಹೇಬರೂ ಮುಖಕ್ಕೆ ಮುಖವಿಟ್ಟು ಓದಿ ನೋಡಿಕೊಂಡರು. ಸರ್ಕಾರದ ಆಜ್ಞೆ. ರಾಮಚಂದ್ರನಿಗೆ ಮುನ್‌ಸೀಫ್‌ಗಿರಿ ದೊರೆತಿತ್ತು. ಖಾನರು ಓಡಿಹೋಗಿ ಒಂದು ಹೂವಿನ ಹಾರ, ತುರಾಯಿ ತಂದು ರಾಮಚಂದ್ರನಿಗೆ 'ಮುಬಾರಕ್' ಹೇಳಿದರು. ಶೆಟ್ಟರು ಕೈಕುಲುಕಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಕೆಲಸವಾದ ಬ್ರಹ್ಮಾನಂದದ ಜತೆಯಲ್ಲಿ ರಾಮುವಿಗೆ ಸಣ್ಣ ವೇದನೆಯೊಂದು ಕೂಡಿಕೊಂಡಿತ್ತು. ಬ್ಯಾಂಕು, ಸಹಕಾರ ಸಂಘ, ಪ್ರಜಾಪ್ರತಿನಿಧಿ ಸಭೆಗಳಿಗೆಲ್ಲಾ ಅವನು ರಾಜೀನಾಮೆಯನ್ನು ಕೊಡಬೇಕಾಗಿತ್ತು.

"ಏತಕ್ಕೆ ಚಿಂತಿಸುವಿರಿ, ಸ್ವಾಮಿ. ನಾವಿಲ್ಲವೇ ? ನೀವಿದ್ದರೇನು ನಾವಿದ್ದರೇನು ?"

ಎಂದು ಶೆಟ್ಟರು ಭರವಸೆ ಕೊಟ್ಟರು.

ತಾವು ಎಂಟು ದಿವಸ ಬಂದು ನಿಂತು, ಪ್ರಯತ್ನಪಟ್ಟದ್ದಕ್ಕೂ ಸಾರ್ಥಕವಾಗಿ ಅಳಿಯನಿಗೆ ಕೆಲಸ ಸಿಕ್ಕಿತಲ್ಲಾ ಎಂದು ಹಿರಣ್ಯಪ್ಪನವರು ಪರಮಾನಂದಪಟ್ಟರು. ಪದ್ಮನಂತೂ ಸಂಜೆಯೊಳಗಾಗಿ ಬಸವನಗುಡಿಯ ಎಲ್ಲ ಮಹಿಳೆಯರಿಗೂ ತನ್ನ ಗಂಡನಿಗೆ ಕೆಲಸವಾದ ಸಂಗತಿಯನ್ನು ಹೇಳಿಕೊಂಡು ಬಂದಿದ್ದಳು.

ಲಕ್ಷ್ಮಣ, ಜಯನೂ ಸಂತೋಷಪಟ್ಟರು. ಆದರೆ ಜಯ ಗಡಗಡನೆ ನಡುಗಿದಳು. ಅವಳ ಮುಖ ಗಂಭೀರವಾಯಿತು.

"ಏತಕ್ಕೆ. ಜಯಾ ?"

ಎಂದು ಲಕ್ಷ್ಮಣ ಕೇಳಿದ.

"ಏತಕ್ಕೂ ಇಲ್ಲ. ಭಾವನವರಿಗೆ ಕೆಲಸವಾದದ್ದು ಕೇಳಿ ಸಂತೋಷವಾಯಿತು, ಅಷ್ಟೇ."

"ಸಂತೋಷವಾದರೆ ಯಾರಾದರೂ ನಡುಗುತ್ತಾರೆಯೇ ?"

"ಹೂ ! ಸಂತೋಷ ಹೆಚ್ಚಾದರೆ ನಡುಕ ಬರುವುದೂ ಉಂಟು."

"ಇರಬಹುದು. ಆದರೆ ನೀನು ನಡುಗಿದ್ದೇಕೆ ?"

"ಹೇಳಿದರೆ ನೀವು ಕೋಪ ಮಾಡಿಕೊಳ್ಳುವಿರೇನೋ ?"

"ಇಲ್ಲ—ಹೇಳು."

"ಮೊದಲೇ ಭಾವನವರನ್ನು ಹಿಡಿಯುವವರಿಲ್ಲ. ಇನ್ನು ಮೇಲಂತೂ ಸರಿಯೇ ಸರಿ—ನೀವೂ ನಾನೂ ಉಳಿಯುವುದಕ್ಕಾದರೂ ಆಗುತ್ತದೆಯೇ ?"

ಕಂಬನಿಯ ಕಟ್ಟೆಯೊಡೆಯಿತು. ಲಕ್ಷ್ಮಣ ಹೆಂಡತಿಯನ್ನು ಪ್ರೀತಿಯಿಂದ ನೇವರಿಸುತ್ತಾ

"ಜಯಾ, ಜಯ ಯಾವಾಗಲೂ ನಮ್ಮದು. ಭಯವೇನು ? ನಾನಿಲ್ಲವೇ —ನಿನಗೇನು ಭಯ ?"

"ನನ್ನ ಯೋಚನೆಯಲ್ಲ. ನೀವು—ನಿಮ್ಮನ್ನು ಯಾರು ಹೊಟ್ಟೆ ಹಿಡಿದು ನೋಡಬಹುದು. ಅರ್ಧವಾಗಿಬಿಟ್ಟಿದ್ದೀರಲ್ಲಾ, ತಲೆಯಲ್ಲಿ ನರೆಗೂದಲು ಕೂಡ ಆರಂಭವಾಗಿದೆ."

"ಮುದುಕನಾದೆ ಕಣೆ, ಜಯಾ, ಅದಕ್ಕೇ ನರೆಗೂದಲು. ನನಗೇನಾಗಿದೆ ಎಂದು ಇಷ್ಟು ಯೋಚಿಸುತ್ತಿ ?" ಎಂದು ಸಮಾಧಾನ ಮಾಡಿದ.

ಜಯನ ಊಹೆ ತಪ್ಪಾಗಲಿಲ್ಲ. ಅಡಿಗೆ ಕೆಲಸದ ಎಲ್ಲಾ ಹೊಣೆಗಾರಿಕೆಯೂ ಜಯನ ಮೇಲೇ ಬಿದ್ದುಬಿಟ್ಟಿತು. ರಾಮಚಂದ್ರನಿಗೆ ಕೆಲಸ ಸಿಕ್ಕಿದುದು ಪದ್ಮನಿಗೂ ಸಿಕ್ಕಿದಂತೆ ಆಗಿತ್ತು. ಮನೆಗೆ ಅವಳೇ ಯಜಮಾನತಿ. ಮನೆಗೆಲಸ ಮಾಡುವುದೆಂದರೆ ತನ್ನ ಆತ್ಮಗೌರವಕ್ಕೆ ಕುಂದು ಬರುವುದೆಂಬ ಭಾವನೆ ಅವಳ ಮನಸ್ಸಿನಲ್ಲಿ ನೆಟ್ಟಿತು. ಸಾವಿತ್ರಮ್ಮ ತನ್ನ ಪಾಡಿಗೆ ತಾನು ಇದ್ದುಬಿಡುತ್ತಿದ್ದಳು. ದುಃಖತಪದಲ್ಲಿ ಲೀನಳಾಗಿದ್ದ ಅವಳನ್ನು ಯಾರೂ ಮಾತನಾಡಿಸುವ ಹಾಗಿರಲಿಲ್ಲ. ಅತ್ತೆಯನ್ನು ಯಾವ ಕೆಲಸಕ್ಕೂ ಕರೆಯದೆ, ತನ್ನ ಕಷ್ಟವನ್ನು ಪರರಲ್ಲಿ ಹೇಳಿಕೊಳ್ಳದೆ, ಜಯ ಗಾಣದೆತ್ತಿನಂತೆ ದುಡಿಯುತ್ತಿದ್ದಳು. ಬೆಳಗ್ಗೆ ಐದು ಗಂಟೆಗೆದ್ದು ಕೆಲಸಕ್ಕೆ ಆರಂಭಿಸಿದರೆ ರಾತ್ರಿ ಹನ್ನೊಂದಾಗುವವರೆಗೂ ಬಿಡುವೇ ಆಗುತ್ತಿರಲಿಲ್ಲ.

ಹೆಂಡತಿಯ ದುಡಿತವನ್ನು ಕಂಡು ಲಕ್ಷ್ಮಣ ಬಹಳವಾಗಿ ಮರುಗಿದ. ಆದರೆ ಮಾತನಾಡುವ ಹಾಗಿರಲಿಲ್ಲ. ತಾನು ಸಂಪಾದನೆಯಿಲ್ಲದೆ ಕೂಳಿಗೆ ದಂಡವಾಗಿ ಮನೆಯಲ್ಲಿ ಕುಳಿತಿದ್ದ. ಹೆಂಡತಿಯೂ ಹಾಗೆ ಕುಳಿತಿರಲು ಸಾಧ್ಯವಿರಲಿಲ್ಲ.

ಜಯನಿಗೆ ದುಡಿತದ ಶ್ರಮ ಗೊತ್ತಾಗುತ್ತಿರಲಿಲ್ಲ. ತನ್ನ ಮನೆ, ತಾನು ದುಡಿಯದೆ ಮತ್ತೆ ಯಾರು ದುಡಿಯಬೇಕು ಎನ್ನುವ ಭಾವನೆಯಿಂದ ಎಷ್ಟು ಕೆಲಸ ಮೇಲೆಬಿದ್ದರೂ ಸಂತೋಷದಿಂದ ನಿರ್ವಹಿಸುತ್ತಿದ್ದಳು. ಆದರೆ ಭಾವನವರ ಬಿರುನುಡಿಗಳು ಅವಳನ್ನು ಹಣ್ಣುಹಣ್ಣು ಮಾಡಿಬಿಡುತ್ತಿದ್ದುವು. ಸೊಸೆಯಂದಿರನ್ನು ಕಾಡಲು ಅಧಿಕಾರ ಪಡೆದ ಅತ್ತೆ, ಕೈಹಿಡಿದ ಗಂಡನೇ

ಒಂದು ಮಾತೂ ಆಡದಿರುವಾಗ ಭಾವನವರ ಬಾಯಿಂದ ಎಷ್ಟು ಮಾತು ಗಳನ್ನು ಕೇಳಬೇಕು ಎಂದು ಕೊರಗುವಳು. ಭಾವನವರ 'ಮರ್ಜಿ'ಯನ್ನನು ಸರಿಸಿ ಅವರಿಗೆ ತೃಪ್ತಿಯಾಗುವಂತೆ ಅಡಿಗೆ ಮಾಡುವಳು. ಅವಳು ಏನು ಮಾಡಿ ದರೂ ಅದರಲ್ಲಿ ಕುಂದುಕೊರತೆ ರಾಮುಚಂದ್ರನಿಗೆ ಕಂಡುಬರುತ್ತಲೇ ಇದ್ದವು.

ಇದ್ದಕ್ಕಿದ್ದ ಹಾಗೆ ಜಯನಿಗೆ ತಲೆಸುತ್ತುವುದಕ್ಕೆ ಆರಂಭವಾಯಿತು. ಏನು ತಿಂದರೂ ಕೂಡಲೇ ವಾಂತಿಯಾಗುವುದಕ್ಕೆ ಮೊದಲಾಯಿತು. ಸಾವಿತ್ರಮ್ಮ ಜಯನ ಕೆಲಸ ವಹಿಸಿಕೊಂಡಳು. ಸೊಸೆ ಏನಾದರೂ ಕೆಲಸ ಮಾಡಲು ಬಂದರೆ

"ಬೇಡಪ್ಪಾ. ನಾಲ್ಕು ದಿನಸ ಸುಧಾರಿಸಿಕೋ. ನಾನು ನೋಡಿಕೊಂಡು ಹೋಗುತ್ತೇನೆ"

ಎಂದು ಹೇಳುತ್ತಿದ್ದಳು. ಶಾಂತಾ, ಜಯನನ್ನು ಮನೆಗೆ ಕರೆದುಕೊಂಡು ಹೋಗಿ ಹಣ್ಣು ಹಂಪಲು ತರಿಸಿಕೊಡುತ್ತಿದ್ದಳು. ಅದೂ ಇದೂ ತಿಂಡಿಯನ್ನು ಮಾಡಿ ಅವಳಿಗೆ ಕೊಡುತ್ತಿದ್ದಳು.

"ಬಯಕೆಯೇನಾದರೂ ಇದ್ದರೆ ಹೇಳು, ಜಯಾ. ಯಾವದನ್ನೂ ಈಗ ಮುಚ್ಚಿಕೊಳ್ಳಬಾರದು."

"ನನಗೆ ಬಯಕೆಯೇನೂ ಇಲ್ಲಮ್ಮಾ"

ಎಂದು ಜಯ ಉತ್ತರ ಹೇಳಿಬಿಡುತ್ತಿದ್ದಳು. ಶಾಂತನ ಮನೆಗೆ ಜಯಾ ಹೋಗಿ ಬರುತ್ತಿದ್ದುದನ್ನು ಪದ್ಮ ಗಂಡನಿಗೆ ತಿಳಿಸಿದಳು. ಕೆಲಸಕ್ಕೆ ಕಳ್ಳ ಬೀಳುವುದಕ್ಕೆ ಈ ನೆವವನ್ನು ಅವಳು ಹೂಡಿರುವುದಾಗಿ ರಾಮುಚಂದ್ರ ಭಾವಿಸಿಕೊಂಡ. ಮನಸ್ಸುಬಂದಂತೆ ಮಾತನಾಡತೊಡಗಿದ. ಜಯನ ಕಿವಿಗೆ ಮಾತುಗಳು ಶೂಲದಂತೆ ಬಂದು ನೆಟ್ಟವು. ಅಂದಿನಿಂದ ತಾನೇ ಕೆಲಸಗಳನ್ನು ಮತ್ತೆ ವಹಿಸಿಕೊಂಡಳು. ಯಾರೆಷ್ಟು ಹೇಳಿದರೂ ಬಿಡುತ್ತಿರಲಿಲ್ಲ. ಶಾಂತಾ ಇದನ್ನು ಕೇಳಿ

"ನಿನ್ನನ್ನು ದೇವರು ಕಾಪಾಡಬೇಕು ಕಣೇ, ಜಯಾ. ನೀನು ಹೇಗೆ ಮೈ ಕಳೆದು ಮತ್ತೆ ಮನುಷ್ಯಳಾಗುತ್ತೀಯೋಮ್ಮ"

ಎಂದು ಹೇಳಿದಳು.

ಜಯ ಗರ್ಭವತಿಯಾಗಿದ್ದುದು ಸುಳ್ಳೆಂದು ಭಾವಿಸಿದ್ದ ರಾಮುಚಂದ್ರನ ಕಣ್ಣುಗಳಿಗೆ ಲಕ್ಷಣಗಳು ಚೆನ್ನಾಗಿ ಕಾಣಲಾರಂಭಿಸಿದವು. ಐದು ತಿಂಗಳು ತುಂಬಿತು. ಆಗಲೂ ಅವಳು ಕೆಲಸಮಾಡುತ್ತಿದ್ದರೆ ನೋಡಿಕೊಂಡು ಸುಮ್ಮನೇ ಇರುತ್ತಿದ್ದ. ಯಾವದಕ್ಕೆ ಸ್ವಲ್ಪ ತಡವಾದರೂ ತನ್ನ ಬೈಗಳ ಮಳೆ ಯನ್ನು ಪ್ರಾರಂಭಿಸುತ್ತಿದ್ದ.

ಒಂದು ದಿನ ರಾಮಚಂದ್ರ ಮನೆಗೆ ಬರುವ ಹೊತ್ತಾಗಿತ್ತು. ಹಂಡೆಯಲ್ಲಿ ಒಂದು ಬಿಂದಿಗೆಗಿಂತ ಹೆಚ್ಚು ನೀರಿರಲಿಲ್ಲ. ಸ್ನಾನಕ್ಕೆ ನೀರಿಲ್ಲವೆಂದು ರೇಗುವನಲ್ಲಾ ಎಂದು ಜಯ ಬೇಗಬೇಗನೆ ನೀರು ಸೇದಿಹಾಕುತ್ತಿದ್ದಳು. ನೀರು ಸೇದಿಹಾಕುವ ರಭಸದಲ್ಲಿ ತಲೆತಿರುಗಿ ಬಂತು. ದೊಪ್ಪನೆ, ಬಿಂದಿಗೆಯನ್ನೂ ಕೆಡವಿಕೊಂಡು ಬಿದ್ದುಬಿಟ್ಟಳು. ಜ್ಞಾನ ತಪ್ಪಿತು. ಸಾವಿತ್ರಮ್ಮ ಓಡಿಬಂದಳು.

"ಅಯ್ಯೋ—ಅನಾಹುತವಾಯಿತು!"

ಎಂದು ಕೂಗಿ ಗಾಡಿ ತರಿಸಿ ಸೊಸೆಯನ್ನು ಕರೆದುಕೊಂಡು ಹೋಗಿ ಹೆಂಗೆ ಆಸ್ಪತ್ರೆಗೆ ಸೇರಿಸಿದಳು. ಲಕ್ಷ್ಮಣನ ಬುದ್ಧಿಗೆ ಮಂಕು ಕವಿದುಕೊಂಡಿತು. ಏನು ಮಾಡಲೂ ತೋರದೆ ಆಸ್ಪತ್ರೆಯ ಬಾಗಿಲ ಬಳಿ ಕುಳಿತುಬಿಟ್ಟನು. ಸುದ್ದಿ ಕೇಳಿದ ಕೂಡಲೆ ಶಾಂತಾ ಆಸ್ಪತ್ರೆಗೆ ಓಡಿದಳು. ಜಯನ ಸ್ಥಿತಿಯನ್ನು ನೋಡಲಾರದೆ ತಲೆತಗ್ಗಿಸಿಬಿಟ್ಟಳು.

ಡಾಕ್ಟರು ಪೂರ್ವಸಿದ್ಧತೆಯನ್ನು ಮಾಡಿ ಜಯನನ್ನು ಶಸ್ತ್ರಚಿಕಿತ್ಸೆಗೆ ಕರೆದೊಯ್ದರು. ಕಾಲು ಗಂಟೆಯೊಳಗಾಗಿ ಆಸ್ಪತ್ರೆಯ ದೊಡ್ಡ ಡಾಕ್ಟರು ಶಸ್ತ್ರಚಿಕಿತ್ಸೆಯ ಮಂದಿರಕ್ಕೆ ಹೋದರು. ಚಿಕಿತ್ಸಾಮಂದಿರದ ಮುಂದೆ ಸಾವಿತ್ರಮ್ಮ, ಲಕ್ಷ್ಮಣ, ಶಾಂತಾ ಬೊಂಬೆಗಳಂತೆ ಕುಳಿತುಬಿಟ್ಟರು. ಮಂದಿರದಿಂದ ಹೊರಬಿದ್ದ ದಾದಿಯನ್ನು ಸಾವಿತ್ರಮ್ಮ

"ದೊಡ್ಡ ಜೀವ ಉಳಿಯುತ್ತೇನೇ, ತಾಯೀ?"

ಎಂದು ಕೇಳಿದಳು. ದಾದಿ

"ನೋಡಬೇಕಮ್ಮ. ಉಳಿದರೆ ನಿಮ್ಮ ಅದೃಷ್ಟ ದೊಡ್ಡದು"

ಎಂದು ಹೇಳಿ ಮತ್ತೆ ಒಳಗೆ ಹೊರಟುಹೋದಳು. ಲಕ್ಷ್ಮಣನ ಕಣ್ಣುಗಳು ಒಮ್ಮೆ ಮಂದಿರದ ಬಾಗಿಲನ್ನು ನೋಡುತ್ತಿದ್ದವು, ಒಮ್ಮೆ ಮಂದಿರದ ಎದುರಿಗಿದ್ದ ಗಡಿಯಾರವನ್ನು ನೋಡುತ್ತಿದ್ದವು. ಒಂದೊಂದು ನಿಮಿಷ ಒಂದೊಂದು ಯುಗವಾಗಿತ್ತು. ಕಾಲುಗಂಟೆಯಾಯಿತು, ಅರ್ಧಗಂಟೆಯಾಯಿತು; ಒಂದು ಗಂಟೆಯಾಯಿತು. ಡಾಕ್ಟರು ಒಬ್ಬೊಬ್ಬರಾಗಿ ಹೊರಬೀಳಲಾರಂಭಿಸಿದರು.

ಯಾರ ಮುಖದಲ್ಲಿಯೂ ಕಳೆಯಿಲ್ಲ. ಗಂಭೀರಭಾವ ಮೂಡಿದೆ. ಶಾಂತಾ ಒಬ್ಬ ಡಾಕ್ಟರನ್ನು

"ಏನಾಯಿತು—ಸರ್?"

ಎಂದಳು. ಡಾಕ್ಟರು ದೀರ್ಘವಾಗಿ ಉಸಿರೆಳೆದು

"ಪ್ರಯತ್ನ ಸಫಲವಾಗಲಿಲ್ಲಮ್ಮ"

ಎಂದುಬಿಟ್ಟರು. ಲಕ್ಷ್ಮಣ ನಿಂತಲ್ಲಿಯೇ ಸ್ಮೃತಿ ತಪ್ಪಿ ನೆಲಕ್ಕೆ ಉರುಳಿದ.

೨೨

ಲಕ್ಷ್ಮಣನ ಸ್ಥಿತಿಯೇ ಬೇರೆಯಾಗಿಬಿಟ್ಟಿತು. ನಿಂತಲ್ಲಿ ನಿಲ್ಲ, ಕುಳಿತಲ್ಲಿ ಕೂಡ. ದೇಹದ ಮೇಲಣ ಪರಿವೆಯಂತೂ ಮರೆತುಹೋಗುತ್ತ ಬಂತು. ಮೈಮೇಲೆ ಬಟ್ಟೆಯಿದೆಯೇ ಇಲ್ಲವೇ ಎಂಬುದೂ ಅವನ ಗಮನಕ್ಕೆ ಬರುತ್ತಿರಲಿಲ್ಲ. ಹುಚ್ಚನಂತಾಗಿಬಿಟ್ಟಿದ್ದ. ಕ್ಷೌರ ಕಾಣದೆ ಮುಖವೆಲ್ಲಾ ಕೂದಲು ತುಂಬಿಕೊಂಡಿತ್ತು. ತಲೆಯ ಅರ್ಧ ಕೂದಲು ನರೆಯುತ್ತ ಬಂದು ಅವನ ಮೊದಲೇ ಗಂಭೀರವಾದ ಮುಖಕ್ಕೆ ಹೆಚ್ಚಿನ ಗಂಭೀರನೋಟವನ್ನಿತ್ತಿತ್ತು. ತನ್ನಷ್ಟಕ್ಕೇ ಹಾಡಿಕೊಳ್ಳುವನು. ಮತ್ತೆ ಸುಮ್ಮನಾಗುವನು. ಕೆಲವು ದಿವಸಗಳು ಬಾಯೇ ಬಿಡುತ್ತಿರಲಿಲ್ಲ. ತಂಬೂರಿಯನ್ನು ನೋಡಿದರೆ ಕಿಲಕಿಲನೆ ನಗುವನು. ನಗುವುದಕ್ಕೆ ಮೊದಲುಮಾಡಿದರೆ ನಗುತ್ತಲೇ ಇರುವನು.

ಶಾಂತಾ ತುಂಬ ಹೆದರಿದಳು. ತನ್ನ ತಂದೆಯ ಪಾಡೇ ಅಣ್ಣನಿಗಾಗುವುದೆಂದು ಭಾವಿಸಿದಳು. ಅಣ್ಣನ ಸ್ಥಿತಿಯನ್ನು ನೋಡಿ ಹೊಟ್ಟೆಯ ದುಃಖ ಮರುಕಳಿಸಿಕೊಂಡು ಬರುತ್ತಿತ್ತು. ಮೆಲ್ಲನೆ ಲಕ್ಷ್ಮಣನನ್ನು ಕರೆದುಕೊಂಡು ಹೋಗಿ ತನ್ನ ಮನೆಯಲ್ಲಿಟ್ಟುಕೊಂಡಳು. ಮಗುವಿನಂತೆ ಅವನನ್ನು ಆದರಿಸಿದಳು. ಒಂದು ದಿವಸ ತಂಬೂರಿಯನ್ನು ಬೇಡಿದ. ರಾಯರ ಮನೆಯಿಂದ ಅವನ ತಂಬೂರಿಯನ್ನೇ ತರಿಸಿಕೊಟ್ಟಳು.

ತಂಬೂರಿಯನ್ನು ಶ್ರುತಿಮಾಡಿ ಲಕ್ಷ್ಮಣ ನಾಲ್ಕು ಮೀಟು ಹಾಕಿದ. ಕಣ್ಣಿನಲ್ಲಿ ಧಾರೆಯಾಗಿ ನೀರು ಸುರಿಯಲಾರಂಭಿಸಿತು. ತಂಬೂರಿಯ ತಂತಿಗಳನ್ನು ಒಂದೊಂದನ್ನಾಗಿ ಕಿತ್ತು ಅಲ್ಲಿಂದ ಎದ್ದು ಹೊರಟುಹೋದ.

ಸಂಜೆಯಾದರೂ ಮತ್ತೆ ಅಣ್ಣನ ದರ್ಶನ ಸಿಗಲಿಲ್ಲ. ಮನೆಗೆ ಹೋಗಿರಬಹುದೆಂದು ಅಲ್ಲಿಗೆ ಹೋಗಿ ಬಂದಳು. ಅಲ್ಲಿಗೂ ಬಂದಿರಲಿಲ್ಲ. ಗಂಡ ಬರುತ್ತಲೂ ತಿಳಿಸಿದಳು. ವೆಂಕಟೇಶ ಯಾರದೋ ಕಾರು ತೆಗೆದುಕೊಂಡು ಭೀಮರಾಯರ ಮನೆ, ಸುಂದರರಾಯರ ಮನೆ, ಅನಂತಾಚಾರ್ಯರ ಮನೆ ಎಲ್ಲಾ ಕಡೆಯೂ ಸುತ್ತಿಬಂದ. ಲಕ್ಷ್ಮಣನ ಪತ್ತೆ ಸಿಗಲಿಲ್ಲ. ಶಾಂತಾ

"ಅಯ್ಯೋ ಅಣ್ಣಾ—ನೀನು ಹೊರಟುಹೋದೆಯಾ ?"

ಎಂದು ಒಂದೇ ಸಮನೆ ದುಃಖಿಸಿದಳು.

ಈ ಸಮಾಚಾರ ಕೇಳಿದ ರಾಮಚಂದ್ರ 'ಸದ್ಯ ಶನಿ ತೊಲಗಿತು !' ಎಂದು ಸಮಾಧಾನಪಟ್ಟುಕೊಂಡ.

ರಾಮಚಂದ್ರನಿಗೆ ಕೆಲಸನಾದಮೇಲೆ ಪದ್ಮನಲ್ಲಿ ಅನೇಕ ಬದಲಾವಣೆಗಳು ತಲೆದೋರಲಾರಂಭಿಸಿದವು. ರಾಮಚಂದ್ರ ಒಬ್ಬ 'ಮೇಡಮ್ಮ'ನವರನ್ನು

ಗೊತ್ತುಮಾಡಿ ಹೆಂಡತಿಗೆ ಇಂಗ್ಲಿಷ್ ಕಲಿಸಲಾರಂಭಿಸಿದ. ಆವಳ ತಲೆಯು ಬೈತಲೆ ಪಕ್ಕಕ್ಕೆ ಜಾರಿತು. ಕಾಲಿಗೆ ಹಿಮ್ಮಡಿಯೆತ್ತರದ ಮೋಜುಗಳು ಬಂದಿದ್ದವು. ಅವುಗಳನ್ನು ಹಾಕಿಕೊಂಡು ನಡೆಯಲಾರದೆ ಒಂದೆರಡು ಸಲ ಕಾಲುಳುಕಿಸಿಕೊಂಡಿದ್ದಳು. ಕಿವಿಯ ಓಲೆಯನ್ನು ತೆಗೆದುಹಾಕಿಸಿ 'ತೂಗು ದೀಪ'(Love Locks)ಗಳನ್ನು ಹಾಕಿಸಿದ. ಕುಪ್ಪಸದ ತೋಳುಗಳು ಬರ ಬರುತ್ತ ಭುಜದ ಸಮಕ್ಕೆ ಹೋಗುತ್ತ ಬಂದವು. ದಿನಕ್ಕೆ ಹತ್ತು ಸಲವಾದರೂ ಮುಖಕ್ಕೆ ಹೆಸ್‌ಲಿನ್ ಸ್ನೋ ಹಚ್ಚಿಕೊಳ್ಳದಿದ್ದರೆ ಅವಳಿಗೆ ಸಮಾಧಾನವಿಲ್ಲ.

ಅಲಂಕಾರದ ಶಿಸ್ತು, ನಾಲ್ಕು ಇಂಗ್ಲಿಷ್ ಮಾತುಗಳನ್ನಾಡುವ ಸಾಮರ್ಥ್ಯವೂ ಬಂದಮೇಲೆ ಹೆಂಡತಿಯನ್ನು ಸ್ತ್ರೀಯರ ಕ್ಲಬ್ (Ladies Club) ಸದಸ್ಯಳನ್ನಾಗಿ ಮಾಡಿದ. ಮೂರನೆಯ ದಿವಸವೇ ಕೈಗೆ ಟೆನಿಸ್ ರ್‍ಯಾಕೆಟ್ ಬಂದುಬಿಟ್ಟಿತು.

ರಾಮಚಂದ್ರ 'ಸಾಹೇಬರು' ಆಗಿದ್ದಂತೆ, ಪದ್ಮ 'ಅಮ್ಮಾವರು' ಆಗಿಬಿಟ್ಟಳು. ಅಡಿಗೆ ಕೆಲಸಕ್ಕೆ ಒಬ್ಬ ಅಡಿಗೆಯವನನ್ನು ಗೊತ್ತುಮಾಡಿಕೊಂಡಿದ್ದರು. ಪದ್ಮನಿಗೆ ಇದ್ದ ವೇಳೆ ಆವಳ ಅಲಂಕಾರ, ಸ್ನೇಹಿತರನ್ನು ಬರಮಾಡಿಕೊಳ್ಳುವುದು, ಟೆನಿಸ್ ಆಟ ಅಭ್ಯಸಿಸುವುದು, 'ಮೇಡಂ' ಬಂದಾಗ ಇಂಗ್ಲಿಷ್ ಕಲಿಯುವುದು–ಇವಕ್ಕೇ ಸಾಲುತ್ತಿರಲಿಲ್ಲ. ಗೋವರ್ಧನನನ್ನು ನೋಡಿಕೊಳ್ಳುವುದಕ್ಕಂತೂ ಪುರಸತ್ತೇ ಇರಲಿಲ್ಲ. ಗೋವರ್ಧನನ ಲಾಲನೆಪಾಲನೆಯೆಲ್ಲಾ ಅಡಿಗೆ ನಾರ್ಣಾಚಾರಿ, ದಫೇದಾರ ದಾಸಪ್ಪ, ಮೋಟಾರು ಡ್ರೈವರ್ ಜಾನ್ ಇವರುಗಳಿಗೆ ಸೇರಿತ್ತು.

"ಗೋವೀ ಮಲಗಿಕೊಂಡನೇನೇ ?" ಎಂದು ರಾಮಚಂದ್ರ ಕೇಳಿದಾಗಲೇ ಪದ್ಮನಿಗೆ ಮಗನ ನೆನಪು ಬರುತ್ತಿದ್ದುದು.

೨೩

ಬೆಂಗಳೂರಿನಂತಹ ಮಹಾಪಟ್ಟಣದಲ್ಲಿ ಜೀವನವನ್ನು ಸಾಗಿಸುವುದೇ ವೆಂಕಟೇಶನಿಗೆ ದೊಡ್ಡ ಸಮಸ್ಯೆಯಾಗಿತ್ತು. ಅವನು ಅವಲಂಬಿಸಿದ್ದ ಜೀವವಿಮಾ ಕೆಲಸವಂತೂ ಬಹಳ ಕಷ್ಟಸಾಧ್ಯವಾಗಿತ್ತು. ಯಾರನ್ನು ಕೇಳ ಹೋದರೂ ಅವರೇ ಒಂದಲ್ಲ ಒಂದು ಕಂಪೆನಿಯ ಏಜಂಟರಾಗಿರುತ್ತಿದ್ದರು. ಜೀವವಿಮೆ ಮಾಡುವುದಕ್ಕೆ ಪೇಟೆಯ ಜನಕ್ಕೆ ನಂಬಿಕೆಯಿಲ್ಲ–ಧೈರ್ಯವೂ ಇಲ್ಲ. ತಿಂಗಳು ತಿಂಗಳಿಗೂ ಪ್ರೀಮಿಯಂ ಹಣವನ್ನು ಹೇಗೆ ಕಟ್ಟುವುದು ಎಂಬುದರ ಸಮಸ್ಯೆ. ಜೀವವಿಮೆ ಮಾಡಿದಕೂಡಲೆ ಮನುಷ್ಯ ಸಾಯುತ್ತಾನೆಂದು ಹಳ್ಳಿಯ

ಜನರ ನಂಬಿಕೆ. ಈ ಮಧ್ಯೆ ಮೂಢಜನರನ್ನು ಸುಲಿದು ತಿನ್ನುವ ವಿಮಾ ಏಜಂಟರ ಕಾಟ. 'ವಿಮಾವೃತ್ತಿಯನ್ನು ಬಿಟ್ಟುಬಿಡುವುದು ಒಳ್ಳೆಯದೇನೋ' ಎಂದು ವೆಂಕಟೇಶ ಕೆಲವು ಸಾರಿ ಯೋಚಿಸಿದ. 'ಯಾವ ವೃತ್ತಿಯಾದರೇನು? ಎಲ್ಲದರಲ್ಲಿಯೂ ಒಂದೊಂದು ಬಗೆಯ ಸಂಕಷ್ಟ ಇದ್ದೇ ಇರುತ್ತದೆ' ಎಂದು ಸಮಾಧಾನಪಟ್ಟುಕೊಳ್ಳುವನು.

ಎರಡು ವರ್ಷ ದುಡಿಯುವುದರಲ್ಲಿ ವೃತ್ತಿಯ ಕಷ್ಟಸುಖಗಳು ಸಂಪೂರ್ಣ ಮನವರಿಕೆಯಾದುವು. ವಿಮೆ ನಿಜವಾಗಿಯೂ ಆಪತ್ಕಾಲದಲ್ಲಿ ಮನುಷ್ಯನ ತಲೆ ಕಾಯುತ್ತದೆ ಎಂಬುದನ್ನು ಕಂಡುಕೊಂಡ. ಅನುಭವದಿಂದ ವ್ಯಾಪಾರವೂ ಕುದುರಿತ್ತು. ವ್ಯಾಪಾರದ ಮರ್ಮವೂ ಗೊತ್ತಾಗಿತ್ತು. ಕಂಪೆನಿಯವರು

"ಈ ವರ್ಷ ಮೂರು ಲಕ್ಷದಷ್ಟು ವಿಮೆ ಮಾಡಿಸಬೇಕು"

ಎಂದು ಸೂಚಿಸಿದಾಗ ವೆಂಕಟೇಶ ದೇವರ ಮೇಲೆ ಭಾರಹಾಕಿ ಆಗಲೆಂದು ಒಪ್ಪಿಬಿಟ್ಟ. ತಿಂಗಳು ತಿಂಗಳಿಗೆ ಸಂಬಳವೂ, ಪ್ರವಾಸದ ಖರ್ಚೂ, ವಿಮಾ ಹಣದ ಮೇಲೆ ದಳ್ಳಾಳಿಯೂ ದೊರೆಯಲಾರಂಭವಾದವು.

ಕಂಪೆನಿ ವೆಂಕಟೇಶನ ಯೋಗ್ಯತೆಯನ್ನೂ ಪ್ರಾಮಾಣಿಕತೆಯನ್ನೂ ಕಂಡು ಕೊಂಡಿತು. ಅವನು ಕೇಳಿದ ಅನುಕೂಲತೆಗಳನ್ನೆಲ್ಲಾ ಸಂತೋಷವಾಗಿ ಒದಗಿಸಲಾರಂಭಿಸಿತು. ಹಳ್ಳಿದಿಳ್ಳಿಗಳನ್ನೆಲ್ಲಾ ವೆಂಕಟೇಶ ಸುತ್ತಬೇಕಾಗಿತ್ತು. ಪ್ರವಾಸಕ್ಕೋಸ್ಕರ ಒಂದು 'ಷೆವರ್ಲೆ' ಕಾರನ್ನು ಕೊಂಡುಕೊಂಡ. ಕಂಪೆನಿಯೇ ಅದರ ಖರ್ಚನ್ನೂ ಕೊಟ್ಟು ಸುಲಭವಾದ ಕಂತುಗಳಲ್ಲಿ ಅದನ್ನು ವೆಂಕಟೇಶನ ಸಂಪಾದನೆಯಲ್ಲಿ ಮುರಿದುಕೊಳ್ಳಲಾರಂಭಿಸಿತು.

ವೆಂಕಟೇಶ ಕಾರು ಕೊಂಡುಕೊಂಡಮೇಲೆ ಅವನು ರಾಮಚಂದ್ರನ ಕಣ್ಣಿಗೆ ಒಬ್ಬ ಮನುಷ್ಯನಾಗಿ ಕಾಣಲಾರಂಭಿಸಿದ. ಪದ್ಮ ಶಾಂತನನ್ನು ಹುಡುಕಿ ಕೊಂಡು ಅವರ ಮನೆಗೂ ಒಂದೆರಡು ಸಲ ಹೋಗಿ ಬಂದಳು. ತನ್ನ ಟೀ ಪಾರ್ಟಿಗಳಿಗೆ ಯಾವಾಗಲೂ ವೆಂಕಟೇಶನಿಗೆ ಆಹ್ವಾನ ಕಳುಹಿಸದಿದ್ದವನು ಆ ಸಲ ಕಳುಹಿಸಿದ. ವೆಂಕಟೇಶನಾಗಲೀ ಶಾಂತನಾಗಲೀ ರಾಮಚಂದ್ರನ ಆಹ್ವಾನ ಸ್ವೀಕರಿಸಲಿಲ್ಲ. ವೆಂಕಟೇಶನ 'ದುರಹಂಕಾರ' ಕಂಡು ರಾಮಚಂದ್ರ ಕೆರಳಿದ. ಆದರೆ ಅದನ್ನು ಪ್ರದರ್ಶಿಸುವುದಕ್ಕೆ ಮಾರ್ಗವಿರಲಿಲ್ಲ.

ಗೋಪಾಲ ಡಿಗ್ರಿ ಪರೀಕ್ಷೆಯನ್ನು ಮುಗಿಸಿಕೊಂಡು ಊರಿಗೆ ಬಂದ. ತನ್ನ ಮನೆಯಲ್ಲಿ ಆಗಿದ್ದ ಮಾರ್ಪಾಟುಗಳನ್ನು ಕಂಡು ಅವನಿಗೆ ಆಶ್ಚರ್ಯ ವಾಯಿತು. ತನ್ನ ಅತ್ತಿಗೆಯ 'ಅವತಾರ'ವನ್ನು ಕಂಡಮೇಲಂತೂ ನೆಲಕ್ಕೆ ಕುಸಿದೇ ಹೋದ. ತನ್ನ ವೇಳೆಯನ್ನೆಲ್ಲಾ ವೆಂಕಟೇಶನ ಮನೆಯಲ್ಲಿಯೇ

ಕಳೆಯಲು ಮೊದಲುಮಾಡಿದ.

ಶಾಂತನೇ ಒಂದು ದಿವಸ

"ನೀನು ಯಾವಾಗಲೂ ಇಲ್ಲೇ ಇದ್ದರೆ ನಿಮ್ಮಣ್ಣ ಅತ್ತಿಗೆ ಏನನ್ನು ತ್ತಾರೋ, ಗೋಪೀ?"

"ಏನು ಬೇಕಾದರೂ ಅಂದುಕೊಳ್ಳಲಿ ಬಿಡು, ಶಾಂತಕ್ಕ. ಅವರ ಅವತಾರ, ನಡತೆ ಒಂದೂ ಸರಿಬೀಳಲ್ಲಮ್ಮ ನನಗೆ."

"ಹಾಗನ್ನಬಾರದಪ್ಪಾ, ಗೋಪಿ. ಎಷ್ಟಾದರೂ ರಾಮಣ್ಣ ನಿನಗೆ ಅಣ್ಣ ಅಲ್ಲವೇನೋ?"

"ಲಚ್ಚಣ್ಣ ಮನೆಬಿಟ್ಟು ಹೋದಮೇಲೆ ಆ ಅಣ್ಣ–ತಮ್ಮ ಭಾವನೆಯೆಲ್ಲಾ ಅವನ ಹಿಂದೇನೇ ಹೋಗಿಬಿಟ್ಟಿತು. ಮನುಷ್ಯರ ಸಂಬಂಧ ಇಟ್ಟುಕೊಳ್ಳ ಬಹುದು, ಆದರೆ ಇವರ ಸಂಬಂಧ ಹೇಗೆ ಸಾಧ್ಯ? ಯಾರೋ ಮುಖಕ್ಕೆ ಪೌಡರ್ ಬಳಿದುಕೊಂಡರು, ನಮ್ಮ ಅತ್ತಿಗೆಯೂ ಬಳಿದುಕೊಂಡಳು; ಯಾರೋ ಹಿಮ್ಮಡಿಯೆತ್ತರದ ಷೂ ಹಾಕಿಕೊಂಡರು, ನಮ್ಮ ಅತ್ತಿಗೆಯೂ ಹಾಕಿಕೊಂಡಳು. ಯಾರು ಏನೇ ಮಾಡಲಿ, ತಾವೂ ಮಾಡಿಬಿಡಬೇಕು. ನಾಳೆ ಆ ಚೀಣೀ ಆಟಗಾರ ಕಾಲು ಮೇಲಕ್ಕೆ ಮಾಡಿ ಕೈಯಲ್ಲಿ ನಡೆಯುವು ದನ್ನು ನಮ್ಮ ಅಣ್ಣ–ಅತ್ತಿಗೆ ನೋಡಿದರೆ ಇವರೂ ಅದನ್ನು ಆರಂಭಿಸಿಬಿಡು ತ್ತಾರೆಯೋ ಏನೋ?"

"ಅವರ ವಿಚಾರದಲ್ಲಿ ನೀನು ಬಹಳ ಕಠಿಣ ..."

"ಕಠಿಣ ಅಲ್ಲ, ಶಾಂತಕ್ಕ. ಸ್ವಬುದ್ಧಿ ಸ್ವಲ್ಪವೂ ಬೇಡವೇ ಅಂತ ಕೇಳಿದೆ ಅಷ್ಟೆ. ಮೊನ್ನೆ ಭಿಕ್ಷಕ್ಕೆ ಒಬ್ಬ—Little Sister of the Poor–ಪಾದ್ರಿ ಹೆಂಗಸು ಬಂದಿದ್ದಳು. ಅವಳ ಹತ್ತಿರ ನಮ್ಮ ಅತ್ತಿಗೆ ಇಂಗ್ಲಿಷಿನಲ್ಲಿ ಚರ್ಚೆ ಶುರುಮಾಡಿಬಿಟ್ಟಳು. ನೋಡಬೇಕಾಗಿತ್ತು! ಪಾದ್ರಿಗೆ ಕನ್ನಡ ಬರುತ್ತಿತ್ತು. ಅವಳು ಇಂಗ್ಲಿಷು ಕೇಳಲಾರದೆ ಕನ್ನಡದಲ್ಲಿ ಆರಂಭಿಸಿದಳು. ನಮ್ಮ ಅತ್ತಿಗೆ ಇಂಗ್ಲಿಷೇ ಹೊಡೆದಳು. ಕೃತ್ರಿಮ ಜನ—ಕೃತ್ರಿಮ ನಡೆವಳಿಕೆ."

"ಹಾಗಾದರೆ ಕಲಿತ ಇಂಗ್ಲಿಷಿನಲ್ಲಿ ಮಾತನಾಡುವುದೇ ತಪ್ಪೆ?"

"ತಪ್ಪಲ್ಲ, ಶಾಂತಕ್ಕ. ಎಲ್ಲಾದಕ್ಕೂ ಒಂದು ಮಿತಿಯಿದೆ. ಆ ಪಾದ್ರಿ ಹೆಂಗಸು ಬಂದಿದ್ದದ್ದು ಭಿಕ್ಷಕ್ಕೆ. ಅವರ ಮುಂದೇಕೆ ಇವರ ಭಾಷಾಪ್ರದರ್ಶನ. ಏನಾದರೂ ಕೊಡುವ ಹಾಗಿದ್ದರೆ ಕೊಟ್ಟು ಸಾಗಿಸಬೇಕು. ಪೌಡರ್, ಷೂ, ಇಂಗ್ಲಿಷ್ ಬಂದುಬಿಟ್ಟರೆ ಸಂಸ್ಕಾರವಾದ ಹಾಗಾಯಿತೆ? ಮನೆಯಲ್ಲಿ ನಿನಗೆ, ಭಾವನಿಗೆ, ಜಯನಿಗೆ, ಲಚ್ಚಣ್ಣನಿಗೆ ಮಾಡಿದ್ದನ್ನು ಎಷ್ಟು ಪೌಡರ್ ಹಾಕಿ

ದರೆ ಮುಚ್ಚುತ್ತದೆ?"

"ಹೋಗಲಿ ಬಿಡಪ್ಪಾ, ಅವೆಲ್ಲಾ ಜ್ಞಾಪಿಸಬೇಡ. ಲಚ್ಚಣ್ಣನ ಸುದ್ದಿ ಸಮಾಚಾರವೇನಾದರೂ ತಿಳೀತೇನೋ, ಗೋಪೀ?"

"ಏನೂ ತಿಳಿದಿಲ್ಲಮ್ಮ. ಜೀವಂತನಾಗಿದ್ದಾನೆ ಎಂದು ತಿಳಿದುಬಿಟ್ಟರೆ ಸಾಕು. ಎಲ್ಲಿದ್ದಾನೋ—ಏನು ಮಾಡುತ್ತಾ ಇದ್ದಾನೋ? ಅವನ ವಿದ್ಯೆ ಅವನನ್ನು ಕಾಪಾಡಬೇಕು."

"ಅದನ್ನೂ ಬಿಟ್ಟುಬಿಟ್ಟ ಎಂದು ಕಾಣುತ್ತದಪ್ಪಾ. ಇಲ್ಲಿಂದ ಹೊರಟು ಹೋಗುವ ಮುಂಚೆ ತಂಬೂರಿ ತರಿಸಿಕೊಂಡು ಅದರ ತಂತಿಯನ್ನೆಲ್ಲಾ ಕಿತ್ತು ಹೊರಟುಹೋದ. ನಾನು ತಂಬೂರಿಯನ್ನು ಹಾಗೇ ತೆಗೆದು ಇಟ್ಟಿದ್ದೀನಿ."

"ಒಳ್ಳೆಯ ಕೆಲಸ ಮಾಡಿದೆ. ಅದಕ್ಕೆ ತಂತಿ ಹಾಕಿಸಿ ಇಟ್ಟಿರೋಣ. ಮಹಾರಾಯ ಎಂದು ಬರುತ್ತಾನೋ, ಬಂದು ತೆಗೆದುಕೊಳ್ಳಲಿ."

"ಬರುತ್ತಾನೆ ಎನ್ನುವ ನಂಬಿಕೆ ನಿನಗಿದೆಯೋ?"

"ಇದೆಯಮ್ಮಾ. ನನ್ನ ತಪಸ್ಸು ಮುಗಿದಿಲ್ಲ ಎಂದು ಹೇಳುತ್ತಾ ಇದ್ದ. ತಪಸ್ಸನ್ನು ಧಾರೆಯೆರೆಯುವ ತನಕ ಅದರ ಸಿದ್ಧಿ ದೊರೆಯುವುದಿಲ್ಲ ಎಂದು ನಾನು ಹೇಳಿದೆ. 'ಧಾರೆಯೆರೆಯುವ ಮೊದಲು ಬಂಡವಾಳ ಸಂಪಾದಿಸಿ ಕೊಳ್ಳುತ್ತೇನಪ್ಪಾ. ಬರಿಯ ಕೈಯಲ್ಲೇ ಮೊಳ ಹಾಕಲೇ' ಎಂದು ಹೇಳಿದ್ದ. ಈಗ ಸಂಪಾದನೆಯಲ್ಲಿದ್ದಾನೆ ಎಂದು ಕಾಣುತ್ತದೆ."

ಸಂತೋಷದಿಂದ ಶಾಂತನ ಕಣ್ಣುಗಳಲ್ಲಿ ಹನಿಗಳು ತುಂಬಿದವು.

"ಯಾವಾಗಲಾದರೂ ಬರಲಪ್ಪಾ, ಚೆನ್ನಾಗಿದ್ದರೆ ಸಾಕು"

ಎಂದು ಹೇಳಿದಳು. ತಕ್ಷಣವೇ ಏನನ್ನೋ ಜ್ಞಾಪಿಸಿಕೊಂಡು

"ಗೋಪಣ್ಣಾ, ನಿನ್ನ ಕತೆಗಳನ್ನೆಲ್ಲಾ ಸೇರಿಸಿ ಪುಸ್ತಕ ಮಾಡುತ್ತೇನೆ ಎಂದು ಹೇಳಿದ್ದೆಯಲ್ಲಾ, ಏನಾಯಿತು?"

ಎಂದು ಕೇಳಿದಳು. ಗೋಪಾಲ ಜೇಬಿನಿಂದ ಒಂದು ಪುಸ್ತಕ ತೆಗೆದು ಅವಳ ಕೈಗೆ ಕೊಟ್ಟ. ಶಾಂತಾ ಗಟ್ಟಿಯಾಗಿ ಓದಿದಳು.

"ಹಂಬಲ" (ಹತ್ತು ಸಣ್ಣ ಕತೆಗಳು)

ಲೇಖಕ: **ಹೊ. ಶ್ರೀ. ಗೋಪಾಲರಾಯ**

"ಎಂತಹ ಸುಳ್ಳುಗಾರನೋ ನೀನು, ಗೋಪಣ್ಣ! ನನಗೆ ಹೇಳಲೇಬೇಡವೆ? ಕಥೆ ಬರೆದೂ ಬರೆದೂ ಸುಳ್ಳು ಹೇಳುವ ಪಾಠ ನಿನಗೆ ಚೆನ್ನಾಗಿ ಬಂದಿವೆ ಯೆಂದು ಕಾಣುತ್ತದೆ."

"ಇಲ್ಲಮ್ಮಾ. ಪುಸ್ತಕ ಬರುತ್ತದಲ್ಲಾ ಆಗ ಕೈಗೆ ಪ್ರತಿ ಕೊಟ್ಟು ಹೇಳೋಣಾಂತಿದ್ದೆ."

ವೆಂಕಟೇಶಯ್ಯನ ಕಾರಿನ ಧ್ವನಿಯಾಯಿತು ಅವನೇ ಒಳಗೆ ಬಂದ. ಶಾಂತಾ ತನ್ನ ಉತ್ಸಾಹವನ್ನು ತಡೆಯಲಾರದೆ ಪುಸ್ತಕವನ್ನು ಗಂಡನಿಗೆ ತೋರಿಸುತ್ತಾ "ನೋಡಿದಿರಾಂಪ್ರೆ? ಗೋಪಣ್ಣನ ಪುಸ್ತಕ !" ಎಂದಳು.

ವೆಂಕಟೇಶಯ್ಯ ಬಟ್ಟೆಯನ್ನು ತೆಗೆಯದೆ ಕುಳಿತು ಪುಸ್ತಕವನ್ನು ತಿರುವಿ ಹಾಕಿದ.

"ಬಹಳ ಸಂತೋಷ. ಗೋಪಿ, ಹೀಗೆ ನೂರಾರು ಬರಲಪ್ಪ."

"ನಿನ್ನ ಆಶೀರ್ವಾದ, ಭಾವಯ್ಯ."

"ನಾನೂ ಹೊತ್ತಿಗೆ ಸರಿಯಾಗಿ ಬಂದ ಹಾಗಾಯಿತು. ನಿನ್ನ ಹತ್ತಿರ ಸ್ವಲ್ಪ ಮಾತನಾಡುವುದಿತ್ತು. ಶಾಂತಾ, ಕಲಸಿ ಸ್ವಲ್ಪ ಅನ್ನ ತಂದುಬಿಡು. ಇಲ್ಲೇ ಕುಳಿತುಕೊಂಡು ಗೋಪಣ್ಣನ ಕೈಲಿ ಮಾತನಾಡುತ್ತ ಇರುತ್ತೇನೆ. ನೀನೂ ಇಲ್ಲೇ ಊಟಮಾಡು, ಗೋಪೀ."

"ಬೇಡಪ್ಪಾ. ಮನೆಯಲ್ಲಿ ರಾದ್ಧಾಂತವಾಗಿಬಿಡತ್ತೆ."

"ಹಾಗಾದರೆ ಒಂದು ಕಪ್ ಟೀ ಮಾಡಿ ತಂದುಕೊಡು."

ಶಾಂತಾ ಅನ್ನ ಕಲಸಿ ತಂದು ವೆಂಕಟೇಶಯ್ಯನ ಕೈಗಿತ್ತಳು. ಅವನು ಊಟಮಾಡುತ್ತಿರುವಂತೆ ಗೋಪಾಲನಿಗೆ ಟೀಯೂ ಬಂತು.

"ಮುಂದೆ ಏನು ಮಾಡಬೇಕೂಂತಿದ್ದೀ, ಗೋಪಣ್ಣ ?"

ಎಂದು ವೆಂಕಟೇಶಯ್ಯ ಕೇಳಿದ.

"ಈ ವರ್ಷ ಪಾಸಾಗತ್ತೆ ಎಂದು ಕಾಣತ್ತೆ. ಮುಂದೆ ನಾನು ಎಂ.ಎ.ಗೆ ಹೋಗೋಣಾಂತಿದ್ದೇನೆ."

"ಆಮೇಲೆ ?"

"ಲಾಟರಿ ! ಕೆಲಸ ಹುಡುಕುವುದು."

"ಯಾವ ತರಹ ಕೆಲಸ ?"

"ಸಾಹಿತ್ಯ ಸಂಬಂಧವಾದದ್ದಾದರೆ ನನಗೆ ಸಂತೋಷಾಪ್ಪ. ಗ್ರಂಥಕರ್ತ ನಾಗಿಯೇ ಇರೋಣವೆಂದರೆ ಮೂರು ಕಾಸೂ ಸಂಪಾದನೆಯಾಗಲ್ಲ."

"ಏಕೆ ನಿನ್ನ 'ಹಂಬಲ'ಕ್ಕೆ ಏನೂ ಬರಲಿಲ್ಲವೇ ?"

"ಬಂತು ೫೦ ಪ್ರತಿಗಳು. ಪ್ರಕಾಶಕರಿಗೆ ಮುದ್ರಣ ವೆಚ್ಚವಾದರೂ ಹುಟ್ಟ ಬೇಕೋ ಇಲ್ಲವೋ ? ಅವರಾದರೂ ಹಣ ಎಲ್ಲಿಂದ ತರುತ್ತಾರೆ ?"

"ಹಾಗಾದರೆ 'ಜರ್ನಲಿಸಂ'ಗೆ (Journalism) ಏತಕ್ಕೆ ಹೋಗಬಾರದು?"

“ಸರಿಯಾದ ಪೇಪರಿದ್ದರೆ ಆಗಬಹುದು. ಆ ತರಹ ಕೆಲಸ ಮಾಡಬೇಕೆಂದು ನನಗೂ ಆಸೆಯಿದೆ.”

“ಹಾಗಾದರೆ ಕೇಳು. ನಿನಗೆ ಒಂದು ಸಮಾಚಾರ ಹೇಳುತ್ತೇನೆ. ಅನಂತ ರಾಯರ ‘ವೀರಕರ್ಣಾಟಕ’ ಗೊತ್ತೋ?”

“ಗೊತ್ತು.”

“ರಾಯರಿಗೆ ಹಿಂದೆ ನಾನು. ಅಲ್ಪಸ್ವಲ್ಪ ಹಣ ಕೊಟ್ಟಿದ್ದೆ. ಅದೆಲ್ಲಾ ಸೇರಿ ಐದು ಸಾವಿರದ ತನಕ ಆಗಿದೆ.”

“ಅವರು ತೀರಿಸೋ ಬಗೆ ಹೇಗೆ?”

“ಅದೇ ಬಂದಿರೋದು. ಇನ್ನು ಎರಡು ಸಾವಿರ ಕೊಟ್ಟರೆ ಪೇಪರು, ಪ್ರೆಸ್ಸು ಎಲ್ಲಾ ನನಗೆ ಕ್ರಯಕ್ಕೆ ಬರೆದುಕೊಡೋದಿಕ್ಕೆ ಸಿದ್ಧವಾಗಿದ್ದಾರೆ. ಅವರು ಹಣ ಕೊಡಲಿಲ್ಲ, ನಾನು ತೆಗೆದುಕೊಳ್ಳಲಿಲ್ಲ. ಕೊಟ್ಟ ಹಣ ಹೋಗುವುದಲ್ಲಾ ಎಂಬ ವ್ಯಥೆಗೆ ಈಗ ಇನ್ನೂ ಎರಡು ಸಾವಿರ ತೆತ್ತು ಪೇಪರ್ ಕಟ್ಟಿಕೊಳ್ಳಬೇಕಾಗಿದೆ.”

“ನೀನು ಏನು ಯೋಚನೆ ಮಾಡಿದ್ದೀ?”

“ನೀನೇನಾದರೂ ಪತ್ರಿಕೆ ನಡೆಸುವ ಹಾಗಿದ್ದರೆ ಇನ್ನು ಎರಡು ಸಾವಿರ ತೆತ್ತು ಕಟ್ಟಿಕೊಳ್ಳುತ್ತೇನೆ.”

“ಎಂ.ಎ.ಗೆ ಹೋಗಬೇಕೂಂತ ಇದ್ದೀನಲ್ಲಾ?”

“ಹೋಗಿ ಬಾ. ಅಲ್ಲಿಯ ತನಕ ಯಾರನ್ನಾದರೂ ಇಟ್ಟು ನಾನು ನಡೆಸುತ್ತಿರುತ್ತೇನೆ. ನೀನು ಆಗಿಂದಾಗ್ಗೆ ಲೇಖನಗಳನ್ನು ಬರೆಯುತ್ತಿರು. ಪರೀಕ್ಷೆ ಮುಗಿಸಿ ಬಂದು ಸಂಪಾದಕನ ಕೆಲಸ ವಹಿಸಿಕೋ.”

“ಆಗಬಹುದು. ಈ ಅನಂತರಾಯರು ನಿನಗೆ ಹೇಗೆ ಗೊತ್ತಾದರು, ಭಾವಾ?”

“ಅವರ ಪೇಪರಿನಲ್ಲಿ ನಮ್ಮ ಕಂಪೆನಿ ಜಾಹೀರಾತುಗಳನ್ನು ಹಾಕಿಸುತ್ತಾ ಇದ್ದೆ. ಹೋಗುತ್ತಾ ಬರುತ್ತಾ ಸ್ನೇಹವಾಯಿತು. ಅವರ ತೊಂದರೆ ತಾಪತ್ರಯವೆಲ್ಲಾ ನೋಡುತ್ತ ಸುಮ್ಮನಿರುವುದಕ್ಕಾಗುತ್ತದೆಯೇ? ಹಣ ಕೊಟ್ಟೆ.”

“ಇವರ ವ್ಯವಹಾರವೆಲ್ಲಾ ಹೀಗೇಪ್ಪ, ಗೋಪೀ. ಕೈಯಲ್ಲಿ ಕಾಸಿದ್ದರಾಯಿತು. ಯಾರು ಕೇಳಿದರೆ ಅವರಿಗೇ! ಮಹಾರಾಯರು ಧರ್ಮರಾಯರು!”

ಎಂದು ಶಾಂತಾ ಗಂಡನ ಗುಣವಿಮರ್ಶೆ ಮಾಡಿದಳು.

“ಪೇಪರಿನಲ್ಲಿ ಬರುತ್ತಾ ಇದೆಯಲ್ಲಾ ಮ್ಯಾಜಿಸ್ಟ್ರೇಟ್—ಅವನು ಯಾರು, ಭಾವಾ?”

"ಯಾವ ವಿಚಾರ ?"

"ಯಾವನೋ ಒಬ್ಬ ಗುಮಾಸ್ತೆಯನ್ನು ಹೀನಾಮಾನಾ ಬೈದನಂತೆ. ಅವನು ಕೋರ್ಟಿನಲ್ಲೇ ವ್ಯಾಜ್ಯಕ್ಕೆ ನಿಂತನಂತೆ. ಮ್ಯಾಜಿಸ್ಟ್ರೇಟ್ ಸಾಹೇಬರು ಅವನಿಗೆ ದಮ್ಮಯ್ಯಗುಡ್ಡೆ ಹಾಕಿ ಪಾರಾದರಂತೆ. ವೀರಕರ್ಣಾಟಕ-ತಾಯಿನಾಡು-ವಿಶ್ವಕರ್ಣಾಟಕ ಎಲ್ಲದರಲ್ಲಿಯೂ ಬಂದಿತ್ತು ಈ ಸುದ್ದಿ."

"ಯಾರೋಪ್ಪ, ನನಗೆ ಗೊತ್ತಿಲ್ಲ. ಈ ಪೇಪರು ನಾನು ತೆಗೆದುಕೊಂಡಿರುವ ವಿಷಯ ಇನ್ನು ಕೆಲವು ದಿವಸ ಗೋಪ್ಯವಾಗಿರಲಿ, ಗೋಪಣ್ಣ."

"ಹಾಗೇ ಆಗಲಿ."

ಗೋಪಾಲ ಹೊತ್ತಾಯಿತೆಂದು ಎದ್ದು ಹೋಗಲು ಶಾಂತಾ

"ಯಾರೂಂದ್ರೆ ಆ ಮ್ಯಾಜಿಸ್ಟ್ರೇಟ್ ?"

"ಯಾರೋ, ನನಗೇನು ಗೊತ್ತೇ ?"

"ಪೇಪರ್ ನಿಮ್ಮದು, ನಿಮಗೆ ಗೊತ್ತಿಲ್ಲವೇ ? ಹೇಳೀಂದ್ರೆ, ಪರವಾಯಿಲ್ಲ."

"ಯಾರೂ ಅಲ್ಲ—ಖಾಸಾ ನಿಮ್ಮಣ್ಣ —ರಾಮಚಂದ್ರರಾಯ !"

"ನಾನೂ ಅದನ್ನು ಊಹಿಸಿಯೇ ಕೇಳಿದೆ. ನೀವು ಏತಕ್ಕೆ ಹಾಕಿದಿರಿ ಅಂದ್ರೆ."

"ಪೇಪರಿನಲ್ಲಿ ಎಲ್ಲಾ ವಿಷಯವೂ ಬರಬೇಕು. ಮಿಕ್ಕ ಪೇಪರಿನವರು ಹಾಕುವಾಗ ನಾವು ಬಿಡುವುದಕ್ಕಾಗುತ್ತದೆಯೇ? ನಮ್ಮ ಸುದ್ದಿಗಾರ ನೋಡಿದ್ದು ಬರೆದಿದ್ದಾನೆ. ರಾಯರು ಕೋರ್ಟನ್ನೂ ಮನೆ ಎಂದು ತಿಳಿದು ಕೊಂಡುಬಿಟ್ಟರು."

"ನಿಮ್ಮ ದಮ್ಮಯ್ಯ, ಅಂತಹವುಗಳನ್ನು ಪ್ರಕಟಿಸಬೇಡೀಂದ್ರೆ, ಎಲ್ಲಾದರೂ ಕೆಲಸದ ಬಾಯಿಗೆ ಮಣ್ಣುಬಿದ್ದೀತು !"

"ಬೀಳಲಿ ಬಿಡು. ಬಡವರು ಬದುಕಿಕೊಳ್ಳುತ್ತಾರೆ. ನೋಡು ಶಾಂತಾ, ನಾನು ಸುಳ್ಳು ಸುದ್ದಿ ಹಾಕಿಸಲಿಲ್ಲ. ನಿಜವಾದ ಸುದ್ದಿ ಬಂದರೆ ಖಂಡಿತ ಹಾಕಿಸುತ್ತೇನೆ."

"ನಿಮ್ಮ ಇಷ್ಟ"

ಎಂದು ಹೇಳಿದಳು. ಮನಸ್ಸಿನಲ್ಲಿ ತುಂಬ ಅಸಮಾಧಾನ.

ರಾಮಚಂದ್ರನಿಗೂ ಮನಸ್ಸಿನಲ್ಲಿ ಸಮಾಧಾನವಿರಲಿಲ್ಲ. ಕೋರ್ಟಿನಲ್ಲಿ ನಡೆದ ಘಟನೆ ತುಂಬ ಅವಮಾನಕ್ಕೆ ಕಾರಣವಾಗಿತ್ತು. ಸಾಲದುದಕ್ಕೆ ಹಾಳು ಪೇಪರುಗಳು ಸುದ್ದಿಯನ್ನು ಊರಿನಲ್ಲೆಲ್ಲಾ ಹರಡಿದ್ದವು. ರಾಮಚಂದ್ರನ ಕ್ಲಬ್ಬಿನಲ್ಲಿಯೂ ಅದೇ ಮಾತುಕತೆ; ಪದ್ಮನ ಕ್ಲಬ್ಬಿನಲ್ಲಂತೂ ಅದು ಬಿಟ್ಟು

ಬೇರೆ ಮಾತೇ ಇಲ್ಲ.

'ದಯಮಾಡಿ ನನ್ನನ್ನು ಇಲ್ಲಿಂದ ವರ್ಗಾಯಿಸಬೇಕು' ಎಂದು ರಾಮ ಚಂದ್ರ ಸರ್ಕಾರದವರನ್ನು ಪ್ರಾರ್ಥಿಸಿದ. ಮೈಸೂರಿಗೆ ವರ್ಗವೂ ಸಿಕ್ಕಿತು. ರಾಮಚಂದ್ರ 'ಬದುಕಿದೆ ಬಡಜೀವವೇ' ಎಂದುಕೊಂಡ. ಜತೆಗೆ ಸ್ವಲ್ಪ ಸಂತೋಷವೂ ಆಯಿತು. ಗೋಪಾಲನಿಗೆ ಕಳುಹಿಸುತ್ತಿದ್ದ ಹಾಸ್ಟೆಲ್ ಖರ್ಚು ಮಿಕ್ಕಿತಲ್ಲಾ ಎಂದು. ಹಾಸ್ಟೆಲ್ ವಾಸಕ್ಕೂ ತನ್ನ ಸ್ವಾತಂತ್ರ್ಯಕ್ಕೂ ಭಂಗ ಬಂದಿತಲ್ಲಾ ಎಂದು ಗೋಪಾಲ ವ್ಯಥೆಪಟ್ಟುಕೊಂಡ. ಆದರೆ ಎಂ.ಎ. ಮಾಡುವ ಗುರಿಯೊಂದು ಕಣ್ಣ ಮುಂದೆ ಇದ್ದುದರಿಂದ ಮನೆಯ ಕಿರುಕುಳ ಮರೆಯುತ್ತಿದ್ದ. ಬೆಂಗಳೂರು ಜೀವನ, ಕ್ಲಬ್ಬು, ಗೆಳತಿಯರು ಎಲ್ಲಾ ತಪ್ಪಿ ಹೋಯಿತಲ್ಲಾ ಎಂದು ಪದ್ಮ ಬಹಳ ದುಃಖಪಟ್ಟಳು. ಮೈಸೂರಿನಲ್ಲಿಯೂ ಕ್ಲಬ್ಬು ಇರುವುದನ್ನರಿತು ಅಲ್ಲಿಯೂ ಗೆಳತಿಯರು ದೊರೆಯುವರು ಎಂದು ಸ್ವಲ್ಪ ಸಮಾಧಾನಪಟ್ಟುಕೊಂಡಳು.

೨೪

ಲಕ್ಷ್ಮಣನಿದ್ದ ಸ್ಥಿತಿಯಲ್ಲಿ ಯಾರೂ ಅವನನ್ನು ಗುರುತಿಸುವಂತಿರಲಿಲ್ಲ. ಗುಳಿ ಬಿದ್ದ ಕಣ್ಣುಗಳು, ಅರ್ಧ ನರೆತ ತಲೆ, ಒಣಗಿ ಎಲುಬಿನ ಗೂಡಿ ನಂತಿದ್ದ ಮೈ, ಕೊಳಕಿನ ಮುದ್ದೆಯಾಗಿದ್ದ ಬಟ್ಟೆ—ಇದೇ ಲಕ್ಷ್ಮಣ ಎಂದು ಯಾರೂ ನಂಬುವಂತಿರಲಿಲ್ಲ. ರೈಲು ಸಿಕ್ಕಿದಲ್ಲಿ ಹತ್ತುವನು. ಮನಸ್ಸು ಬಂದಾಗ ಇಳಿದುಬಿಡುವನು. ಬಸ್ಸು ಸಿಕ್ಕಿದರೆ ಹತ್ತುವನು. ಬೇಡವೆನಿಸಿದಾಗ ಇಳಿದುಬಿಡುವನು. ಎಲ್ಲಿಗೆ ಹೋಗಬೇಕೆಂಬ ನಿಶ್ಚಯವಿಲ್ಲ, ಗುರಿಯಿಲ್ಲ. ಇಂದಿದ್ದ ಊರು ನಾಳೆಯಿಲ್ಲ, ನಾಳೆಯಿದ್ದದ್ದು ನಾಳಿದ್ದಿಲ್ಲ. ನಿಂತಲ್ಲಿ ನಿಲ್ಲು ತ್ತಿರಲಿಲ್ಲ, ಕುಳಿತಲ್ಲಿ ಕೂಡುತ್ತಿರಲಿಲ್ಲ. ಯಾರಾದರೂ ತನ್ನನ್ನು ನೋಡಿದರೆ ಒಂದೇ ಸಮನೆ ಅವರಿಂದ ಓಡುವನು. ಯಾರಾದರೂ ಕೃಪೆಯಿಟ್ಟು ನೀಡಿ ದಂದು ಆಹಾರ, ನೀಡದಂದು ನಿರಾಹಾರ. ನೋಡಿದವರೆಲ್ಲಾ 'ಹುಚ್ಚ, ಹುಚ್ಚ!' ಎಂದು ಹಾಸ್ಯ ಮಾಡುತ್ತಿದ್ದರು. ತಾನೇ ತನ್ನ ರೂಪವನ್ನು ಹೊಟೇಲಿನ ಬಾಗಿಲಲ್ಲಿ ಕಟ್ಟಿದ್ದ ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ

"ಹುಚ್ಚ-ಹುಚ್ಚ !"

ಎಂದು ನಕ್ಕುಬಿಟ್ಟಿದ್ದ. ಒಂದೊಂದು ಸಲ ತಾನು ಕನ್ನಡಿಯಲ್ಲಿ ನೋಡಿದ ವ್ಯಕ್ತಿ ಬೇರೆ, ತಾನು ಬೇರೆ ಎಂದುಕೊಳ್ಳುವನು ಕನ್ನಡಿಯಲ್ಲಿದ್ದ ವ್ಯಕ್ತಿಯ —ಹುಚ್ಚ ಮನುಷ್ಯನ—ರೂಪವನ್ನು ನೆನೆದು ತನ್ನಷ್ಟಕ್ಕೇ ನಗುವನು. ತಲೆ

ಯಲ್ಲಿ ಏನೋ ಶಬ್ದ. ಒಂದೊಂದು ಸಲ ಹಳೆಯ ನೆನಪುಗಳು ಬರುತ್ತಿದ್ದವು. ಅವು ಅಪೂರ್ಣವಾಗಿ ನಿಲ್ಲುತ್ತಿದ್ದವು. ಒಂದೆರಡು ಸಲ ಪೋಲೀಸಿನವರ ಕೈಗೆ ಸಿಕ್ಕಿಬಿದ್ದಿದ್ದಾಗ ತನ್ನ ಗುರುತನ್ನು ಹೇಳಲಾರದೆ ಹೋಗಿದ್ದ. ಹುಚ್ಚನೆಂದು ನಾಲ್ಕು ಛಡಿ ಹೊಡೆದು ಅವರು ಆಚೆಗೆ ಅಟ್ಟಿಬಿಟ್ಟಿದ್ದರು. ಹುಡುಗರು ಹೋದಲ್ಲಿ ಅಟ್ಟಿಸಿಕೊಂಡು ಬಂದು ಕಲ್ಲು ಬೀರುತ್ತಿದ್ದರು.

'ನಾನೇ ಹುಚ್ಚ! ಕನ್ನಡಿಯಲ್ಲಿದ್ದವನು ಜಾಣ!'

ಎಂದು ನಿರ್ಧರಿಸಿಕೊಂಡ. ಈ ಹುಚ್ಚಲೆದಾಟ ಲಕ್ಷ್ಮಣನನ್ನು ಮದರಾಸಿಗೆ ಕರೆದುಕೊಂಡು ಬಂದಿತ್ತು. ತಿರುವಳ್ಳಿಕೇಣಿಯಲ್ಲಿ ಬರುತ್ತಿರುವಾಗ ಒಂದು ಜನಸಂದಣಿಯನ್ನು ಕಂಡ. ಕುತೂಹಲದಿಂದ ತಾನೂ ಬಂದು ನಿಂತ. ಮದುವೆಯ ಮನೆ, ಒಳಗೆ ಸಂಗೀತ ಕಛೇರಿ ನಡೆಯುತ್ತಿತ್ತು. ಬೀದಿಯ ಜನ ಹೊರಗೆ ಸಂಗೀತ ಶ್ರವಣಮಾಡುತ್ತ ನಿಂತಿತ್ತು. ಜಾಗ ಬಿಡಿಸಿಕೊಂಡು ಲಕ್ಷ್ಮಣನೂ ಸಂಗೀತವನ್ನು ಕೇಳುತ್ತ ನಿಂತ. ಭಾಗವತರು ತೋಡಿಯ ಆಲಾಪನೆಗೆ ತೊಡಗಿದರು. ಲಕ್ಷ್ಮಣನ ಎದೆ ಡವಡವನೆ ಹೊಡೆದುಕೊಳ್ಳ ಲಾರಂಭಿಸಿತು. ತಲೆಯಲ್ಲಿ ತುಂಬಿದ್ದ ಮಂಕು ಸ್ವಲ್ಪ ಸ್ವಲ್ಪ ಹರಿಯತೊಡ ಗಿತ್ತು. ಆಲಾಪನೆ ಮುಗಿಯಿತು, ಲಕ್ಷ್ಮಣ ಸ್ಮೃತಿ ತಪ್ಪಿ ಬಿದ್ದುಬಿಟ್ಟ. ಮದುವೆಯ ಮನೆಯವರು ಲಕ್ಷ್ಮಣನನ್ನು ಆಸ್ಪತ್ರೆಗೆ ಸಾಗಿಸಿದರು.

ತಲೆಯ ಮೇಲಾಗಿದ್ದ ಗಾಯ ಮಾಗುತ್ತಿತ್ತು. ಲಕ್ಷ್ಮಣನಿಗೆ ಎಲ್ಲವೂ ಜ್ಞಾಪಕಕ್ಕೆ ಬರಲಾರಂಭವಾಯಿತು. ತನ್ನ ಬಾಳು, ತನ್ನ ಆಸೆ, ತನ್ನ ಸ್ಥಿತಿ ಎಲ್ಲವನ್ನೂ ನೆನೆದು ಗೊಳೋ ಎಂದು ಅತ್ತ. ಜಯನ ರೂಪ ಎದುರಿಗೆ ಬಂದು ನಿಂತಿತು—

'ನೀವು ಸೋತಿರಿ.'

'ಇಲ್ಲಾ, ಜಯಾ.'

'ನನಗೆ ಮೋಸಮಾಡಿದಿರಿ.'

'ಇಲ್ಲಾ ಜಯಾ, ಖಂಡಿತವಾಗಿಯೂ ಇಲ್ಲ.'

'ಕಲಾವಿದರಾಗಬೇಕೆಂಬ ನಿಮ್ಮ ಆಸೆ ಎಲ್ಲಿ ಹೋಯಿತು?'

'ನಿನ್ನ ಹಿಂದೆ ಹೋಯಿತು.'

'ನಾನು ಎಲ್ಲಿಗೆ ಹೋದೆ—ನಿಮ್ಮಲ್ಲಿಯೇ ಇರುವೆನಲ್ಲಾ.'

'ಜಯಾ!'

'ನೀವು ಕರ್ತವ್ಯಭ್ರಷ್ಟರಾದಿರಿ. ಗುರಿಯನ್ನು ಮರೆತಿರಿ.'

'ಇಲ್ಲ, ಮರೆತಿಲ್ಲ.'

'ಗುರುಋಣವನ್ನು ತೀರಿಸಲಿಲ್ಲ. ಚನ್ನಪ್ಪನವರಿಗೆ ಏನು ಹೇಳುವಿರಿ? ಅನಂತಾಚಾರ್ಯರಿಗೆ ಏನು ಹೇಳುವಿರಿ?'

'ತೀರಿಸುತ್ತೇನೆ.'

'ಖಂಡಿತವೇ?'

'ಖಂಡಿತ.'

ಜಯನ ರೂಪ ಮತ್ತೆ ಮತ್ತೆ ಎದುರು ನಿಲ್ಲುತ್ತಿತ್ತು. ಸಂಜೆ ಡಾಕ್ಟರು ಬಂದಾಗ ಕೇಳಿದ.

"ಇನ್ನು ಎಷ್ಟು ದಿವಸ ಇರಬೇಕು, ಡಾಕ್ಟರೇ?"

"ಮೂರು ನಾಲ್ಕು ದಿವಸ. ಗುಣವಾಗಿದೆ. ವಿಶ್ರಾಂತಿ ಬೇಕು."

"ಒಂದು ಪ್ರಶ್ನೆ ಕೇಳಲೆ?"

"ಕೇಳಪ್ಪಾ."

"ನನ್ನನ್ನು ತಂಜಾವೂರಿಗೆ ಕಳುಹಿಸಿಕೊಡುತ್ತೀರಾ?"

"ಏತಕ್ಕೆ—ನೀನು ಮೈಸೂರಿನವನ ಹಾಗೆ ಕಾಣುವೆಯಲ್ಲಾ?"

"ನಿಮಗೆ ಹೇಗೆ ಗೊತ್ತಾಯಿತು?"

"ನನ್ನ ಹೆಂಡತಿ ಮೈಸೂರಿನವರು."

"ಹೌದು, ನಾನು ಮೈಸೂರಿನವನೇ. ಆದರೆ ಹೇಳಿಕೊಳ್ಳಲು ಧೈರ್ಯ ವಿಲ್ಲ."

"ತಂಜಾವೂರಿಗೆ ಏತಕ್ಕೆ ಹೋಗಬೇಕು? ಊರಿಗೆ ಹೋಗಬಾರದೇ?"

"ಇಲ್ಲ. ಸದ್ಯಕ್ಕೆ ನಾನು ಊರಿಗೆ ಹೋಗುವ ಹಾಗಿಲ್ಲ. ತಂಜಾವೂರು ಕೃಷ್ಣಯ್ಯರ್‌ರವರು ಚೆನ್ನಾಗಿದ್ದಾರೆಯೇ?"

"ಸೊಗಸಾಗಿದ್ದಾರೆ. ಕಳೆದ ವಾರ ಅಕೆಡೆಮಿಯಲ್ಲಿ ಅವರ ಸಂಗೀತ ಕಛೇರಿ ಕೂಡ ಆಯಿತು."

"ಕಛೇರಿ ಆಯಿತೇ? ಎಂತಹ ನಿರ್ಭಾಗ್ಯ? ಅವರ ದರ್ಶನ ಇಲ್ಲೇ ಸಿಕ್ಕುತ್ತಿತ್ತಲ್ಲಾ!"

"ನೀನು ಅವರಲ್ಲಿ ಸಂಗೀತ ಕಲಿಯುವುದಕ್ಕೆ ಹೋಗುವೆಯಾ?"

"ಹೌದು. ಅದೇ ಉದ್ದೇಶ."

"ಆದರೆ...."

"ಏನು ಹೇಳಿ. ಸಂಕೋಚಪಡಬೇಡಿ."

"ಅವರು ಬಹಳ ದೊಡ್ಡ ವಿದ್ವಾಂಸರು. ಈ ಕಡೆ ಅವರನ್ನು ಸಾಕ್ಷಾತ್ ತ್ಯಾಗರಾಜರ ಅವತಾರ ಎಂದು ಭಾವಿಸುತ್ತಾರೆ. ನೀನು ಈಗೀಗ ಕಲಿಯು

ಪ್ರವಕ್ಕೆ ಆರಂಭಿಸಿ ಅವರಲ್ಲಿ ಹೋದರೆ ಹೇಳಿಕೊಡುತ್ತಾರೆಯೋ ಇಲ್ಲವೋ ಸಂದೇಹ."

"ಇಲ್ಲ. ನನಗೆ ಸ್ವಲ್ಪ ಸಂಗೀತ ಬರುತ್ತದೆ."

"ನಮ್ಮ ಮನೆಯಲ್ಲಿ ಹಾಡುವೆಯಾ ?"

"ಏನು ಪ್ರಯೋಜನ ?"

"ಏನಾದರೂ ಕೊಡುತ್ತೇನೆ."

"ಅಯ್ಯೋ! ಆ ಪ್ರಯೋಜನವಲ್ಲ. ನಾನು ದುಡ್ಡನ್ನು ಅಪೇಕ್ಷಿಸಲಿಲ್ಲ. ನನಗೆ ಗುರುಗಳ ಕಟಾಕ್ಷವನ್ನು ಸಂಪಾದಿಸಿಕೊಡುತ್ತೀರಾ ?"

"ನೋಡು, ನಾನು ಕೃಷ್ಣಯ್ಯರ್‌ರವನ್ನು ಚೆನ್ನಾಗಿ ಬಲ್ಲೆ. ನೀನು ಗುಣವಾದಮೇಲೆ ಒಂದು ದಿವಸ ನಮ್ಮ ಮನೆಯಲ್ಲಿ ಹಾಡು. ನಾನು ಒಪ್ಪಿದಲ್ಲಿ ಭಾಗವತರಿಗೆ ಕಾಗದ ಬರೆದುಕೊಟ್ಟು ನಿನ್ನನ್ನು ಕಳುಹಿಸಿ ಕೊಡುತ್ತೇನೆ."

"ಆಗಬಹುದು. ತುಂಬ ಉಪಕಾರವಾಯಿತು"

ಎಂದ. ಲಕ್ಷ್ಮಣ ಹಾಸಿಗೆ ಬಿಟ್ಟು ಏಳಲು ಒಂದು ವಾರ ಬೇಕಾಯಿತು. ಡಾಕ್ಟರು "ಈಗಲೇ ಬೇಡ. ಇನ್ನು ನಾಲ್ಕು ದಿವಸ ವಿಶ್ರಮಿಸಿಕೋ" ಎಂದರು. "ಪರವಾಯಿಲ್ಲ. ಇಂದು ರಾತ್ರಿ ಹಾಡುತ್ತೇನೆ" ಎಂದು ಹೇಳಿದ. ಡಾಕ್ಟರು ಪಕ್ಕವಾದ್ಯಗಾರರಿಗೆ ಹೇಳಿ ನಾಲ್ಕು ಜನ ಸ್ನೇಹಿತರನ್ನೂ ಕರೆದರು.

"ಇವರ ಮುಂದೆಲ್ಲಾ ಹಾಡಬೇಕೇ ?" ಎಂದು ಲಕ್ಷ್ಮಣ ಕೇಳಿದ.

"ಅವರೂ ನನ್ನ ಹಾಗೇ ಸಂಗೀತಪ್ರೇಮಿಗಳು. ಹಾಡು, ಪರವಾಯಿಲ್ಲ. ಸಂಕೋಚವೇತಕ್ಕೆ" ಎಂದು ಹೇಳಿದರು. ಲಕ್ಷ್ಮಣ ಭೈರವಿ ವರ್ಣ ಹಾಡಿ, ಒಂದೆರಡು ಕೀರ್ತನೆಗಳನ್ನು ಹಾಡಿ ವಿಸ್ತಾರವಾಗಿ ತೋಡಿ ರಾಗವನ್ನು ಆಲಾಪನೆ ಮಾಡಿದ. ವಾದ್ಯಗಾರರು ಮುಗ್ಗರಿಸುತ್ತ ಮುಗ್ಗರಿಸುತ್ತ ಅನುಸರಿಸುತ್ತಿದ್ದರು. ಅತಿಥಿಗಳಲ್ಲಿ ಒಬ್ಬರು

"ದಯವಿಟ್ಟು ಸ್ವಲ್ಪ ಪೂರ್ವಿ ಹಾಡಿ."

"ಅದೊಂದು ರಾಗ ಬೇಡಿ. ಬೇರೆ ಯಾವುದನ್ನ ಬೇಕಾದರೂ ಹಾಡುತ್ತೇನೆ."

"ಹಾಗಾದರೆ—ಮೋಹನ ಹಾಡಬಹುದಲ್ಲಾ."

ಮೋಹನವನ್ನೂ ಮುಗಿಸಿದ. ಡಾಕ್ಟರು ಒಂದು ಬೆಳ್ಳಿತಟ್ಟೆಯಲ್ಲಿ ಫಲ ತಾಂಬೂಲ, ಐವತ್ತು ರೂಪಾಯಿಗಳನ್ನಿಟ್ಟು,

"ನೀವು ಇಷ್ಟು ದೊಡ್ಡ ವಿದ್ವಾಂಸರು ಎಂದು ಹೇಳಲೇ ಇಲ್ಲವಲ್ಲಾ. ನಾನು ಯಾರೋ ಸಾಮಾನ್ಯ—ದೇಶಾವಾರದ ಸಂಗೀತಗಾರರು ಎಂದುಕೊಂಡೆ. ನನ್ನ ಕ್ಷಮಿಸಿ, ಈ ಅಲ್ಪಮರ್ಯಾದೆ ಸ್ವೀಕರಿಸಬೇಕು."

"ಕ್ಷಮಿಸಬೇಕು. ನಾನಿನ್ನೂ ಕೇವಲ ವಿದ್ಯಾರ್ಥಿ. ನನಗೆ ಹಣ ಬೇಡ. ಗುರುಕೃಪೆ ಒಂದು ತಾವು ದೊರಕಿಸಿಕೊಟ್ಟರೆ ಲಕ್ಷ ರೂಪಾಯಿ ಕೊಟ್ಟಿದ್ದಕ್ಕಿಂತಲೂ ಹೆಚ್ಚಾಗುತ್ತದೆ."

"ಅವಶ್ಯಕವಾಗಿ ಆಗಲಿ"

ಎಂದರು. ಡಾಕ್ಟರ ಹೆಂಡತಿ

"ಅಪ್ಪಾ, ನೀವು ವಿದ್ಯಾ ಮುಗಿಸಿಕೊಂಡು ಊರಿಗೆ ಹೋಗುವಾಗ ನಮ್ಮ ಮನೆಗೆ ಬಂದು ಹೋಗಬೇಕು. ಇದು ನಿಮ್ಮ ಮನೆ."

ಎಂದು ಹೇಳಿದರು. ಕನ್ನಡಿತಿಯ ಆದರದಮಾತುಗಳನ್ನು ಕೇಳಿ ಲಕ್ಷ್ಮಣನ ಹೃದಯ ಅರಳಿತು.

"ನಿಜ ತಾಯಿ, ಇದು ನನ್ನ ಮನೆ. ನೀವೂ ನಿಮ್ಮ ಯಜಮಾನರೂ ನನ್ನ ತಾಯಿ—ಶಾರದಾಂಬಾ—ಸೇವೆ ಮಾಡುತ್ತಾ ಇದ್ದೀರಿ. ನನಗೆ ನೀವೇ ಬಂಧುಬಳಗ. ಬರುತ್ತೇನಮ್ಮ. ಖಂಡಿತ ಬಂದು, ನಿಮ್ಮ ಮುಂದೆ ಹಾಡಿ ಹೋಗುತ್ತೇನೆ"

ಎಂದು ಮಾತುಕೊಟ್ಟ. ಲಕ್ಷ್ಮಣನಿಗೆ ಬೇಕಾಗುವ ಬಟ್ಟೆಬರೆಗಳನ್ನು ಒದಗಿಸಿ ಡಾಕ್ಟರು ಕಾಗದ ಬರೆದುಕೊಟ್ಟು ತಂಜಾವೂರಿಗೆ ಲಕ್ಷ್ಮಣನನ್ನು ಕಳುಹಿಸಿಕೊಟ್ಟರು. ಕಾಗದವನ್ನು ಕೈಯಲ್ಲಿ ಹಿಡಿದು ಬಸ್ಸಿನಲ್ಲಿ ಕುಳಿತ. ಅದನ್ನ ಮತ್ತೆ ಮತ್ತೆ ಮುಟ್ಟುವ. ತಮಿಳಿನಲ್ಲಿ ಬರೆದಿದ್ದ ವಿಳಾಸವನ್ನು ಎವೆಯಿಕ್ಕದೆ ನೋಡುವನು. ಡಾಕ್ಟರನ್ನೂ ಅವರ ಹೆಂಡತಿಯನ್ನೂ ಮನಸಾರೆ ನೂರಾರು ಸಾರಿ ವಂದಿಸಿದ.

'ದಿಕ್ಕಿಲ್ಲದ ಪರದೇಶಿಯಂತೆ ಬಂದೆ. ಇಲ್ಲಿ ನನ್ನ ಬಾಗ್ಯದ ಬಾಗಿಲು ತೆಗೆಯಿತು. ಆತ್ಮೀಯನಾದ ಬಂಧು ದೊರಕಿದ'

ಎಂದುಕೊಂಡ. ತಕ್ಷಣವೇ ತನ್ನ ಅಣ್ಣನ ಜ್ಞಾಪಕ ಬಂದಿತು.

'ಈ ಡಾಕ್ಟರು ನನ್ನ ಅಣ್ಣನಾಗಿ ಹುಟ್ಟಬಾರದಾಗಿತ್ತೇ? ಈ ಡಾಕ್ಟರ ಹೆಂಡತಿ ನನ್ನ ಅತ್ತಿಗೆಯಾಗಬಾರದಾಗಿತ್ತೇ? ಆಗ—ಆಗ—ನನ್ನ ಜಯ ಉಳಿಯುತ್ತಿದ್ದಳೇನೋ?'

ಎಂದುಕೊಂಡ. ದುಃಖ ದೇಹವನ್ನಲುಗಿಸಿಬಿಟ್ಟಿತು.

೨೫

ತಂಜಾವೂರು ಕೃಷ್ಣಯ್ಯರು ದಕ್ಷಿಣಾದಿ ಸಂಗೀತದಲ್ಲಿ ಪ್ರಸಿದ್ಧ ವಿದ್ವಾಂಸರಾಗಿದ್ದರು. ಶಾಸ್ತ್ರ ಮತ್ತು ಕಲೆ ಎರಡರಲ್ಲಿಯೂ ಅಯ್ಯರ್‌ರವರದು ಅರಿತ,

ನುಂತ ವಿದ್ಯೆಯಾಗಿತ್ತು. ಅವರ ಗುರುಪರಂಪರೆಯೂ ಇದಕ್ಕೆ ತುಂಬ ಸಹಾಯ ಮಾಡಿತ್ತು. ಎಟ್ಟ್ಯಾಪುರಂ ರಾಮಚಂದ್ರ ಭಾಗವತರಲ್ಲಿ ಸಂಗೀತ ವಿದ್ಯೆಯನ್ನು ನಾಯನಾಪಿಳ್ಳೆ, ಪುಷ್ಪವನಂ ಅವರೊಂದಿಗೆ ಅಭ್ಯಸಿಸುವ ಸೌಭಾಗ್ಯ ಅಯ್ಯರ್‌ರವರದಾಗಿತ್ತು. ಪುಷ್ಪವನಂ ಮತ್ತು ನಾಯನಾಪಿಳ್ಳೆ ಯವರಂತೆ ಅಪೂರ್ವ ರಾಗಗಳ ಹಾಡಿಕೆಯಲ್ಲಿಯೂ, ಲಯಕಾಲ ವಿನ್ಯಾಸದ ಲ್ಲಿಯೂ ಕೃಷ್ಣಯ್ಯರ್‌ರವರ ಹಾಡಿಕೆ ಹೆಸರಾಗಿತ್ತು. ಅಯ್ಯರ್‌ರವರ ಗುರು ಗಳು ತ್ಯಾಗರಾಜರ ಸಮಕಾಲೀನರೂ ಮಿತ್ರರೂ ಆಗಿದ್ದುದರಿಂದ ಅವರ ಶಿಷ್ಯರಿಗೂ ಸಂಗೀತಪ್ರಪಂಚದಲ್ಲಿ ವಿಶೇಷ ಮರ್ಯಾದೆ ಸಲ್ಲುತ್ತಿತ್ತು. ಅವರ ಸಂಗೀತ ಪಂಡಿತರಿಗೂ ಪ್ರಿಯವಾಗಿದ್ದುದರಿಂದ ವಿದ್ವನ್ಮಂಡಳಿಯವರು ಅಯ್ಯರ್‌ರವರನ್ನು 'ಮಹಾಭಾಗವತರು' ಎಂದು ಸಂಬೋಧಿಸುತ್ತಿದ್ದರು.

ಲಕ್ಷ್ಮಣ ಮಹಾಭಾಗವತರ ಮನೆ ತಲುಪಿದಾಗ ಅವರು ಆಗತಾನೆ ಊಟ ಮುಗಿಸಿ ತಾಂಬೂಲಚರ್ವಣಕ್ಕೆ ಕುಳಿತಿದ್ದರು. ಲಕ್ಷ್ಮಣ ಹೊರ ಬಾಗಿಲಿನಲ್ಲಿ ನಿಂತು ಕೂಗಿದ.

"ಸ್ವಾಮಿಾ!"

"ಯಾರಪ್ಪಾ ಅದು?"

ಒಳಬಾಗಿಲಿಗೆ ಬಂದು

"ಮಹಾಭಾಗವತರ ಮನೆ ಇದೇನೇ, ಸ್ವಾಮಿ?"

"ಹೌದು ಏನಾಗಬೇಕಾಗಿತ್ತು ಅವರಿಂದ?"

"ಸ್ವಲ್ಪ ನೋಡಬೇಕಾಗಿತ್ತು. ಅವರಿಗೆ ಮದರಾಸಿನ ಅರುಣಾಚಲ ಮೊದಲಿಯಾರರು ಒಂದು ಕಾಗದ ಕೊಟ್ಟಿದ್ದಾರೆ."

"ನಾನೇ ಭಾಗವತ, ಎಲ್ಲಿ—ಕಾಗದ ಕೊಡು."

ಲಕ್ಷ್ಮಣ ಒಂದು ಗಳಿಗೆ ಭಾಗವತರನ್ನು ದಿಟ್ಟಿಸಿ ನೋಡಿದ. ಮೊದಲು ದೀರ್ಘದಂಡ ನಮಸ್ಕಾರ ಹಾಕಿ ಕಾಗದವನ್ನು ಕೈಗೆ ಕೊಟ್ಟ. ಭಾಗವತರು ಕಾಗದವನ್ನೊಮ್ಮೆ ಓದಿಕೊಂಡು ಹೆಂಡತಿಯನ್ನು ಕರೆದು ಅವರೆದುರಿಗೊಮ್ಮೆ ಓದಿದರು. ಗುರುಗಳನ್ನು ಕಣ್ತುಂಬ ನೋಡಿದ. ಕುಳ್ಳನೆಯ ಎತ್ತರ. ಸ್ವಲ್ಪ ತುಂಬಿದ ಮೈಕಟ್ಟು. ಪ್ರಧಾನವಾಗಿ ಕಾಣುತ್ತಿದ್ದ ಹೊಟ್ಟೆ. ಕುಂಕುಮ ಗಂಧಗಳಿಂದಲಂಕೃತವಾದ ಬಟ್ಟೆಮುಖ. ಭಾಗವತರ ಕಿವಿಯಲ್ಲಿ ವಜ್ರದ ಹತ್ತಕಡಕೂ, ಕೊರಳಲ್ಲಿ ಚಿನ್ನದ ಕಟ್ಟು ಹಾಕಿದ ಒಂದು ರುದ್ರಾಕ್ಷಿಸರವೂ, ಕೈಯಲ್ಲಿ ಎರಡು ವಜ್ರದುಂಗುರಗಳೂ ಇದ್ದವು.

ಭಾಗವತರು ಲಕ್ಷ್ಮಣನನ್ನು ಒಳಕ್ಕೆ ಕರೆದು

"ಬಟ್ಟೆ ತಗೆದು ಸ್ನಾನ ಮಾಡಪ್ಪಾ. ಈಕೆ ನನ್ನ ಹೆಂಡತಿ. ಈ ಹುಡುಗ ನನ್ನ ಮಗ ಸುಬ್ರಹ್ಮಣ್ಯ"

ಎಂದು, ಹೆಂಡತಿ ಮಗನ ಪರಿಚಯ ಮಾಡಿಕೊಟ್ಟರು. ಲಕ್ಷ್ಮಣ ಗುರು ಪತ್ನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ

"ಅಮ್ಮ, ನಿಮ್ಮ ಮಗನೆಂದು ಭಾವಿಸಿ ಕಾಪಾಡಬೇಕು. ಗುರುಗಳಿಂದ ವಿದ್ಯಾದಾನ ಮಾಡಿಸಬೇಕು, ತಾಯಿ"

ಎಂದು ಹೇಳಿದ. ಭಾಗವತರ ಹೆಂಡತಿಯವರ ಕಣ್ಣಲ್ಲಿ ನೀರೂರಿತು. ಅದನ್ನು ಭಾಗವತರು ಕಂಡುಕೊಂಡು

"ಊಟವಾಗಲಪ್ಪಾ, ಮಾತನಾಡೋಣ. ಮೊದಲು ಸ್ನಾನಮಾಡು"

ಎಂದು ಸುಬ್ರಹ್ಮಣ್ಯನ ಜತೆ ಮಾಡಿ ಕಳುಹಿಸಿಕೊಟ್ಟರು. ಲಕ್ಷ್ಮಣ ಊಟ ಮುಗಿಸಿ ಬಂದು ಭಾಗವತರ ಮುಂದೆ ಕುಳಿತ.

"ಹಿಂದೆ ಪಾಠವಾಗಿತ್ತೇನಪ್ಪಾ?"

"ಆಗಿತ್ತು."

"ಯಾರಲ್ಲಿ?"

"ಅನಂತಾಚಾರ್ಯರಲ್ಲಿ."

"ಓ! ಅವರಲ್ಲೇ. ಅವರು ನನಗೆ ಗೊತ್ತು. ನೀನು ಬಹಳ ಚೆನ್ನಾಗಿ ಹಾಡುತ್ತೀ ಎಂದು ನಮ್ಮ ಮೊದಲಿಯಾರರು ಬರೆದಿದ್ದಾರೆ."

"ಅವರ ವಿಶ್ವಾಸ 'ಗುರುಗಳೇ.' ನಿಜವಾಗಿಯೂ ನಾನು ಪಾಮರ. ತಮ್ಮ ದಯೆಯಿಂದ ನಾನೂ ಒಬ್ಬ ಮನುಷ್ಯನಾಗಬೇಕು."

"ನೀನು ರಾತ್ರೀಗೆ ಹಾಡುವೆಯಂತೆ. ನಾವು ಕೇಳಿ ಮುಂದೆ ಪಾಠ ಆರಂಭಿಸುತ್ತೇವೆ. ಸ್ವಲ್ಪ ವಿಶ್ರಾಂತಿ ತೆಗೆದುಕೋ. ಸಂಜೆ ಸುಬ್ರಹ್ಮಣ್ಯನ ಜತೆ ಹೋಗಿ ಊರು, ದೇವಸ್ಥಾನ ಎಲ್ಲಾ ನೋಡಿ ಬಾ."

"ಅಪ್ಪಣೆ."

ಊರು, ದೇವಸ್ಥಾನ ನೋಡುವುದನ್ನು ಮುಗಿಸಿಕೊಂಡು ಬರುವಷ್ಟರಲ್ಲಿ ಲಕ್ಷ್ಮಣ, ಸುಬ್ರಹ್ಮಣ್ಯರಲ್ಲಿ ಗಾಢಸ್ನೇಹ ಬೆಳೆದುಬಿಟ್ಟಿತು. ಸುಬ್ರಹ್ಮಣ್ಯ ಸರಳಜೀವಿ. ಲಕ್ಷ್ಮಣನ ವೃತ್ತಾಂತ ಅವನ ಕರುಳನ್ನು ಕರಗಿಸಿಬಿಟ್ಟಿತ್ತು. ಮಾತಿನ ಭರದಲ್ಲಿ ಒಮ್ಮೊಮ್ಮೆ ಲಕ್ಷ್ಮಣ ಸ್ವಲ್ಪ ಹಾಡಿದ್ದ. ಅದನ್ನು ಕೇಳಿ ಇವನ ಸಖ್ಯವಾದದ್ದು ತನ್ನ ಭಾಗ್ಯ ಎಂದು ಭಾವಿಸಿದ.

ಅಂದು ರಾತ್ರಿ ಗುರುಗಳಿಗೆ ತಾನು ಕಲಿತಿದ್ದ ವಿದ್ಯೆಯನ್ನು ನಿವೇದಿಸಿದ. ಮೊದಲು ಮೊದಲು ಲಕ್ಷ್ಮಣನ ಹಾಡಿಕೆಗೆ ತಾಳಹಾಕುತ್ತಿದ್ದವರು ಕೇಳುತ್ತ

ಸುಮ್ಮನೆ ಕುಳಿತುಬಿಟ್ಟರು. ಗಂಟೆ ಹನ್ನೊಂದಾಯಿತು. ಗುರುಗಳ ಹೆಂಡತಿ ಹೊತ್ತಾಯಿತೆಂದು ಸೂಚಿಸಿದರು. ಗುರುಗಳು

"ಮಂಗಳ ಹಾಡಪ್ಪಾ"

ಎಂದರು. ಮುಗಿಯಿತು. ಸ್ವಲ್ಪಕಾಲ ಗುರುಗಳು ಮಾತನಾಡದೆ ಗಂಭೀರವಾಗಿ ಕುಳಿತರು. ಅವರು ಏನು ಹೇಳುವರೋ ಎಂದು ಲಕ್ಷ್ಮಣನ ಹೃದಯ ತವಕಪಡುತ್ತಿತ್ತು.

"ಲಕ್ಷ್ಮಣಾ, ನೀನು ನನ್ನ ಶಿಷ್ಯನಾಗಿ ಬಂದದ್ದು ನನ್ನ ಭಾಗ್ಯಾಪ್ಪ. ನಿನ್ನ ವಿದ್ಯೆ ದೈವಿಕವಾದದ್ದು. ಸಂಗೀತಶಾಸ್ತ್ರ ವಿದ್ಯೆಯನ್ನು ಹೇಳಿಕೊಡುತ್ತೆ. ಅದು ನಿಜವಾದ ವಿದ್ಯೆಯಲ್ಲ. ವಿದ್ಯೆ ಹೃದಯದಿಂದ ಬರಬೇಕು--ಹೃದಯಕ್ಕೆ ಸೇರಬೇಕು. ನಿನ್ನಲ್ಲಿದೆ ಅದು. ನಿನ್ನಂತಹವನಿಗೆ ವಿದ್ಯಾದಾನ ಮಾಡಿದರೆ ನನ್ನ ಜನ್ಮ ಸಾರ್ಥಕವಾಗುತ್ತದೆ" ಎಂದು ಹೇಳಿದರು. ಲಕ್ಷ್ಮಣನ ಬಾಯಲ್ಲಿ ಮಾತು ಹೊರಡದಾಯಿತು. ಕೃತಜ್ಞತೆಯಿಂದ ಗುರುಗಳನ್ನೂ ಗುರುಪತ್ನಿಯನ್ನೂ ವಂದಿಸಿದ.

ಅಂದಿನಿಂದ ಲಕ್ಷ್ಮಣ ಭಾಗವತರ ಸಂಸಾರಕ್ಕೆ ಸೇರಿದವನಾಗಿಬಿಟ್ಟ. ಮನೆಯ ಕಷ್ಟಸುಖದಲ್ಲಿಯೆಲ್ಲಾ ಅವನಿಗೆ ಪಾಲು ಸಿಕ್ಕುತ್ತಿತ್ತು. ನಿರ್ವಂಚನೆಯಿಂದ ಗುರುಗಳ ಮತ್ತು ಗುರುಪತ್ನಿಯ ಸೇವೆಮಾಡತೊಡಗಿದ. ಮನೆಯ ಕೆಲಸವನ್ನು ಕಲಿಯತೊಡಗಿದ. ಅಲಮೇಲಮ್ಮನವರ ಕೆಲಸದ ಹೊರೆಯನ್ನು ಆದಷ್ಟು ಕಡಿಮೆ ಮಾಡತೊಡಗಿದ. ಅಡಿಗೆಯ ಮೇಲುಗೆಲಸಗಳನ್ನೆಲ್ಲಾ ದಿನವೂ ಮಾಡಿಕೊಡುತ್ತಿದ್ದ. ಗುರುಗಳ ಬಟ್ಟೆಯೊಗೆಯುವ ಕೆಲಸವನ್ನೂ ತಾನೇ ವಹಿಸಿಕೊಂಡ. ತಿಂಗಳಿಗೆ ನೂರು ದಿವಸದ ಅಡಿಗೆಯ ಸರದಿಯನ್ನು ತಾನೇ ಸಂತೋಷದಿಂದ ನಿರ್ವಹಿಸುತ್ತಿದ್ದ. ಅಲಮೇಲಮ್ಮನವರು ಲಕ್ಷ್ಮಣನನ್ನು ತಮ್ಮ ಮಗನಂತೆ ಕಾಣುತ್ತಿದ್ದರು. ಅವನ ಮನಸ್ಸು ಸ್ವಲ್ಪ ಖಿನ್ನವಾದರೆ ಸಾಕು, ಮಾಡುತ್ತಿದ್ದ ಕೆಲಸವನ್ನೂ ಬಿಟ್ಟುಬಂದು ಅವನನ್ನು ಸಂತೈಸುತ್ತಿದ್ದರು. ಗುರುಗಳನ್ನೂ ಗುರುಪತ್ನಿಯನ್ನೂ ಕಂಡರೆ ಸ್ವಂತ ತಾಯಿ ತಂದೆಗಳನ್ನು ಕಂಡಂತೆ ಆಗುತ್ತಿತ್ತು.

ಮಹಾಭಾಗವತರು ನಿತ್ಯವೂ ಶಿಷ್ಯನಿಗೋಸ್ಕರ ಹಾಡುತ್ತಿದ್ದರು ಜತೆಗೂ ಲಕ್ಷ್ಮಣನನ್ನು ಹಾಡಿಸುತ್ತಿದ್ದರು. ತಾವು ಬಿಟ್ಟಲ್ಲಿ ಅವನು ಸ್ವರ ಹಾಕಬೇಕು, ಅವನು ಬಿಟ್ಟಲ್ಲಿ ತಾವು ಮುಂದಕ್ಕೊಯ್ಯಬೇಕು—ಇಡೀ ರಾತ್ರಿಯನ್ನೆಲ್ಲಾ ಗುರುಶಿಷ್ಯರು ರಾಗಾಲಾಪನೆಯಲ್ಲಿಯೋ ಸ್ವರಪ್ರಸ್ತಾರದಲ್ಲಿಯೋ ಕಳೆಯುತ್ತಿದ್ದರು.

ತಮ್ಮ ಕಲೆಯ ಸಾರಸರ್ವಸ್ವದಂತಿದ್ದ ಅಪರೂಪ ಪಲ್ಲವಿಗಳನ್ನು ಶಿಷ್ಯನಿಗೆ ಅರೆದು ಕುಡಿಸಿಬಿಟ್ಟರು. ಅವುಗಳನ್ನು ಶಿಷ್ಯ ಹಾಡುತ್ತಿದ್ದರೆ ತಾವೇ ಕೇಳುತ್ತ 'ಭಲೆ ಭಲೆ!' ಎನ್ನುವರು. ತಾವು ಮೈಮರೆತು ಹಾಡಿದ ವೇಳೆಗಳಲ್ಲೆಲ್ಲಾ ಅನುಸರಿಸಿದ ಗತಿಗಳನ್ನು ಶಿಷ್ಯ ಸಂಗ್ರಹಿಸುತ್ತಿದ್ದುದನ್ನು ನೋಡಿ ಬೆರಗಾಗುತ್ತಿದ್ದರು.

ತಾವು ಕಛೇರಿಗೆ ಎಲ್ಲಿ ಹೋಗಲಿ ಜತೆಯಲ್ಲಿ ಲಕ್ಷ್ಮಣ, ಸುಬ್ರಹ್ಮಣ್ಯ ಇಬ್ಬರನ್ನೂ ಕರೆದುಕೊಂಡು ಹೋಗುತ್ತಿದ್ದರು. ಭಾಗವತರು ಹಾಡುತ್ತಾ ಮುಂದೆ ಕುಳಿತುಕೊಂಡರೆ ಅವರೇ ಇಬ್ಬರು ಹಿಂದೆ ತಂಬೂರಿ ಹಿಡಿಯಬೇಕು. ಒಂದೊಂದು ಆವರ್ತವನ್ನು ಶಿಷ್ಯನಿಗೂ ಬಿಟ್ಟು 'ಭಲೆ ಭಲೆ' ಅನ್ನುತ್ತಿದ್ದರು. ಭಾಗವತರ ಜತೆಯಲ್ಲಿಯೇ ಲಕ್ಷ್ಮಣನ ಕೀರ್ತಿಯೂ ಹಬ್ಬತೊಡಗಿತು. ಒಂದೊಂದು ಸಲ ತಮಗೆ ಆಹ್ವಾನ ಬಂದರೆ

"ನೀನು ಹೋಗಿ ಬಂದುಬಿಡು, ಲಕ್ಷ್ಮಣ"

ಎಂದು ಅವನನ್ನೇ ಕಳುಹಿಸಿಬಿಡುತ್ತಿದ್ದರು. ದಕ್ಷಿಣ ದೇಶದಲ್ಲೆಲ್ಲಾ ಲಕ್ಷ್ಮಣನ ಹೆಸರು ಮನೆಮಾತಾಗಿಬಿಟ್ಟಿತು. ತಾನು ಎಲ್ಲಿ ಹೋಗಿ ಏನು ಸಂಪಾದಿಸಿ ತಂದರೂ ಗುರುಗಳ ಪಾದತಲದಲ್ಲಿಟ್ಟು ನಮಸ್ಕರಿಸುತ್ತಿದ್ದ.

"ಇದು ನಿನ್ನದಪ್ಪಾ—ತೆಗೆದುಕೋ"

ಎಂದು ಭಾಗವತರು ಹೇಳಿದರೆ

"ತಮ್ಮ ಅನುಗ್ರಹವೊಂದೇ ನನ್ನದು. ಬೇರೆ ಯಾವದೂ ಅಲ್ಲ, ಗುರುಗಳೆ"

ಎಂದು ಸಮಾಧಾನ ಹೇಳುತ್ತಿದ್ದ.

ಮಹಾಭಾಗವತರನ್ನು 'ಪೂರ್ವಿ ಕೃಷ್ಣ ಅಯ್ಯರ್' ಎಂದು ಕರೆಯುವ ವಾಡಿಕೆಯೂ ಇತ್ತು. ಪೂರ್ವಿರಾಗವನ್ನು ಅವರ ಹಾಗೆ ಯಾರೂ ಹಾಡುತ್ತಿರಲಿಲ್ಲ. ರಾಗಾಭಿಮಾನಿದೇವತೆ ಅಯ್ಯರವರಿಗೆ ಒಲಿದಿದ್ದಳು ಎಂದು ಜನರು ಆಡಿಕೊಳ್ಳುತ್ತಿದ್ದರು ಪೂರ್ವಿ ಭಾಗವತರ ಬಹಳ ಪ್ರಿಯವಾದ ರಾಗವಾಗಿದ್ದರೂ ಅದನ್ನು ಅವರು ಅಪರೂಪವಾಗಿ ಹಾಡುತ್ತಿದ್ದರು. ಭಾಗವತರ ಮನೆಗೆ ಬಂದು ವರ್ಷಗಳಾಗಿದ್ದರೂ ಪೂರ್ವಿಯನ್ನು ಲಕ್ಷ್ಮಣ ಅವರ ಬಾಯಲ್ಲಿ ಕೇಳಿರಲಿಲ್ಲ. ಒಂದು ದಿನ ಸೂಕ್ಷ್ಮವಾಗಿ ತನ್ನ ಆಸೆಯನ್ನು ಸೂಚಿಸಿದ.

"ಪೂರ್ವಿಯನ್ನು ಹಾಡಿತೋರಿಸಬೇಕು"

"ಅದು ಬೇಡಪ್ಪ. ಆವೊಂದು ರಾಗ ಬೇಡ"

ಎಂದು ಗುರುಗಳು ಮಾತನ್ನು ಮುಂದೆ ತಳ್ಳಿಬಿಡುತ್ತಿದ್ದರು. ಒಂದು ದಿನ ಅಲಮೇಲಮ್ಮನವರು ಶಿಷ್ಯನ ವಕೀಲಿ ವಹಿಸಿ

"ಆಷ್ಟು ದಿನದಿಂದ ಪೂರ್ವಿ ಕೇಳಬೇಕು ಎಂದು ಲಕ್ಷ್ಮಣ ಹಂಬಲಿಸುತ್ತಿದ್ದಾನೆ. ಹಾಡಬಾರದೇ? ಇವತ್ತು ಹೇಗೂ ಶುಕ್ರವಾರ. ಸಂಜೆ ಹಾಡಿ."

"ಆಗಲಿ, ಹಾಡುತ್ತೇನೆ"

ಎಂದು ಒಪ್ಪಿಕೊಂಡರು.

ಸಂಜೆ ಭಾಗವತರ ಕಛೇರಿಗೆ ಹೆಂಡತಿ, ಮಗ, ಶಿಷ್ಯ ಇಷ್ಟೇ ಜನ ಶ್ರಾವಕರು ಮೊದಲು ಕೆಲವು ಕೀರ್ತನೆಗಳನ್ನು ಹಾಡಿ ಪೂರ್ವಿ ಹಾಡಲು ಮೊದಲು ಮಾಡಿದರು. ಅಮೋಘವಾದ ರಾಗವಿಸ್ತಾರ, ಅಪೂರ್ವವಾದ ಸಂಚಾರ. ಸಂಧ್ಯಾರಾಗದ ಗಹನಗಭೀರತೆ ಹಾಡಿಕೆಯಲ್ಲಿ ಎದ್ದು ಕಾಣುತ್ತಿತ್ತು. ಪೂರ್ವಿ ರಾಗವನ್ನು ಮುಗಿಸಿ

"ಲಕ್ಷ್ಮಣಾ, ಇದು ಪೂರ್ವಿ–ಆದರೆ ಸಂಧ್ಯಾರಾಗ ಪೂರ್ವಿಯಲ್ಲ. ನನಗೆ ನಿಜವಾಗಿಯೂ ಈ ರಾಗವನ್ನು ಹಾಡುವುದಕ್ಕೆ ಬರುವುದಿಲ್ಲ. ಭೂಮಿಯನ್ನು ಭೇದಿಸಿಕೊಂಡು ಬುಗ್ಗೆ ಹೊರಡುವಂತೆ ಹೃದಯವನ್ನು ಭೇದಿಸಿಕೊಂಡು ರಾಗ ಬರಬೇಕು. ನನ್ನ ಪೂರ್ವಿ ಹೃದಯದಿಂದ ಬರುವುದಿಲ್ಲ–ತಲೆಯಿಂದ ಬರುತ್ತದೆ. ನಿನಗೆ ಪೂರ್ವಿಯ ದತ್ತಿಕೊಟ್ಟಿದ್ದೇನೆ. ನಾನು ಆಸೆಪಟ್ಟುಕೊಂಡಿದ್ದ ಹಾಗೆ ಎಂದಾದರೂ ನೀನು ಹಾಡಿಬಿಡು. ಅಂದು ನಾನು ಪಾವನನಾಗುತ್ತೇನೆ. ಅಂದು ನಾನು ಋಣವಿಮುಕ್ತನಾಗುತ್ತೇನೆ. ನಿನ್ನಿಂದ ನಾನು ನಿರೀಕ್ಷಿಸುವ ಗುರುದಕ್ಷಿಣೆ ಅದೇ ಕಣಪ್ಪಾ"

ಎಂದರು. "ಅಪ್ಪಣೆಯಾದಂತಾಗಲಿ" ಎಂದು ಲಕ್ಷ್ಮಣ ತಲೆಬಾಗಿಸಿದ. ಗುರುಕುಲವಾಸ ಮುಗಿಯಿತು.

"ಇನ್ನು ನೀನು ಸ್ವತಂತ್ರ. ನಾನು ಹೇಳಿಕೊಡುವುದು ಮುಗಿಯಿತು"

ಎಂದು ಗುರುಗಳು ಅಪ್ಪಣೆಯಿತ್ತರು. ಲಕ್ಷ್ಮಣನ ಮನಸ್ಸು ಖಿನ್ನವಾಯಿತು. ಹೃದಯ ಭಾರವಾಯಿತು. 'ಇಂತಹ ಜನವನ್ನು ಬಿಟ್ಟು ಎಲ್ಲಿಗೆ ಹೋಗುವುದು' ಎಂದುಕೊಂಡ.

ಗುರುಗಳೇ ಹೇಳಿದರು

"ನಿನ್ನ ವಿದ್ಯೆ ದೈವಿಕವಾದದ್ದು. ಅದನ್ನು ಸತ್ಪಾತ್ರದಲ್ಲಿ ಧಾರೆಯೆರೆ. ನಿನ್ನ ಬೆಳಕಿನಿಂದ ಹಲವು ಹೃದಯಗಳು ಬೆಳಗುತ್ತವೆ. ಬೆಳಗಿಸು. ಲೋಕವನ್ನೇ ಅಂಧಕಾರಕೂಪದಿಂದ ನಿವೃತ್ತಿ ಮಾಡು."

"ದೊಡ್ಡ ಮಾತಾಯಿತು. ತಮ್ಮ ದೀಪಟಿ ಹೊರುವ ದೀಪಟಿಗ ನಾನು —ಅಷ್ಟೇ"

ಎಂದು ಹೇಳಿದ.

ಲಕ್ಷ್ಮಣ ಹೊರಟು ನಿಂತ. ಅಲಮೇಲಮ್ಮನವರು ತಿಂಡಿಯ ಗಂಟನ್ನು ತಂದು ಕೈಗಿತ್ತರು. ಸುಬ್ರಹ್ಮಣ್ಯ ಒಂದೇ ಸಮನೆ ಕಣ್ಣೀರ್ಗರೆಯುತ್ತಿದ್ದ. ಗುರುಗಳು ಉಕ್ಕಿಬರುತ್ತಿದ್ದ ದುಃಖವನ್ನು ತಡೆದುಕೊಂಡು ಧೈರ್ಯವನ್ನು ಪ್ರಕಟಿಸುತ್ತಿದ್ದರು ಬಸ್ಸಿನವನು ಗಲಭೆ ಮಾಡತೊಡಗಿದ. ಲಕ್ಷ್ಮಣ ಗುರುಗಳಿಗೂ ಗುರುಪತ್ನಿಗೂ ಕಾಲಿಗೆರಗಿದ. ಅಲಮೇಲಮ್ಮನವರು ತಾವೇ ಕಂಬನಿ ಸುರಿಸುತ್ತ ಲಕ್ಷ್ಮಣನ ಕಣ್ಣುಗಳನ್ನು ಸೆರಗಿನ ಕೊನೆಯಿಂದ ಒರಸುತ್ತಾ

"ದುಃಖಿಸಬೇಡ ಕಂದಾ, ಹೋಗಿ ಬಾ. ನೀನೆಲ್ಲಿದ್ದರೂ ನಿನ್ನ ಬೆನ್ನು ಕಾವಲಿಗೆ ಯಜಮಾನರು ಇರುತ್ತಾರೆ"

ಎಂದು ಧೈರ್ಯಕೊಟ್ಟರು. ಸುಬ್ರಹ್ಮಣ್ಯ ಬಂದು ಲಕ್ಷ್ಮಣನನ್ನು ಅಪ್ಪಿಬಿಟ್ಟ. ಲಕ್ಷ್ಮಣ ಅವನ ಬಂಧನದಿಂದ ಮೆಲ್ಲನೆ ಬಿಡಿಸಿಕೊಂಡು ಬಸ್ಸಿನಲ್ಲಿ ಬಂದು ಕುಳಿತ.

ರಾತ್ರಿ ಡಾಕ್ಟರು ಮನೆಗೆ ಬಂದು ತಮ್ಮ ಅತಿಥಿಯನ್ನು ನೋಡಿ ಆನಂದ ಆಶ್ಚರ್ಯಗಳನ್ನು ಒಮ್ಮೆಲೇ ಸೂಚಿಸಿದರು.

"ಇಂತಹ ದಿವಸ ಬರುತ್ತೇನೆಂದು ಒಂದು ಕಾಗದ ಬರೆಯಬಾರದಾಗಿತ್ತೆ, ಲಕ್ಷ್ಮಣರಾವ್ ?"

"ಏತಕ್ಕೆ ಸುಮ್ಮನೆ ನಿಮಗೆ ತೊಂದರೆ. ನನ್ನ ಮನೆಗೆ ನಾನು ಬರುವುದಕ್ಕೆ ಕಾಗದ ಏತಕ್ಕೆ ಬರೆಯಬೇಕು ಎಂದು ಬರೆಯಲಿಲ್ಲ."

ಡಾಕ್ಟರರಿಗೂ ಅವರ ಹೆಂಡತಿಗೂ ಹಿಡಿಸಲಾರದಷ್ಟು ಆನಂದವಾಯಿತು. ಊಟಕ್ಕೆ ಕುಳಿತಿದ್ದಾಗ ಲಕ್ಷ್ಮಣನೇ ಡಾಕ್ಟರ ಹೆಂಡತಿಗೆ

"ಅಮ್ಮ, ಮುಕ್ತಹಸ್ತದಿಂದ ಅನ್ನ ಹಾಕಿ ಗುರುಗಳಲ್ಲಿ ಕಳುಹಿಸಿಕೊಟ್ಟಿರಿ. ವಿದ್ಯಾಭ್ಯಾಸ ಮುಗಿಸಿಕೊಂಡು ಬಂದಿದ್ದೇನೆ, ತಾಯಿ. ನಿಮ್ಮ ಪಾದತಲದಲ್ಲಿ ಅದನ್ನು ಅರ್ಪಿಸಿಕೊಳ್ಳಬೇಕು" ಎಂದು ಹೇಳಿದ.

"ನೀವು ನಮ್ಮಲ್ಲಿ ಬಂದದ್ದೇ ನಮಗೆ ತುಂಬ ಗೌರವ. ನೀವು ದೊಡ್ಡವರಪ್ಪಾ. ಗುಣಕ್ಕೆ ತಕ್ಕ ಮಾತನಾಡಿದಿರಿ. ಆ ಯೋಗ್ಯತೆ ನಮಗೆ ಎಲ್ಲಿಂದ ಬರಬೇಕು ?"

"ಇಲ್ಲ ತಾಯಿ. ಉಪಚಾರದ ಮಾತಲ್ಲ, ನೀವೂ ನಿಮ್ಮ ಯಜಮಾನರೂ ನನ್ನ ದೇಹ–ಆತ್ಮ ಎರಡನ್ನೂ ಕಾಪಾಡಿದಿರಿ"

ಎಂದು ಹೇಳಿದ.

ಡಾಕ್ಟರವರ ಪ್ರಭಾವದಿಂದ ಮದರಾಸಿನ ಗಾಯನ ಸಮಾಜಗಳು ಲಕ್ಷ್ಮಣನ ಕಛೇರಿಯನ್ನಿಡಿಸುವುದಕ್ಕೆ ಹಾತೊರೆಯತೊಡಗಿದವು; ಅನೇಕ

ಕಛೇರಿಗಳಾದವು. ದೊಡ್ಡ ಕಲಾಭಿಮಾನಿಗಳ ಮನೆಗಳಲ್ಲಿ ಕಛೇರಿಗಳಾದುವು. ಯಾವ ಪತ್ರಿಕೆಯಲ್ಲಿ ನೋಡಲಿ ಲಕ್ಷ್ಮಣನ ಪ್ರಶಂಸೆ, ಅವನ ಹಾಡಿಕೆಯ ಮೇಲೆ ಸ್ತುತಿಪರವಾದ ಲೇಖನಗಳು ಪ್ರಕಟವಾಗುತ್ತಿದ್ದವು.

ಲಕ್ಷ್ಮಣನಿಗೆ ಮದರಾಸು ಬೇಸರವನ್ನುಂಟುಮಾಡುತ್ತ ಬಂದಿತು. ಸಮಾಜ, ಕಛೇರಿ, ಸ್ತುತಿ, ಗಲಭೆಗಳು ಅವನ ತಪಸ್ಸಿಗೆ ಭಂಗತಂದಿದ್ದವು. ಮದರಾಸಿನಲ್ಲಿ ಅವನು ಎಲ್ಲಿ ಹೋದರೂ ಜನರು ಅವನನ್ನು ಗುರುತಿಸುತ್ತಿದ್ದರು. ಸಮುದ್ರದ ದಂಡೆಯ ಮೇಲೆ ಕುಳಿತು ಅಲೆಗಳ ಹೊಯ್ದಾಟವನ್ನು ನೋಡುತ್ತಾ ಒಂದು ದಿವಸ ಮೈಮರೆತಿದ್ದ. ಯಾರೋ ಗುರುತಿಸಿಬಿಟ್ಟರು. ಒಂದು ಗುಂಪು ಸೇರಿ ಬಿಟ್ಟಿತು. ಅವರಿಂದ ತಪ್ಪಿಸಿಕೊಂಡು ಮನೆ ಸೇರಬೇಕಾದರೆ ಸಾಕುಸಾಕಾಗಿ ಬಿಟ್ಟಿತು. ಅಂದೇ ಡಾಕ್ಟರವರಿಗೆ ತಿಳಿಸಿದ "ಅಪ್ಪಣೆಯಾದರೆ ಊರಿಗೆ ಹೋಗು ತ್ತೇನೆ."

"ಏನು ಅವಸರ ಲಕ್ಷ್ಮಣರಾವ್, ಮುಂದಿನ ತಿಂಗಳು ಅಕೆಡಮಿಯವರು 'ಸಂಗೀತವಾರ'ವನ್ನು ಏರ್ಪಡಿಸುತ್ತಾರೆ. ಮುಗಿಸಿಕೊಂಡು ಹೋಗುವುದು ತಾನೆ?"

"ಇಲ್ಲ. ಮತ್ತೆ ಬೇಕಾದರೆ ಬರುತ್ತೇನೆ. ಈಗ ದಯೆಯಿಟ್ಟು ಅಪ್ಪಣೆ ಯನ್ನು ಕೊಡಬೇಕು"

ಎಂದು ಅಂಗಲಾಚಿದ.

ಡಾಕ್ಟರೂ ಅವರ ಹೆಂಡತಿಯೂ ನಿರ್ವಾಹವಿಲ್ಲದೆ ಒಪ್ಪಬೇಕಾಯಿತು. ಪಾಯಸದ ಅಡಿಗೆ ಮಾಡಿ ಲಕ್ಷ್ಮಣರಾಯನಿಗೆ ಔತಣವನ್ನೇರ್ಪಡಿಸಿದರು. ಕಛೇರಿಗಳಲ್ಲಿ ಲಕ್ಷ್ಮಣ ಸಂಪಾದಿಸಿದ್ದ ಹಣವನ್ನು ಡಾಕ್ಟರು ಕೊಡಹೋದರು.

"ಎಷ್ಟಿದೆ?"

"ಒಂದು ಸಾವಿರದ ಆರುನೂರೈವತ್ತು."

"ಅಷ್ಟಾಗಿದೆಯೇ?"

"ನೀವು ಮನಸ್ಸುಮಾಡಿದ್ದರೆ ಅದರ ನಾಲ್ಕರಷ್ಟಾಗುತ್ತಿತ್ತು."

"ನನಗೆ ಐವತ್ತು ರೂಪಾಯಿ ಸಾಕು."

"ಮಿಕ್ಕದ್ದನ್ನು ಏನು ಮಾಡಲಿ?"

"ತಂಜಾವೂರಿಗೆ ನಮ್ಮ ಗುರುಗಳಿಗೆ ತಲುಪಿಸಿಬಿಡಿ."

"ಹಾಗೇ ಆಗಲಿ"

ಎಂದು ಡಾಕ್ಟರು ಒಪ್ಪಿದರು. ಡಾಕ್ಟರು ಮತ್ತು ಅವರ ಹೆಂಡತಿಯ ಅಪ್ಪಣೆ ಪಡೆದು ಬೆಂಗಳೂರು ಗಾಡಿ ಹತ್ತಿದ.

"ಎಲ್ಲಿಗೆ ಹೋಗುವುದು ?"

"ಬೆಂಗಳೂರಿಗೆ."

"ಅಲ್ಲಿ ಹೋಗಿ ಏನು ಮಾಡುವುದು ?"

"ಏನು ಮಾಡುವುದು ? ? ?"

ಅದೇ ಪ್ರಶ್ನೆ ಮತ್ತೆ ಮತ್ತೆ ಲಕ್ಷ್ಮಣನ ಮನಸ್ಸಿನಲ್ಲಿ ಏಳುತ್ತಿತ್ತು. ಬೆಂಗಳೂರು ಎಂದೊಡನೆಯೇ ಹಳೆಯ ನೆನಪೆಲ್ಲಾ ಮತ್ತೆ ಬಂದು ಕಾಡಲಾರಂಭಿಸಿದವು. 'ತಂದೆ-ತಾಯಿ-ಜಯಾ; ಇವರಿಲ್ಲದ ಬೆಂಗಳೂರನ್ನು ಕಟ್ಟಿಕೊಂಡು ಏನು ಮಾಡಲಿ ?' ಎಂದುಕೊಂಡ. ಕೂಡಲೆ ವೆಂಕಟೇಶ, ಶಾಂತರ ಜ್ಞಾಪಕ ಬಂದಿತು. ಅವರನ್ನು ನೋಡಬೇಕೆಂದು ಮನಸ್ಸು ಹಾತೊರೆಯತೊಡಗಿತು. ಕೂಡಲೇ ಅಣ್ಣ, ಅತ್ತಿಗೆಯ ಜ್ಞಾಪಕ ಬಂದಿತು. ಅವರಾಡುತ್ತಿದ್ದ ಮಾತುಗಳು ಸಿಡಿಲಿನ ಹೊಡೆತದಂತೆ ಒಂದೊಂದೂ ಸ್ಮೃತಿಪಥಕ್ಕೆ ಬರತೊಡಗಿದವು. ಜಯ ಪಟ್ಟ ಪಾಡೆಲ್ಲಾ ಅಂದೇ ಆದಂತೆ ಭಾಸವಾಗತೊಡಗಿತು. ಉದ್ವೇಗದಿಂದ ಲಕ್ಷ್ಮಣನ ದೇಹ ಕಂಪಿಸತೊಡಗಿತು.

'ಇಲ್ಲ-ಇಲ್ಲ. ಅವರ ಮುಖವನ್ನು ಮತ್ತೆ ನೋಡುವುದಿಲ್ಲ. ಬೆಂಗಳೂರು—ಬೆಂಗಳೂರು ಬೇಡ. ಗಾಡಿ ಬೆಂಗಳೂರಿನಲ್ಲಿ ನಿಂತೊಡನೆಯೇ ಮೈಸೂರಿಗೆ ಹೋಗುವುದು' ಎಂದು ನಿಶ್ಚಯಿಸಿಕೊಂಡ.

೨೬

ರಾಮಚಂದ್ರನ ಕೋರ್ಟು ಜಗಳಕ್ಕೆ ಪ್ರಸಿದ್ಧವಾಗಿಬಿಟ್ಟಿತ್ತು. ಅವನ ಕೋರ್ಟಿಗೆ ಹೋಗುತ್ತಿದ್ದ ಲಾಯರು ಹೊಸಬನಾಗಲಿ, ಹಳಬನಾಗಲಿ—ಅವನೊಂದಿಗೆ ಕಾದದೆ ಬರುತ್ತಿರಲಿಲ್ಲ. ಕಕ್ಷಿಗಾರರ ಪಕ್ಷವೇನಿದೆಯೆಂದು ಲಾಯರು ಹೇಳುವುದಕ್ಕೆ ಅವಕಾಶವೇ ಸಿಕ್ಕುತ್ತಿರಲಿಲ್ಲ. ಮ್ಯಾಜಿಸ್ಟ್ರೇಟರಿಗೆ ಮುಂದಿನ ಕೇಸಿಗೆ ಹೋಗುವ ಆತುರ. ಎಲ್ಲರಿಗಿಂತಲೂ ಹೆಚ್ಚಾಗಿ ಕೇಸುಗಳ ವಿಚಾರಣೆಯನ್ನು ನಡೆಸಿದ್ದೇನೆಂದು ತೋರಿಸುವ ಭರದಲ್ಲಿ ಕಕ್ಷಿಗಾರರೂ ಲಾಯರುಗಳೂ ನುಚ್ಚುನುರಿಯಾಗಿಬಿಡುತ್ತಿದ್ದರು. ಮ್ಯಾಜಿಸ್ಟ್ರೇಟರು ಆಕ್ಷೇಪಣೆಯನ್ನು ತೆಗೆಯುತ್ತಲೇ ಲಾಯರು

"ಮಹಾಸ್ವಾಮಿಯವರು ಬೇಕಾದ ಹಾಗೆ ನಿರ್ಣಯಮಾಡಬಹುದು. ಕೇಸನ್ನು ವರ್ಗಾಯಿಸಬೇಕೆಂದು ನಾವು ಅರ್ಜಿ ದಾಖಲು ಮಾಡುವವರಿದ್ದೇವೆ" ಎಂದು ಹೇಳಿಬಿಡುತ್ತಿದ್ದರು.

ಕೋರ್ಟೆಂದರೆ ಅಸಂತುಷ್ಟಿಯ ತೌರುಮನೆಯಾಗಿಬಿಟ್ಟಿತು. ಮ್ಯಾಜಿಸ್ಟ್ರೇಟರ

ಮೇಲೆ ನಿತ್ಯವೂ ಹೈಕೋರ್ಟಿಗೆ ದೂರುಗಳು ಹೋಗುತ್ತಲೇ ಇದ್ದವು. ಹಾಗೆ ದೂರು ಹೊತ್ತ ಲಾಯರು ಕೋರ್ಟಿಗೆ ಬಂದರೆ ಅವರನ್ನು ಮನಸ್ಸು ಬಂದ ಹಾಗೆ ಬಯ್ದು ತನ್ನ ಕೋಪವನ್ನು ರಾಮಚಂದ್ರ ಉಪಶಮನ ಮಾಡಿಕೊಳ್ಳುತ್ತಿದ್ದ. ರಾಮಚಂದ್ರನ ಕೋರ್ಟುವ್ಯವಹಾರ ನಗೆಯ ಮಾತಾಗುತ್ತ ಬಂತು.

ಸೊಸೈಟಿ, ಬ್ಯಾಂಕುಗಳು ತಪ್ಪಿಹೋದಮೇಲೆ ರಾಮಚಂದ್ರನ ಮೇಲು ವರಮಾನ ನಿಂತೇಹೋಯಿತು. ಅವನಿಗೆ ಬರುತ್ತಿದ್ದ ಸಂಬಳದಲ್ಲಿ ಸಂಸಾರದ ಖರ್ಚು ಕಳೆದು ಹೆಚ್ಚು ಸಿಗುತ್ತಿರಲಿಲ್ಲ. ಒಮ್ಮೊಮ್ಮೆ ತಿಳಿದ ಲಾಯರುಗಳ ದಯೆಯಿಂದ ಒಂದೆರಡು ಉಂಡೆ ನೋಟುಗಳು ಕೈಹತ್ತುತ್ತಿದ್ದವು. ಬರಬರುತ್ತ ಅದನ್ನೇ ಕೋರ್ಟಿನ ಕ್ರಮ ಮಾಡುತ್ತ ಬಂದ. ಒಂದೊಂದು ಸಲ ಎರಡು ಪಕ್ಷದವರಿಂದಲೂ ಮರ್ಯಾದೆಯನ್ನು ಸ್ವೀಕರಿಸಿ ಹೆಚ್ಚು ಕೊಟ್ಟವರ ಕಡೆ ನ್ಯಾಯವನ್ನು ತೀರ್ಮಾನಿಸುತ್ತಿದ್ದ.

ಕ್ರಿಮಿನಲ್ ಮೊಕದ್ದಮೆಯೆಂದರೆ ನ್ಯಾಯ ಯಾವಾಗಲೂ ಪೋಲೀಸಿನವರ ಕಡೆಯದೆಂದೇ ಮ್ಯಾಜಿಸ್ಟ್ರೇಟರ ಭಾವನೆ. ಆಪಾದಿತನಿಗೆ ಹನ್ನೊಂದು ಗಂಟೆಗೆ ಬರಹೇಳಿ ನಾಲ್ಕೂವರೆ ಗಂಟೆಗೆ ತೀರ್ಪನ್ನು ಕೊಡುತ್ತಿದ್ದುದು ರಾಮಚಂದ್ರನ ಕೋರ್ಟಿನ ಹಿರಿಮೆಯಾಗಿದ್ದಿತು. ಲಾಯರು ಸೆಷನ್ಸ್ ಕೋರ್ಟಿನಲ್ಲಿ ಅರ್ಜಿ ಹಾಕಿ ಆಪಾದಿತನನ್ನು ಮನೆಗೆ ಕರೆದೊಯ್ಯಲು ಸಾಧ್ಯವಾಗದಂತೆ ಕೋರ್ಟು ಮುಚ್ಚುವ ಹೊತ್ತಿಗೆ ತೀರ್ಪು ಹೇಳುತ್ತಿದ್ದ. ನಿರಪರಾಧಿಗಳಾದ ಆಪಾದಿತರು ಅನವಶ್ಯಕವಾಗಿ ಒಂದು ರಾತ್ರಿಯನ್ನು ಜೈಲಿನಲ್ಲಿ ಕಳೆಯಬೇಕಾಗುತ್ತಿತ್ತು.

ಇದು ಆಗಾಗ್ಗೆ ಎಲ್ಲ ಪತ್ರಿಕೆಗಳಲ್ಲಿಯೂ ಹರಕುಮುರುಕು ಮಾತಾಗಿ ಪ್ರಕಟವಾಗುತ್ತಿತ್ತು. 'ವೀರಕರ್ಣಾಟಕ'ದಲ್ಲಿ ಮಾತ್ರ ಹೆಚ್ಚು ವಿವರಗಳೂ ಹೆಚ್ಚು ಸಂಗತಿಗಳೂ ಪ್ರಕಟವಾಗುತ್ತಿದ್ದವು. ಪತ್ರಿಕೆಯ 'ನ್ಯಾಯಸ್ಥಾನ ವಿಭಾಗ'ದಲ್ಲಿ ಮೊಕದ್ದಮೆಯ ವಿವರ, ತೀರ್ಪುಗಳು ಆಮೂಲಾಗ್ರವಾಗಿ ಪ್ರಕಟವಾಗುತ್ತಿದ್ದವು. ಕಾಯಿದೆ ಪಾಠಮಾಡದ ಸಾಮಾನ್ಯ ಓದುಗರು ಸಹ ಈ ನ್ಯಾಯವಿಮರ್ಶೆಯ ರೀತಿಯನ್ನು ಅವಹೇಳನ ಮಾಡಲಾರಂಭಿಸಿದರು.

ತನ್ನ ವ್ಯವಹಾರವೆಲ್ಲಾ ಇಷ್ಟು ವಿವರವಾಗಿ ಪತ್ರಿಕೆಯವರಿಗೆ ಹೇಗೆ ತಿಳಿಯುತ್ತದೆ ಎಂದು ರಾಮಚಂದ್ರ ಯೋಚಿಸಿದ. 'ವೀರಕರ್ಣಾಟಕ' ಸಂಪಾದಕರಿಗೆ ಹೇಳಿಕಳುಹಿಸಿ ಇಂತಹ ಸುದ್ದಿಗಳನ್ನು ಪ್ರಕಟಿಸಬಾರದೆಂದು ತಿಳಿಸೋಣವೇ ಎಂದು ಯೋಚಿಸಿದ. ಹೇಳಿಕಳುಹಿಸಿದ್ದ ಸಂಗತಿಯನ್ನೂ ಸಂಪಾದಕ ಪ್ರಕಟಿಸಿಬಿಟ್ಟರೆ? ರಾಮಚಂದ್ರನಿಗೆ ಬಹಳ ಯೋಚನೆಗಿಟ್ಟು

ಕೊಂಡಿತು. ಏನು ಮಾಡುವುದಕ್ಕೂ ಮಾರ್ಗವಿಲ್ಲದಂತಾಯಿತು.

'ಏನು ಮಾಡುವುದು ?' ಎಂದು ಯೋಚಿಸುತ್ತಿದ್ದಂತೆ 'ವೀರಕರ್ಣಾಟಕ' ದಲ್ಲಿ ಒಬ್ಬ ಮ್ಯಾಜಿಸ್ಟ್ರೇಟರು ಒಂದು ತೀರ್ಪನ್ನು ಬರೆದು, ಅನಂತರ ಎದುರು ಕಡೆಯವರ ಸಂಭಾವನೆಗೆ ಮರುಳಾಗಿ ಆ ತೀರ್ಪನ್ನು ರದ್ದುಮಾಡಿ ಬೇರೆ ತೀರ್ಪನ್ನು ಕೊಟ್ಟ ವಿಚಾರ ಪ್ರಕಟವಾಗಿಬಿಟ್ಟಿತು. ಪತ್ರಿಕೆಯವರು ಕೇಸಿನ ವಿವರವನ್ನೆಲ್ಲಾ ಹೈಕೋರ್ಟಿಗೆ ಕಳುಹಿಸಿಕೊಟ್ಟು ಹೈಕೋರ್ಟು ವಿಚಾರಣೆ ಯನ್ನು ಆರಂಭಿಸದಿದ್ದರೆ ತಾವು ಮ್ಯಾಜಿಸ್ಟ್ರೇಟರ ಕುಲಗೋತ್ರಗಳನ್ನೆಲ್ಲಾ ಪ್ರಕಟಿಸುವುದಾಗಿ ತಿಳಿಸಿದರು. ಹೈಕೋರ್ಟಿನ ಅಧಿಕಾರಿಗಳು ರಾಮಚಂದ್ರನ ವ್ಯವಹಾರಗಳನ್ನು ವಿಚಾರಿಸಲಾರಂಭಿಸಿದರು. ಇದರ ಪರಿಣಾಮವಾಗಿ ರಾಮಚಂದ್ರ ಎರಡು ತಿಂಗಳು ರಜೆ ತೆಗೆದುಕೊಳ್ಳಬೇಕಾಯಿತು.

ರಾಮಚಂದ್ರ ರಜೆ ತೆಗೆದುಕೊಂಡು ಮನೆಯಲ್ಲಿ ಕುಳಿತಾಗಲೇ ಗೋಪಾಲ ನಿಗೆ ಪತ್ರಿಕೆಯಲ್ಲಿ ಮ್ಯಾಜಿಸ್ಟ್ರೇಟರ ಮೇಲೆ ಬರುತ್ತಿದ್ದ ಸುದ್ದಿಗಳ ಮರ್ಮ ಗೊತ್ತಾದದ್ದು. ಈ ಸುದ್ದಿಗಳೆಲ್ಲಾ 'ವೀರಕರ್ಣಾಟಕ'ದಲ್ಲಿ ಪ್ರಕಟವಾದದ್ದು ಅವನಿಗೆ ತುಂಬ ಆಶ್ಚರ್ಯವನ್ನು ಉಂಟುಮಾಡಿತು. 'ಇದರ ಹಿಂದೆ ವೆಂಕಟೇಶಯ್ಯನ ಕೈಯೇನಾದರೂ ಇರಬಹುದೇ ?' ಎಂದು ಯೋಚಿಸಿದ. ಮೊದಲು ಅಣ್ಣನನ್ನು ಮಾತನಾಡಿಸಿ ಮುಂದೆ ವೆಂಕಟೇಶಯ್ಯನನ್ನು ಕಾಣುವು ದೆಂದು ನಿರ್ಧರಿಸಿದ. ಆದರೆ ಅಣ್ಣನನ್ನು ಕೇಳುವುದು ಹೇಗೆ ? ಹೇಗಾದರೂ ಕೇಳಿಬಿಡುವುದೆಂದೇ ನಿಶ್ಚಯಿಸಿದ.

ರಾಮಚಂದ್ರ ಭೂಮಿಗೆ ಇಳಿದುಹೋಗಿಬಿಟ್ಟ. ಈ ಪತ್ರಿಕಾಸುದ್ದಿಯನ್ನು ಇಷ್ಟು ದೂರ ಬೆಳೆಯಲು ಅವಕಾಶ ಕೊಟ್ಟದ್ದು ತಪ್ಪಾಯಿತೆಂದು ತಿಳಿದು ಕೊಂಡ. 'ಮುಂದೇನು ಗತಿ ? ಮಾತು ಹೈಕೋರ್ಟಿನವರೆಗೂ ಮುಟ್ಟಿದೆ. ಕೆಲಸದ ಬಾಯಿಗೆ ಮಣ್ಣು ಬಿದ್ದರೇನು ಗತಿ ?' ಎಂದು ಯೋಚನೆ ಹಿಡಿಯಿತು. ಅನ್ನ ಸೇರದಾಯಿತು, ನಿದ್ದೆ ಬಾರದಾಯಿತು. ತನ್ನ ಪರವಾಗಿ ಯಾರಾದರೂ ಸ್ವಲ್ಪ ಕಷ್ಟಪಡಬಾರದೆ ಎಂದು ಯೋಚಿಸಿದ. ಯಾರನ್ನು ಕೇಳುವುದು ? ಈಗ ತನ್ನ ಬಡತನವನ್ನು ಶಪಿಸಿದ. ನಿಜವಾದ ಬಂಧುಗಳು, ಹಿತೈಷಿಗಳು, ಕಷ್ಟದಲ್ಲಿ ಜತೆಗೆ ನಿಲ್ಲುತ್ತಿದ್ದವರು ತನ್ನ ನಡತೆಗೆ ಬೇಸರಪಟ್ಟು ದೂರವಾಗಿದ್ದರು. ಇನ್ನು ಗೆಳೆಯರು–ಗೆಳೆಯರು ಯಾರೂ ಇರಲೇ ಇಲ್ಲವೆಂದು ನೆನೆದು ಬಹಳ ದುಃಖಿತ ನಾದ. ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ, ಬೇರೆಬೇರೆ ಕಾರಣಗಳಿಗೆ ತನ್ನ ಸಮೀಪಗತರಾದವರು. ಈಗ ಅವರು ಯಾರಿಗೂ ತನಗೂ ನಿಕಟ ಬಾಂಧವ್ಯವಿರಲಿಲ್ಲ. 'ನನ್ನ ಅಧಿಕಾರ, ಹಣ ಮತ್ತು ದರ್ಪಗಳೆಲ್ಲವೂ ಈಗ

ನಿರರ್ಥಕವೇ' ಎಂದು ಚಿಂತಿಸಿದ.

ರಾಮಚಂದ್ರನ ಅವಗುಣಗಳನ್ನು ಅವನ ದುಃಖ ಮರೆಸುತ್ತಿತ್ತು. ಗೋಪಾಲ ಸಮಾಧಾನ ಹೇಳಲು ಧೈರ್ಯಮಾಡಿದ.

"ಅಣ್ಣಾ !"

"ಏನಪ್ಪಾ, ಗೋಪೂ ?"

"ಒಂದು ಮಾತು. ಕೇಳು ಅಂದರೆ ಕೇಳುತ್ತೇನೆ."

"ಕೇಳು."

"ವೀರಕರ್ಣಾಟಕದಲ್ಲಿ ಬಂದಿರುವುದು ನಿಜವೇ ?"

"ಅದೆಲ್ಲಾ ನಿನಗೆ ಸಂಬಂಧವಿಲ್ಲದ ವಿಚಾರ, ಗೋಪೂ. ನಿನ್ನ ಪಾಡಿಗೆ ನೀನು ಓದಿಕೊಂಡು ಇರು."

"ನನಗೆ ಸಂಬಂಧಪಟ್ಟ ವಿಚಾರವಾದ್ದರಿಂದಲೇ ಕೇಳಿದೆ. ಆ ಪತ್ರಿಕೆಯ ವಿಚಾರ ನನಗೆ ಒಂದೆರಡು ವಿಷಯಗಳು ಗೊತ್ತಿವೆ."

"ಏನು—ಹೇಳು."

"ನಾನು ಕೇಳಿದ ಪ್ರಶ್ನೆಗೆ ಮೊದಲು ಉತ್ತರ ಬರಲಿ."

ರಾಮಚಂದ್ರನಿಗೆ ಬಹಳ ಕಷ್ಟಕ್ಕೆ ಬಂತು. ತನ್ನ ಚಾರಿತ್ರ್ಯವನ್ನು ತಮ್ಮನೆದುರಿಗೆ ಒಪ್ಪಿಕೊಳ್ಳಬೇಕಲ್ಲಾ ಎಂದು ವಿಷಾದಿಸಿದ. ಆದರೆ ವಿಧಿಯಿಲ್ಲ —'ಆಪತ್ಕಾಲೇ ನಾಸ್ತಿ ಮರ್ಯಾದಾ.'

"ನಿಜ, ಗೋಪೂ. ಅವಿವೇಕದ ಕೆಲಸ ಮಾಡಿದೆ. ಅದೇನದು 'ವೀರ ಕರ್ಣಾಟಕ'ದ ವಿಚಾರ ?"

ಗೋಪುವಿಗೆ ಬಹಳ ದುಃಖವಾಯಿತು. ಅಣ್ಣನ ವಿದ್ಯೆ, ಗೌರವ, ಸಂಸ್ಕೃತಿ, ಅಧಿಕಾರ ಎಲ್ಲದರ ಪರ್ಯವಸಾನ ಇಷ್ಟರಲ್ಲಿ ಆಯಿತೇ ? ಬಾಳು ನಡತೆಯಿಲ್ಲದೆ, ನೀತಿಯಿಲ್ಲದೆ ಮುಂದಕ್ಕೆ ಸಾಗಬೇಕೇ ? ಹಣ ಸಂಪಾದಿಸುವುದೊಂದೇ ಜೀವನದ ಗುರಿಯೇ ? ಎಂದು ಯೋಚಿಸಿದ.

"ಅದೇನು ಗೋಪೂ, ವೀರಕರ್ಣಾಟಕದ ವಿಷಯ ?"

"ಅದಕ್ಕೂ ವೆಂಕಟೇಶ ಭಾವನಿಗೂ ಸ್ವಲ್ಪ ಸಂಬಂಧವಿದೆ."

"ಹಾ ! ಹಾಗಂದರೆ ?—"

"ಹಾಗಂದರೆ—ಅವನು ಅದರ ಮಾಲಿಕ. ಸಂಪಾದಕ ಅನಂತರಾಯ ಅದರ ನೌಕರ ಅಷ್ಟೇ."

"ಹಾಗಾದರೆ ನಾನು ಕೆಟ್ಟೆ !"

"ಏತಕ್ಕೆ ಹಾಗೆನ್ನುವೆ ?"

"ವೆಂಕಟೇಶ ಹಿಂದೆ ಒಂದು ಮಾತು ಹೇಳಿದ್ದ–ಈಗ ಅವನ ಕೈ ಮೇಲುಗೈ. ಅವನನ್ನು ನಾನು ಮನೆಯಿಂದ ಓಡಿಸಿದ್ದೆ—ಈಗ ನನ್ನನ್ನು ಕೆಲಸದಿಂದ ಓಡಿಸುತ್ತಾನೆ."

"ಇದಕ್ಕೇನು ಮಾಡುವೆ ?"

"ಏನು ಮಾಡಲಿ, ಹೇಳು. 'ಇತ್ತ ಹೊಳೆ, ಅತ್ತ ಕೆರೆ' ಎನ್ನುವ ಹಾಗೆ ಆಗಿದೆ ನನ್ನ ಬಾಳು."

"ವೆಂಕಟೇಶ ಭಾವನನ್ನು ಒಮ್ಮೆ ಏತಕ್ಕೆ ನೋಡಬಾರದು ?"

"ಪ್ರಯೋಜನವೇನು ?"

"ನಿನಗೆ ತೊಂದರೆಯಾಗದಂತೆ ಅವನು ಇದರ ಇತ್ಯರ್ಥ ಮಾಡಬಹುದು."

"ಅಯ್ಯೋ—ನನ್ನ ಹಣೆಯಬರಹವೇ! ವೆಂಕಟೇಶನ ಕೃಪೆಗೆ ನಾನು ಪಾತ್ರನಾಗಬೇಕಾಗಿದೆಯಲ್ಲಾ."

"ಹಾಗಾದರೆ ಕೆಲಸವನ್ನು ಕಳೆದುಕೊಳ್ಳುವೆಯೇನು ?"

"ಇದು ವೆಂಕಟೇಶನ ಕೈಯೂ ಮೀರಿದೆ. ಹೈಕೋರ್ಟಿನವರೆಗೆ ಹೋಗಿದೆಯಪ್ಪಾ. ಅವರು ವಿಚಾರಣೆಗೆ ಆರಂಭಿಸಿದ್ದಾರೆ."

"ಪಾರ್ಟಿಗಳು ರಾಜಿಯಾಗಿ ಕೇಸನ್ನು ಹಿಂದಕ್ಕೆ ತೆಗೆದುಕೊಂಡರೆ ?"

"ಆಗ ಆಗಬಹುದು. ಅಷ್ಟು ಮಾಡುವವರು ಯಾರು ?"

"ವೆಂಕಟೇಶ ಭಾವ."

"ಅವನ ಕಾಲು ಹಿಡಿಯುವ ಹೊತ್ತು ಬಂತೇ ?"

"ನಿನ್ನ ತಂಗೀ ಮನೆಗೆ ಹೋಗುವುದಕ್ಕೆ ಇಷ್ಟೇಕೆ ಯೋಚನೆ ?"

ಅಳೆದೂ ಸುರಿದೂ ಕೊನೆಗೆ ವೆಂಕಟೇಶನನ್ನು ಕಾಣುವುದೆಂದು ರಾಮಚಂದ್ರ ನಿಶ್ಚಯಿಸಿದ. ಧನ, ಅಧಿಕಾರ, ದರ್ಪಗಳಿಂದ ವಿಶ್ವರೂಪತಾಳಿದ್ದ ದೇಹ ಕುಗ್ಗಿ ಕುಬ್ಜಾವತಾರ ತಾಳಿಬಿಟ್ಟಿತು. ಮನಸ್ಸು ಬಹಳ ನೊಂದಿತು. ವೆಂಕಟೇಶನ ಮಾತು ಸತ್ಯವಾಯಿತಲ್ಲಾ ಎಂದು ಕೊರಗಿದ.

ರಾಮಚಂದ್ರ ತಮ್ಮ ಮನೆಗೆ ಬಂದುದು ಶಾಂತನಿಗೆ ಆಶ್ಚರ್ಯವನ್ನುಂಟು ಮಾಡಿತು. ರೈಲಿನಿಂದಿಳಿದವನು ನೇರವಾಗಿ 'ಮಾಡರ್ನ್ ಹಿಂದೂ ಹೋಟೆಲ್' ನಲ್ಲಿ ಸಾಮಾನನ್ನು ಹಾಕಿ, ಸ್ನಾನ ಉಪಾಹಾರಗಳನ್ನು ತೀರಿಸಿಕೊಂಡು ವೆಂಕಟೇಶಯ್ಯನ ಮನೆಗೆ ಹೊರಟ. ಅಣ್ಣನಿಗೆಂದು ಕಾಫಿ ಮಾಡಿ ತಂದುಕೊಟ್ಟ ಶಾಂತಾ

"ಸಾಮಾನೆಲ್ಲಿ ರಾಮಣ್ಣ ?" ಎಂದಳು.

"ಹೋಟಲ್ಲಿನಲ್ಲಿ ಹಾಕಿ ಬಂದೆನಮ್ಮ."

"ಏತಕ್ಕೆ? ಇಲ್ಲೀ ತರಬಾರದಿತ್ತೇ?"

"ಸ್ವಲ್ಪ ಅವಸರದಲ್ಲಿ ಬಂದೆ. ಹೆಚ್ಚು ನಿಲ್ಲುವ ಹಾಗಿಲ್ಲ. ವೆಂಕಟೇಶ ಎಲ್ಲಿ?"

"ಬೆಳಿಗ್ಗೆ ಎದ್ದು ಎಲ್ಲಿಗೋ ಹೋದರು."

"ಬರುವುದು ಯಾವಾಗ?"

"ಗೊತ್ತಿಲ್ಲ, ಒಂದೊಂದು ದಿವಸ ಊಟಕ್ಕೇ ಬರುವುದಿಲ್ಲ."

ರಾಮಚಂದ್ರನಿಗೆ ಆಶಾಭಂಗವಾಯಿತು. ಮುಖ ಸಪ್ಪೆಯಾಯಿತು.

"ಏತಕ್ಕಣ್ಣಾ, ಈಗಲೇ ನೋಡಬೇಕಾಗಿತ್ತೇನು....ಏನು ವಿಷಯ—ನೀನೇತಕ್ಕೆ ಹೀಗೆ ಇಳಿದುಹೋಗಿದ್ದೀ?—ಮೈಯಲ್ಲಿ ಚೆನ್ನಾಗಿಲ್ಲವೇ?"

"ಏನೂ ಇಲ್ಲ, ಶಾಂತಾ. ನಿನ್ನ ಗಂಡ ನನಗೊಂದು ಉಪಕಾರ ಮಾಡಬೇಕಾಗಿದೆ."

"ಉಪಕಾರವೇ? ನಿನಗೆ! ಅವರು ಏನು ಮಾಡಲಾಗುತ್ತದೆ? ನಾವು ಬಡವರು."

"ಶಾಂತಾ, ನನ್ನ ಕುತ್ತಿಗೆಗೆ ಬಂದಿದೆಯಮ್ಮ. 'ವೀರಕರ್ಣಾಟಕ' ನೋಡಿಲ್ಲವೇ? ನನ್ನ ಕೆಲಸದ ಬಾಯಿಗೆ ಮಣ್ಣುಬೀಳುವ ಹಾಗಿದೆ."

"ಇದಕ್ಕೆ ಅವರೇನು ಮಾಡಲಾಗುತ್ತದೆ?"

"ವೆಂಕಟೇಶ ಮನಸ್ಸುಮಾಡಿದರೆ ಪತ್ರಿಕೆಯಲ್ಲಿ ನಾಲ್ಕು ಒಳ್ಳೆಯ ಮಾತು ಬರೆಯಬಹುದು. ನನ್ನ ಮೇಲೆ ಹೈಕೋರ್ಟಿಗೆ ದೂರು ಹೊತ್ತಿರುವವರಿಗೆ ಹೇಳಿ ರಾಜಿ ಮಾಡಿಸಬಹುದು."

"ಅವರಿಗೂ ಇದಕ್ಕೂ ಏನು ಸಂಬಂಧ?"

"ಈಗ ಅವನ ಕೈ ಮೇಲು, ಶಾಂತಾ. ನಾನು ಕೆಳಗೆ ಬಿದ್ದಿದ್ದೇನೆ."

"ಅವರೂ ಒಂದು ದಿವಸ ಬಿದ್ದಿದ್ದವರಲ್ಲವೇ? ನೀನು ನಿರ್ದಾಕ್ಷಿಣ್ಯವಾಗಿ ಅವರನ್ನು ಮನೆಯಿಂದ ಹೊರದೂಡಿದೆಯಲ್ಲವೇ? ಈಗ ನಿನಗೇತಕ್ಕೆ ಉಪಕಾರ ಮಾಡಬೇಕು?"

"ನನ್ನ ತಂಗಿ ನೀನು—ನೀನೂ ಹೀಗೆನ್ನುವೆಯಾ?"

"ತಂಗಿ—ನಿನಗೆ ತಂಗಿ, ತಮ್ಮ, ಹೆಂಡತಿ, ಮಕ್ಕಳು ಯಾರೂ ಇಲ್ಲ. ಧನ, ಅಧಿಕಾರ, ದರ್ಪಗಳೇ ನಿನ್ನ ಸಕಲ ಸಾಮ್ರಾಜ್ಯ!"

"ನಾನು ಮಹಾಪರಾಧಿ, ಶಾಂತಾ. ನಿಮ್ಮೆಲ್ಲರ ವಿಚಾರದಲ್ಲಿಯೂ ಬಹಳ ಕೆಟ್ಟ ರೀತಿಯಲ್ಲಿ ನಡೆದುಕೊಂಡೆ. ನನ್ನನ್ನು ಕ್ಷಮಿಸಿ ಕಾಪಾಡಬೇಕು"

ಎಂದು ಬಹಳ ದೀನನಾಗಿ ಕೇಳಿಕೊಂಡ. ಶಾಂತನ ಶಾಂತವದನದ ಮೇಲೆ ರಾಮಚಂದ್ರನ ಪೂರ್ವಚರಿತ್ರೆ ಚಿತ್ರಿತವಾಗುತ್ತಿತ್ತು. ಲಕ್ಷ್ಮಣ, ಜಯರ

ಜೀವನ ನೆನಪಿಗೆ ಬಂದು ಅವಳ ಹೃದಯವನ್ನು ಕಲ್ಲುಮಾಡಿತು. 'ಎಲ್ಲರ ಗೋರಿಯ ಮೇಲೆ ತಾನು ಸಾಮ್ರಾಜ್ಯ ಕಟ್ಟಬೇಕೆಂದು ಬಯಸಿದ. ಎಲ್ಲರೂ ಹಾಳಾಗಿಹೋಗಲಿ, ತಾನೊಬ್ಬ ಬದುಕಿದ್ದರೆ ಸಾಕೆಂದು ಹಾರೈಸಿದ....ಈಗ ಇವನು ಹಾಳಾಗಿಹೋಗುವ ಕಾಲ ಬಂದಿದೆ. ಹಾಳಾಗಿ ಹೋಗಲಿ ! ಇದರಿಂದ ಲೋಕಕ್ಕೇ ಕ್ಷೇಮವಾದೀತು' ಎಂದು ಮನಸ್ಸು ಕಟುವಾಗಿ ನುಡಿಯಿತು. ಮರುಕ್ಷಣವೇ 'ನನ್ನ ಅಣ್ಣನಲ್ಲವೇ? ಅವಿವೇಕದಿಂದ ಅವನು ಎಲ್ಲರನ್ನೂ ಹಿಂಸಿಸಿದರೆ ನಾವೂ ಹಿಂಸಿಸುವುದೇ? ಹಿಂಸೆಯಿಂದ ಅವನು ದೊಡ್ಡವನಾದ, ಕ್ಷಮೆಯಿಂದ ನಾವು ಚಿಕ್ಕವರಾದರೂ ಚಿಂತೆಯಿಲ್ಲ' ಎಂದು ಅಂತಃಕರಣ ನುಡಿಯಿತು.

ಶಾಂತಾ ಅಂತಃಕರಣದ ಈ ಹೊಯ್ದಾಟಕ್ಕೆ ಸಿಕ್ಕಿರುವಾಗಲೇ ವೆಂಕಟೇಶನೂ ಮನೆಗೆ ಬಂದ. ರಾಮಚಂದ್ರನನ್ನು ನೋಡಿ ಪರಮಾಶ್ಚರ್ಯವಾಯಿತು. ರಾಯರ ಮನೆಯಲ್ಲಿ ಆ ಪ್ರಕರಣವಾದಮೇಲೆ ಇಂದೇ ಅವರು ಒಬ್ಬರನ್ನೊಬ್ಬರು ಭೆಟ್ಟಿಯಾಗಿದ್ದುದು. ತನ್ನ ಮನೆಗೆ ಬಂದಿರುವನಲ್ಲಾ ಎಂದು ವೆಂಕಟೇಶನೇ ಮೊದಲು ಮಾತನಾಡಿಸಿದ.

"ಯಾವಾಗ ಬಂದೆಯಪ್ಪಾ ಬೆಂಗಳೂರಿಗೆ ?"

"ಇದೇ ಬೆಳಿಗ್ಗೆ."

"ಮನೆಯಲ್ಲಿ ಎಲ್ಲರೂ ಕ್ಷೇಮವೇ ?"

"ಎಲ್ಲರೂ ಕ್ಷೇಮ."

"ಇದೇನು ಈಗ ಬಂದದ್ದು, ಕೋರ್ಟಿಗೆ ರಜವೇನು ?"

"ಇಲ್ಲ. ಒಂದು ಕೆಲಸದ ಮೇಲೆ ಬಂದೆ."

ಆ ಕೆಲಸ ವೆಂಕಟೇಶನಿಗೆ ಚೆನ್ನಾಗಿ ಗೊತ್ತಿತ್ತು. ಮುಂದೆ ವೆಂಕಟೇಶ ಮಾತನಾಡದಿದ್ದುದನ್ನು ನೋಡಿ

"ವೆಂಕಟೇಶ, 'ವೀರಕರ್ಣಾಟಕ' ನಿನ್ನದೇ ?" ಎಂದು ಕೇಳಿದ.

"ಹೌದು, ನಿನಗೆ ಯಾರು ಹೇಳಿದರು ?"

"ಹೀಗೇ ಗೊತ್ತಾಯಿತು. ನಿನ್ನ ಪತ್ರಿಕೆಯಲ್ಲಿಯೇ ನನ್ನನ್ನು ಹೀಗೆ ಬಯಲಿಗೆಳೆಯುವುದೇ ?"

"ತಪ್ಪೇನೂ ಬರೆದಿಲ್ಲವಲ್ಲ. ಬರೆದುದು ಸುಳ್ಳಾಗಿದ್ದರೆ ಕೋರ್ಟಿದೆ, ಸರ್ಕಾರವಿದೆ. ಪತ್ರಿಕೆಯನ್ನು ನಿಲ್ಲಿಸಿಬಿಡಬಹುದಲ್ಲ ?"

"ನಿಜವಾಗಿದ್ದರೂ—ನೀನು ಪ್ರಕಟಿಸಬಹುದೇ ?"

"ಏತಕ್ಕೆ ಪ್ರಕಟಿಸಬಾರದು ? ಸ್ಥಾನದ ಬಲದಿಂದ ನೀನು ಮಾಡಬಾರದ

ಅನ್ಯಾಯಗಳನ್ನು ಮಾಡಬಹುದು, ಅದನ್ನು ಪತ್ರಿಕೆಯವರು ಪ್ರಕಟಿಸ ಬಾರದೋ ?"

"ನಾನು ಮಾಡಿದ ಅನ್ಯಾಯವೇನು ?"

"ಎರಡು ತೀರ್ಪು—ಎರಡು ಕಡೆಯಿಂದಲೂ ದುಡ್ಡು ತೆಗೆದುಕೊಂಡದ್ದು—ನಿನ್ನ ಮೇಲೆ ಬರುತ್ತಿದ್ದ ಕಾಗದಪತ್ರಗಳಿಗೆ ನಮ್ಮ ಕಾರ್ಯಾಲಯದಲ್ಲಿ ಬೇರೆಯೊಂದು ಫೈಲನ್ನೇ ತೆಗೆಯಬೇಕಾಯಿತು. ನಾಳೆ ವ್ಯವಹಾರ ಕೋರ್ಟಿಗೆ ಹೋದರೆ ನಮ್ಮ ತಲೆ ನಾವು ಕಾಯ್ದುಕೊಳ್ಳಬೇಕಲ್ಲಾ."

"ಇದರಿಂದ ನನ್ನ ಗತಿಯೇನಾಗಬಹುದೆಂದು ಯೋಚಿಸಿದೆಯಾ ?"

"ಯೋಚಿಸಿದೆ. ಕೆಲಸದಿಂದ ಡಿಸ್‌ಮಿಸ್ ಆಗಬಹುದೆಂದು."

"ಅದು ನಿನಗೆ ಸಮ್ಮತವೇ ?"

"ಪೂರ್ಣವಾಗಿ ಸಮ್ಮತ. ನನಗಾಗಿ ಸಮ್ಮತ, ಲೋಕಕ್ಕಾಗಿ ಸಮ್ಮತ. ನಿನ್ನ ಅಧಿಕಾರದರ್ಪರಥದ ಗಾಲಿಗೆ ಸಿಕ್ಕಿ ಎಷ್ಟು ಸಂಸಾರ ನುಚ್ಚುನೂರಾಗಿದೆ ಬಲ್ಲೆಯಾ ? ಎಷ್ಟು ಜನ ನಿರಪರಾಧಿಗಳು ಮನೆಮಠವಿಲ್ಲದ ಭಿಕಾರಿಗಳಾಗಿದ್ದಾರೆ ಬಲ್ಲೆಯಾ ? ಕೈಯಲ್ಲಿ ಅಧಿಕಾರವಿದೆಯೆಂದು ಜನಹಿಂಸೆಯನ್ನಾರಂಭಿಸಿದರೆ ಎಷ್ಟು ದಿವಸ ನಡೆಯುತ್ತದೆ ? ನನ್ನನ್ನು ತುಳಿದೆ. ರಾಯರು ತಮ್ಮ ದೈವೀಗುಣದಿಂದ ಹಾಕುತ್ತಿದ್ದ ಅನ್ನಕ್ಕೆ ಕಲ್ಲು ಬೆರಸುತ್ತಿದ್ದೆ. ಮನೆ ಬಿಟ್ಟು ದೂಡಿದೆ. ಸ್ವಂತ ತಮ್ಮನ ಹೆಂಡತಿಯನ್ನು ಕಟುನುಡಿಗಳಿಂದ ಆಹುತಿ ತೆಗೆದುಕೊಂಡೆ. ಅವನು ದಿಕ್ಕಿಲ್ಲದ ಪರದೇಶಿಯಂತೆ ಅಲೆಯುವ ಹಾಗೆ ಮಾಡಿದೆ. ಹೆತ್ತು ಹೊತ್ತ ತಾಯಿಯೇ ಕಣ್ಣೀರು ಕಾಲುವೆಯಲ್ಲಿ ನಿತ್ಯ ಮಿಾಯುವಂತೆ ಮಾಡಿದೆ. ಈಗ ಅಧಿಕಾರಿ, ದೊಡ್ಡ ಮ್ಯಾಜಿಸ್ಟ್ರೇಟ್ ! ಬೇಕಾದವರನ್ನು ಜೈಲಿಗೆ ಕಳುಹಿಸಬಲ್ಲೆ. ಹಾಗೇ ಕಳುಹಿಸುತ್ತಿರುವೆ. ಲಂಚ ಕೊಡಲಿಲ್ಲವೆಂದು ಕಕ್ಷಿಗಾರರನ್ನು ಕೊಲ್ಲುತ್ತಿರುವೆ. ನಿನಗಾಗ ಶುಕ್ರದೆಸೆ—ಈಗ ಯಾವ ದೆಶೆ.... ಶನಿದೆಶೆ !"

"ನಿಜ, ನಿಜ ವೆಂಕಟೇಶ. ನಿನ್ನ ಮಾತೆಲ್ಲವೂ ಸತ್ಯ. ಆದರೆ ನನಗೆ ದಯೆ ತೋರಲಾರೆಯಾ ? ನನ್ನೆಲ್ಲ ಅಪರಾಧಗಳನ್ನೂ ಕ್ಷಮಿಸಿ ನನ್ನನ್ನು ಬದುಕಿಸಲಾರೆಯಾ ?"

"ನಿನ್ನಲ್ಲಿ ನನಗೆ ದಯೆಯಿಲ್ಲ, ಮರುಕವಿಲ್ಲ, ಕರುಣೆಯಿಲ್ಲ. ಒಂದು ದಿವಸ ನೀನು ಇಂತಹ ಗೊಂದಲಕ್ಕೆ ಬೀಳುವೆ ಎಂದು ನನಗೆ ಗೊತ್ತಿತ್ತು. ನನ್ನನ್ನು ಕಸಕ್ಕಿಂತ ಕಡೆಯಾಗಿ ಕಾಣುತ್ತಿದ್ದ ನೀನು ಮೊಣಕಾಲೂರಿ ಒಂದು ದಿನ ನನ್ನ ಕೃಪಾಭಿಕ್ಷೆ ಬೇಡುವೆಯೆಂದು ನನಗೆ ಗೊತ್ತಿತ್ತು. ಅದು ನಿನ್ನ ಕಾಲ-

ಇದು ನನ್ನ ಕಾಲ. ನನ್ನ ಕಾಲ ಬಂದಾಗ ನಿನಗೆ ಚೆನ್ನಾಗಿ ಬುದ್ಧಿ ಕಲಿಸ ಬೇಕೆಂದು ನಿರ್ಧರಿಸಿದ್ದೆ. ಈಗ ಆ ಕಾಲ ಬಂದಿದೆ. ಬುದ್ಧಿ ಕಲಿಸುವೆ. ನಿನ್ನ ಹಳೆಯ ಬೋರ್ಡನ್ನು ನೀನು ಹುಡುಕಿಕೊಂಡು ಹೋಗುವಂತೆ ಮಾಡುವೆ. ನನಗೆ ನಿಲ್ಲುವುದಕ್ಕೆ ಹೆಚ್ಚು ವೇಳೆಯಿಲ್ಲ"

ಎಂದು ಹೇಳಿ ಹೊರಟೇಬಿಟ್ಟ. ರಾಮಚಂದ್ರ ಮಾತುಗಾಣದಾದ. ಭಯ ದಿಂದ ಮುಖವೆಲ್ಲ ಬಿಳುಪೇರಿ ಬೆವರುಹನಿಗಳು ಹಣೆಯನ್ನು ಸಾಲುಗಟ್ಟಿದವು. ಮೈಯಲ್ಲಿ ನಡುಕ ಹುಟ್ಟಿತು.

"ಹೋಗಿ ಬರುತ್ತೇನಮ್ಮಾ, ಶಾಂತಾ. ಸಾಧ್ಯವಾದರೆ ನಿನ್ನ ಯಜಮಾನ ರಿಗೆ ಒಂದು ಮಾತು ಹೇಳಿನೋಡು."

"ಆಗಲಣ್ಣಾ" ಎಂದು ಹೇಳಿದಳು. ಅವನ ಕರುಣಾಜನಕ ಸ್ಥಿತಿ ಅವಳ ಕಣ್ಣುಗಳಲ್ಲಿ ನೀರು ತರಿಸಿತ್ತು.

ಮಧ್ಯಾಹ್ನ ವೆಂಕಟೇಶಯ್ಯನ ಊಟವಾದಮೇಲೆ ವೀಳೆಯದೆಲೆ ಮಡಿಸಿ ಕೊಡುತ್ತ ಶಾಂತಾ ಮೆಲ್ಲನೆ ಮಾತು ತೆಗೆದಳು.

"ರಾಮಣ್ಣನ ವಿಚಾರ ಏನು ಮಾಡುತ್ತೀರಿ?"

"ಯಾವ ರಾಮಣ್ಣ?"

"ಯಾವ ರಾಮಣ್ಣ ಅಂದರೆ—ನಿಮ್ಮ ಭಾವ ರಾಮಣ್ಣ."

"ನನಗೆ ರಾಮಣ್ಣ ಎನ್ನುವ ಹೆಸರಿನ ಭಾವನೇ ಇಲ್ಲ."

"ಹಾಸ್ಯ ಸಾಕೊಂದ್ರೆ, ಹೇಳಿ."

"ಹೇಳುವುದನ್ನೆಲ್ಲಾ ಬೆಳಿಗ್ಗೆಯೇ ಹೇಳಿದೆನಲ್ಲಾ."

"ಬಹಳ ಕೆಟ್ಟು ಹೋಗುತ್ತಾನಂತಲ್ಲ."

"ಹೌದು. ಕೆಲಸ ಹೋಗುತ್ತದೆ."

"ನೀವು ಉಳಿಸಬಹುದು, ಏತಕ್ಕೆ ಉಳಿಸಬಾರದು?"

"ಏತಕ್ಕೆ ಉಳಿಸಬೇಕು, ಅವನು ಇತರರ ಮನೆ ಹಾಳುಮಾಡುವ ಪವಿತ್ರ ಕೆಲಸವನ್ನು ಮುಂದುವರಿಸಲೆಂದೇ?—ಇಂತಹ ಧರ್ಮಬುದ್ಧಿ ನನ್ನಲ್ಲಿಲ್ಲ."

"ಅವನೇನೋ ತಪ್ಪಿ ನಡೆದಿದ್ದಾನೆ. ತಿದ್ದುವುದಕ್ಕೆ ನಿಮಗೆ ಅವಕಾಶವಿರು ವಾಗ ನೀವೇತಕ್ಕೆ ತಿದ್ದಬಾರದು?"

"ಇದು ತಿದ್ದುವ ಅವಕಾಶವಲ್ಲ, ಪ್ರತೀಕಾರದ ಅವಕಾಶ. ಇಂದು ನಾನೇ ಅವನಾಗಿ ಅವನೇ ನಾನಾಗಿದ್ದರೆ ಏನು ಮಾಡುತ್ತಿದ್ದ, ಗೊತ್ತೇ?"

"ಗೊತ್ತು."

"ಅದನ್ನೇ ನಾನು ಮಾಡಬೇಕೆಂದಿರುವುದು."

"ನೀವು ಅವನನ್ನು ಭಾವನಲ್ಲ ಎನ್ನಬಹುದು—ನಾನು ಅಣ್ಣನಲ್ಲ ಎನ್ನಲಾಗುವುದೇ ?"

"ಆಗುವುದು—ಆಗಬೇಕು. ನಿನಗಾಗಿರುವ ಚಿತ್ರಹಿಂಸೆಯನ್ನು ನಾನು ಮರೆತಿರುವೆನೆಂದು ಭಾವಿಸಿರುವೆಯಾ ?"

"ನಾನು ಅವುಗಳನ್ನು ಮರೆತಿದ್ದೇನೆ."

"ನಿನ್ನದು ದೊಡ್ಡ ಗುಣ; ಆದರೆ ನಾನು ಮರೆತಿಲ್ಲ."

"ಅದು ಹೋಗಲಿ. ನನಗಾಗಿ ನೀವು ಅವನನ್ನು ಬದುಕಿಸಬೇಕು."

"ವಿಷಯ ನನ್ನ ಕೈಮೀರಿದೆ. ಪ್ರಯತ್ನಪಟ್ಟರೂ ಸಫಲವಾಗುವಹಾಗಿಲ್ಲ. ಹೈಕೋರ್ಟಿನ ತನಕ ಪಾರ್ಟಿಗಳೇ ದೂರು ತೆಗೆದುಕೊಂಡು ಹೋಗಿದ್ದಾರೆ."

"ನೀವು ರಾಜೀ ಮಾಡಿಸಬಹುದಂತಲ್ಲಾ. ಏನಾದರೂ ಮಾಡೀಂದ್ರೆ. ನನಗೋಸ್ಕರ ಇಷ್ಟು ಮಾಡಿ, ನಿಮ್ಮ ಉಪಕಾರದ ಋಣಕ್ಕೆ ಸಿಕ್ಕುವುದಕ್ಕಿಂತಲೂ ರಾಮಣ್ಣನಿಗೆ ಹೆಚ್ಚು ಶಿಕ್ಷೆ ಬೇಕೇ ?"

ಆ ಮಾತು ವೆಂಕಟೇಶನ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿತು. ರಾಮಚಂದ್ರನ ಭವಿಷ್ಯವನ್ನು ನಿರ್ಣಯಿಸುವ ಶಕ್ತಿ ತನಗುಂಟಾಯಿತಲ್ಲಾ ಎಂದು ಹಿಗ್ಗಿದ. ಹೆಂಡತಿಯ ಮಾತನ್ನೂ ಮೀರುವಹಾಗಿರಲಿಲ್ಲ. ಮೊದಮೊದಲು ಪ್ರತೀಕಾರದ ಆಸೆ ಮನಸ್ಸಿನಲ್ಲಿ ಗರ್ಜಿಸುತ್ತಿದ್ದರೂ ರಾಯರ ಮನೆ ಸೇರಿ ತಾನು ಬದುಕಿ, ಬೆಳೆದು, ಬಾಳಿದುದನ್ನು ಜ್ಞಾಪಿಸಿಕೊಂಡ. ರಾಮಚಂದ್ರನಿಗೋಸುಗ ತಾನು ಪ್ರಯತ್ನಿಸದಿದ್ದರೂ ರಾಯರ ದಿವ್ಯಸ್ಮೃತಿಗಾಗಿ ಪ್ರಯತ್ನಿಸಲು ನಿಶ್ಚಯಿಸಿದ.

ಪ್ರಯತ್ನ ಫಲಿಸಿತು. ಪಾರ್ಟಿಗಳು ರಾಜಿಗೊಪ್ಪಿಕೊಂಡು ಹೈಕೋರ್ಟಿಗೆ ಹಾಕಿದ್ದ ಮನವಿಯನ್ನು ಹಿಂದಕ್ಕೆ ತೆಗೆದುಕೊಂಡರು. ಹೈಕೋರ್ಟಿನ ನ್ಯಾಯಾಧೀಶರು ರಾಮಚಂದ್ರನ ಇತರ ವ್ಯವಹಾರಗಳಿಗೆ ಐದು ವರ್ಷ ಸಂಬಳವನ್ನು ಹೆಚ್ಚಿಸಕೂಡದೆಂದು ವಿಧಿಸಿ ಬೆಂಗಳೂರಿನಿಂದ ದೊಡ್ಡಬಳ್ಳಾಪುರಕ್ಕೆ ವರ್ಗಾಯಿಸಿಬಿಟ್ಟರು.

ಸುದ್ದಿ ರಾಮಚಂದ್ರನಿಗೆ ಮುಟ್ಟಿತು. ಅವನ ಮನಸ್ಸಿನಿಂದ ದೊಡ್ಡ ಹೊರೆಯನ್ನಿಳುಹಿದಂತಾಯಿತು. ನಾಚಿಕೆಯಿಂದ ತಲೆತಗ್ಗಿಸಿದ. 'ಯಾರನ್ನು ನಾನು ಕೇವಲ ನಿಕೃಷ್ಟವಾಗಿ ಕಾಣುತಿದ್ದೆನೋ ಅವರಿಂದಲೇ ಇಂತಹ ಉಪಕಾರವನ್ನು ಪಡೆಯಬೇಕಾಯಿತಲ್ಲಾ. ಯಾರನ್ನು ಮನೆ ಬಿಟ್ಟು ಹೊರ ದೂಡಿದೆನೋ ಅವರೇ ನನ್ನ ಮನೆಯನ್ನು ಉಳಿಸಬೇಕಾಯಿತಲ್ಲಾ' ಎಂದು ಯೋಚಿಸಿದ. ತನ್ನ ಹಿಂದಿನ ಮತ್ತು ಅಧಿಕಾರದ ಪ್ರಕರಣಗಳೆಲ್ಲ ಜ್ಞಾಪಕಕ್ಕೆ

ಬಂದವು. ಜತೆಯಲ್ಲಿ ತಡೆಯಲಾರದಷ್ಟು ದುಃಖ ಉಕ್ಕಿಬಂದಿತು. ಒಂದು ಕಡೆ ಮೀನಾಕ್ಷಮ್ಮನವರು ತನಗೆ ಮಾಡಿದ ಉಪಕಾರದ ಸ್ಮೃತಿ ಮತ್ತೊಂದು ಕಡೆ ತಾನು—ಲಕ್ಷ್ಮಣನಿಗೂ ಅವನ ಹೆಂಡತಿಗೂ ಮಾಡಿದ ಅಪಕಾರದ ಸ್ಮೃತಿಗಳು ಬಂದವು. ಗೊಳೋ ಎಂದು ಅತ್ತುಬಿಟ್ಟ. ಪಶ್ಚಾತ್ತಾಪದಿಂದ ಮನಸ್ಸು ಬೆಂದು ಹಗುರವಾಯಿತು. ಅಂದೇ ವೆಂಕಟೇಶಯ್ಯನಿಗೆ ಕೃತಜ್ಞತೆಯನ್ನು ಅರ್ಪಿಸಿ ಹೃದಯಪೂರ್ವಕವಾದ ಒಂದು ಕಾಗದ ಬರೆದ.

೨೭

ಮೈಸೂರಿನಲ್ಲಿ ವೈಣಿಕಶಿಖಾಮಣಿ ವೀಣೆ ಶೇಷಣ್ಣನವರ ಮನೆಯೆಂದರೆ ಸಂಗೀತಕಲಾಪ್ರೇಮಿಗಳಿಗೊಂದು ಯಾತ್ರಾಸ್ಥಳ. ಶೇಷಣ್ಣನವರು ಸ್ವಯಂ ಪ್ರತಿಭಾಶಾಲಿಗಳಾದ ಸಂಗೀತಕಲಾವಿದರಾಗಿದ್ದುದಲ್ಲದೆ ಸಂಗೀತ ಕಲೆಯ ರಕ್ಷಕರೂ ಪೋಷಕರೂ ಆಗಿದ್ದರು. ಅವರ ಮನೆ ಸಂಗೀತದ ವಿಶ್ವವಿದ್ಯಾನಿಲಯದಂತಿತ್ತು. ಸಂಗೀತ ಅಭ್ಯಾಸ, ಚರ್ಚೆ, ಪಾಠಪ್ರವಚನಗಳು ನಡೆಯುತ್ತಲೇ ಇರುತ್ತಿದ್ದವು. ಶೇಷಣ್ಣನವರದು ಮಗುವಿನಂತಹ ಸ್ವಭಾವ. ಯಾರು ಹೋಗಿ ಕೇಳಲಿ, ಬೇರೆ ಮಾತನಾಡದೆ ವೀಣೆ ನುಡಿಸಿ, ಆನಂದಪಡಿಸುತ್ತಿದ್ದರು.

ಶೇಷಣ್ಣನವರು ಮೈಸೂರಿನ ಮಹಾಪ್ರಭುಗಳ ಆಸ್ಥಾನದಲ್ಲಿ ಭಕ್ಷಿಸ್ಥಾನವನ್ನಲಂಕರಿಸಿದ್ದರು. ಪ್ರಭುಗಳ ಮುಂದೆ ಯಾರ ಕಛೇರಿಯಾಗಬೇಕಾದರೂ ಅವರು ಶೇಷಣ್ಣನವರ ಅಪ್ಪಣೆಯನ್ನು ಪಡೆಯಬೇಕಾಗಿತ್ತು. ಹೊರಗಿನಿಂದ ಬರುತ್ತಿದ್ದ ವಿದ್ವಾಂಸರು ಇದನ್ನೊಂದು ಪರೀಕ್ಷೆಯೆಂದು ಭಾವಿಸದೆ ಸಂತೋಷವಾಗಿ ಶೇಷಣ್ಣನವರ ಮುಂದೆ ಹಾಡಿ ಅವರ ವಿಶ್ವಾಸವನ್ನು ಸಂಪಾದಿಸುತ್ತಿದ್ದರು. ಅವರ ಮನೆಯ ಕಛೇರಿಗಳು ಸಾರ್ವಜನಿಕ ಸಭೆಗಳೇ ಆಗುತ್ತಿದ್ದವು. ಹೊರಗಿನಿಂದ ಉಸಿರಾಡಲು ಗಾಳಿ ಕೂಡ ಬರದಂತೆ ಜನ ಕಿಕ್ಕಿರಿದು ನೆರೆಯುತ್ತಿತ್ತು. ಕಿಟಕಿ, ಬಾಗಿಲುಗಳಲ್ಲಿ ಕೂಡ ಜನ ತುಂಬುತ್ತಿದ್ದರು.

ಪಾಲಘಾಟಿನಿಂದ ಯಾರೋ ದೊಡ್ಡ ಭಾಗವತರು ಬಂದಿರುವುದಾಗಿಯೂ, ಶೇಷಣ್ಣನವರ ಮನೆಯಲ್ಲಿ ಅಂದು ಹಾಡುವುದಾಗಿಯೂ ಹೇಗೋ ಸುದ್ದಿ ಹಬ್ಬಿಬಿಟ್ಟಿತ್ತು. ಜನ ಎಂದಿನಂತೆ ಬಂದು ತುಂಬಿಬಿಟ್ಟಿದ್ದರು. ಅರಮನೆಯ ಮತ್ತು ಸರ್ಕಾರದ ಅಧಿಕಾರಿಗಳು, ಮಂಡಿಪೇಟೆಯ ಸಾಹುಕಾರರು ಸಂಗೀತ ವಿದ್ವಾಂಸರು, ಕಾಲೇಜಿನ ಪ್ರೊಫೆಸರುಗಳೂ ವಿದ್ಯಾರ್ಥಿಗಳೂ ಬಂದು ನೆರೆದಿದ್ದರು. ಮೊದಲು ನಾಲ್ಕು ಮಾತುಗಳಲ್ಲಿ ಲಾಯರ್ ಸುಬ್ಬರಾಯರು

ಭಾಗವತರ ಪರಿಚಯ ಮಾಡಿಕೊಟ್ಟರು. ಶೇಷಣ್ಣನವರ ಮನೆಯ ಕಛೇರಿಗಳಿಗೆ ತಪ್ಪದೆ ಬರುತ್ತಿದ್ದವರಲ್ಲಿ ಲಾಯರ್ ಸುಬ್ಬರಾಯರೊಬ್ಬರು. ಅವರ ಬೂಟಾ ರುಮಾಲು, ಕರಿಯ ನಿಲುವಂಗಿ, ಆಜಾನುಬಾಹುವಾದ ದೇಹ, ದಪ್ಪ ಗಂಟಲನ್ನು ಯಾರೂ ಮರೆಯುವ ಹಾಗೇ ಇರಲಿಲ್ಲ. ಸುಬ್ಬರಾಯರು ಸಂಗೀತಗಾರರೂ ಆಗಿರಲಿಲ್ಲ, ಸಂಗೀತಶಾಸ್ತ್ರವನ್ನು ತಿಳಿದವರೂ ಆಗಿರಲಿಲ್ಲ. ಅವರಿಗೆ ಸಂಗೀತಕ್ಕಿಂತಲೂ ಸಂಗೀತಗಾರರನ್ನು ಕಂಡರೆ ಬಹಳ ಪ್ರೇಮ. ಸಂಗೀತಗಾರರ ಸ್ನೇಹ ಬೆಳೆಸುವುದು, ಸದಾ ಅವರನ್ನು ಕಂಡಕಂಡವರಲ್ಲಿ ಹೊಗಳುವುದು, ಅವರು ಎಲ್ಲಿ ಹಾಡಲಿ ಅಲ್ಲಿ ಹೋಗಿ ಸಭಾಲಂಕಾರ ಮಾಡುವುದು, ಅವರನ್ನು ಮನೆಗೆ ಕರೆದುಕೊಂಡು ಬಂದು ತೈಲಾಭ್ಯಂಜನ ಮಾಡಿಸಿ ಹಬ್ಬದೂಟ ಹಾಕಿಸುವುದು, ಸಂಗೀತಸಭೆಗಳಲ್ಲಿ ಅವರ ಪರಿಚಯ ಮಾಡಿಕೊಡುವುದು—ಹೀಗೆ ಸಂಗೀತಪ್ರಪಂಚದಲ್ಲಿ ಮುಂದಕ್ಕೆ ಬಂದಿದ್ದರು.

"ಇವರು ಪಾಲಘಾಟಿನವರು, ಭಾರಿ ವಿದ್ವಾಂಸರು. ಇವರ ಹೆಸರು ಪಾಲಘಾಟ್ ವೆಂಕಟರಾಮ ಭಾಗವತರ್ ಎಂದು. ದೊಡ್ಡ ದೊಡ್ಡ ಸಭೆಗಳಲ್ಲಿಯೂ ರಾಜಾಸ್ಥಾನಗಳಲ್ಲಿಯೂ, ಕಛೇರಿ ಮಾಡಿ ಖಿಲ್ಲತ್ತು, ತೋಡಾಗಳನ್ನು ಪಡೆದಿದ್ದಾರೆ. ಇಂತಹ ವಿದ್ವಾಂಸರ ಸಂಗೀತ ಕೇಳುವ ಅವಕಾಶ ಸಿಕ್ಕಿದುದು ನಮ್ಮ ಪುಣ್ಯ" ಎಂದು ಸುಬ್ಬರಾಯರು ಹೇಳಿ ಮುಗಿಸಲು ಭಾಗವತರು ತಂಬೂರಿಯನ್ನು ಶ್ರುತಿಮಾಡಲಾರಂಭಿಸಿದರು. ಭಾಗವತರಿಗೆ ಮಧ್ಯ ವಯಸ್ಸು. ಮೈಬಣ್ಣ, ಬಳಿದಿದ್ದ ವಿಭೂತಿಗಳು ಒಮ್ಮಲೇ ಅಮಾವಾಸ್ಯೆ-ಹುಣ್ಣಿಮೆಗಳ ನೆನಪನ್ನು ತರುತ್ತಿದ್ದವು. ಕೈಯಲ್ಲಿ ಚಿನ್ನದ ಗಂಟೆ ಕಟ್ಟಿದ ಕೆಂಪಿನ ಬಳೆ, ಕುತ್ತಿಗೆಯಲ್ಲಿ ರುದ್ರಾಕ್ಷಿ ಹಾಕಿದ ಚಿನ್ನದ ಸರ, ಕಿವಿಗಳಲ್ಲಿ ವಜ್ರದ ಹತ್ತಕಡಕುಗಳು, ಬೆರಳುಗಳಲ್ಲಿ ಮೂರು ವಜ್ರಕೆಂಪಿನ ಉಂಗುರಗಳು. ಭಾಗವತರನ್ನು ನೋಡಿದವರು ಅವರು ರತ್ನಪಡಿ ವ್ಯಾಪಾರ ಮಾಡುವ ಸರಾಫರೆಂದು ಪ್ರಮಾಣ ಮಾಡಬಹುದಾಗಿತ್ತು.

ತಂಬೂರಿ ಶ್ರುತಿಯಾಯಿತು. ಭಾಗವತರು ಹಾಡಲಾರಂಭಿಸಿದರು. ಕೆಮ್ಮಿ ಕೇಕರಿಸಿ, ಗಂಟಲನ್ನು ಸರಿಪಡಿಸಿಕೊಂಡು ಮಧ್ಯೆಮಧ್ಯೆ ಮೆಣಸಿನ ಕಾಳನ್ನು ಬಾಯಿಗೆ ಹಾಕಿಕೊಂಡು ತಮ್ಮ 'ರಿಷಭ' ದನಿಯಲ್ಲಿ ಹಾಡತೊಡಗಿದರು. ಭಾಗವತರ ಶ್ರುತಿ, ತಂಬೂರಿಯ ಶ್ರುತಿ ಎರಡೂ ಅಕ್ಕಪಕ್ಕದಲ್ಲಿ ಹೋಗಲು ಆರಂಭಿಸಿದುವು. 'ವಾತಾಪಿ ಗಣಪತಿಂ ಭಜೇ' ಹಾಡಿ ಕಾಂಬೋಧಿಯಲ್ಲಿ 'ಎವರಿಮಾಟ' ಕೀರ್ತನೆಯನ್ನೂ ಮುಖಾರಿಯಲ್ಲಿ 'ಏಲಾವತಾರ' ಕೀರ್ತನೆಯನ್ನೂ ಹಾಡಿ ಪಂತುವರಾಳಿ ರಾಗವನ್ನು ಸ್ವಲ್ಪ ಆಲಾಪಿಸಿ 'ರಘುವರನನು'

ಕೀರ್ತನೆಯನ್ನು ಹಾಡಿದರು. ಭಾಗವತರ ಶಾರೀರದಲ್ಲಿ ಸುನಾದ ಸಂಪತ್ತಿಲ್ಲದಿದ್ದರೂ ಅವರು ಹಾಡುವ ಮಾರ್ಗದಲ್ಲಿ ಒಂದು ಹೆಚ್ಚುಗಾರಿಕೆಯಿತ್ತು. ತಾಳ, ನಿಲುಗಡೆಗಳು ಲೆಕ್ಕಾಚಾರವಾಗಿ ಖಚಿತವಾಗಿದ್ದವು. ಸ್ವರಪ್ರಸ್ತಾರ, ರಾಗ, ಕೀರ್ತನೆ, ಭಾವಗಳನ್ನು ಮೆರೆಯಿಸುತ್ತಿದ್ದರೂ ಗಂಭೀರವಾಗಿ, ಸವಿಸ್ತಾರವಾಗಿದ್ದವು. ಕುಳಿತವರು ತಲೆದೂಗಿದರು. ಶೇಷಣ್ಣನವರೇ ಆಗಾಗ್ಗೆ 'ಭಲೆ, ಭಲೆ!' ಎಂದನ್ನುತ್ತಿದ್ದರು.

ಮುಂದೆ ಭಾಗವತರು ಸವಿಸ್ತಾರ ರಾಗಾಲಾಪನೆಗೆ ತೋಡಿಯನ್ನು ತೆಗೆದುಕೊಂಡರು. ಅವರ ಹಾಡಿಕೆಯಲ್ಲಿ ರಾಗಲಕ್ಷಣವನ್ನತಿಕ್ರಮಿಸಿದ ಗಾಂಭೀರ್ಯ ಕಂಡುಬಂತು. ಭಾಗವತರು ಅಂಶವನ್ನು ಮಧ್ಯಮಕ್ಕೂ ಧೈವತಕ್ಕೂ ಬದಲಾಯಿಸಿಕೊಳ್ಳುತ್ತಾ ಘನವಾಗಿ ಹಾಡಿದರು. ಅವರು ಹಾಡಿಕೆಯಲ್ಲಿ ಪಂಚಮವನ್ನು ಆರೋಹದಲ್ಲಿಯಾಗಲಿ ಅವರೋಹದಲ್ಲಿಯಾಗಲಿ ಉಪಯೋಗಿಸಲಿಲ್ಲ. ರಾಗಾಲಾಪನೆ ಮುಗಿದಿರಲು ಭಾಗವತರ ಸಮೀಪದಲ್ಲಿ ಇದ್ದ ಒಬ್ಬ ಸಂಗೀತಗಾರರು

"ಅವರೋಹದಲ್ಲಿ ಪಂಚಮವನ್ನು ಹಚ್ಚಬಹುದಲ್ಲವೆ, ಭಾಗವತರೇ ?"

ಎಂದು ಪ್ರಶ್ನಿಸಿದರು. ಭಾಗವತರು ಮೋರೆಯನ್ನು ಕಹಿ ಮಾಡಿಕೊಂಡು

"ತೋಡೀ ರಾಗವನ್ನು ಹಾಡುವುದೇ ಹೀಗೆ. ಬೇರೆ ರೀತಿ ಹಾಡಿದರೆ ಅದು ಬೇರೆ ರಾಗವಾಗುತ್ತದೆ"

ಎಂದು ಪ್ರಶ್ನೆ ಕೇಳಿದವರ ಮುಖ ಮುರಿದರು. ಪ್ರಶ್ನೆ ಕೇಳಿದ ಸಂಗೀತಗಾರರು ಭಾಗವತರ ಪಟಾಟೋಪಕ್ಕೆ ಬೆದರಿ ಸುಮ್ಮನಾಗಿಬಿಟ್ಟರು. ಶೇಷಣ್ಣನವರೊಮ್ಮೆ ಸೂಕ್ಷ್ಮವಾಗಿ ಶ್ರಾವಕರನ್ನು ಅವಲೋಕಿಸಿದರು. ಭಾಗವತರ ಹಿಂಬದಿಗೆ ಕುಳಿತಿದ್ದ ಭಿಕ್ಷುಕರೂಪದ ಒಬ್ಬ ಮುಂದೆ ಬಂದ. ಕುಳಿತಿದ್ದ ಸಂಗೀತಗಾರರು 'ಇವನಿಗೇನು ಇಲ್ಲಿ ಕೆಲಸ' ಎಂದುಕೊಂಡರು. ಮುಂದೆ ಬಂದವನನ್ನು ನೋಡಿ ಜನ ನಗಲಾರಂಭಿಸಿತು. ಅವನ ಹರಕುಮುರುಕು ಗಡ್ಡ, ಅದರ ಮೇಲೆ ಅಲ್ಲಲ್ಲಿ ಬೆಳೆದಿದ್ದ ಬಿಳಿಯ ಕೂದಲಿನ ತೇಪೆ—ಎಲ್ಲರಿಗೂ ನಗೆ ಬರಿಸಿದವು. ಮುಂದೆ ಬಂದವ ಭಾಗವತರನ್ನು ಉದ್ದೇಶಿಸಿ

"ತೋಡಿ ಹಾಡುವುದು ಹಾಗಲ್ಲ. ನನ್ನ ಉದ್ಧಟತನ ಕ್ಷಮಿಸಬೇಕು. ತಾವು ಹಾಡಿದ್ದು ಸರಿಯಲ್ಲ"

ಎಂದ. ಹಿಂದೆ ಕುಳಿತಿದ್ದವರೆಲ್ಲಾ ಜರುಗಿಕೊಂಡು ಮುಂದಕ್ಕೆ ಬಂದರು. ಎಲ್ಲರ ಕಿವಿಗಳೂ ನೆಟ್ಟಗಾಗಿದ್ದವು. ಭಾಗವತರು ತಿರಸ್ಕಾರದಿಂದ ಅವನನ್ನು

"ನಿನಗೇನು ಗೊತ್ತಿದೆ ಸಂಗೀತ ? ನಾನು ಹಾಡಿದ್ದು ತಪ್ಪು ಎಂದು ಹೇಗೆ

ಹೇಳುವೆ ?"

ಎಂದು ಕೈಗೆ ಕಟ್ಟಿದ ಗಂಟೆಯನ್ನು ಮೆರೆಸಿದರು. ಜನ ಹೊಸಬನನ್ನು ನೋಡಿ ತಿರಸ್ಕಾರದಿಂದ ನಕ್ಕಿತು.

"ಅಠಾಣಾ ಬೇಗಡೆ ಹಾಡಿದ ಹಾಗೇ ತೋಡಿ ಹಾಡಿದಿರಿ. ಆ ರಾಗದಲ್ಲಿ ಪ್ರಧಾನವಾದದ್ದು ಶೋಕ ಮತ್ತು ಕರುಣಾರಸಗಳು. ತಾವು ತೋರಿದ್ದು ಅದ್ಭುತ ಮತ್ತು ಭಯಾನಕ ರಸಗಳು. ತಾವು ಹಾಡಿದ್ದೇ ಸರಿಯೆಂದಿರಿ. ಪ್ರಶ್ನೆ ಕೇಳಿದವರನ್ನು ಹಂಗಿಸಿದಿರಿ. ಅಪ್ಪಣೆಯಾದರೆ ಬೇರೆ ರೀತಿಯಾಗಿಯೂ ಅವರೋಹದಲ್ಲಿ ಪಂಚಮ ಹಚ್ಚಿ ಹಾಡಬಹುದೆಂದು ತೋರಿಸುತ್ತೇನೆ"

ಎಂದ. ಭಾಗವತರು ಬೆಂಕಿಯಾಗಿಬಿಟ್ಟರು. ಈ ಭಿಕಾರಿ ಏನು ಹಾಡುವನು ಎಂದುಕೊಂಡು 'ಹೂಂ' ಎಂದು ಹುಂಕರಿಸಿ ತಂಬೂರಿಯನ್ನು ಮುಂದಕ್ಕೆ ತಳ್ಳಿದರು. ಹೊಸಬ ಭಕ್ತಿಯಿಂದ ತಂಬೂರಿಯನ್ನು ಕೈಗೆ ತೆಗೆದುಕೊಂಡು ತನ್ನ ಶಾರೀರಕ್ಕೆ ಶ್ರುತಿ ಮಾಡಿಕೊಂಡು ಹಾಡಲು ಮೊದಲಿಟ್ಟ. ಸ್ವಲ್ಪ ಹೊತ್ತಾಯಿತು, ಭಾಗವತರು ಮುಂದಕ್ಕೆ ಬಂದರು ; ಅರ್ಧಗಂಟೆಯಾಯಿತು. ಭಾಗವತರು ವಸ್ತ್ರದಿಂದ ಕಣ್ಣೀರನ್ನೊರೆಸಿಕೊಳ್ಳುತ್ತಿದ್ದರು. ಒಂದು ಗಂಟೆಯಾಯಿತು. ಎಲ್ಲರೂ ಮೈಮರೆತು ಹೊಸಬನ ಹಾಡಿಕೆಯಲ್ಲಿ ಲೀನವಾಗಿಬಿಟ್ಟಿದ್ದರು. ಅವನು ತಂಬೂರಿಯನ್ನು ಕೆಳಗಿಟ್ಟಾಗಲೆ ಅವರಿಗೂ ಎಚ್ಚರ. ಭಾಗವತರು ಎದ್ದುನಿಂತರು. ಕೈಯಲ್ಲಿದ್ದ ತೋಡಾವನ್ನು ತೆಗೆದು ಹೊಸಬನ ಮುಂದಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟರು. ಎಲ್ಲರೂ ಈ ಮಾರ್ಪಾಟನ್ನು ನೋಡಿ ಬೆರಗಾಗಿಬಿಟ್ಟರು. ಶೇಷಣ್ಣನವರು ಆನಂದಾಶ್ರುಗಳನ್ನು ನಿವಾರಿಸಿಕೊಂಡು ಹೊಸಬನನ್ನು ಅಪ್ಪಿಬಿಟ್ಟರು. ಅವರೇ ಮಾತನಾಡಿಸಿದರು.

"ತಾವು ಯಾರು, ಸ್ವಾಮಿ ? ತಮ್ಮ ಊರು ಯಾವುದು ? ತಮ್ಮ ಗುರುಗಳು ಯಾರು ?"

"ನಾನೊಬ್ಬ ಅನಾಮಧೇಯ, ನನ್ನ ಗುರುಗಳು ಮಹಾವಿದ್ವಾನ್ ತಂಜಾವೂರು ಕೃಷ್ಣಯ್ಯರ್‌ರವರು."

"ನೀವು ನನ್ನ ಗುರುಗಳ ಶಿಷ್ಯರೇನೇ—ಹಾಗಾದರೆ ನನ್ನ ಅಣ್ಣಂದಿರಾದಿರಿ"

ಎಂದು ಭಾಗವತರು ಹೊಸಬನನ್ನು ಅಪ್ಪಿದರು. ಹೊಸಬನಿಗೂ ಆನಂದವಾಯಿತು. ಶೇಷಣ್ಣನವರು ಮುಂದೆ ಕೇಳಿದರು

"ತಮ್ಮ ಪರಿಚಯ ಮಾಡಿಕೊಡಲಿಲ್ಲವಲ್ಲಾ ?"

"ನಾನು ಮೈಸೂರಿನವನೇ. ನನ್ನ ಹೆಸರು ಲಕ್ಷ್ಮಣರಾಯ"

ಎಂದು ಹೇಳಿದ ಕೂಡಲೆ 'ಅಣ್ಣಾ' ಎನ್ನುವ ದನಿ ಕೇಳಿಬಂತು. ಕಿಟಕಿಯ

ಕಿಷ್ಕಿಂಧಾಕಾಂಡದಲ್ಲಿ ಗೋಪಾಲ ಜಾಗ ಮಾಡಿಕೊಂಡು ಕುಳಿತಿದ್ದ. ಅವನ ಕೂಗು ಕೇಳಿ ಜನ ದಾರಿ ಕೊಟ್ಟಿತು. ಗೋಪಾಲ ಬಂದು ಅಣ್ಣನನ್ನಪ್ಪಿದ. ಶೇಷಣ್ಣನವರಂದರು :

"ನೀವು ಮೈಸೂರಿನ ಕೀರ್ತಿಯನ್ನು ಕಾಪಾಡಿದಿರಿ. ನಿಮ್ಮ ಅಮೋಘವಾದ ಸಂಗೀತವನ್ನು ಪ್ರಭುಗಳು ಕೇಳಬೇಕು."

"ಅಯ್ಯೋ ! ಅಷ್ಟು ಗೌರವಕ್ಕೆ ನಾನು ಬಾಧ್ಯನಲ್ಲ. ದೊಡ್ಡಸ್ಥಾನ. ಅವರ ಮುಂದೆ ಹಾಡುವ ಯೋಗ್ಯತೆ ನನಗಿದೆಯೇ ?"

"ಇದೆಯೆಂದೇ ನಾನು ಕೇಳಿಕೊಳ್ಳುತ್ತಿರುವುದು."

"ಅಷ್ಟು ದೊಡ್ಡ ಮಾತೇಕೆ ? ತಮ್ಮಂತಹ ಮಹನೀಯರ ಪಾದಧೂಳಿ ನಾನು. ತಾವು ಆಜ್ಞೆಮಾಡಿದರಾಯಿತು."

"ತಾವು ಇರುವುದಕ್ಕೆ—ಊಟಕ್ಕೆ...."

"ಎಲ್ಲಕ್ಕೂ ಅನುಕೂಲವಾಗಿದೆ. ನಾನೇ ಬಂದು ತಮ್ಮ ದರ್ಶನ ತೆಗೆದು ಕೊಳ್ಳುತ್ತೇನೆ"

ಎಂದು ಹೇಳಿ ಭಾಗವತರ ತೋಡಾವನ್ನು ಮತ್ತೆ ಅವರ ಕೈಗೆ ಹಾಕಿದ. ಗೋಪಾಲನನ್ನು ಜತೆಯಲ್ಲಿ ಕರೆದುಕೊಂಡು ಅಲ್ಲಿಂದ ಹೊರಟೇ ಬಿಟ್ಟ.

ಗೋಪಾಲ ಅಣ್ಣನ ಜತೆಯಲ್ಲಿ ಅವನ ವಸತಿಗೆ ಬಂದ. ನೂರಡಿ ರಸ್ತೆ ಯಲ್ಲಿದ್ದ ಸೀತಾವಿಳಾಸ ಛತ್ರದಲ್ಲಿ ಒಂದು ಕೋಣೆಯನ್ನು ಬೀಡು ಮಾಡಿ ಕೊಂಡಿದ್ದ. ಹಾಸಿಕೊಳ್ಳುವುದಕ್ಕೆ ಒಂದು ಜಮುಖಾನ, ತಲೆಯ ಕೆಳಕ್ಕೆ ನಾಲ್ಕಾರು ಬಟ್ಟೆಗಳು—ಇವೇ ಲಕ್ಷ್ಮಣರಾಯನ ಸರ್ವಸಂಪತ್ತು ಆಗಿತ್ತು. ಗೋಪಾಲ ಈ 'ಅನುಕೂಲ'ವನ್ನು ನೋಡಿ

"ಹಾಸ್ಟೆಲಿಗೆ ಹೋಗೋಣ—ಇಲ್ಲಿ ಬೇಡ."

"ಏತಕ್ಕೆ, ಇಲ್ಲಿ ಸುಖವಾಗಿದೆಯಲ್ಲಾ ?"

"ಊಟಕ್ಕೇನು ಮಾಡುತ್ತಿರುವೆ ?"

"ಬರುವಾಗ ಯಾರೋ ಪುಣ್ಯಾತ್ಮರು ಕೈತುಂಬ ಹಣ ಕೊಟ್ಟಿದ್ದರು. ಅದನ್ನು ಇಲ್ಲೇ ಇದೆಯಲ್ಲಾ 'ಅನ್ನಪೂರ್ಣೇಶ್ವರಿ ಲಾಡ್ಜ್' ಅವರ ಕೈಯಲ್ಲಿ ಹಾಕಿದ್ದೆ. ದಿನಾ ಸೊಗಸಾದ ಊಟ ಹಾಕುತ್ತಾರೆ, ಉಪಚರಿಸುತ್ತಾರೆ, ಆದರಿಸುತ್ತಾರೆ. ನಾನು ಊಟಕ್ಕೆ ಹೋಗದಿದ್ದ ದಿವಸ ಹುಡುಕಿಕೊಂಡು ಬರುತ್ತಾರೆ."

ಅಣ್ಣನ ಜತೆಯಲ್ಲಿಯೇ ಹೋಗಿ ಅವನ ಹೋಟೆಲಿನಲ್ಲಿಯೇ ತನ್ನ ಊಟ ವನ್ನೂ ತೀರಿಸಿಕೊಂಡು ಗೋಪಾಲ ಅವನ ಕೋಣೆಗೇ ಬಂದ.

"ಈಗ ನೀನು ಯಾವ ಕ್ಲಾಸು, ಗೋಪಾಲಿ?"

"ಎಂ.ಎ.ಗೆ, ಈ ವರ್ಷ ಮತ್ತೆ ಕಟ್ಟುತ್ತೇನೆ."

"ಅಬ್ಬಾ! ಎಂ.ಎ.ಗೆ ಬಂದುಬಿಟ್ಟೆಯಾ. ನನಗೆ ಈಗ ಸ್ಕೂಲಿಗೆ ಹೋಗಬೇಕು ಅನಿಸುತ್ತದೆ. ನನ್ನನ್ನು ಯಾರೂ ಸೇರಿಸಿಕೊಳ್ಳುವುದಿಲ್ಲಾ, ಅಲ್ಲವೇ?"

"ನಿನಗೆ ಸ್ಕೂಲೇ! ನಿನಗೆ ಪಾಠ ಹೇಳುವ ಭೂಪ ಯಾವನಿದ್ದಾನೋ ನಾನು ಬೇರೆ ಕಾಣೆ."

"ಇದ್ದಾರೆ ಗೋಪಾಲಿ—ಬೇಕಾದಷ್ಟು ಜನರಿದ್ದಾರೆ. ನನಗೆ ವಿದ್ಯೆ ಹೇಳಿದ ಗುರುಗಳಿದ್ದಾರೆ—ನನ್ನನ್ನು ಮಗನಂತೆ ಕಾಪಾಡಿ ರಕ್ಷಿಸಿದ ತಾಯಂದಿರು ನನ್ನ ಗುರುಗಳಾಗಿದ್ದಾರೆ—ನನ್ನ ಮಿತ್ರರಾಗಿ ಗುರುಕರುಣೆಯನ್ನೊದಗಿಸಿಕೊಟ್ಟ ಗುರುಗಳಿದ್ದಾರೆ. ನನ್ನ ಗುರುಗಳು ಯಾರನ್ನೂ ನಾನು ಮರೆಯಲಾರೆನಪ್ಪಾ. ಮನೆಯ ಸಮಾಚಾರವೇನು?"

ಗೋಪಾಲ ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ. ಲಕ್ಷ್ಮಣ ತನ್ನ ಕತೆಯನ್ನು ನಿರೂಪಿಸಿದ. ಆ ವೇಳೆಗೆ ಬೆಳಗು ಹರಿದಿತ್ತು. ಇಬ್ಬರ ಹೃದಯವೂ ತೃಪ್ತಿಯಿಂದ ತುಂಬಿ ತುಳುಕಾಡುತ್ತಿತ್ತು. ಮನಸ್ಸನ್ನು ಅವರ್ಣನೀಯವಾದ ಆನಂದ ಮುತ್ತಿಬಿಟ್ಟಿತ್ತು. ಲಕ್ಷ್ಮಣನ ಜೀವನದಲ್ಲಿ ಆಗಿದ್ದ ಮಾರ್ಪಾಟನ್ನು ಗೋಪಾಲ ಗಮನಿಸಿದ. ಜೀವನಕ್ಕೂ ಆದಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳಿಗೂ ಲಕ್ಷ್ಮಣ ಹೊರಗಿನವನಾಗಿ ಕಂಡುಬಂದ. ಅವನು ಜೀವನವನ್ನು ಹೊಸದಾಗಿ ಕಂಡುಕೊಳ್ಳಬೇಕಾಗಿತ್ತು.

೨೮

ಅರಮನೆಯ ಕಛೇರಿಗೆ ಬಹಳ ದಿವಸ ಕಾಯಬೇಕಾಗಲಿಲ್ಲ. ಮೂರನೆಯ ಸಂಜೆ ಶೇಷಣ್ಣನವರ ಭೆಟ್ಟಿಗೆ ಲಕ್ಷ್ಮಣ ಹೋದಾಗ

"ಮಹಾಸ್ವಾಮಿಯವರು ಭಾನುವಾರ ಸಾಯಂಕಾಲ ನಿಮ್ಮ ಸಂಗೀತ ಕೇಳುವುದಕ್ಕೆ ಒಪ್ಪಿದ್ದಾರೆ, ಲಕ್ಷ್ಮಣರಾಯರೇ!"

ಎಂದು ತಿಳಿಸಿದರು. ಶೇಷಣ್ಣನವರ ವಿಶ್ವಾಸ, ಅಭಿಮಾನ, ಉತ್ಸಾಹಗಳಿಗೆ ಕಟ್ಟುಬಿದ್ದು ಲಕ್ಷ್ಮಣ ಆಗಲೆಂದು ಒಪ್ಪಿದ.

ಅರಮನೆಯ ಕಛೇರಿಯೆಂದರೆ ಸಂಗೀತ ವಿದ್ವಾಂಸರ ಜೀವ ಉಡುಗಿ ಹೋಗುತ್ತಿತ್ತು. ಮೈಸೂರ ಪ್ರಭುಗಳು ಸ್ವಯಂ ಉಚ್ಚ ತರಗತಿಯ ಸಂಗೀತ ವಿದ್ವಾಂಸರು. ಅವರ ಮುಂದೆ ಕಸರತ್ತುಗಳು ನಡೆಯುವ ಹಾಗಿರಲಿಲ್ಲ.

ಚಿನ್ನದ ಗಂಟೆ, ದೊಡ್ಡ ದೊಡ್ಡ ಬಿರುದುಬಾವಲಿಗಳು, ಪತ್ರಿಕಾಪ್ರಶಂಸೆಗಳು ಅಲ್ಲಿ ಯಾವ ಪ್ರಯೋಜನಕ್ಕೂ ಬರುತ್ತಿರಲಿಲ್ಲ. ವಿದ್ವಾಂಸರ ನಿಜವಾದ ಬಂಡವಾಳ ಜನತೆಗೂ ಗೊತ್ತಾಗಲೆಂದು ಅರಮನೆಯ ನಾಲ್ಕು ಮಹಾದ್ವಾರ ಗಳಲ್ಲಿಯೂ ಧ್ವನಿವರ್ಧಿನಿ(Loud speaker) ಗಳನ್ನಿಡಿಸಿ ಸಂಗೀತ ಎಲ್ಲರಿಗೂ ಕೇಳಿಸುವಂತೆ ಮಾಡಿದ್ದರು. ಸಾಮಾನ್ಯವಾಗಿ ಎಲ್ಲರಿಗೂ ಅರ್ಧಗಂಟೆಯಿಂದ ಮುಕ್ಕಾಲು ಗಂಟೆಕಾಲ ಹಾಡಲವಕಾಶ ಸಿಕ್ಕುತ್ತಿತ್ತು. ಹೆಚ್ಚು ಹೊತ್ತು ದೊರೆತರೆ ಹಾಡಿಕೆ ಮಹಾಸ್ವಾಮಿಯವರ ಚಿತ್ತಕ್ಕೆ ಬಂತೆಂದು ಜನ ಭಾವಿಸು ತ್ತಿದ್ದರು. ಅರಮನೆಯಲ್ಲಿ ಕಾಲುಗಂಟೆಗೇ ಮುಕ್ತಾಯವನ್ನು ಕಂಡುಬಂದು ಹೊರಗೆ ತಮ್ಮ ಅಭಿಮಾನಿಗಳಲ್ಲಿ 'ಎರಡು ಗಂಟೆ ಹಾಡಿದೆ—ಮೂರು ಗಂಟೆ ಹಾಡಿದೆ' ಎಂದು ವಿದ್ವಾಂಸರು ಸುಳ್ಳು ಹೇಳುತ್ತಿದ್ದುದಕ್ಕೆ ಕಲ್ಲುಬಿದ್ದಂತಾ ಗಿತ್ತು.

ಲಕ್ಷ್ಮಣನಿಗೆ ಸರಿಯಾದ ಬಟ್ಟೆಬರೆಹೊಂದಿಸುವ ಭಾರ ಗೋಪಾಲನನ್ನು ಸೇರಿತು. ಉದ್ದನೆಯ ಕರಿ ನಿಲುವಂಗಿ, ಸರಿಗೆ ಪಂಚೆ, ರುಮಾಲು, ಕಮ್ಮರ್ ಬಂದ್ ಮೊದಲಾದ ದರ್ಬಾರು ಉಡುಪನ್ನು ತನಗೆ ತಿಳಿದವರಲ್ಲಿ ಎರವಲು ತಂದು ಅಣ್ಣನನ್ನು ಅಲಂಕರಿಸಿದ. ಸ್ವಯಂ ಶೇಷಣ್ಣನವರೇ ಲಕ್ಷ್ಮಣರಾಯ ನನ್ನು ಪ್ರಭುಸನ್ನಿಧಿಗೆ ಕರೆದೊಯ್ದರು.

ಗೋಪಾಲ ರಂಗಾಚಾರ್ಲು ಪುರಭವನದ ಆವರಣದಲ್ಲಿ ಕುಳಿತು ತನ್ನ ಅಣ್ಣನ ಹಾಡಿಕೆಯನ್ನು ಧ್ವನಿವರ್ಧಿನಿಯ ಮೂಲಕ ಕೇಳುತ್ತಿದ್ದ. ಅವನ ಹಾಗೆ ಸಾವಿರಾರು ಜನ ಲಕ್ಷ್ಮಣನ ಅಮೋಘವಾದ ಹಾಡಿಕೆಗೆ ತಲೆದೂಗು ತ್ತಿದ್ದರು. ಮುಕ್ಕಾಲು ಗಂಟೆಯಾಯಿತು—ಒಂದಾಯಿತು—ಒಂದೂವರೆ ಯಾಯಿತು—ಎರಡು ಗಂಟೆಯಾಯಿತು. ಆಗ ಮಂಗಳ ಕೇಳಿ ಬಂತು. ಎಲ್ಲರೂ ಆಶ್ಚರ್ಯಪಟ್ಟರು. ಅರಮನೆಯಲ್ಲಿ ಎರಡು ಗಂಟೆ ಕಾಲವನ್ನು ದೊರಕಿಸಿಕೊಂಡ ಮಹಾನುಭಾವನನ್ನು ಬಾಯಿತುಂಬ ಹೊಗಳಿದರು.

ಕಛೇರಿ ಮುಗಿಸಿಕೊಂಡು ಶೇಷಣ್ಣನವರೊಂದಿಗೆ ಲಕ್ಷ್ಮಣ ಹೊರಬಿದ್ದ. ಅವನ ಸುತ್ತಲೂ ಆಸ್ಥಾನದ ಸಂಗೀತ ವಿದ್ವನ್ಮಣಿಗಳು ತುಂಬಕೊಂಡು ಹೊಗಳುತ್ತಿದ್ದರು. ಅವರ ಸವಿ ಮಾತುಗಳಿಂದ ಜಾರಿಕೊಂಡು ಮೆಲ್ಲನೆ ಗೋಪಾಲನನ್ನು ಸೇರಿದ.

"ಗೋಪಾಲಿ, ಕುಕ್ಕನಹಳ್ಳಿ ಕೆರೆಯ ಕಡೆ ಹೋಗೋಣ. ಇಲ್ಲಿ ನಿಲ್ಲುವುದು ಬೇಡ. ಮೊದಲು ಈ ಬಟ್ಟೆಬರೆ ತೆಗೆ"

ಎಂದು ರುಮಾಲು, ಅಂಗಿ, ಉತ್ತರೀಯ, ಕಮ್ಮರಬಂದುಗಳನ್ನು ಕಳಚಿ

ತಮ್ಮನ ಕೈಗೆ ಕೊಟ್ಟ. ಇಬ್ಬರೂ ನಡೆದು ಕುಕ್ಕನಹಳ್ಳಿಯ ಕೆರೆಯ ಬಳಿಗೆ ಬಂದು ನಿಶ್ಶಬ್ದವಾಗಿದ್ದ ಸ್ಥಳದಲ್ಲಿದ್ದ ಶಿಲಾಪೀಠದ ಮೇಲೆ ಕುಳಿತರು.

"ಮಹಾಸ್ವಾಮಿಯವರು ಏನಂದರಣ್ಣಾ ?"

"ಎರಡು ಗಂಟೆಕಾಲ ಕೇಳುವ ಕೃಪೆ ಮಾಡಿದರು. ನನ್ನ ಸಣ್ಣ ಹಾಡಿಕೆ ಅವರಿಗೆ ಹಿಡಿಯಿತೆಂದು ಕಾಣುತ್ತದೆ. ದೊಡ್ಡವರು-ದೊಡ್ಡಗುಣ, ನನ್ನಂತಹ ಅಲ್ಪನ ಸೇವೆಯನ್ನು ಸ್ವೀಕರಿಸಿದರು."

"ನೀನು ನಿಜವಾಗಿಯೂ ಘನವಾಗಿ ಹಾಡಿದೆ, ಲಚ್ಚಣ್ಣ. ಏನು ಸುರಟಿ, ಏನು ಮಲಯಮಾರುತ, ಏನು ಖರಹರಪ್ರಿಯ !! ದಕ್ಷಿಣಾದಿ ಪದ್ಧತಿಯ ಹಾಡುಗಾರಿಕೆಗೆ ನಿನ್ನದೇ ಆದರ್ಶವಾಗುತ್ತದೆಂದು ನನ್ನ ನಂಬಿಕೆ."

"ಇಲ್ಲೇ ಇರಬೇಕೆಂದು ಭಕ್ಷಿಯವರು ಹೇಳಿದ್ದಾರಲ್ಲಾ. ಏನು ಮಾಡಲಿ ?"

"ಇರು. ಆದ ನಷ್ಟವೇನು ?"

"ನಾನೆಲ್ಲಿ ರಾಜಾಸ್ಥಾನವೆಲ್ಲಿ. ನಾನೊಬ್ಬ ದಾಸಯ್ಯ—ನಾನು ನಾಳೆಯೇ ಇಲ್ಲಿಂದ ಹೊರಟುಬಿಡುತ್ತೇನೆ."

"ಶೇಷಣ್ಣನವರನ್ನು ಕಾಣದೆಯೇ ಹೋಗುವೆಯಾ ?"

"ಇಲ್ಲ. ಕಂಡು, ಅವರಲ್ಲಿ ನನ್ನ ವಿನಂತಿಯನ್ನರ್ಪಿಸಿ ಹೋಗುತ್ತೇನೆ."

"ಎಲ್ಲಿಗೆ ಹೋಗುವೆ ?"

"ಸದ್ಯಕ್ಕೆ ಬೆಂಗಳೂರಿಗೆ ಹೋಗುತ್ತೇನೆ. ಶಾಂತನನ್ನು ನೋಡಬೇಕು. ಆಮೇಲೆ ಶೃಂಗೇರಿಗೋ ಪಂಢರಪುರಕ್ಕೋ ಹೋಗುತ್ತೇನೆ."

"ನಿನ್ನ ಜೀವನದ ಗುರಿಯೇನಾಯಿತು ? ವಿದ್ಯಾದಾನ ಮಾಡಬೇಕೆನ್ನುವ ನಿನ್ನ ಹಂಬಲವೇನಾಯಿತು ?"

"ಇದೆ. ಮರೆತಿಲ್ಲ. ಇದ್ದಲ್ಲಿಯೇ ಪೂರೈಸುತ್ತೇನೆ."

"ಬೆಂಗಳೂರಿನಲ್ಲಿಯೇ ಇದ್ದು ಪೂರೈಸಬಾರದೇ ?"

"ಆಗಲಿ, ನೋಡೋಣ. ಮೊದಲು ಅಲ್ಲಿಗೆ ಹೋಗುವುದಾಗಲಿ"

ಎಂದು ಎದ್ದ. ಇಬ್ಬರೂ ಸೀತಾವಿಳಾಸ ಛತ್ರವನ್ನು ತಲುಪಿದರು.

ಬೆಳಗಾಗ ಎದ್ದು ಲಕ್ಷ್ಮಣ ಶೇಷಣ್ಣನವರನ್ನು ಕಾಣುವುದಕ್ಕೆ ಹೋದ. ಶೇಷಣ್ಣನವರು ಆದರದಿಂದ ಬರಮಾಡಿಕೊಂಡರು. ಮಾತನಾಡುತ್ತಿದ್ದಂತೆ ಒಂದು ಚೆಕ್ಕನ್ನು ತೆಗೆದು ಲಕ್ಷ್ಮಣನ ಕೈಯಲ್ಲಿಟ್ಟರು.

"ಏನಿದು ?"

"ಸಾವಿರದೈದುನೂರು ರೂಪಾಯಿಗಳಿಗೆ ಒಂದು ಚೆಕ್ಕು."

"ನನಗೆ—ಏತಕ್ಕೆ ?"

"ಮಹಾಸ್ವಾಮಿಯವರು ನಿಮ್ಮ ಹಾಡಿಕೆಯನ್ನು ಕೇಳಿ ಮೆಚ್ಚಿ ಕಳುಹಿಸಿದ್ದಾರೆ."

"ಇಷ್ಟು ಹಣ ತೆಗೆದುಕೊಂಡು ಏನು ಮಾಡಲಿ?"

"ತಮಗೆ ತೋರಿದ್ದನ್ನು ಮಾಡಬಹುದು."

"ಹಾಗಾದರೆ ಇದು ತಮ್ಮಲ್ಲಿಯೇ ಇರಲಿ. ಸಂಗೀತ ಕಲಿಯಲು ತೊಂದರೆ ಪಡುವ ವಿದ್ಯಾರ್ಥಿಗಳಿಗೆ ಹಂಚಿಬಿಡಿ."

"ನಿಮ್ಮ ಸಂತೋಷ."

"ಇನ್ನೊಂದು ಮಾತು. ನಾನು ಮಧ್ಯಾಹ್ನ ಬೆಂಗಳೂರಿಗೆ ಹೋಗುತ್ತೇನೆ. ವಿಶ್ವಾಸವಿರಬೇಕು."

"ಬರುವುದು ಯಾವಾಗ?"

"ಹೀಗೇ."

"ಖರ್ಚಿಗೇನಾದರೂ ಕೊಡಲೇ?"

"ಏನೂ ಬೇಡ. ನನ್ನ ತಮ್ಮ ಇದ್ದಾನೆ. ರೈಲುಚಾರ್ಜು ಕೊಡುತ್ತಾನೆ."

"ಬೇಗ ದರ್ಶನ ಕೊಡಬೇಕು. ನವರಾತ್ರಿಯ ವೇಳೆಗೆ ಮತ್ತೆ ಅರಮನೆಯಿಂದ ಸ್ವಾಗತ ಬರಬಹುದು."

"ಆಗಲಿ"

ಎಂದು ಎದ್ದು ಹೊರಟ. ಲಕ್ಷ್ಮಣನ ತ್ಯಾಗಬುದ್ಧಿ ಶೇಷಣ್ಣನವರನ್ನು ಆಶ್ಚರ್ಯಗೊಳಿಸಿತು.

"ಲಕ್ಷ್ಮಣನೊಂದಿಗೆ ಗೋಪಾಲಿ ಬೆಂಗಳೂರಿಗೆ ಹೊರಡುವ ಹಾಗಿರಲಿಲ್ಲ. ಅವನ ಪರೀಕ್ಷೆ ಮುಂದಿನ ವಾರ ಆರಂಭವಾಗುವುದರಲ್ಲಿತ್ತು. ವೆಂಕಟೇಶಯ್ಯನಿಗೆ ಟೆಲಿಗ್ರಾಂ ಕೊಟ್ಟು ಅಣ್ಣನನ್ನು ರೈಲು ಹತ್ತಿಸಿದ.

"ನೀನು ಯಾವಾಗ ಬರುತ್ತಿ, ಗೋಪಿ?"

"ಪರೀಕ್ಷೆ ಮುಗಿದೊಡನೆಯೇ. ಇನ್ನು ಎರಡು ವಾರಗಳು ಕಳೆದ ಕೂಡಲೇ ಬರುತ್ತೇನೆ."

"ತಡಮಾಡಬೇಡ. ಬೇಗ ಬಂದುಬಿಡು."

"ಹಾಗೇ ಆಗಲಿ, ಲಚ್ಚಣ್ಣ."

ರೈಲು ಹೊರಟುಬಿಟ್ಟಿತು. ಲಕ್ಷ್ಮಣನ ಮನಸ್ಸಿನಲ್ಲಿ ಭಾವನೆಗಳ ತರಂಗವೇ ಎದ್ದುಬಿಟ್ಟಿತ್ತು. ಅದೇ ಕಾವೇರಿ—ಹಚ್ಚಹಸುರಿನ ಗದ್ದೆಗಳು—ಮುಗಿಲ ಮಟ್ಟಕ್ಕೆ ಬೆಳೆದಿದ್ದ ತೆಂಗಿನ ಮರಗಳು—ಎಲ್ಲೆಲ್ಲಿಯೂ ತುಂಬಿದ ಪ್ರಕೃತಿಯ ನೋಟ—ಪ್ರಕೃತಿಯಲ್ಲಿ ಗೆಲುವು, ನಗೆ, ಹಿಗ್ಗು. ಆದರೆ ಲಕ್ಷ್ಮಣನ ಮನಸ್ಸಿನಲ್ಲಿ

ಅನುಭವಿಸಲಾಗದಷ್ಟು ನೋವು—ಹಳೆಯ ನೆನಹುಗಳೆಲ್ಲವೂ ಒಂದೊಂದಾಗಿ ಹೊಸ ಕಳೆಗೂಡಿ ಬರಲಾರಂಭಿಸಿದವು. ಮತ್ತೆ ಬೆಂಗಳೂರಿಗೆ ಹೋಗಬೇಕಲ್ಲಾ ಎಂದುಕೊಂಡ. ಬೆಂಗಳೂರಿನ ನೆನಪೇ ಅವನ ದೇಹವನ್ನು ನಡುಗಿಸಿಬಿಡುತ್ತಿತ್ತು—ಒಂದು ಬಗೆಯ ಭೀತಿ ಹೃದಯದಲ್ಲಿ ದಾರುಣವಾದ ಕಳವಳವನ್ನುಂಟು ಮಾಡುತ್ತಿತ್ತು. ಮರುಕ್ಷಣವೇ ಮತ್ತೊಂದು ನೆನಪು—ಶಾಂತಿ ಮಂದಾನಿಲ ಬೀಸಿದಂತಾಗುತ್ತಿತ್ತು. ದಣಿದು ಸೋತ ಮನಸ್ಸು ತಂಗಾಳಿಯ ನೇವರಿಕೆಯಿಂದ ನಿದ್ರಿತವಾಗುತ್ತಿತ್ತು. ಪ್ರಿಯವಸ್ತುವಿನ ನೆನಪೇ ಅಶಾಂತಿಯನ್ನು ದೂರಮಾಡುತ್ತಿದ್ದ ಶಾಂತಿ ಮಂದಾನಿಲವಾಗಿತ್ತು.

'ಜಯಾ, ನಾನು ಕಲಿತು ಬಂದಿರುವ ಅಲ್ಪವಿದ್ಯೆಯೆಲ್ಲಾ ನಿನ್ನದಮ್ಮ. ನೀನಂದು ನನ್ನನ್ನು ಎಚ್ಚರಿಸದಿದ್ದರೆ ನಾನು ದಿಕ್ಕೆಟ್ಟು ಬೀದಿಯ ಭಿಕಾರಿಯಂತೆ ಅಲೆಯುತ್ತಿದ್ದೆ—ನೀನು ಇರುವೆ—ಚಿರಂಜೀವಿಯಾಗಿರುವೆ ; ಆದರೆ....ಆದರೆ ....ಎಲ್ಲಿರುವೆ ?'

ದುಃಖ ಉಕ್ಕಿಬಂತು. ಮುಖ ಮುಚ್ಚಿಕೊಂಡ.

ಗೋಪಾಲನ ತಾರು ಬಂದಾಗ ವೆಂಕಟೇಶಯ್ಯ ಊಟಕ್ಕೆ ಏಳುವುದರಲ್ಲಿದ್ದ. ತಾರನ್ನು ನಂಬಲಾರದಾದ. 'ಗೋಪಾಲಿ ವಿನೋದಕ್ಕೇನಾದರೂ ಈ ತಾರು ಕೊಟ್ಟಿರಬಹುದೇ' ಎಂದುಕೊಂಡು ಹೆಂಡತಿಯನ್ನು ಕರೆದು ಓದಿ ಹೇಳಿದ. ಆಕೆಗೂ ಅರ್ಥವಾಗಲಿಲ್ಲ. ಆದರೆ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಗಂಟಲು ಗದ್ಗದವಾಯಿತು.

"ಸದ್ಯ ಜೀವಂತನಾಗಿರುವನಲ್ಲಾ. ಅಷ್ಟೇ ಸಾಕು"

ಎಂದಳು. ಹೇಗಾದರೆ ಹಾಗಾಗಲಿ. ಸಂಜೆ ರೈಲಿನ ಬಳಿ ಹೋಗಿ ಬರುವುದೆಂದು ನಿಶ್ಚಯಿಸಿದ.

ಸ್ಟೇಷನ್ನಿನಲ್ಲಿ ವೆಂಕಟೇಶನನ್ನು ನೋಡಿ ಲಕ್ಷ್ಮಣ ಆಶ್ಚರ್ಯಪಟ್ಟ. 'ಎಲ್ಲಾ ಗೋಪಾಲಿ ಚೇಷ್ಟೆಯಿರಬೇಕು' ಎಂದುಕೊಂಡು ಅವನ ಜತೆ ಕಾರಿನಲ್ಲಿ ಹೊರಟ. ಕುಶಲಪ್ರಶ್ನೆಯಷ್ಟೇ ಗಾಡಿಯಲ್ಲಿ ಆಗಿದ್ದುದು. ಮಾತನಾಡುವುದಕ್ಕೆ ಇಬ್ಬರಿಗೂ ತೋರದಾಯಿತು. ಕಾರು ಮನೆಯ ಬಳಿ ಬಂದು ನಿಂತಿತು. ಶಾಂತಾ ಓಡಿಬಂದಳು. ಅಣ್ಣನನ್ನು ನೋಡಿ

"ಲಚ್ಚಣ್ಣಾ !" ಎಂದಳು.

"ಶಾಂತಾ !" ಎಂದು ತಂಗಿಯನ್ನು ಅಪ್ಪಿದ. ಇಬ್ಬರೂ ಹೃದಯ ಹಗುರವಾಗುವಷ್ಟು ಅತ್ತುಬಿಟ್ಟರು. ವೆಂಕಟೇಶಯ್ಯ ಸಮಯೋಚಿತವಾಗಿ ಹೆಂಡತಿಯನ್ನು ಕುರಿತು

"ಅಪರೂಪಕ್ಕೆ ಅಣ್ಣ ಬಂದರೆ ಒಂದಿಷ್ಟು ಕಾಫಿಗೀಫಿ ಮಾಡಿಕೊಡುವುದನ್ನು ಬಿಟ್ಟು ಅಳುತ್ತಾ ಕುಳಿತುಬಿಟ್ಟೆಯಲ್ಲೇ, ಶಾಂತಾ"

ಎಂದ. ಶಾಂತಾ ಸಮಾಧಾನ ಮಾಡಿಕೊಂಡು ಕಾಫಿ ತರಲು ಹೋದಳು. ಮನೆಯಲ್ಲಿದ್ದ ನಾಲ್ಕು ಕೋಡಬಳೆ ಚಕ್ಕುಲಿ ಕಾಫಿ ತಂದು ಮುಂದಿಟ್ಟಳು. ಮೂರು ಜನವೂ ನಾತಿಗೆ ಕುಳಿತುಕೊಂಡರು. ಆಪರೆಗೆ ಆಗಿದ್ದುದನ್ನೆಲ್ಲಾ ವೆಂಕಟೇಶಯ್ಯ ಶಾಂತಾ ಹೇಳಿದರು. ರಾಮುಚಂದ್ರುನಿಗಾದ ಪಾಡನ್ನು ಕೇಳಿ ಲಕ್ಷ್ಮಣ ಮರುಗಿದ.

"ಸದ್ಯ ಎಲ್ಲಿಯಾದರೂ ಚೆನ್ನಾಗಿದ್ದರೆ ಸರಿ. ಚಿಕ್ಕಮ್ಮ ಏನಾದಳು—ಯಾರೂ ಹೇಳಲೇ ಇಲ್ಲವಲ್ಲಾ?"

"ಅವಳು ಯಾವುದಕ್ಕೂ ಬರುವುದಿಲ್ಲ. ಸ್ವಯಂಪಾಕ ಮಾಡಿಕೊಳ್ಳುತ್ತಾಳೆ. ತಾನಾಯಿತು, ವೃಂದಾವನವಾಯಿತು, ಪೂಜೆಯಾಯಿತು, ಪಾರಾಯಣೆಯಾಯಿತು."

"ಮತ್ತೆ ಶಾಮಣ್ಣನವರನ್ನು ಕಾಣಲೇ ಇಲ್ಲವೇ, ವೆಂಕಟೇಶ?"

"ಅದೇ ಕೊನೆಯಾಯಿತು. ಆಮೇಲೆ ಅವರ ದರ್ಶನವೇ ಇಲ್ಲ."

"ಒಳ್ಳೆಯ ಜೀವ. ಆತನ ಆತ್ಮಸಂಸ್ಕಾರಹೊಂದಿದ ಆತ್ಮ. ನಮಗೆ ಋಣಾನುಬಂಧವಿದ್ದಷ್ಟು ದಿನ ನಮ್ಮ ಮನೆಯಲ್ಲಿ ಇದ್ದರು."

ಊಟಕ್ಕೆ ಹೊತ್ತಾಯಿತೆಂದು ಶಾಂತಾ ಎಚ್ಚರಿಸಿದಳು. ಎಲ್ಲರೂ ಎದ್ದು ಅಡಿಗೆಯ ಮನೆಗೆ ಹೋದರು.

ಲಕ್ಷ್ಮಣ ಅಲ್ಲೇ ಇರುವುದೆಂದು ನಿಶ್ಚಯವಾಯಿತು. ಹೊರಬಾಗಿಲಿನ ಪಕ್ಕದ ಕೋಣೆಯನ್ನು ಅಂದವಾಗಿ ಸಿಂಗರಿಸಿ, ಮಂಚ ಹಾಕಿಸಿ, ಮೆತ್ತನೆಯ ಹಾಸಿಗೆ ಹಾಸಿಕೊಟ್ಟಳು. ಅದನ್ನು ನೋಡಿ ಲಕ್ಷ್ಮಣ

"ಅಯ್ಯೋ! ಆ ಮೆತ್ತನೆಯ ಹಾಸಿಗೆಯ ಮೇಲೆ ಮಲಗಿದರೆ ನನಗೆ ನಿದ್ದೆಯೇ ಬರಲ್ಲಮ್ಮ. ಮಂಚ ಹಾಸಿಗೆಯೆಲ್ಲಾ ತೆಗೆಸಿ ಹೊರಗೆ ಹಾಕಿಸು. ನನಗೆ ಒಂದು ಚಾಪೆ, ಒಂದು ದಿಂಬು ಸಾಕು"

ಎಂದ. ಶಾಂತನ ಉಪಚಾರ, ಅನುನಯ ಯಾವ ಪ್ರಯೋಜನಕ್ಕೂ ಬರಲಿಲ್ಲ. ತನ್ನ ಅಣ್ಣನಿಗೆ ಜೀವನದಲ್ಲಿ ಆದ ಅಪಘಾತ ಎಂಥ ವೈರಾಗ್ಯವನ್ನು ಬೋಧಿಸಿತೆಂಬುದನ್ನು ಅರಿತಳು. ಅದು ವಾತಾವರಣಕ್ಕೆ ಹೊಂದಿಕೊಂಡು ಹೋಗುವ ವೈರಾಗ್ಯವಾಗಿರಲಿಲ್ಲ; ಉದರಂಭರಣಕ್ಕಾಗಿ ಕಟ್ಟುವ ಸೋಗಾಗಿರಲಿಲ್ಲ. ರಕ್ತದ ಪ್ರತಿಯೊಂದು ಕಣದಲ್ಲಿಯೂ ತ್ಯಾಗ, ವಿರಕ್ತಿ ನೆಲಸಿಬಿಟ್ಟಿದ್ದವು. ಇದನ್ನು ಶಾಂತಾ ಕಂಡುಕೊಂಡಳು. ಲಕ್ಷ್ಮಣ ಅನವಶ್ಯಕ

ವೆಂದು ಭಾವಿಸುತ್ತಿದ್ದ ಯಾವುದನ್ನೂ ಅವನಿಗೆ ಕೊಡಹೋಗುತ್ತಿರಲಿಲ್ಲ. ಅವನ ಮನಸ್ಸು ಯಾವ ರೀತಿಯಲ್ಲಿಯೂ ನೋಯಬಾರದು—ಯಾವ ಬಗೆಯ ಬಂಧನಕ್ಕೂ ಅದು ಒಳಗಾಗಬಾರದು—ಹಾಗೆ ಅಣ್ಣನ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದಳು.

ಲಕ್ಷ್ಮಣ ಬಂದಿದ್ದ ಸಂಗತಿ ಊರಿನಲ್ಲಿ ಹರಡುವುದಕ್ಕೆ ಬಹಳ ದಿವಸ ಹಿಡಿಯಲಿಲ್ಲ. ತನ್ನ ಪರಿಮಳ ಬಯಲಾಗದಿರಲೆಂದು ಒಳಗೇ ಹುದುಗಿರಲು ಕಸ್ತೂರಿ ಬಯಸುತ್ತಿತ್ತು. ಆದರೆ ಪರಿಮಳ ಮಂದಮಾರುತನೊಂದಿಗೆ ಸಂಚುಮಾಡಿ ಕಸ್ತೂರಿಯ ಇರವನ್ನು ಎಂಟು ದಿಕ್ಕುಗಳಲ್ಲಿಯೂ ಬೀರುತ್ತಿತ್ತು.

ಸುಂದರರಾಯರಿಗೆ ಸುದ್ದಿ ಮುಟ್ಟಿತು. ಅವರು ಭೀಮರಾಯರನ್ನು ಕರೆದುಕೊಂಡು ಲಕ್ಷ್ಮಣನನ್ನು ನೋಡಲು ಬಂದೇಬಿಟ್ಟರು. ಅವರನ್ನು ನೋಡಿ ಲಕ್ಷ್ಮಣನಿಗೂ ತುಂಬ ಸಂತೋಷವಾಯಿತು. 'ಇವರು ಊರಿನಲ್ಲಿ ಎಲ್ಲರಿಗೂ ಬಿತ್ತುತ್ತಾರಲ್ಲಾ' ಎಂದು ವ್ಯಥೆಪಟ್ಟ. ಸುಂದರರಾಯರು ಬಂದು ಹೋದ ಮರುದಿವಸವೇ ಗಾಯನ ಸಮಾಜದ ಕಾರ್ಯದರ್ಶಿಗಳು ಲಕ್ಷ್ಮಣ ನನ್ನು ಮುತ್ತಿಗೆ ಹಾಕಿದರು. ಸಮಾಜದಲ್ಲಿ ಹಾಡುವುದಕ್ಕೆ ಲಕ್ಷ್ಮಣ ಒಪ್ಪ ಲೊಲ್ಲ, ಕಾರ್ಯದರ್ಶಿಗಳು ಬಿಡಲೊಲ್ಲರು.

"ನಿಮ್ಮ ಗುರುಗಳು ಕೃಷ್ಣಯ್ಯರ್‌ರವರೇ ಹಾಡಿದ್ದಾರೆ. ನೀವೇತಕ್ಕೆ ಒಪ್ಪಬಾರದು?"

"ಅವರೆಲ್ಲಿ ನಾನೆಲ್ಲಿ? ನಾನಿನ್ನೂ ವಿದ್ಯಾರ್ಥಿ."

"ಚಿಂತೆಯಿಲ್ಲ ಸ್ವಾಮಿ. ದಯೆಯಿಟ್ಟು ಒಪ್ಪಬೇಕು."

"ಅದು ಮಾತ್ರ ಹೇಳಬೇಡಿ. ನನ್ನ ಸಂಗೀತ ಕೇಳುವ ಆಸೆ ಇದ್ದರೆ ನೀವೇ ಬನ್ನಿ, ನಿಮಗೆ ಸಾಕಾಗುವಷ್ಟು ಹಾಡುತ್ತೇನೆ."

"ನನ್ನ ಹಾಗೆ ಆಸೆಗೊಂಡಿರುವವರು ಬಹಳ ಜನ ಇದ್ದಾರಲ್ಲಾ?"

"ಅವರನ್ನು ತಣಿಸುವುದಕ್ಕೆ ಬೇರೆ ವಿದ್ವಾಂಸರಿದ್ದಾರೆ."

"ತಾವು ಯೋಚನೆ ಮಾಡಬೇಡಿ, ಸ್ವಾಮಿ ತಾವು ಕೇಳಿದಷ್ಟು ಹಣ ಕೊಡುತ್ತೇವೆ."

"ಸಂಗೀತ ಹಣಕ್ಕೆ ಸಿಗುವುದೇ ಹೇಳಿ, ಅದೇನು ಅಂಗಡಿಯ ಪದಾರ್ಥವೇ? ನನ್ನ ಗುರುಗಳು ಮನೆಯಲ್ಲಿ ನನ್ನನ್ನಿಟ್ಟುಕೊಂಡು ಮಗನಂತೆ ಸಾಕಿ ವಿದ್ಯೆ ಹೇಳಿಕೊಟ್ಟರು. ಅದನ್ನು ಮಾರಿಕೊಂಡು ನಾನು ಕಾಲಹಾಕಲೇ?"

"ಹಾಗಾದರೆ ಪುರಂದರದಾಸರ ಜಯಂತ್ಯುತ್ಸವವನ್ನು ಮಾಡಬೇಕೆಂದಿದ್ದೇವೆ. ಆಗಲಾದರೂ ಹಾಡುವಿರಾ?"

"ಅದಕ್ಕೇನು, ಅವಶ್ಯವಾಗಿಯಾಗಲಿ. ಅವರದೇ ನಾಲ್ಕು ದೇವರನಾಮ ಗಳನ್ನು ಅವರ ಚರಣದಲ್ಲಿ ಅರ್ಪಿಸುತ್ತೇನೆ."

ಸಮಾಜದ ಕಾರ್ಯದರ್ಶಿಗಳು ತೃಪ್ತಿಪಟ್ಟುಕೊಂಡು ಹೋದರು: ಲಕ್ಷ್ಮಣನಿಗೆ ತೃಪ್ತಿಯಾಗಲಿಲ್ಲ. ಮೆಲ್ಲನೆದ್ದು ತನ್ನ ಆರಾಮಧಾಮಕ್ಕೆ ತೆರಳಿದ. ಮನೆಗೆ ಸುಮಾರು ಒಂದು ಮೈಲಿ ದೂರದಲ್ಲಿ ಕೆಲವು ಗುಡ್ಡಗಳು. ಗುಡ್ಡಗಳ ಬುಡಕ್ಕೆ ಒಂದು ಕೆರೆ. ಅದರ ಒಂದು ಪಕ್ಕದಲ್ಲಿ ಮರಗಳ ಶ್ರೇಣಿ. ಜನ ಅಲ್ಲಿ ಬರುವುದಕ್ಕೆ ಸಾಮಾನ್ಯವಾಗಿ ಹೆದರುತ್ತಿದ್ದರು. ಕೆಲವು ಫಕೀರರು ಅಲ್ಲಿ ಇಲ್ಲಿ ಗುಡ್ಡಗಳಲ್ಲಿ ವಾಸಿಸುತ್ತಿದ್ದರು. ಇದು ಲಕ್ಷ್ಮಣನ ಆರಾಮ ಧಾಮವಾಗಿತ್ತು. ಆ ಗುಡ್ಡ ಮರಗಳೇ ಅವನ ಗೆಳೆಯರಾಗಿದ್ದರು. ತನ್ನೆಲ್ಲ ಮೂಕವೇದನೆಯನ್ನು ಅಲ್ಲಿ ಹೃದಯ ತೆರೆದು ಹಾಡುವನು. ಅನತಿದೂರ ದಲ್ಲಿ ಒಂದು ಮರುನುಡಿಯುವ ಬಂಡೆಯಿತ್ತು. ಲಕ್ಷ್ಮಣನ ಶಿಷ್ಯವೃತ್ತಿ ಯನ್ನವಲಂಬಿಸಿತ್ತು. ಅವನು ಹೇಳಿದುದನ್ನು ಹೇಳಿದಂತೆ ನುಡಿಯುತ್ತಿತ್ತು. ಅಲ್ಲಿ ಹೋಗಿ ಕುಳಿತನೆಂದರೆ ಮನೆ, ಜನ, ಕಾಲ ಎಲ್ಲವೂ ಮರೆತುಹೋಗು ತ್ತಿತ್ತು. ಹೊಸ ಅನುಭವಗಳು ಹೃದಯಕ್ಕೆ ವೇದ್ಯವಾಗುತ್ತಿದ್ದವು. ಪ್ರಕೃತಿ ತನ್ನ ಗುಪ್ತ ಭಂಡಾರದಲ್ಲಿ ಅಡಗಿಸಿಟ್ಟಿದ್ದ ಅಮೂಲ್ಯ ಪದಾರ್ಥಗಳನ್ನು ಅಲ್ಲಿ ಲಕ್ಷ್ಮಣನಿಗೆ ಧಾರೆಯೆರೆಯುತ್ತಿದ್ದಳು. ಅದರಲ್ಲಿ ಅವನು ಕೋರುತ್ತಿದ್ದ ಪದಾರ್ಥಗಳೂ ದೊರೆಯುತ್ತಿದ್ದವು. ಪ್ರತಿದಿವಸ ಅಲ್ಲಿ ಕುಳಿತು ಲಕ್ಷ್ಮಣ ಹಾಡು ತ್ತಿದ್ದಾಗಲೂ ತಾನು ತಿಳಿದಿರುವುದೆಷ್ಟು ಸ್ವಲ್ಪ ಎಂಬ ಸತ್ಯ ಗೋಚರವಾಗು ತ್ತಿತ್ತು. ಒಂದು ರಾಗವನ್ನು ಹಾಡುತ್ತ ಹಾಡುತ್ತ ಹೋದಂತೆ ಅದು ಅಂತ್ಯ ವನ್ನರಿಯದ ಬುಗ್ಗೆಯಾಗುತ್ತಿತ್ತು. 'ಒಂದು ರಾಗವೇ ನನಗೆ ಸರಿಯಾಗಿ ಬಾರ ದಲ್ಲ, ನಾನು ಸಂಗೀತಗಾರನೆಂದುಕೊಳ್ಳುವುದು ಎಂತಹ ನಾಚಿಕೆಗೇಡು' ಎಂದು ಕೊಳ್ಳುವನು.

ಪ್ರಕೃತಿ ಲಕ್ಷ್ಮಣನ ಗಾನದಲ್ಲಿ ಬೆರೆಯುತ್ತಿತ್ತು. ಅವನ ಗಾನವನ್ನು ಕೇಳಿ ಮೈಮರೆಯುತ್ತಿತ್ತು. ತನ್ನನ್ನು ಇಷ್ಟು ಸುಖಿಯನ್ನಾಗಿ ಮಾಡಿದ ಗಾಯಕರ ಮನಸ್ಸಿಗೆ ಮುದವೀಯಲು ತಾನೂ ಹಾಡುವುದು. ಚೇತನಾಚೇತನ ವಸ್ತು ಗಳೆಲ್ಲವೂ ಆ ಮರದ ಗಾನದಲ್ಲಿ ಬೆರೆತು ಚಿತ್ತಮೋಹಕವಾದ ಗಾನವನ್ನುಂಟು ಮಾಡುತ್ತಿದ್ದವು. ಆದರೆ ಅದು ಲಕ್ಷ್ಮಣನಿಗೆ ಪೂರ್ಣವಾಗಿ ಅರ್ಥವಾಗುತ್ತಿರ ಲಿಲ್ಲ. ಆಲೈಸಿ ಕೇಳುವನು. ಸ್ಥೂಲವಾಗಿ ಅದರ ಭಾವವನ್ನು ಗ್ರಹಿಸುವನು. ಸೂಕ್ಷ್ಮ ವಿಚಾರಗಳು ತಿಳಿಯದಲ್ಲಾ ಎಂದು ವಿಷಾದಪಡುವನು. ಪ್ರಕೃತಿ ಯನ್ನೊಮ್ಮೆ ಉದ್ದೇಶಿಸಿ

'ನೀನು ತಿಳಿದವಳು, ನಾನು ಅಜ್ಞ. ನೀನು ಪಂಡಿತೆ, ನಾನು ಪಾಮರ. ಇದನ್ನು ತಿಳಿದೂ ತಿಳಿದೂ ನನ್ನನ್ನು ಏಡಿಸುವೆಯಾ—ಕಿವುಡನ ಮುಂದೆ ಕಿನ್ನರಿ ನುಡಿಸಿ ಅವನ ಮನಸ್ಸಿಗೆ ಕಿರುಕುಳವನ್ನುಂಟುಮಾಡಬೇಕೇ? ನಾನು ನಿನ್ನ ಮಗುವಲ್ಲವೇ—ನಿನ್ನ ಶಿಷ್ಯನಲ್ಲವೇ? ನಿನ್ನ ಗಾನವನ್ನೇ ಅಲ್ಲವೇ ನಾನು ಹಾಡುವುದು' ಎಂದು ಆರ್ತನಾಗಿ ಮೊರೆಯಿಡುವನು.

೨೯

ಪರೀಕ್ಷೆ ಮುಗಿಯುವುದೇ ತಡ, ಗೋಪಾಲ ಬೆಂಗಳೂರಿಗೆ ಬಂದುಬಿಟ್ಟ. ವೆಂಕಟೇಶಯ್ಯನಿಗೆ ಮಾತುಕೊಟ್ಟಿದ್ದಂತೆ 'ವೀರಕರ್ನಾಟಕ'ದ ಸಂಪಾದಕತ್ವ ವನ್ನು ವಹಿಸಿಕೊಂಡು ಅವನ ಮನೆಯಲ್ಲಿ ನಿಂತುಬಿಟ್ಟ.

ವೆಂಕಟೇಶ ಹಗಲೂ ರಾತ್ರಿಯೆನ್ನದೆ ಕೆಲಸದ ಮೇಲೆ ಹೋಗಿಬಿಡಬೇಕಾ ಗುತ್ತಿತ್ತು. ಎಷ್ಟೋ ಸಲ ವಾರವಾರಗಳು ಹೊರಗೆ ಪ್ರವಾಸ ಮಾಡಬೇಕಾ ಗುತ್ತಿತ್ತು. ಗೋಪಾಲ ಬಂದದ್ದು ಲಕ್ಷ್ಮಣನಿಗೂ ಜತೆಯಾದ ಹಾಗಾ ಯಿತು. ಗೋಪಾಲ ತಾನೂ ಲಕ್ಷ್ಮಣನ ಕೋಣೆಯನ್ನೆ ಸೇರಿಬಿಟ್ಟ. ಪತ್ರಿಕೆಯ ಕಛೇರಿ ಮುಗಿದೊಡನೆಯೇ ಲಕ್ಷ್ಮಣನ ಜತೆಯಲ್ಲಿ ಇರುತ್ತಿದ್ದ. ಒಂದು ದಿನ ಗೋಪಾಲಿಯನ್ನು ಕರೆದೊಯ್ದು ತನ್ನ ಆರಾಮಧಾಮದ ಪರಿಚಯ ಮಾಡಿಕೊಟ್ಟ. ಶಾಂತಾ ಒಂದು ದಿನ ಮೆಲ್ಲನೆ ಲಕ್ಷ್ಮಣನ ತಂಬೂರಿಯನ್ನು ತಂದು ಅವನ ಕೋಣೆಯಲ್ಲಿಟ್ಟಳು.

ತಂಬೂರಿಯನ್ನು ಕಂಡು ಲಕ್ಷ್ಮಣ ಹಳೆಯದೆಲ್ಲವನ್ನೂ ಜ್ಞಾಪಿಸಿಕೊಂಡ. ಅದನ್ನು ತಾನು ಬಯಸಿದುದು, ಅದು ತನಗೆ ದೊರೆತುದು ಎಲ್ಲವೂ ಜ್ಞಾಪ ಕಕ್ಕೆ ಬಂದುವು. ಇಷ್ಟು ದಿವಸವಾದರೂ ಜೋಪಾನವಾಗಿ ತಂಬೂರಿಯನ್ನು ಕಾದಿಟ್ಟಿದ್ದ ತಂಗಿ, ಭಾವನನ್ನು ವಂದಿಸಿದ. ತಂಬೂರಿಯನ್ನು ಶ್ರುತಿಮಾಡಿ ಹಾಡಲಾರಂಭಿಸಿದ. ಲಲಿತವಾದ ಶಹಾನಾ ರಾಗ. ಹಾಡುವವನ ವಿನಯ, ದೈನ್ಯದೊಂದಿಗೆ ರಾಗವೂ ಮೇಳವಾಗಿತ್ತು. ಲಕ್ಷ್ಮಣನೇ ಒಮ್ಮೆ 'ಅಯ್ಯೋ' ಎಂದ. ಅವನ ಹಾಡಿಕೆ ಅವನಿಗೇ ತೃಪ್ತಿಯನ್ನುಂಟುಮಾಡಿತ್ತು. ದೇಹದಲ್ಲಿ ಹೊಸ ಪ್ರಾಣಪ್ರತಿಷ್ಠೆಯಾದಂತಾಯಿತು. ರಾಗದ ಹೊಸ ಹೊಸ ಕಳೆಗಳು ಲಕ್ಷ್ಮಣನ ಗಾಯನದಲ್ಲಿ ಮೂಡಲು ತಾನೇ ಮುಂದುವರಿಯುತ್ತಿದ್ದವು. ಹಾಡಿಕೆ ಮುಗಿದಮೇಲೆ ಗೋಪಾಲ

"ಇದೇ ನಿಜವಾದ ಸಂಗೀತ!"

ಎಂದ. ಲಕ್ಷ್ಮಣ ಉತ್ತರವಾಗಿ

"ಹೌದು, ನಿಜವಾಗಿಯೂ ಇದೇ ಸಂಗೀತ. ನಾನು ಆನಂದಪಟ್ಟೆ" ಎಂದ.

"ನೀನು ಎಲ್ಲಾ ರಾಗಗಳನ್ನೂ ಹಾಡುವೆ. ಆದರೆ ಪೂರ್ವಿಯನ್ನೇತಕ್ಕೆ ಹಾಡುವುದಿಲ್ಲ?"

"ಹಾಡುತ್ತೇನಪ್ಪಾ, ಒಂದು ದಿವಸ ಅದನ್ನೂ ಹಾಡುತ್ತೇನೆ. ಸದ್ಯಕ್ಕೆ ಪೂರ್ವಿಯೇತಕ್ಕೋ ನನ್ನ ಬಾಯಲ್ಲಿ ನುಡಿಯುವುದಿಲ್ಲ. ಒಂದು ದಿನ ಅದು ನನ್ನ ಹೃದಯವನ್ನು ಭೇದಿಸಿಕೊಂಡು ಬರುತ್ತದೆ."

"ಬಾಯಲ್ಲಿ ನುಡಿಯುವುದಿಲ್ಲವೆಂದರೇನು? ನೀನೂ ನುಡಿಕಾರಕ್ಕೆ ಕಾಯ ಬೇಕೇ?"

"ಕಾಯಬೇಕಾದವರುಕಾಯುತ್ತಾರೆ.ನನ್ನ ಗುರುಗಳು ಒಂದು ಜೀವಮಾನ ವೆಲ್ಲಾ ಕಾದರು. ಶೇಷಣ್ಣನವರು ಒಂದು ಜೀವಮಾನವನ್ನೆಲ್ಲಾ ಕಲ್ಯಾಣಿಗಾಗಿ ತೇಯುತ್ತಿಲ್ಲವೇ? ಸಂಗೀತ ಒಂದು ಆಧ್ಯಾತ್ಮಿಕ ಸಾಧನೆ. ತ್ಯಾಗರಾಜರು, ಪುರಂದರದಾಸರಂತಹವರು ನಿಜವಾದ ಸಂಗೀತವಿದ್ವಾಂಸರು. ಸಂಗೀತ ಆತ್ಮ ಸಂಸ್ಕಾರದ ಫಲ."

"ನಿನ್ನ ಸಂಗೀತ ಆತ್ಮಸಂಸ್ಕಾರದ ಫಲವಲ್ಲವೇ?"

"ಇರಬಹುದು. ಆದರೆ ನನ್ನ ಸಂಗೀತಕ್ಕೂ ತ್ಯಾಗರಾಜರು, ಪುರಂದರ ದಾಸರಂತಹ ವಿಭೂತಿಗಳ ಸಂಗೀತಕ್ಕೂ ಒಂದು ದೊಡ್ಡ ಅಂತರವಿದೆ. ಅವರ ಸಂಗೀತ ಶಾಂತಿದಾಯಿ. ತಾಯಿಯ ನಲ್ನುಡಿಯನ್ನು ಕೇಳಿದಂತೆ ಸುಖಮಯ ವಾಗುತ್ತದೆ. ನನ್ನದು ಅಶಾಂತಿದಾಯಿ. ನನ್ನದನ್ನು ಕೇಳಿದವರು ಭ್ರಾಂತ ರಾಗುತ್ತಾರೆ. ಅವರ ಸಂಗೀತ ಮನಸ್ಸನ್ನು ಮೇಲಕ್ಕೆತ್ತುತ್ತದೆ—ನನ್ನದು ಮನಸ್ಸನ್ನು ಕದಡುತ್ತದೆ. ಏತಕ್ಕೆಂದರೆ ನನ್ನ ಮನಸ್ಸಿನಲ್ಲಿ ಶಾಂತಿಯಿಲ್ಲ. ಶಾಂತಿಯಿಲ್ಲದ ಮನಸ್ಸು ಇತರರಿಗೆ ಶಾಂತಿಯನ್ನು ಹೇಗೆ ನೀಡೀತು?"

"ನಿನ್ನ ಸಂಗೀತ ಹುಟ್ಟಿಸುವುದು ಕ್ಷುಲ್ಲಕವಾದ ಪ್ರಾಪಂಚಿಕ ಅಶಾಂತಿ ಯನ್ನಲ್ಲವಲ್ಲ. ಸುಪ್ತವಾದ ಚೇತನವನ್ನು ಹೊಡೆದೆಬ್ಬಿಸುವ ಗುರುವಲ್ಲವೇ ಅದು? ಮನುಷ್ಯ ತನ್ನ ನಿದ್ರೆಯಿಂದ ಎಚ್ಚತ್ತು ಹೊಸ ಲೋಕಗಳನ್ನು ಜಯಿಸಬೇಕೆಂದು ಬಯಸುವುದಕ್ಕಿಂತಲೂ ಹೆಚ್ಚು ಯಾವುದು? ಜೀವನ ಕ್ಕಿಂದು ಬೇಕಾದದ್ದು ಜಾಗೃತಿ....ಕ್ರಾಂತಿ."

"ನೀನು ಇನ್ನೂ ಹುಡುಗ. ಜಾಗೃತಿ-ಕ್ರಾಂತಿ ಬೇಕೆಂದು ಬಯಸುವುದು ಸಹಜವೇ ಆಗಿದೆ. ನಾನು ಮುದುಕನಾಗುತ್ತ ಬಂದೆ. ಶಾಂತಿಯನ್ನು ಕೋರುವುದು ನನ್ನ ವಯೋಧರ್ಮವನ್ನು ಸೂಚಿಸುವುದಲ್ಲವೆ?"

"ಇಲ್ಲ. ನೀನು ಆ ಮೆಟ್ಟಲನ್ನು ಹತ್ತಿ ಮುಂದೆ ಹೋಗಿದ್ದೀ. ನಾನಿನ್ನೂ

ಹೋಗಿಲ್ಲ. ನೀನು ಓಡುತ್ತಿರುವೆ, ನಾನಿನ್ನೂ ಅಂಬೆಗಾಲಿಕ್ಕುತ್ತಿದ್ದೇನೆ"

ಗೋಪಾಲ ಕೇವಲ ಅಂಬೆಗಾಲಿಕ್ಕುವ ಸ್ಥಿತಿಯಲ್ಲಿರಲಿಲ್ಲವೆಂದು ಲಕ್ಷ್ಮಣನಿಗೆ ಗೊತ್ತಿತ್ತು. ತಮ್ಮನ ವಿನಯವನ್ನೂ ಜಿಜ್ಞಾಸುತನವನ್ನೂ ಮೆಚ್ಚಿದ. ಗೋಪಾಲ ಆಗಾಗ್ಗೆ ಅಣ್ಣನಿಗೆ ಕನ್ನಡ ಸಾಹಿತ್ಯದ ಉದ್ಗ್ರಂಥಗಳಿಂದ ಉತ್ತಮ ಭಾಗಗಳನ್ನು ಓದಿ ಹೇಳುತ್ತಿದ್ದ. ತನ್ನ ಮೆಚ್ಚಿನ ಪುರಂದರದಾಸರ ಬಗ್ಗೆ ಎಷ್ಟೋ ಹೊಸ ವಿಷಯಗಳನ್ನರಿತು ಹೊಸ ಕೀರ್ತನೆಗಳನ್ನು ತಮ್ಮನಿಂದ ಸಂಗ್ರಹಿಸಿದ.

ಪುರಂದರದಾಸರ ಜಯಂತ್ಯುತ್ಸವ ಬಂದಿತು. ಮೊದಲೇ ಸಮಾಜದ ಕಾರ್ಯದರ್ಶಿಗಳಿಗೆ ಮಾತುಕೊಟ್ಟಿದ್ದಂತೆ ಲಕ್ಷ್ಮಣ ಹಾಡಿ ಬಂದ. ಅವನ ಅಮೋಘವಾದ ವಿದ್ವತ್ತನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು. ಪುರಂದರ ದಾಸರ ಕೀರ್ತನೆಗಳ ಹಾಡಿಕೆಯಲ್ಲಿಯೂ ಇಂತಹ ವಿದ್ವತ್ತನ್ನು ತೋರಬಹುದೇ ಎಂದು ಆಶ್ಚರ್ಯಪಟ್ಟರು. ಆ ಅವಕಾಶವನ್ನು ತೆಗೆದುಕೊಂಡು ಗೋಪಾಲ

"ಕನ್ನಡ ಕೀರ್ತನೆಗಳು ಸಂಗೀತಕ್ಕೆ ಒಗ್ಗುವುದಿಲ್ಲವೆಂದು ಇಲ್ಲಿ ಕೆಲವರ ಅಭಿಪ್ರಾಯ—ಇದಕ್ಕೆ ನೀನೇನೆನ್ನುವೆ?"

"ಅದು ತಪ್ಪು ಅಭಿಪ್ರಾಯ. ಪುರಂದರ, ಕನಕ, ವಿಜಯಾದಿ ದಾಸ ರಾಯರ ಕೀರ್ತನೆಗಳೇ ಸಾಲದೇ. ತ್ಯಾಗರಾಜರು, ದೀಕ್ಷಿತರು ಇವರ ಕೀರ್ತನೆ ಗಳಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬಹುದೋ ದಾಸರ ಕೀರ್ತನೆ ಗಳಲ್ಲಿಯೂ ಮಾಡಬಹುದಲ್ಲಾ."

"ಹಾಗೇ ಬಸವಣ್ಣನವರು, ಮಹಾದೇವಿಯಕ್ಕ ಮೊದಲಾದ ಶಿವಶರಣ ಶರಣೆಯರ ವಚನಗಳು, ನಿಜಗುಣಶಿವಯೋಗಿ, ಸಹಜಾನಂದ, ಮುಪ್ಪಿನ ಷಡಕ್ಷರಿ ಮೊದಲಾದವರ ಕೀರ್ತನೆಗಳನ್ನೇತಕ್ಕೆ ನಮ್ಮ ಸಂಗೀತಗಾರರು ಬಳಕೆಗೆ ತರಬಾರದು?"

"ಖಂಡಿತವಾಗಿಯೂ ತರಬೇಕು. ತಾಯಿಭಾಷೆ ಹಾಡುವವನ ಹೃದಯ ದಿಂದ ಬರುವ ಹಾಗೆ ಬೇರೆ ಯಾವ ಭಾಷೆಯೂ ಬರುವುದಿಲ್ಲ. ನೀನು ಸ್ವಲ್ಪ ಸಹಾಯಮಾಡಿದರೆ ನಾನು ಆ ಕೀರ್ತನೆಗಳನ್ನು ಕೂಡಿಸುತ್ತೇನೆ."

"ಸಂತೋಷವಾಗಿ."

ಅಂದಿನಿಂದ ಹೊಸ ಹೊಸ ಕನ್ನಡ ಕೀರ್ತನೆಗಳನ್ನು ಕೂಡಿಸುವುದಕ್ಕೆ ಮೊದಲಿಟ್ಟ. ಒಂದು ತಿಂಗಳಲ್ಲಿ ೪೦–೫೦ ಕೀರ್ತನೆಗಳಷ್ಟು ಸಂಗ್ರಹ ವಾಯಿತು. ಕನ್ನಡ ಕೀರ್ತನೆಗಳ ಕಛೇರಿಯೊಂದನ್ನು ಮಾಡಿಸಿ ಬೇರೆ ಭಾಷೆ ಗಳ ಮೋಹಕ್ಕೆ ಬದ್ಧಿದ್ದ ಭ್ರಾಂತ ಸಂಗೀತಗಾರರಿಗೆ ದಾರಿ ತೋರಿಸಬೇಕೆಂದು

ಗೋಪಾಲ ಮನಸ್ಸುಮಾಡಿದ. ವೆಂಕಟೇಶಯ್ಯ ಊರಿನಲ್ಲಿ ಇರಲಿಲ್ಲ. ಅವನು ಬರಲೆಂದು ಸುಮ್ಮನಾದ.

ಜಯಂತ್ಯುತ್ಸವವಾದುದೇ ತಡ, ಲಕ್ಷ್ಮಣನಿಗೆ ಬಿಡುವಿಲ್ಲದಂತಾಯಿತು. ಬೆಳಗ್ಗೆಯಿಂದ ಸಂಜೆಯವರೆಗೂ ತಂಡತಂಡವಾಗಿ ಶಿಷ್ಯರು ಬರಲಾರಂಭಿಸಿದರು. ಕಲಿತವರು ಬರುತ್ತಿದ್ದರು, ಕಲಿಯಬೇಕೆಂಬ ಆಸೆಯಿದ್ದವರು ಬರುತ್ತಿದ್ದರು. 'ಇವನದೇನು ಮಹಾಪಾಂಡಿತ್ಯ. ನಾನು ಸೋಲಿಸಿಬಿಡುತ್ತೇನೆ' ಎಂದು ಕೆಲವರು ಬಂದು, ತಾವೇ ಸೋತು ಲಕ್ಷ್ಮಣನ ಶಿಷ್ಯವೃತ್ತಿಯನ್ನು ಅವಲಂಬಿಸುತ್ತಿದ್ದರು. ಯಾರು ಬಂದು ಕೇಳಿದರೂ ಹಾಡುವನು. ಯಾರು ಕೇಳಿದರೂ ಪಾಠ ಹೇಳಿಕೊಡುವನು. ಪಾಠಪ್ರವಚನದಲ್ಲಿ ಒಂದು ನಿಯಮವನ್ನು ಮಾತ್ರ ಅನುಸರಿಸಿದ್ದ. ಶಾರೀರಸಂಪತ್ತಿಯಿಲ್ಲದವರಿಗೆ ಬಾಯಿಹಾಡುಗಾರಿಕೆಯನ್ನು ಹೇಳಿಕೊಡುತ್ತಿರಲಿಲ್ಲ. ಅವರನ್ನು ವಾದ್ಯವಾದನ ಕಲಿಯಿರೆಂದು ಹೇಳುತ್ತಿದ್ದ.

"ಸುಖವಾದ ಶಾರೀರವಿಲ್ಲದಿದ್ದರೆ ರಾಗಭಾವಗಳು ಹೊರಡುವುದಿಲ್ಲ. ಸುಖವಾದ ಶಾರೀರ ಶ್ರುತಿಮಾಡಿದ ವೀಣೆಯಿದ್ದ ಹಾಗೆ. ಶ್ರುತಿಯಿಲ್ಲದ ವೀಣೆ ಹೇಗೆ ಕೇಳಲು ಕರ್ಕಶವೋ ಹಾಗೆ ಶಾರೀರವಿಲ್ಲದವನ ಸಂಗೀತ."

"ಹಾಗಾದರೆ ಕೊನೇರಿ ರಾಜಪುರಂ ವೈದ್ಯನಾಥ ಅಯ್ಯರ್, ಪಟ್ಣಂ ಸುಬ್ರಹ್ಮಣ್ಯ ಅಯ್ಯರ್, ನಾಯಿನಾ ಪಿಳ್ಳೆ ಇವರಿಗೆಲ್ಲ ಶಾರೀರವಿದ್ದಿತೇ ?"

ಎಂದು ಶಿಷ್ಯರು ಪ್ರಶ್ನೆಹಾಕುತ್ತಿದ್ದರು.

"ಅವರಿಗೆ ಅಪಾರವಾದ ವಿದ್ಯೆಯಿದ್ದಿತು. ಆದರ ಬಲದಲ್ಲಿ ಶಾರೀರದ ಅಸೌಖ್ಯ ಮರೆತುಹೋಗುತ್ತಿತ್ತು. ನಿಮ್ಮಲ್ಲಿ ಯಾವದೂ ಇಲ್ಲದಿದ್ದರೆ ಏನು ಮಾಡುವಿರಿ ?"

ಎಂದು ನಗುತ್ತಾ ಶಿಷ್ಯರನ್ನು ಕೇಳುತ್ತಿದ್ದ. ಗೋಪಾಲ ಹತ್ತಿರ ಇದ್ದರೆ "ನೀನು ಏನು ಹೇಳುವೆ, ಗೋಪೀ ?"

"ಹೌದಪ್ಪಾ ಹೌದು. ಶಾರೀರವಿಲ್ಲದವರು ಬಾಯಿಹಾಡುಗಾರಿಕೆ ಕಲಿತು ಕರ್ಣಾಟಕ ಸಂಗೀತದ ಹೆಸರನ್ನೇ ಕೆಡಿಸಿಬಿಟ್ಟಿದ್ದಾರೆ. ಹಿಂದೂಸ್ಥಾನಿ ಸಂಗೀತಗಾರರಲ್ಲಿ ಶಾರೀರವಿಲ್ಲದವರೇ ಅಪರೂಪ. ಯಾಕೆಂದರೆ ಶಾರೀರವಿಲ್ಲದವರು ಅವರಲ್ಲಿ ಬಾಯಿಹಾಡುಗಾರಿಕೆ ಕಲಿಯುವ ಹಾಗಿಲ್ಲ. ನಮ್ಮಲ್ಲಿ ಹಾಗಲ್ಲ. ಯಾರೂ ಬೇಕಾದರೂ ಕಲಿಯಬಹುದು. ನಮ್ಮ ಕವಿ ಕೂಡ ಈ ಮಾತನ್ನೇ ಒತ್ತಿಯೊತ್ತಿ ಹೇಳಿದ್ದಾನೆ."

"ಯಾರವನು ? ಓದು ನೋಡೋಣ."

ಗೋಪಾಲ ಒಂದು ದೊಡ್ಡ ಪುಸ್ತಕ ತೆಗೆದು ಲಕ್ಷ್ಮಣನಿಗೂ ಅವನ ಶಿಷ್ಯ ವರ್ಗಕ್ಕೂ ಓದಿದ.

"ಇದನ್ನು ಬರೆದವನು ಮಹಾಕವಿ ರತ್ನಾಕರವರ್ಣಿ. ಕಾವ್ಯದ ಹೆಸರು 'ಭರತೇಶವೈಭವ.' ಅದರಲ್ಲಿ ಸಂಗೀತವನ್ನು ಕುರಿತು ಹೀಗೆ ಹೇಳಿದ್ದಾನೆ:

ಒಳಗುಣ್ಮಿದಾನಂದರಸ ತನ್ನ ತನು ತುಂಬಿ
ತುಳುಂಕಿ ಹೊರಗೆ ಸೂಸುವಂತೆ।
ತೆಳುವುಸಿರಿಂದ ಬಾಯ್ದೆರೆಯೊಳು ಸುಸ್ವರ
ಹೊಳೆದು ಮೋಹಿಸುತಿದ್ದುದಾಗ॥

ಸುಳಿನಾಭಿಯೊಳಾ ಪುಟ್ಟಿ ಮೆಲ್ಲೆದೆಯೊಳು ಬೆಳೆ
ದೊಳುಗೊರಲೊಳು ಪ್ರಾಯವಡೆದು।
ಎಳೆಯುಳ ಬ್ರಹ್ಮರಂಧ್ರವನೇರಿ ಬಾಯ್ದೆರೆ
ಗಿಳಿದು ಮೋಹಿಸಿದುದಾಳಾಪ॥

ಉಕ್ಕಂದವಾಗಿ ತುಂಬಿದ ಗಾನರಸವನು
ದಿಕ್ಕುದಿಕ್ಕಿಗೆ ಚಿಮ್ಮುವಂತೆ।
ಚೊಕ್ಕಚೊಕ್ಕನೆ ತಾನಗಳ ತಂದು ಕೊರಳಲಿ
ಜಕ್ಕುಲಿಸಿದರು ಜಾಣೆಯರು॥

ಚೀರದೆ ಬತ್ತದೆ ಜಾತಿಯ ಕಟ್ಟಣೆ
ಜಾರದೆಯೊಡಲ ದಂಡಿಸದೆ।
ಏರಲಿಳಿಯಲಹುದಹುದು ಲೇಸನೆ ಸವಿ
ದೋರೆ ಹಾಡಿದರು ಗಾಯಕರು॥

"ಚಿನ್ನದಂತಹ ಮಾತು"

ಎಂದು ಒಪ್ಪಿದ.

ಗೋಪಾಲ ಸುಮ್ಮನೆ ಕೂಡಲಿಲ್ಲ. 'ವೀರಕರ್ಣಾಟಕ'ದಲ್ಲಿ ಸುದ್ದಿರೂಪವಾಗಿ ಲಕ್ಷ್ಮಣನ ವಿಚಾರವನ್ನು ಆಗಾಗ್ಗೆ ಕೊಡುತ್ತಿದ್ದ. ಸಾಮಾನ್ಯವಾಗಿ ಶನಿವಾರದ ಸಂಚಿಕೆಯಲ್ಲಿ ಚಿತ್ರಗಳನ್ನು ಪ್ರಕಟಿಸಿ ಕಲೆ, ಸಾಹಿತ್ಯಗಳ ಸಂಬಂಧವಾದ ಲೇಖನಗಳನ್ನು ಕೊಡುವ ಪದ್ಧತಿಯಿತ್ತು. ಗೋಪಾಲ ಸಂಪಾದಕನಾದ ಮೇಲೆ ಶನಿವಾರದ ಸಂಚಿಕೆಗೆ ಬಹಳ ಮಹತ್ವಬಂದಿತ್ತು. ತಾನೇ ಕನ್ನಡ ಸಾಹಿತ್ಯದ ಮೇಲೂ ಕನ್ನಡಕವಿಗಳ ಮೇಲೂ ಲೇಖನಗಳನ್ನು ಬರೆಯುತ್ತಿದ್ದ ಮತ್ತು ಪಂಡಿತರಿಂದ ಆ ಬಗ್ಗೆ ಲೇಖನಗಳನ್ನು ಬರೆಸಿ ಪ್ರಕಟಿಸುತ್ತಿದ್ದ. ಶನಿವಾರದ ಸಂಚಿಕೆ ಹೆಚ್ಚಾಗಿ ಕರ್ನಾಟಕ ಸಂಸ್ಕೃತಿಯ ಕಡೆಗೆ ಲಕ್ಷ್ಯವಿಟ್ಟಿತ್ತು. ಕನ್ನಡದ ಚಿತ್ರಗಾರರು, ಶಿಲ್ಪಿಗಳು, ಸಂಗೀತಗಾರರು, ಗಮಕಿಗಳು, ವಾಗ್ಮಿಗಳು

ಎಲ್ಲರ ವಿಷಯವೂ ಕೂಲಂಕಷವಾಗಿ ಬರುತ್ತಿತ್ತು.

ಒಂದು ಶನಿವಾರದ ಇಡೀ ಸಂಚಿಕೆಯನ್ನು 'ಲಕ್ಷ್ಮಣರಾಯರು ಮತ್ತು ಅವರ ಕಲೆ'ಗಾಗಿ ಗೋಪಾಲ ನಿವೇದಿಸಿಬಿಟ್ಟ. ಲಕ್ಷ್ಮಣರಾಯನ ಜೀವನ, ಪ್ರತಿಭೆ, ವಿದ್ಯಾರ್ಜನೆಯ ಸಾಹಸಗಳೆಲ್ಲವೂ ಆದ್ಯಂತವಾಗಿ ಬರೆಯಲಾಗಿತ್ತು. ಸಂಗೀತದ ಮೇಲೆ ಲಕ್ಷ್ಮಣರಾಯ ಹೇಳಿದ್ದ ಅಭಿಪ್ರಾಯಗಳನ್ನು ಪ್ರತ್ಯೇಕ ಲೇಖನವಾಗಿಯೇ ಪ್ರಕಟಿಸಿದ್ದ. ಕನ್ನಡಕಾವ್ಯಗಳಿಂದ ಭಾಗಗಳನ್ನು ಆಯ್ದು, ಲಕ್ಷ್ಮಣ ಸಂಗೀತರೂಪವಾಗಿ ಮಾರ್ಪಡಿಸಿರುವ ಮಹತ್ತರವಾದ ಕೆಲಸವನ್ನೂ ಪ್ರಶಂಸಿಸಿದ್ದ.

ಈ ಲೇಖನವನ್ನು ಎಲ್ಲರೂ ಮೆಚ್ಚಿದರು. ಕನ್ನಡ ಕಲಾವಿದನೊಬ್ಬನ ಪರಿಚಯವನ್ನು ಇಷ್ಟು ಉತ್ಕೃಷ್ಟ ರೀತಿಯಲ್ಲಿ ಮಾಡಿಕೊಟ್ಟಿದ್ದಕ್ಕಾಗಿ ಎಲ್ಲರೂ ಗೋಪಾಲನನ್ನು ವಂದಿಸಿದರು. ಆದರೆ ಲಕ್ಷ್ಮಣ ಗೋಪಾಲನ ಕೆಲಸವನ್ನು ಮೆಚ್ಚಲಿಲ್ಲ. ಲೇಖನದಿಂದ ಅವನ ಶಾಂತಿಗೆ ಪೂರ್ಣಭಂಗವಾಗಿತ್ತು. ಕಛೇರಿಗಳಿಗೆ ಒಪ್ಪಬೇಕೆಂದು ಹತ್ತಾರು ಕಾಗದಗಳು ಬರಲಾರಂಭಿಸಿದವು. ಮದುವೆಯ ಮನೆಗಳಲ್ಲಿ ಬಂದು ಹಾಡಬೇಕೆಂದು ಕೇಳಲಾರಂಭಿಸಿದರು. ಸಂಗೀತದ ಮೇಲೆ ಉಪನ್ಯಾಸಗಳನ್ನು ಕೊಡಬೇಕೆಂದು ಪೀಡಿಸಲಾರಂಭಿಸಿದರು. ಲಕ್ಷ್ಮಣನಿಗೆ ಉತ್ತರ ಹೇಳಿ ಹೇಳಿ ಸಾಕಾಗಿಹೋಯಿತು. ಒಂದು ದಿವಸ ಗೋಪಾಲನನ್ನು ಕುರಿತು

"ಒಳ್ಳೆಯ ಉಪಕಾರ ಮಾಡಿದೆ, ಗೋಪಾಲಿ. ನಾನು ಈ ಊರಿನಲ್ಲಿ ಉಳಿಯದ ಹಾಗೆ ಮಾಡಿದೆ. ನಾನು ಹೇಳದೆ ಕೇಳದೆ ಎಲ್ಲಿಗಾದರೂ ಹೋಗಿಬಿಡುತ್ತೇನೆ."

"ಉಂಟೇ ಲಚ್ಚಣ್ಣ? ಈ ಕೀರ್ತಿ ನಿನ್ನ ಹಕ್ಕು. ನಿನ್ನ ವಿದ್ಯೆಗೆ ಜನ ಇನ್ನೇನು ಕೊಡಬೇಕು? ತಮ್ಮ ವಿಶ್ವಾಸವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ."

"ನಿಜ, ಇರಬಹುದು. ಆದರೆ ನನಗೆ ಆ ವಿಶ್ವಾಸ ಬೇಕಿಲ್ಲ. ನಾನು ಜನತೆಯನ್ನು ಮೆಚ್ಚಿಸಬೇಕೆಂದೂ, ಅವರಿಂದ ಕೀರ್ತಿಯನ್ನು ಸಂಪಾದಿಸಬೇಕೆಂದೂ ಹಾಡುವುದಿಲ್ಲ. ನಾನು ಹಾಡುವುದೇ ಇಲ್ಲ. ಹಾಡು ನನ್ನಿಂದ ಹೊರಬರುತ್ತದಷ್ಟೇ."

"ಹಾಗೇ ಆಗಲಿ. ಅದನ್ನು ಅನುಭವಿಸುವ ಅವಕಾಶವನ್ನು ನೀನು ಜನತೆಗೆ ಕೊಡಬೇಡವೇ? ಕೆಟ್ಟ ಸಂಗೀತವನ್ನು ಕೇಳಿ ಕೇಳಿ ಅವರ ಅಭಿರುಚಿಯೂ ಅದಕ್ಕೆ ತಕ್ಕಂತೆ ಮಾರ್ಪಟ್ಟಿದೆ. ಸರಿಯಾದ ಸಂಗೀತದ ರೂಪವೇ ಮರೆತು ಹೋಗುತ್ತಿದೆ, ಬಾಯಿಯಲ್ಲಿ 'ಶ್ರುತಿಃ ಮಾತಾ ಲಯಃ ಪಿತಾ' ಎಂದು ಹೇಳು

ತ್ತಾರೆ. ಆದರೆ ಒಬ್ಬನಿಗೂ ಶ್ರುತಿಯ ಗಂಧವೇ ಗೊತ್ತಿಲ್ಲ. ಈಗ ದಕ್ಷಿಣಾದಿ ಸಂಗೀತಕ್ಕೆ ಶ್ರುತಿಯೇನೂ ಪ್ರಧಾನವಾಗಿ ಬೇಕಿಲ್ಲ—ಅದು ಹಿಂದೂಸ್ಥಾನಿ ಯವರ ಹುಚ್ಚು. ತಾಳ ಬಿಗಿಯಾಗಿದ್ದರೆ ಸರಿ ಎಂದು ಹೊಸ ಶಾಸ್ತ್ರ ನಿಯಮಗಳನ್ನಾರಂಭಿಸಿದ್ದಾರೆ. ಸಂಗೀತ ಕಲೆಯನ್ನು ಸರಿಯಾಗಿ ತಿಳಿದ ನಿನ್ನಂತಹವರ ಮೇಲೆ ಬಿದ್ದ ಭಾರವಲ್ಲವೇ ಇದು. ನಿನಗೋಸ್ಕರವಲ್ಲ, ಸಂಗೀತ ಕಲೆಗೋಸ್ಕರ ನೀನು ಈ ಕೆಲಸವನ್ನು ಮಾಡಬೇಡವೇ?"

"ಮಾಡಬೇಕು. ಅದು ನಮ್ಮ ಧರ್ಮ. ಆದರೆ ನಾನು ಅದಕ್ಕೆ ಸರಿಯಾದವನಲ್ಲವಲ್ಲಾ. ಶೇಷಣ್ಣನವರೂ ಕೃಷ್ಣಪ್ಪನವರೂ ಈ ಕೆಲಸವನ್ನು ಮಾಡುತ್ತಲೇ ಇದ್ದಾರೆ."

"ಇದು ಮುಗಿಯದ ಕೆಲಸ. ಎಷ್ಟು ಜನ ಮಾಡಿದರೂ ಸಾಲದು."

"ನಾನು ವಾದಿಸಲಾರೆ, ಗೋಪೀ. ನೀನು ಹೇಳುವುದೇ ಸರಿ ಇರಬಹುದು. ಆದರೆ ನನಗೆ ಶಾಂತಿ ಬೇಕು, ಕೀರ್ತಿ ಬೇಡ"

ಎಂದು ಹೇಳಿದ. ವೆಂಕಟೇಶ ಊರಿಗೆ ಬಂದ. ಅವನು ಬಂದ ಕೂಡಲೇ ಕನ್ನಡ ಸಂಗೀತದ ಕಛೇರಿಯನ್ನು ವ್ಯವಸ್ಥೆ ಮಾಡುವ ವಿಷಯವನ್ನು ಗೋಪಾಲ ಸೂಚಿಸಿದ. ವೆಂಕಟೇಶ ಸಂತೋಷದಿಂದ ಒಪ್ಪಿ

"ಅದು ಬರಿಯ ಕಛೇರಿಯಲ್ಲ. ಲಕ್ಷ್ಮಣನ ವಿದ್ಯಾಮರ್ಯಾದೆ ಮಾಡುವ ಸಭೆ ಸೇರಿಸೋಣ. ನಾನು ಹಣವನ್ನು ಶೇಖರಿಸುತ್ತೇನೆ. ಸೊಗಸಾದ ಉತ್ಸವ ಮಾಡೋಣ. ಊರಿನ ಎಲ್ಲ ದೊಡ್ಡ ಮನುಷ್ಯರನ್ನೂ ಕಲಾವಿದರನ್ನೂ ಕರೆಯೋಣ. ಬೆಂಗಳೂರು ತನ್ನ ಕಲಾವಿಭೂತಿಯನ್ನು ಹೇಗೆ ಗೌರವಿಸುವುದೆಂಬುದನ್ನು ಲೋಕಕ್ಕೆ ತೋರಿಸೋಣ."

"ಮರ್ಯಾದೆ ಮಾಡುವುದೆಂದರೆ....?"

"ಸೊಗಸಾದ ವಜ್ರ ಕೆಂಪು ಹಾಕಿದ ತೋಡಾ ಮಾಡಿಸೋಣವಯ್ಯಾ. ಹೇಗೂ ಶೇಷಣ್ಣನವರು ಸಂಗೀತಪ್ರಪಂಚದ ಸಾರ್ವಭೌಮರಂತೆ ಇದ್ದಾರೆ. ಅವರನ್ನು ಆಹ್ವಾನಿಸಿ ಅವರ ಕೈಯಲ್ಲಿ ಕೊಡಿಸೋಣ. ಆಗ ಲಕ್ಷ್ಮಣನೂ ಒಲ್ಲೆನೆನ್ನುವ ಹಾಗಿರುವುದಿಲ್ಲ. ದುಡ್ಡು ಎಷ್ಟು ಬೇಕಾದರೂ ಖರ್ಚಾಗಲಿ. ನಾನು ಕೂಡಿಸುತ್ತೇನೆ. ಸಾಲದೆ ಬಂದರೆ ನಾನು ಕೈಯಿಂದ ಕೊಡುತ್ತೇನೆ."

"ಬಹಳ ಸಂತೋಷ."

ಅಂದೇ ಚಂದಾಪಟ್ಟಿಯನ್ನು ತೆಗೆದು ಮೊದಲು ಸುಂದರರಾಯರ ಕಡೆಗೆ ಹೋದ. ಅವರೂ ಭೀಮರಾಯರೂ ನೂರು ನೂರು ರೂಪಾಯಿಗಳನ್ನು ಹಾಕಿದರು. ವೆಂಕಟೇಶ ಅದೇ ಕೆಲಸಕ್ಕೆ ನಿಂತುಬಿಟ್ಟ. ಮೂರುನಾಲ್ಕು

ದಿವಸದಲ್ಲಿ ಎರಡು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಹಣ ಸಂಗ್ರಹ ವಾಗಿಬಿಟ್ಟಿತು. ಶೇಷಣ್ಣನವರು ಅಧ್ಯಕ್ಷಸ್ಥಾನವನ್ನಲಂಕರಿಸುವುದಕ್ಕೆ ಒಪ್ಪಿದರು. ಉತ್ಸವಕ್ಕೆ ಎಲ್ಲಾ ಕಡೆಯಿಂದಲೂ ಉಡುಗೊರೆಗಳು ಬರಲಾರಂಭಿಸಿದವು. ಅರಮನೆಯಿಂದ ಶಾಲುಜೋಡಿಯ ಮರ್ಯಾದೆ ಬಂತು. ಶೃಂಗೇರಿ ಪೀಠದಿಂದ ನುಡಿಯೊಡತಿಯ ಚಿನ್ನದ ಮೂರ್ತಿಯೊಂದು ಆಶೀರ್ವಾದ ಪೂರ್ವಕವಾಗಿ ಬಂತು ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ 'ಕನ್ನಡ ಬಾವುಟ' ರಜತಕರಂಡದಲ್ಲಿ ಚಿತ್ರಿತವಾಗಿ ಉಡುಗೊರೆಯಾಗಿ ಬಂತು. ಇವುಗಳ ಜತೆಯಲ್ಲಿ ದೊಡ್ಡಬಳ್ಳಾಪುರದಿಂದ ಒಂದು ಕಾಗದ ಬಂದಿತ್ತು. ವೆಂಕಟೇಶಯ್ಯನ ಹೆಸರಿಗೆ ವಿಳಾಸ ಬರೆದಿತ್ತು.

"ನಿನ್ನ ಆಹ್ವಾನ ಬಂದಿತು. ಈಗ ಇನ್ಸ್ಪೆಕ್ಷನ್ ಆಗುತ್ತಾ ಇದೆ. ಉತ್ಸವಕ್ಕೆ ನಾನು ಬರಲಾಗುವುದೋ ಇಲ್ಲವೋ? ನನ್ನ ಮನಸ್ಸೆಲ್ಲಾ ಅಲ್ಲೇ ಇದೆಯೆಂದು ಹೇಳಬೇಕೇ? ಇಂದು ನಮ್ಮ ದೇಶಕ್ಕೆ ತಿಲಕಪ್ರಾಯನಾಗಿರುವ ಮಹಾನುಭಾವ ನನ್ನ ತಮ್ಮನೆಂದು ನಾನು ಯಾವ ಬಾಯಿಂದ ಹೇಳಲಿ! ಅವನ ಕ್ಷಮೆಯನ್ನು ದೀನನಾಗಿ ಬೇಡುತ್ತೇನೆ. ಅವನ ಹೃದಯವನ್ನು ನಾನು ಬಲ್ಲೆ. ಅದು ವಿಶ್ವದಷ್ಟು ವಿಸ್ತಾರ. ಅಲ್ಲಿ ಕ್ಷುಲ್ಲಕನಾದ ನನಗೂ ಎಡೆಯಿತ್ತಿದ್ದಾನೆಂದು ಬಲ್ಲೆ. ಈಗಲೂ ಸಾಧ್ಯವಾದರೆ ಉತ್ಸವಕ್ಕೆ ಬರುತ್ತೇನೆ. ಇದರೊಂದಿಗೆ ಕಳುಹಿಸಿರುವ ೧೦೦ ರೂ.ಗಳ ಚೆಕ್ಕನ್ನು ದಯೆಯಿಟ್ಟು ಸ್ವೀಕರಿಸಬೇಕು.

ಇಂತು ನಿನ್ನವ,

ರಾಮಚಂದ್ರರಾಯ

ವೆಂಕಟೇಶಯ್ಯ ಕಾಗದವನ್ನು ಲಕ್ಷ್ಮಣನಿಗೆ ಕೊಟ್ಟ. ಓದುತ್ತ ಓದುತ್ತ ಅವನ ಕಣ್ಣುಗಳಲ್ಲಿ ಹನಿ ಕೂಡಿ ಬಂತು.

"ಇಷ್ಟು ವಿಶ್ವಾಸ ಅವನ ಹೃದಯದಲ್ಲಿತ್ತೆಂಬುದು ನನಗೆ ಗೊತ್ತೇ ಇರಲಿಲ್ಲ" ಎಂದ.

"ಹೌದು, ಈಗ ನಿನ್ನನ್ನು ಕಂಡರೆ ವಿಶ್ವಾಸಪಡದಿರುವವರು ಯಾರು, ಲಚ್ಚಣ್ಣ. ಈಗ ಅಣ್ಣ ತಮ್ಮ ಚಿಕ್ಕಮ್ಮ ಸೋದರಮಾವ ಎಲ್ಲರೂ ಹುಟ್ಟಿಕೊಳ್ಳುತ್ತಾರೆ."

"ಇರಬಹುದು, ಗೋಪೀ. ಆದರೆ ನಮ್ಮ ರಾಮಣ್ಣ ಹಾಗಲ್ಲ. ಅವನ ಮನಸ್ಸು ನಿಜವಾಗಿಯೂ ಒಳ್ಳೆಯದು."

ಇನ್ನು ಚರ್ಚೆಯನ್ನು ಬೆಳೆಸಬಾರದೆಂದು ಗೋಪಾಲ ಸುಮ್ಮನಾದ. ಉತ್ಸವದ ಖರ್ಚೆಲ್ಲಾ ಕಳೆದಮೇಲೆಯೂ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಹಣ ಉಳಿಯುವುದರಲ್ಲಿತ್ತು. ಅದನ್ನು ಏನು ಮಾಡಬೇಕೆಂದು ಗೋಪಾಲ-ವೆಂಕಟೇಶಯ್ಯ ಇಬ್ಬರಿಗೂ ಯೋಚನೆ ಹತ್ತಿತು. ಲಕ್ಷ್ಮಣ ಹಣ ತೆಗೆದುಕೊಳ್ಳುವ ಹಾಗಿಲ್ಲ—ಆದ್ದರಿಂದ ಏನು ಮಾಡುವುದು? ಅವನನ್ನೇ ಕೇಳುವ ಎಂದು ವಿಷಯವನ್ನು ಪ್ರಸ್ತಾಪಿಸಿದರು.

"ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಕೊಟ್ಟುಬಿಡಿ. ಕನ್ನಡ ಕೀರ್ತನೆಗಳನ್ನು ಹಾಡುವವರಿಗೆ ಅವರು ಬಹುಮಾನ ಕೊಡಲಿ."

"ಆಗಬಹುದು."

"ಹಾಗೇ ಇನ್ನೊಂದು ಮಾತು. ನೀವು ನಾಳೆ ನನಗೇನೋ ಕೊಡುವಿರಲ್ಲವೇ?"

"ಹೌದು."

"ಏನೆಂದು ಕೇಳಬಹುದೇ?"

ವೆಂಕಟೇಶಯ್ಯ ಕಣ್ಣು ಸಂಜ್ಞೆ ಮಾಡಲು ಗೋಪಾಲ ಒಳಗಿನಿಂದ ತೋಡಾವನ್ನು ತಂದು ಲಕ್ಷ್ಮಣನ ಕೈಗಿತ್ತ. ಅದನ್ನು ತಿರುಗಿಸಿ ಮರುಗಿಸಿ ನೋಡಿದ. ಕೈಗೆ ಹಾಕೆಂದು ಹೇಳಿ ಕೈಗೆ ಹಾಕಿಸಿಕೊಂಡು ವಜ್ರಕೆಂಪುಗಳನ್ನು ಥಳಥಳಿಸಿ ನೋಡಿ ಆನಂದಪಟ್ಟ. ಅದನ್ನು ನೋಡಿ ವೆಂಕಟೇಶಯ್ಯ, ಗೋಪಾಲನೂ ತೃಪ್ತಿಪಟ್ಟರು.

"ತೋಡಾ ಚೆನ್ನಾಗಿದೆ. ಎಷ್ಟಾಯಿತು ಖರ್ಚು?"

"ಸುಮಾರು ೯೦೦ ರೂಪಾಯಿಗಳಷ್ಟು."

"ಇದನ್ನು ನನ್ನ ಹೆಸರಿನಲ್ಲಿ 'ಶಿಷ್ಯನ ಸೇವೆ' ಎಂದು ಹೇಳಿ ನಮ್ಮ ಗುರುಗಳಿಗೆ ಕಳುಹಿಸಿಬಿಡಿ. ಇಂತಹ ಸುಂದರವಾದ ಪದಾರ್ಥ ಸರಿಯಾದ ಕಡೆ ಸೇರಬೇಕು"

ಎಂದು ಲಕ್ಷ್ಮಣ ಹೇಳಿಬಿಟ್ಟ. ಇಬ್ಬರೂ ಸ್ತಬ್ಧರಾಗಿಬಿಟ್ಟರು. ಮುಂದೆ ಮಾತನಾಡಿ ಪ್ರಯೋಜನವಿಲ್ಲವೆಂದು "ಹಾಗೆಯೇ ಆಗಲಿ" ಎಂದಂದು ಸುಮ್ಮನಾದರು.

* * *

ನಗರಸಭೆಯ ಮುಂದೆ ದೊಡ್ಡ ಚಪ್ಪರ ಹಾಕಿ ಸುಂದರವಾಗಿ ಅಲಂಕರಿಸಿದ್ದರು. ತಳಿರುತೋರಣಗಳು, ಬಾಳೆಯ ಕಂಬಗಳು, ವಿದ್ಯುಚ್ಛಕ್ತಿಯ ಸಾಲುದೀಪಗಳು. ಚಪ್ಪರ ವಿವಾಹ ಮಂಟಪವನ್ನು ಹೋಲುತ್ತಿತ್ತು.

ಒಂದೆಡೆ ನಾಗಸ್ವರದ ಮುನಿರಾಮಯ್ಯನ ಜೋಡುವಾಲಗ. ಸುಂದರ ವಾತಾವರಣದಲ್ಲಿ ನಾಗಸ್ವರದ ಮೇಳ ಆನಂದವನ್ನು ಪಸರಿಸಿತ್ತು. ಉತ್ಸವ ಆರು ಗಂಟೆಗೆಂದು ಪ್ರಸಿದ್ಧವಾಗಿದ್ದರೂ ನಾಲ್ಕು ಗಂಟೆಗೇ ಜನ ಸಭಾಭವನವನ್ನು ತುಂಬಲಾರಂಭಿಸಿದರು. ನೂರಾರು ಮೋಟಾರುಗಳು ಬಂದು ಸಾಲುಗಟ್ಟಿ ನಿಂತಿದ್ದವು. ನಗರಕ್ಕೆ ನಗರವೇ ಅಲ್ಲಿ ನೆರೆದುಬಿಟ್ಟಿತ್ತು. ಎಲ್ಲಾ ವೃತ್ತಿಗಳಲ್ಲಿಯೂ ಮುಂದಾಗಿದ್ದವರು ಸಭೆಯನ್ನಲಂಕರಿಸಿದ್ದರು. ಹೊತ್ತಿಗೆ ಸರಿಯಾಗಿ ವೈಣಿಕಶಿಖಾಮಣಿಗಳು ಗಾಯಕಶಿಖಾಮಣಿ ಕೃಷ್ಣಪ್ಪನವರೊಂದಿಗೆ ಪ್ರವೇಶಿಸಿದರು. ಅವರ ಜತೆಯಲ್ಲಿಯೇ ಲಕ್ಷ್ಮಣರಾಯನೂ ಸಭಾಮಂದಿರವನ್ನು ಪ್ರವೇಶಿಸಿದ. ಜನತೆಯ ಜಯಘೋಷ ಕಿವುಡು ಮಾಡುವಂತಿತ್ತು.

ಪ್ರಾರ್ಥನೆ, ಪ್ರಾಸ್ತಾವಿಕ ಭಾಷಣಗಳಾದಮೇಲೆ ಗೋಪಾಲ ಉತ್ಸವದ ಉದ್ದೇಶವನ್ನು ವಿವರಿಸಿ ಲಕ್ಷ್ಮಣರಾಯರು ಕನ್ನಡಸಂಗೀತಕ್ಕೂ ಸಾಹಿತ್ಯಕ್ಕೂ ತಮ್ಮ ಗಾನದಿಂದ ಮಾಡಿರುವ ಮತ್ತು ಮಾಡಲಿರುವ ಮಹೋಪಕಾರವನ್ನು ವರ್ಣಿಸಿದ. ಆನಂತರ ಶೇಷಣ್ಣನವರು ತಮ್ಮ ತುಂಬಿದ ಹೃದಯದಿಂದ ನಾಲ್ಕು ಮಾತುಗಳನ್ನಾಡಿದರು. ಅದರಲ್ಲಿ ತಮಗೆ ಲಕ್ಷ್ಮಣರಾಯರ ಪರಿಚಯವಾದ ರೀತಿ, ಅವರು ಮೈಸೂರಿನ ಗೌರವವನ್ನು ಕಾಪಾಡಿದ ರೀತಿ, ಅವರ ಪ್ರತಿಭೆಗಳನ್ನು ಕುರಿತು ಪ್ರಸ್ತಾಪಿಸಿದರು. ವೆಂಕಟೇಶಯ್ಯ ಕೊಟ್ಟ ತೋಡಾವನ್ನು ಕೈಯಲ್ಲಿ ಹಿಡಿದುಕೊಂಡು ಲಕ್ಷ್ಮಣರಾಯನಿಗೆ ಅದನ್ನು ತೋರಿಸುತ್ತಾ

"ಇಂತಹ ಗೌರವಗಳು ನಿಮಗೆ ಸಾವಿರಾರು ಬರಲಿ ಎಂದು ಹಾರೈಸುತ್ತೇನೆ. ಇದು ನನ್ನ ಜೀವನದ ಪರಮಸುಖದ ದಿನ"

ಎಂದು ಹೇಳಿ ಮುಗಿಸಿದರು. ಲಕ್ಷ್ಮಣ ಮೆಲ್ಲನೆ ತೋಡಾವನ್ನು ತೆಗೆದು ಕೈಯಲ್ಲಿ ಹಿಡಿದು ನಿಂತ. ಜನತೆಯ ಕರತಾಡನ ನಿಲ್ಲುವವರೆಗೆ ಅವನು ಮಾತನ್ನು ಆರಂಭಿಸುವ ಹಾಗಿರಲಿಲ್ಲ. ಸಭಾಸದರ ಕಡೆಯಿಂದ ಹಾರಗಳು ಬರಲಾರಂಭವಾದವು. ಲಕ್ಷ್ಮಣನ ಕುತ್ತಿಗೆ ಮುಚ್ಚಿಹೋಯಿತು. ಅವನ ಉದ್ದಕ್ಕೂ ಹೂವಿನ ಹಾರದ ರಾಶಿ ಬಿದ್ದಿತು. ಜಯಜಯಕಾರದ ಧ್ವನಿ ಅಡಗಲು

"ನೀವು ನನ್ನನ್ನು ತುಂಬ ಗೌರವಿಸಿರುವಿರಿ. ನನ್ನ ಯೋಗ್ಯತೆಗೆ ಮೀರಿದ ಗೌರವ, ಪ್ರೇಮ ನನಗೆ ಲಭಿಸಿದೆ. ಗುರುಗಳಾದ ಶೇಷಣ್ಣನವರು ತಮ್ಮ ದಿವ್ಯವಾದ ಮಾತುಗಳಿಂದ ನನ್ನನ್ನು ಋಣಿಯನ್ನಾಗಿ ಮಾಡಿದ್ದಾರೆ. ನಾನು ನಿಜವಾಗಿಯೂ ಇದು ಯಾವುದಕ್ಕೂ ಪಾತ್ರನಲ್ಲ. ಸಂಗೀತಕಲಾಭಿಮಾನಿ ದೇವತೆ ನನ್ನ ಆರಾಧ್ಯಮೂರ್ತಿ. ಆಕೆಯ ಸೇವೆಯಲ್ಲಿ ಜೀವನದ ಧನ್ಯತೆಯನ್ನು ಪಡೆಯಲು ಹಾರೈಸುತ್ತಿರುವ ಒಬ್ಬ ಬಡಭಿಕ್ಷುಕ ನಾನು. ನಾನು

ಈವರೆಗೆ ಮತ್ತು ಇವತ್ತು ಏನಾದರೂ ವಿದ್ಯೆಯನ್ನು ತೋರಿದ್ದರೆ ಮತ್ತು ತೋರುವುದಿದ್ದರೆ ಅದರ ಕೀರ್ತಿ ನನ್ನ ಮೂವರು ಗುರುಗಳಿಗೆ ಸೇರಬೇಕಾದುದು. ಮುಳಬಾಗಿಲು ಚೆನ್ನಪ್ಪನವರು, ಅನಂತಾಚಾರ್ಯರು ಮತ್ತು ತಂಜಾವೂರು ಕೃಷ್ಣಯ್ಯರ್‌ರವರು. ಚೆನ್ನಪ್ಪನವರ ದರ್ಶನಲಾಭ ನನಗೆ ಒಂದೇ ಸಲ ದೊರೆತುದು ಮತ್ತೆ ದೊರೆಯಲಿಲ್ಲ. ಅನಂತಾಚಾರ್ಯರು ಅನಂತಶಾಂತಿಯ ಸುಖದಲ್ಲಿ ಮೈಮರೆತಿದ್ದಾರೆ. ನಮ್ಮ ಪುಣ್ಯವಶಾತ್ ತಂಜಾವೂರು ಕೃಷ್ಣಯ್ಯರ್‌ರವರು ಇನ್ನೂ ಜೀವಂತರಾಗಿದ್ದಾರೆ. ಅವರಿಗೇ ಈ ತೋಡಾದ ಗೌರವ ಸಲ್ಲಬೇಕು. ಇದನ್ನು ನನ್ನ ನಮಸ್ಕಾರಗಳೊಂದಿಗೆ ಅವರಿಗೆ ಕಳುಹಿಸಿ ಕೊಡಬೇಕೆಂದು ನಾನು ಬೇಡುತ್ತೇನೆ"

ಎಂದು ತೋಡಾವನ್ನು ವೆಂಕಟೇಶಯ್ಯನ ಕೈಗಿತ್ತುಬಿಟ್ಟ. ಲಕ್ಷ್ಮಣನ ನಿರ್ಲಿಪ್ತತೆ ಸಭೆಯನ್ನು ಆಶ್ಚರ್ಯಗೊಳಿಸಿತು. ವೇದಿಕೆ ಸಿದ್ಧವಾಗಲು ಪಕ್ಕ ವಾದ್ಯಗಾರರು ಬಂದು ಕುಳಿತರು. ಲಕ್ಷ್ಮಣರಾಯ ತಂಬೂರಿಯನ್ನು ಶ್ರುತಿ ಮಾಡಿ ಹಾಡುವುದಕ್ಕೆ ಅಧ್ಯಕ್ಷರ ಅಪ್ಪಣೆಪಡೆದು ಆರಂಭಿಸಿದ.

ಶಂಕರಾಭರಣದಿಂದ ಕಛೇರಿ ಆರಂಭವಾಯಿತು. ಎಲ್ಲಾ ಸ್ವರಗಳಿಂದ ಕೂಡಿದ ಪೂರ್ಣರಾಗವನ್ನು ಬೇಕೆಂತಲೇ ಆಯ್ದುಕೊಂಡಿದ್ದ. 'ಮಡಿಕೆಯ ಮಾಡುವರೆ ಮಣ್ಣೇ ಮೊದಲು' ಎಂಬ ಬಸವಣ್ಣನವರ ವಚನವನ್ನು ಹಾಡಿದ. ಮುಂದೆ ಪುರಂದರದಾಸರ 'ಹೊಲೆಯ ಹೊರಗಿಹನೆ ಊರೊಳಗಿಲ್ಲವೇ' ಎಂಬ ಕೀರ್ತನೆಯನ್ನು ಮುಖಾರಿಯಲ್ಲಿ ಹಾಡಿ ಕೇದಾರಗೌಳದಲ್ಲಿ ಕನಕದಾಸರ 'ತಲ್ಲಣಿಸದಿರು ಕಂಡ್ಯಾ ಎಲೆ ಮನವೇ' ಎಂಬ ಕೀರ್ತನೆಯನ್ನು ಹಾಡಿದ. ನಗರಸಭೆಯ ಗಂಟೆ ತನ್ನಷ್ಟಕ್ಕೆ ತಾನು ಮುಂದೆ ಹೋಗುತ್ತಿತ್ತು. ಅದರ ಕಡೆಗೆ ಒಬ್ಬರ ಲಕ್ಷ್ಯವೂ ಇಲ್ಲ. ಒಂಬತ್ತುಗಂಟೆ ಸೂಚಿಸಲು ವಿದ್ಯುದ್ದೀಪಗಳು ಮಿಣುಕಿದವು,ಸಭಾಸದರು ಗಡಿಯಾರಗಳನ್ನು ತಿದ್ದಿಕೊಂಡು ಮತ್ತೆ ಭದ್ರವಾಗಿ ಕುಳಿತರು. ಲಕ್ಷ್ಮಣನಿಗೆ ಮುಗಿಸುವ ಯೋಚನೆ ಇದ್ದ ಹಾಗೆ ಇರಲಿಲ್ಲ. ಸಭಾ ಸದರು ಮನೆಮಠ ಎಲ್ಲವನ್ನೂ ಮರೆತು ಸಂಗೀತದಲ್ಲಿ ಲೀನರಾಗಿಬಿಟ್ಟಿದ್ದರು.

ಸರಸ್ವತಿ ರಾಗದಲ್ಲಿ ಅಕ್ಕಮಹಾದೇವಿಯ 'ತುಂಬಿದುದು ತುಳುಕದು ನೋಡಾ' ಎಂಬ ವಚನವನ್ನು ಹಾಡಿದ. ಹಾಡಿಕೆಯೂ ತುಳುಕದೆ ತುಂಬಿ ಬರುತ್ತಿತ್ತು. ಜೀವನ್ಮುಕ್ತೆ ಮಹಾದೇವಿಯಕ್ಕನ ವಚನ ಅಮೃತದಂತೆ ಲಕ್ಷ್ಮಣನ ಬಾಯಲ್ಲಿ ಬರುತ್ತಿತ್ತು. ಅನಂತರ ಹಿಂದೋಳ ವಸಂತರಾಗದಲ್ಲಿ ಬಸವಣ್ಣನವರ 'ಛಲ ಬೇಕು ಶರಣಂಗೆ' ಎಂಬ ವಚನವನ್ನು ಹಾಡಿದ. ವಚನ ಗಳ ಹಾಡಿಕೆಯಲ್ಲಿ ತೋರಿಬರುತ್ತಿದ್ದ ಶ್ರದ್ಧಾಭಕ್ತಿಗಳನ್ನು ಕಂಡು 'ತಾನು

ವೀರಶೈವನಲ್ಲದಿದ್ದರೂ ಈ ವಚನಗಳನ್ನು ಹೇಗೆ ಹೃದಯಂಗಮವಾಗಿ ಹಾಡು ತ್ತಾನೆ' ಎಂದು ಸಭಾಸದರು ಬೆರಗಾದರು. ಲಕ್ಷ್ಮಣನ ಕಲೆ ಧರ್ಮ, ಮತ ಗಳನ್ನು ಮೀರಿತ್ತು! ತನ್ನ ಔನ್ನತ್ಯದಿಂದ ಅನಂತತೆಯಲ್ಲಿ ಶ್ರೇಷ್ಠಸ್ಥಾನವನ್ನು ದೊರಕಿಸಿಕೊಂಡಿತ್ತು. ಪ್ರಗತಿಯ ಆ ಮಟ್ಟದಿಂದ ಪುರಂದರದಾಸರು, ಕನಕ ದಾಸರು, ಬಸವಣ್ಣನವರು, ಪ್ರಭುದೇವರು, ಮಹಾದೇವಿಯಕ್ಕ, ಎಲ್ಲರನ್ನೂ ಸಮಾನದೃಷ್ಟಿ, ಸಮಾನಧರ್ಮ, ಸಮಾನ ಭಕ್ತಿಗೌರವಗಳಿಂದ ನೋಡಬಹು ದೆಂದು ಲಕ್ಷ್ಮಣ ತೋರಿಸಿಕೊಡುತ್ತಿದ್ದ.

ಕಲ್ಯಾಣಿಯನ್ನು ತೆಗೆದುಕೊಂಡ. ವಿಸ್ತಾರವಾಗಿ ರಾಗವನ್ನು ಹಾಡಿ ಪುರಂದರದಾಸರ 'ತನುವ ನೀರೊಳಗದ್ದಿ ಫಲವೇನು' ಎಂಬ ಕೀರ್ತನೆಯನ್ನು ಹಾಡಿದ. ವಿಚಾರವಿಲ್ಲದ ಭಕ್ತಿ ಹೀನಭಕ್ತಿಯೆಂಬ ಭಾವನೆ ಈ ಕೀರ್ತನೆ ಯಲ್ಲಿಯೂ ಮುಂದೆ ಮಧ್ಯಮಾವತಿ ರಾಗದಲ್ಲಿ ಹಾಡಿದ ಪುರಂದರದಾಸರ 'ಜಂಗಮರು ನಾವು ನೀವೇ ಕೇಳಿ' ಎಂಬ ಕೀರ್ತನೆಯಲ್ಲಿಯೂ ಮೂಡಿತು. ಮುಂದೆ ಬಿಲಹರಿಯಲ್ಲಿ 'ಸತಿ ಭಕ್ತೆಯಾದರೆ ಹೊಲೆಗಂಜಲಾಗದು' ಎಂಬ ಪ್ರಭುದೇವರ ವಚನವನ್ನು ಹಾಡಿ ಆನಂದಭೈರವಿ ರಾಗಕ್ಕೆ ಬಂದುಬಿಟ್ಟ. ಲಕ್ಷ್ಮಣನಿಗೆ ಆವೇಶ ಬಂದಂತಾಗಿತ್ತು. ಬಸವಣ್ಣನವರ

ಎನ್ನ ಕಾಯವ ದಂಡಿಗೆಯ ಮಾಡಯ್ಯ! ಎನ್ನ ಶಿರವ ಸೋರೆಯ ಮಾಡಯ್ಯ! ಎನ್ನ ನರವ ತಂತಿಯ ಮಾಡಯ್ಯ! ಎನ್ನ ಬೆರಳ ಕಡ್ಡಿಯ ಮಾಡಯ್ಯ! ಬತ್ತೀಸರಾಗವ ಹಾಡಯ್ಯ! ಎನ್ನ ಉರದಲೊತ್ತಿ ನಿನ್ನ ಜಯಗಾನವ ಬಾರಿಸು ಕೂಡಲಸಂಗಮದೇವ!

ಎಂಬ ವಚನವಂತೂ ಲಕ್ಷ್ಮಣನ ಮನೋಧರ್ಮವನ್ನೇ ಸೂಚಿಸುತ್ತಿತ್ತು. ಅವನ ಚಿತ್ತಭಿತ್ತಿಯ ಮೇಲೆ ಜಯ ಮೂಡಿಬಿಟ್ಟಿದ್ದಳು. ಒಂದೆಡೆ ಅವನ ಜೀವನದ ತ್ರಿಮೂರ್ತಿಗಳಂತಿದ್ದ ಗುರುಗಳು ನಿಂತು ಹರಸುತ್ತಿದ್ದಂತೆ ಭಾಸ ವಾಯಿತು. ಜಯ ಅವನಿಗೆ ದರ್ಶನವನ್ನಿತ್ತಿದ್ದುದು ಅಂದೇ. ಆನಂದಭೈರವಿ ಮುಗಿಯುವ ಹೊತ್ತಿಗೆ ಲಕ್ಷ್ಮಣನ ಹೃದಯ ಆನಂದದ ಭೈರವಿಯನ್ನು ಹಾಡುತ್ತಿತ್ತು. ಒಮ್ಮೆಲೇ ಲಕ್ಷ್ಮಣನ ಹೃದಯದಲ್ಲಿ ಯಾವದೋ ಅಪೂರ್ವ ಶಕ್ತಿಯು ಪ್ರವೇಶಿಸಿದಂತಾಯಿತು. ಆನಂದಭೈರವಿ ಮುಗಿಯುವುದೇ ತಡ ನೇರವಾಗಿ ಪೂರ್ವಿರಾಗವನ್ನೆತ್ತಿಕೊಂಡ.

ಗೋಪಾಲ ಅವಾಕ್ಕಾದ. ವೆಂಕಟೇಶಯ್ಯನನ್ನು ಯಾರೋ ಹೊಡೆದೆಬ್ಬಿಸಿ ದಂತಾಯಿತು. ಸುಂದರರಾಯರೂ ಭೀಮರಾಯರೂ ತಮ್ಮ ಪೀಠಗಳ ಮುಂದೆ ಜರುಗಿದರು. ಪೂರ್ವಿ ತನ್ನ ಅಮರವೈಭವದಲ್ಲಿ ಪ್ರಕಾಶಿಸತೊಡಗಿತು.

ನ...
ಶಾಂ...ತಿಯೂ ...
ಬಿಟ್ಟರು. ಲಕ್ಷ್ಮಣನ ಕೈಯಲ್ಲಿದ್ದ ತಂಬೂರಿಯೊಂದು ...
ಶ್ರುತಿಗೊಡುತ್ತಲೇ ಇತ್ತು. ರಾಗ ಮೊದಲನೆಯ ಕಾಲದಿಂದ ...
ನ...ನ್ನು ಮುಟ್ಟಿತು. ಲಕ್ಷ್ಮಣನ ಕಣ್ಣುಗಳಲ್ಲಿ ಧಾರೆಧಾರೆಯಾಗಿ ಅಶ್ರುಪ್ರವಾಹ...

'ಇಂದೇಕೆ ಪೂರ್ವಿಯನ್ನು ಹಾಡುತ್ತಿದ್ದಾನೆ!' ಎಂದು ಶಾಂತಾ ಆಶ್ಚರ್ಯಪಟ್ಟಳು. ಅವಳ ಎದೆ ಒಂದೇ ಸಮನೆ ಹೊಡೆದುಕೊಳ್ಳುತ್ತಿತ್ತು.

ಸಭಾಸದರು ಕೈಜೋಡಿಸಿಬಿಟ್ಟರು ಸಾಕ್ಷಾತ್ ಸರಸ್ವತಿಯೇ ಇಂದು ತಮ್ಮನ್ನು ಅನುಗ್ರಹಿಸಿದ್ದಾಳೆ ಎಂದು ಭಾವಿಸಿದರು.

ರಾಗ ಎರಡನೆಯ ಕಾಲದಿಂದ ಮೂರನೆಯ ಕಾಲಕ್ಕೆ ಹೋಯಿತು. ಲಕ್ಷ್ಮಣನ ಕಣ್ಣುಗಳಲ್ಲಿ ಧಾರೆ. ರಾಗೋಚಿತವಾದ ವೇಗ ಅವನ ಹಾಡಿಕೆಯಲ್ಲಿ ಕಾಣಬರುತ್ತಿದ್ದರೂ ಮನಸ್ಸು ಶಾಂತವಾಗಿತ್ತು. ರಾಗ ಮುಗಿಯುವ ಹೊತ್ತಿಗೆ ತಂಬೂರಿಯ ತಾರಕ ಷಡ್ಜದ ತಂತಿ ಹಾರಿತು. ಅದರ ಠೇಂಕಾರ ಸಭಾಸದರನ್ನು ಎಚ್ಚರಗೊಳಿಸಿತು. ತಂಬೂರಿ ಲಕ್ಷ್ಮಣನ ಕೈಯಿಂದ ಜಾರಿ ನೆಲಕ್ಕುರುಳಿತು. ಲಕ್ಷ್ಮಣನೂ ಅದರ ಜತೆಯಲ್ಲಿಯೇ ನೆಲಕ್ಕುರುಳಿದ—ನಿದ್ರೆಯಿಂದ ಹಣ್ಣಾದ ಮಗು ತಾಯಿಯ ತೊಡೆಯ ಮೇಲೊರಗುವಂತೆ!

"ಜಯಾ..."

ಎಂಬ ಎರಡೇ ಅಕ್ಷರ ಎಲ್ಲರ ಕಿವಿಯನ್ನೂ ಮುಟ್ಟಿತು. ಅದೇ ಮಂಗಳ—ಕಛೇರಿ ಕೊನೆಗೊಂಡಿತ್ತು—ಗಾಯಕ ಸಂಧ್ಯಾರಾಗದಲ್ಲಿ ತನ್ನ ಆತ್ಮಪ್ರಣತಿಯನ್ನು ತೇಲಬಿಟ್ಟಿದ್ದ. ಮುಂದೆ ಬರಲಿದ್ದ ಗಾಢಾಂಧಕಾರಕ್ಕೆ ಆ ಪ್ರಣತಿಯ ತೇಜಸ್ಸೇ ಬೆಳಕು. ತನ್ನ ಜೀವನದ ಸಂಧ್ಯಾರಾಗವನ್ನು ಹಾಡಿ ಮುಗಿಸಿದ. ಮರುಕ್ಷಣವೇ ಉದಯರಾಗದ ಕರೆ—

ಸಂಧ್ಯಾರಾಗ ಎಲ್ಲರ ಕಿವಿಗೂ ಬಿದ್ದಿತ್ತು. ಆದರೆ ಉದಯರಾಗ ಕೇಳಿಬಂದುದು ಲಕ್ಷ್ಮಣನೊಬ್ಬನಿಗೇ!

ವೀರಶೈವನಲ್ಲದಿದ್ದರೂ ಈ ವಚನಗಳನ್ನು ಹೇಗೆ ಹೃದಯಂಗಮವಾಗಿ ಹಾಡು
ತ್ತಾನೆ' ಎಂದು ಸಭಾಸದರು ಬೆರಗಾಗಗು. ಲಕ್ಷ್ಮಣನ ಕಣ್ಣಿ ದ... ...ತ್ರ
ಗಳನ್ನು ವಿಸಾರಿತ್ತು ! ತನ...
ದೊರಕಿಸಿಕೊಂಡಿತ...
ದಾಸರು...
ಸೆ...